# ಪ್ರತಿ ದಿನದ ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ KPSC VAANI APP ಡೌನ್ಲೋಡ್ ಮಾಡಿಕೊಳ್ಳಿ

**ರಿಯಾಯಿತಿ ದರದಲ್ಲಿ ಸ್ಪರ್ಧಾತ್ಮಕ ಪುಸ್ತಕಗಳನ್ನು ಖರೀದಿಸಲು ಖರೀದಿಸಲು ಇಲ್ಲಿ ಕ್ಲಿಕ್ ಮಾಡಿ**

**ಪ್ರತಿದಿನದ ಉದ್ಯೋಗ ಮಾಹಿತಿ, ಪ್ರಚಲಿತ ಘಟನೆಗಳು, ಪ್ರಶ್ನೆ ಪತ್ರಿಕೆಗಳು, ಕಟ್ ಆಫ್ ಅಂಕಗಳು, Daily Quiz ಸೇರಿ ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಳು ಒಂದೇ ವೇದಿಕೆಯಲ್ಲಿ ನಿಮಗಾಗಿ**



**ನಮ್ಮ ಗುಂಪುಗಳನ್ನು ಸೇರಿಕೊಳ್ಳಿ**

Click here To Join

To Download Our App

Follow Us on Facebook

Follow Us on Instagram

Scan QR Code
To Download
KPSC Vaani App

## 01 Aug 2026

### ಆಗಸ್ಟ್-1: ವಿಶ್ವ ವೈಡ್ ವೆಬ್ ದಿನ 2026




➤ ಪ್ರತಿ ವರ್ಷ ಆಗಸ್ಟ್ 1 ರಂದು ಪ್ರಪಂಚದಾದ್ಯಂತ ವರ್ಲ್ಡ್ ವೈಡ್ ವೆಬ್ ದಿನ (World Wide Web Day 2026) ವನ್ನು ಆಚರಿಸಲಾಗುತ್ತದೆ. ಆಧುನಿಕ ಸಮಾಜದ ಸಂಪರ್ಕ, ಶಿಕ್ಷಣ, ವಾಣಿಜ್ಯ ಮತ್ತು ತಂತ್ರಜ್ಞಾನ ರಂಗದಲ್ಲಿ ಕ್ರಾಂತಿಕಾರಿ ಬದಲಾವಣೆ ತಂದ ವರ್ಲ್ಡ್ ವೈಡ್ ವೆಬ್ (WWW) ಆವಿಷ್ಕಾರವನ್ನು ಗೌರವಿಸಲು ಈ ದಿನವನ್ನು ಮೀಸಲಿಡಲಾಗಿದೆ.

➤ ವರ್ಲ್ಡ್ ವೈಡ್ ವೆಬ್ ಎಂಬುದು ಇಂಟರ್ನೆಟ್ ಮೂಲಕ ಪ್ರವೇಶಿಸಬಹುದಾದ ಪರಸ್ಪರ ಸಂಪರ್ಕಿತ ವೆಬ್‌ಪುಟಗಳು (Web Pages) ಮತ್ತು ವೆಬ್‌ಸೈಟ್‌ಗಳ ಸರಣಿಯಾಗಿದೆ. ಬಳಕೆದಾರರು ವೆಬ್ ಬ್ರೌಸರ್ (Web Browser) ಸಹಾಯದಿಂದ ಈ ಮಾಹಿತಿಯನ್ನು ಪಡೆಯುತ್ತಾರೆ.

**➤ WWW ನಿರ್ಮಾಣಕ್ಕೆ ಪ್ರಮುಖವಾಗಿ 3 ತಂತ್ರಜ್ಞಾನಗಳು ಅಡಿಪಾಯವಾಗಿವೆ:**

HTML (HyperText Markup Language): ವೆಬ್‌ಪುಟಗಳನ್ನು ವಿನ್ಯಾಸಗೊಳಿಸಲು ಬಳಸುವ ಭಾಷೆ.

HTTP (HyperText Transfer Protocol): ಮಾಹಿತಿಯನ್ನು ಸರ್ವರ್‌ನಿಂದ ಬಳಕೆದಾರರಿಗೆ ರವಾನಿಸುವ ಪ್ರೋಟೋಕಾಲ್.

URL (Uniform Resource Locator): ಅಂತರ್ಜಾಲದಲ್ಲಿ ವೆಬ್‌ಪುಟ ಅಥವಾ ದಾಖಲೆಯ ವಿಳಾಸ (Address).

**➤ WWW ಇತಿಹಾಸ ಮತ್ತು ಪ್ರಮುಖ ಮೈಲಿಗಲ್ಲುಗಳು:**

1989 (ಮಾರ್ಚ್): ಸ್ವಿಟ್ಜರ್‌ಲ್ಯಾಂಡ್‌ನ 'ಸರ್ನ್' (CERN) ಸಂಶೋಧನಾ ಕೇಂದ್ರದಲ್ಲಿದ್ದ ಬ್ರಿಟಿಷ್ ಕಂಪ್ಯೂಟರ್ ವಿಜ್ಞಾನಿ ಸರ್ ಟಿಮ್ ಬರ್ನರ್ಸ್ ಲೀ (Sir Tim Berners-Lee) ಅವರು ಗ್ಲೋಬಲ್ ಹೈಪರ್‌ಟೆಕ್ಸ್ಟ್ ಸಿಸ್ಟಮ್ ಕುರಿತು ಮೊದಲ ಪ್ರಸ್ತಾವನೆಯನ್ನು ಮಂಡಿಸಿದರು.

1990 (ನವೆಂಬರ್): ರೊಬರ್ಟ್ ಕೈಲಿಯೌ (Robert Cailliau) ಅವರೊಂದಿಗೆ ಸೇರಿ ಅಧಿಕೃತ ಪ್ರಸ್ತಾವನೆ ಸಲ್ಲಿಸಿದರು.

1990 (ಡಿಸೆಂಬರ್): ವಿಶ್ವದ ಮೊದಲ ವೆಬ್ ಬ್ರೌಸರ್, ವೆಬ್ ಸರ್ವರ್ ಮತ್ತು ವೆಬ್ ಎಡಿಟರ್ ಅನ್ನು ಅಭಿವೃದ್ಧಿಪಡಿಸಲಾಯಿತು.

1991 (ಆಗಸ್ಟ್): ವರ್ಲ್ಡ್ ವೈಡ್ ವೆಬ್ ಸಾರ್ವಜನಿಕ ಬಳಕೆಗೆ ಮುಕ್ತವಾಯಿತು.

1993 (ಏಪ್ರಿಲ್ 30): CERN ಸಂಸ್ಥೆಯು WWW ಸಾಫ್ಟ್‌ವೇರ್ ಅನ್ನು ಉಚಿತವಾಗಿ (Royalty-free) ಸಾರ್ವಜನಿಕ ಡೊಮೇನ್‌ಗೆ ಬಿಡುಗಡೆ ಮಾಡಿತು.

**➤ ವೆಬ್‌ನ ವಿಕಸನ:**

Web 1.0 (1990 - 2000): ಸ್ಥಿರ ವೆಬ್‌ಪುಟಗಳು (Static Pages). ಬಳಕೆದಾರರು ಕೇವಲ ಮಾಹಿತಿಯನ್ನು ಓದಬಹುದಾಗಿತ್ತು (Read-Only).

Web 2.0 (2000 - 2010): ಸಂವಾದಾತ್ಮಕ ವೆಬ್ (Interactive Web). ಸೋಶಿಯಲ್ ಮೀಡಿಯಾ, ಬ್ಲಾಗ್‌ಗಳು, ಬಳಕೆದಾರರು ರಚಿಸುವ ವಿಷಯಗಳು (User-Generated Content) ಮತ್ತು ಈ-ಕಾಮರ್ಸ್ ಕ್ರಾಂತಿ.

Web 3.0 (2010 - ಪ್ರಸ್ತುತ): ಕೃತಕ ಬುದ್ಧಿಮತ್ತೆ (AI), ಸೆಮ್ಯಾಂಟಿಕ್ ವೆಬ್, ಕ್ಲೌಡ್ ತಂತ್ರಜ್ಞಾನ ಮತ್ತು ವಿಕೇಂದ್ರೀಕೃತ ನೆಟ್‌ವರ್ಕ್ (Decentralization).

### ಪಿಎಂ ಇಂಟರ್ನ್‌ಶಿಪ್ ಯೋಜನೆ: ತಮಿಳುನಾಡು ಅಗ್ರಸ್ಥಾನ




➤ ದೇಶದ ಯುವಜನತೆಯಲ್ಲಿ ಉದ್ಯೋಗಾರ್ಹತೆ (Employability) ಹಾಗೂ ಪ್ರಾಯೋಗಿಕ ಕೌಶಲ್ಯಗಳನ್ನು ಹೆಚ್ಚಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು 'ಪ್ರಧಾನಮಂತ್ರಿ ಇಂಟರ್ನ್‌ಶಿಪ್ ಯೋಜನೆ' (PM Internship Scheme) ಯನ್ನು ಜಾರಿಗೆ ತಂದಿದೆ. ಇತ್ತೀಚೆಗೆ ಕೇಂದ್ರ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (Ministry of Corporate Affairs - MCA) ಪ್ರಕಟಿಸಿದ ವರದಿಯ ಪ್ರಕಾರ, ಯೋಜನೆಯ ಪೈಲಟ್ ಹಂತದಲ್ಲಿ ತಮಿಳುನಾಡು, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳು ಅತ್ಯಂತ ಹೆಚ್ಚಿನ ಇಂಟರ್ನ್‌ಶಿಪ್ ಅವಕಾಶಗಳನ್ನು ಸೃಷ್ಟಿಸಿ ಅಗ್ರಸ್ಥಾನದಲ್ಲಿವೆ.

➤ ಆದರೆ, ಅವಕಾಶಗಳ ಲಭ್ಯತೆಗೆ ಹೋಲಿಸಿದರೆ ಕೋರ್ಸ್ ಪೂರ್ಣಗೊಳಿಸಿದ ಅಥವಾ ಉದ್ಯೋಗಕ್ಕೆ ಸೇರಿದ ಅಭ್ಯರ್ಥಿಗಳ ಸಂಖ್ಯೆಯಲ್ಲಿ ಗಮನಾರ್ಹ ಇಳಿಕೆ ಕಂಡುಬಂದಿದೆ. ಈ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರವು 2026ರ ಮಾರ್ಚ್‌ನಲ್ಲಿ ಯೋಜನೆಯ ನಿಯಮಗಳಿಗೆ ಪ್ರಮುಖ ತಿದ್ದುಪಡಿಗಳನ್ನು ತಂದಿದೆ.

➤ ಕೇಂದ್ರ ಬಜೆಟ್ 2024-25ರಲ್ಲಿ ಘೋಷಣೆಯಾಗಿ 2024ರ ಅಕ್ಟೋಬರ್‌ನಲ್ಲಿ ಚಾಲನೆ ಪಡೆದ ಪ್ರಧಾನಮಂತ್ರಿ ಇಂಟರ್ನ್‌ಶಿಪ್ ಯೋಜನೆಯು, ₹8 ಲಕ್ಷಕ್ಕಿಂತ ಕಡಿಮೆ ವಾರ್ಷಿಕ ಆದಾಯ ಹೊಂದಿರುವ ಮತ್ತು ಪ್ರೀಮಿಯರ್ ಅಲ್ಲದ ಸಾಮಾನ್ಯ ಶಿಕ್ಷಣ ಸಂಸ್ಥೆಗಳ 18 ರಿಂದ 25 ವರ್ಷ ವಯಸ್ಸಿನ ಯುವಜನತೆಗೆ ಮುಂದಿನ 5 ವರ್ಷಗಳಲ್ಲಿ ದೇಶದ ಪ್ರಮುಖ 500 ಕಂಪನಿಗಳಲ್ಲಿ 1 ಕೋಟಿ ಪಾವತಿಸಲ್ಪಟ್ಟ (Paid) ಇಂಟರ್ನ್‌ಶಿಪ್ ಅವಕಾಶಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ.

**➤ ಪೈಲಟ್ ಹಂತದ ಮೂರು ಆವೃತ್ತಿಗಳು: ರಾಜ್ಯವಾರು ಅಂಕಿ-ಅಂಶಗಳು:**

**1. ಕೈಗಾರಿಕಾ ರಾಜ್ಯಗಳ ಮುನ್ನಡೆ:**

ತಮಿಳುನಾಡು, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳು ದೇಶದಲ್ಲೇ ಅತಿ ಹೆಚ್ಚು ಇಂಟರ್ನ್‌ಶಿಪ್ ಅವಕಾಶಗಳನ್ನು ಸೃಷ್ಟಿಸಿ ಮೊದಲ ಮೂರು ಸ್ಥಾನಗಳಲ್ಲಿವೆ.

ಮೊದಲ ಎರಡು ಆವೃತ್ತಿಗಳಲ್ಲಿ ತಮಿಳುನಾಡು ಒಂದೇ ರಾಜ್ಯದಲ್ಲೇ ತಲಾ 14,000ಕ್ಕೂ ಹೆಚ್ಚು ಇಂಟರ್ನ್‌ಶಿಪ್ ಅವಕಾಶಗಳನ್ನು ಒದಗಿಸಲಾಗಿತ್ತು.

**2. ಅಭ್ಯರ್ಥಿಗಳ ಭಾಗವಹಿಸುವಿಕೆಯಲ್ಲಿ ಹಿನ್ನಡೆ:**

ತಮಿಳುನಾಡು: ಮೊದಲ ಆವೃತ್ತಿಯಲ್ಲಿ 82 ಹಾಗೂ ಎರಡನೇ ಆವೃತ್ತಿಯಲ್ಲಿ 59 ಅಭ್ಯರ್ಥಿಗಳು ಮಾತ್ರ ಕೋರ್ಸ್ ಪೂರೈಸಿದ್ದರು.

ಮಹಾರಾಷ್ಟ್ರ: ಎರಡೂ ಆವೃತ್ತಿಗಳಲ್ಲಿ ತಲಾ 150 ಅಭ್ಯರ್ಥಿಗಳು ಮಾತ್ರ ಪೂರ್ಣಗೊಳಿಸಿದ್ದರು.

**3. 3ನೇ ಆವೃತ್ತಿಯಲ್ಲಿ ಉತ್ತರ ಪ್ರದೇಶದ ದಾಖಲೆ:** 3ನೇ ಆವೃತ್ತಿಯ ವೇಳೆಗೆ ಉತ್ತರ ಪ್ರದೇಶದಿಂದ ಬರೋಬ್ಬರಿ 2,038 ಅಭ್ಯರ್ಥಿಗಳು ಇಂಟರ್ನ್‌ಶಿಪ್‌ಗೆ ಸೇರ್ಪಡೆಯಾಗುವ ಮೂಲಕ ದೇಶದಲ್ಲೇ ಅತ್ಯಂತ ಹೆಚ್ಚು ಯಶಸ್ಸು ಪಡೆದ ರಾಜ್ಯವಾಗಿದೆ.

**➤ ಕಡಿಮೆ ಭಾಗವಹಿಸುವಿಕೆಗೆ ಪ್ರಮುಖ ಕಾರಣಗಳು:**

ಸ್ಥಳೀಯ ಅವಕಾಶಗಳ ಅಭಾವ: ಅಭ್ಯರ್ಥಿಗಳಿಗೆ ತಮ್ಮ ಮನೆಗೆ ಸಮೀಪದಲ್ಲಿ (5-10 ಕಿ.ಮೀ ವ್ಯಾಪ್ತಿಯಲ್ಲಿ) ಇಂಟರ್ನ್‌ಶಿಪ್ ಸಿಗದಿರುವುದು.

ದೀರ್ಘಾವಧಿ: 12 ತಿಂಗಳ (1 ವರ್ಷ) ಅವಧಿ ಅಭ್ಯರ್ಥಿಗಳಿಗೆ ಸುದೀರ್ಘ ಎನಿಸಿದ್ದು.

ಆಸಕ್ತಿಯ ಕೊರತೆ ಮತ್ತು ವೆಚ್ಚ: ಸಾರಿಗೆ ಮತ್ತು ಇತರ ವೆಚ್ಚಗಳಿಗೆ ಆರಂಭಿಕ ಆರ್ಥಿಕ ಭತ್ಯೆ ಸಾಲದಿರುವುದು.

**➤ 2026ರ ಮಾರ್ಚ್ ತಿದ್ದುಪಡಿಗಳು:**

ಅವಧಿಯಲ್ಲಿ ಕಡಿತ: ಆರಂಭದಲ್ಲಿದ್ದ 12 ತಿಂಗಳ (1 ವರ್ಷ) ಇಂಟರ್ನ್‌ಷಿಪ್ ಅವಧಿಯನ್ನು ಅಭ್ಯರ್ಥಿಗಳ ಅನುಕೂಲಕ್ಕಾಗಿ 6 ರಿಂದ 9 ತಿಂಗಳಿಗೆ ಇಳಿಸಲಾಗಿದೆ.
ಮಾಸಿಕ ಭತ್ಯೆಯಲ್ಲಿ ಹೆಚ್ಚಳ: ಅಭ್ಯರ್ಥಿಗಳಿಗೆ ನೀಡಲಾಗುತ್ತಿದ್ದ ₹5,000 ಮಾಸಿಕ ಭತ್ಯೆಯನ್ನು (Stipend) ಈಗ ₹5,000 ರಿಂದ ₹9,000 ಕ್ಕೆ ಹೆಚ್ಚಿಸಲಾಗಿದೆ.
ನೋಂದಣಿಯಲ್ಲಿ ಭಾರಿ ಪ್ರಗತಿ: ಮೊದಲ ಎರಡು ಆವೃತ್ತಿಗಳಲ್ಲಿ ಅಭ್ಯರ್ಥಿಗಳ ನೋಂದಣಿ ಅತ್ಯಂತ ಕಡಿಮೆಯಿತ್ತಾದರೂ, ಈ ಹೊಸ ಬದಲಾವಣೆಗಳ ನಂತರ 3ನೇ ಆವೃತ್ತಿಯಲ್ಲಿ ನೋಂದಣಿಯಾದವರ ಸಂಖ್ಯೆ 10,000ಕ್ಕೂ ಗಡಿದಾಟಿದೆ.

## ಕಾಮನ್‌ವೆಲ್ತ್ ಗೇಮ್ಸ್ 2026: ಭಾರತಕ್ಕೆ ಐತಿಹಾಸಿಕ ಜ್ಯೂಡೋ ಚಿನ್ನ ಹಾಗೂ ಜಾವೆಲಿನ್ ಎಸೆತದಲ್ಲಿ ಜೋಡಿ ಪದಕದ ಸಾಧನೆ!



➤ ಜ್ಯೂಡೋ ಕ್ರೀಡೆಯಲ್ಲಿ ಭಾರತಕ್ಕೆ ಐತಿಹಾಸಿಕ ಡಬಲ್ ಗೋಲ್ಡ್: ಗ್ಲಾಸ್ಗೋದಲ್ಲಿ ನಡೆಯುತ್ತಿರುವ 2026ರ ಕಾಮನ್‌ವೆಲ್ತ್ ಗೇಮ್ಸ್‌ನ ಜ್ಯೂಡೋ ಸ್ಪರ್ಧೆಯಲ್ಲಿ ಭಾರತದ ಕ್ರೀಡಾಪಟುಗಳು ಅಭೂತಪೂರ್ವ ಇತಿಹಾಸ ನಿರ್ಮಿಸಿದ್ದಾರೆ. ಕಾಮನ್‌ವೆಲ್ತ್ ಕ್ರೀಡಾಕೂಟದ ಇತಿಹಾಸದಲ್ಲೇ ಮೊದಲ ಬಾರಿಗೆ ಜ್ಯೂಡೋ ವಿಭಾಗದಲ್ಲಿ ಭಾರತಕ್ಕೆ ಚಿನ್ನದ ಪದಕಗಳು ಲಭಿಸಿವೆ.
ಅಸ್ಮಿತಾ ಡೇ (Asmita Dey): ಮಹಿಳೆಯರ 48 ಕೆಜಿ ವಿಭಾಗದ ಫೈನಲ್ ಪಂದ್ಯದಲ್ಲಿ ಕೆನಡಾದ ಹೈಡಿ ಕ್ವಾಚ್ (Heidi Quach) ಅವರನ್ನು ರೋಚಕ 'ಗೋಲ್ಡನ್ ಸ್ಕೋರ್' ಸುತ್ತಿನಲ್ಲಿ 2-1 ಅಂತರದಿಂದ ಮಣಿಸಿ ಭಾರತಕ್ಕೆ ಚೊಚ್ಚಲ ಜ್ಯೂಡೋ ಚಿನ್ನ ತಂದುಕೊಟ್ಟರು.
ಹರ್ಷ್ ಸಿಂಗ್ (Harsh Singh): ಪುರುಷರ 60 ಕೆಜಿ ವಿಭಾಗದಲ್ಲಿ ಆಸ್ಟ್ರೇಲಿಯಾದ ಜೋಶುವಾ ಕಾಟ್ಜ್ ವಿರುದ್ಧ 10-0 ಅಂತರದ ಭರ್ಜರಿ ಗೆಲುವು ಸಾಧಿಸಿ, ದಿನದ ಎರಡನೇ ಚಿನ್ನದ ಪದಕವನ್ನು ಭಾರತದ ಮಡಿಲಿಗೆ ಹಾಕಿದರು.
ಯಾಮಿನಿ ಮೌರ್ಯ (Yamini Mourya): ಮಹಿಳೆಯರ 57 ಕೆಜಿ ವಿಭಾಗದ ಅಂತಿಮ ಹಣಾಹಣಿಯಲ್ಲಿ ಇಂಗ್ಲೆಂಡ್‌ನ ಅಸೆಲ್ಯಾ ಟೋಪ್ರಾಕ್ ವಿರುದ್ಧ ಹೋರಾಡಿ ಬೆಳ್ಳಿ ಪದಕ ಪಡೆದರು.
➤ **ಜಾವೆಲಿನ್ ಎಸೆತದಲ್ಲಿ ನೀರಜ್‌ಗೆ ಬೆಳ್ಳಿ, ಯಶ್‌ವೀರ್‌ಗೆ ಕಾಂಸ್ಯ:** ಪುರುಷರ ಜಾವೆಲಿನ್ ಎಸೆತ (Javelin Throw) ಫೈನಲ್ ಪಂದ್ಯದಲ್ಲಿ ಭಾರತದ ಅಥ್ಲೀಟ್‌ಗಳು ಮತ್ತೊಮ್ಮೆ ಅದ್ಭುತ ಸಾಧನೆ ಮೆರೆದಿದ್ದಾರೆ.
ನೀರಜ್ ಚೋಪ್ರಾ (Neeraj Chopra): ಭಾರತದ ಸ್ಟಾರ್ ಅಥ್ಲೀಟ್ ನೀರಜ್ ಚೋಪ್ರಾ ತಮ್ಮ ಎರಡನೇ ಪ್ರಯತ್ನದಲ್ಲಿ 85.83 ಮೀಟರ್‌ದೂರ ಜಾವೆಲಿನ್ ಎಸೆದುಬೆಳ್ಳಿ ಪದಕಪಡೆದುಕೊಂಡರು. ಶ್ರೀಲಂಕಾದ ರುಮೇಶ್ ಪತಿರಾಗೆ (89.75 ಮೀ) ಚಿನ್ನದ ಪದಕ ಜಯಿಸಿದರು.
**ಯಶ್‌ವೀರ್ ಸಿಂಗ್ (Yashvir Singh):** ತಮ್ಮ ಕೊನೆಯ ಪ್ರಯತ್ನದಲ್ಲಿ 85.41 ಮೀಟರ್‌ದೂರ ಎಸೆಯುವ ಮೂಲಕ ತಮ್ಮ ವೈಯಕ್ತಿಕ ಸಾರ್ವಕಾಲಿಕ ಶ್ರೇಷ್ಠ ಸಾಧನೆ (Personal Best) ಯೊಂದಿಗೆಕಾಂಸ್ಯ ಪದಕಕ್ಕೆ ಮುತ್ತಿಕ್ಕಿದರು.

## ವಿಶ್ವ ಶ್ವಾಸಕೋಶ ಕ್ಯಾನ್ಸರ್ ದಿನ 2026




➤ ವಿಶ್ವದಾದ್ಯಂತ ಅತ್ಯಂತ ವೇಗವಾಗಿ ಹರಡುತ್ತಿರುವ ಹಾಗೂ ಅತಿ ಹೆಚ್ಚು ಸಾವುಗಳಿಗೆ ಕಾರಣವಾಗುತ್ತಿರುವ ಅರ್ಬುದ ರೋಗಗಳಲ್ಲಿ ಶ್ವಾಸಕೋಶದ ಕ್ಯಾನ್ಸರ್ (Lung Cancer) ಪ್ರಮುಖವಾದದ್ದು. ಈ ಮಾರಕ ಕಾಯಿಲೆಯ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು, ಆರಂಭಿಕ ಹಂತದಲ್ಲೇ ರೋಗನಿರ್ಣಯ ಮಾಡುವುದನ್ನು ಉತ್ತೇಜಿಸಲು ಮತ್ತು ರೋಗಿಗಳಿಗೆ ಮಾನಸಿಕ ಹಾಗೂ ವೈದ್ಯಕೀಯ ಬೆಂಬಲ ನೀಡಲು ಪ್ರತಿವರ್ಷ ಆಗಸ್ಟ್ 1 ರಂದು ವಿಶ್ವ ಶ್ವಾಸಕೋಶ ಕ್ಯಾನ್ಸರ್ ದಿನ (World Lung Cancer Day) ವನ್ನು ಆಚರಿಸಲಾಗುತ್ತದೆ.
➤ **2026ರ ಧ್ಯೇಯವಾಕ್ಯ (Theme):ಶ್ವಾಸಕೋಶ ಕ್ಯಾನ್ಸರ್ ವಿರುದ್ಧ ಒಟ್ಟಾಗಿ (Together through Lung Cancer") ಆಫಿಷಿಯಲ್ ಘೋಷವಾಕ್ಯ (Slogan)"Where Science Sparks Hope" (ವಿಜ್ಞಾನವು ಆಶಾವಾದವನ್ನು ಮೂಡಿಸುವಲ್ಲಿ)**
➤ ವಿಶ್ವ ಶ್ವಾಸಕೋಶ ಕ್ಯಾನ್ಸರ್ ದಿನವನ್ನು ಪ್ರಥಮ ಬಾರಿಗೆ 2012 ರಲ್ಲಿ ಆಚರಿಸಲಾಯಿತು. ಜಾಗತಿಕ ಮಟ್ಟದಲ್ಲಿ ಉಸಿರಾಟದ ಆರೋಗ್ಯ ಮತ್ತು ಕ್ಯಾನ್ಸರ್ ಸಂಶೋಧನೆಗೆ ಸಂಬಂಧಿಸಿದ ಪ್ರಮುಖ ಸಂಸ್ಥೆಗಳು ಒಂದಾಗಿ ಈ ಅಭಿಯಾನವನ್ನು ಪ್ರಾರಂಭಿಸಿದವು:
FIRS – Forum of International Respiratory Societies
IASLC – International Association for the Study of Lung Cancer
CHEST – American College of Chest Physicians
➤ ಶ್ವಾಸಕೋಶದ ಅಂಗಾಂಶಗಳಲ್ಲಿ ಕೋಶಗಳು ಅತಿಯಾಗಿ ಮತ್ತು ಅನಿಯಂತ್ರಿತವಾಗಿ ಬೆಳೆಯುವುದಕ್ಕೆ ಶ್ವಾಸಕೋಶದ ಕ್ಯಾನ್ಸರ್ ಎನ್ನಲಾಗುತ್ತದೆ. ಈ ಗಡ್ಡೆಗಳು (Tumors) ಕ್ರಮೇಣ ಉಸಿರಾಟ ವ್ಯವಸ್ಥೆಯನ್ನು ಹಾನಿಗೊಳಿಸುತ್ತವೆ ಮತ್ತು ದೇಹದ ಇತರ ಭಾಗಗಳಿಗೂ ಹರಡಬಹುದು (Metastasis).
➤ **ಪ್ರಮುಖ ಅಪಾಯಕಾರಿ ಅಂಶಗಳು (Risk Factors)**
ಧೂಮಪಾನ (Smoking): ಸಕ್ರಿಯ ಧೂಮಪಾನವು ಶ್ವಾಸಕೋಶದ ಕ್ಯಾನ್ಸರ್‌ಗೆ ಪ್ರಮುಖ ಕಾರಣವಾಗಿದೆ.
ಪರೋಕ್ಷ ಧೂಮಪಾನ (Passive Smoking): ಸಿಗರೇಟ್ ಹೊಗೆಯನ್ನು ಸೇವಿಸುವುದರಿಂದ ಧೂಮಪಾನ ಮಾಡದವರಿಗೂ ಕ್ಯಾನ್ಸರ್ ಬರುವ ಅಪಾಯವಿರುತ್ತದೆ.
ವಾಯು ಮಾಲಿನ್ಯ (Air Pollution): ನಗರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಧೂಳು ಮತ್ತು ಹಾನಿಕಾರಕ ರಾಸಾಯನಿಕ ವಾಯು ಮಾಲಿನ್ಯ.
ರಾಡಾನ್ ಅನಿಲ ಮತ್ತು ಆಸ್ಬೆಸ್ಟೋಸ್ (Radon & Asbestos Exposure): ಗಣಿ ಮತ್ತು ಕೈಗಾರಿಕೆಗಳಲ್ಲಿ ಬಳಸಲಾಗುವ ಅಪಾಯಕಾರಿ ಕಚ್ಚಾ ವಸ್ತುಗಳು.
ಆನುವಂಶಿಕತೆ (Family History): ಕುಟುಂಬದಲ್ಲಿ ಯಾರಿಗಾದರೂ ಕ್ಯಾನ್ಸರ್ ಹಿನ್ನೆಲೆ ಇದ್ದರೆ.
➤ **ತಡೆಗಟ್ಟುವ ಕ್ರಮಗಳು:**
ಧೂಮಪಾನ ಹಾಗೂ ತಂಬಾಕು ಉತ್ಪನ್ನಗಳಿಂದ ದೂರವಿರುವುದು.
ಮಾಲಿನ್ಯಪೂರಿತ ವಾತಾವರಣದಲ್ಲಿ ಮಾಸ್ಕ್ ಧರಿಸುವುದು.
ಆಂಟಿಆಕ್ಸಿಡೆಂಟ್‌ಗಳಿರುವ ಸಮತೋಲಿತ ಆಹಾರ ಮತ್ತು ನಿಯಮಿತ ವ್ಯಾಯಾಮ.
ರೋಗಲಕ್ಷಣಗಳು ಕಂಡುಬಂದ ತಕ್ಷಣ ವೈದ್ಯಕೀಯ ತಪಾಸಣೆ (Low-Dose CT Scan) ಮಾಡಿಸಿಕೊಳ್ಳುವುದು.

## ಫುಟ್‌ಬಾಲ್ ದಿಗ್ಗಜ, ಇಟಲಿ ವಿಶ್ವಕಪ್ ವಿಜೇತ ಫ್ರಾಂಕೊ ಬರೆಸಿ ನಿಧನ



➤ ಫುಟ್‌ಬಾಲ್ ಇತಿಹಾಸ ಕಂಡ ಅತ್ಯಂತ ಶ್ರೇಷ್ಠ ರಕ್ಷಣಾತ್ಮಕ ಆಟಗಾರರಲ್ಲಿ (Defenders) ಒಬ್ಬರಾದ ಇಟಲಿಯ ಕ್ರೀಡಾ ದಿಗ್ಗಜ ಫ್ರಾಂಕೊ ಬರೆಸಿ (66) ಶುಕ್ರವಾರ ನಿಧನರಾದರು. ಅವರ ನಿಧನಕ್ಕೆ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ, ಎ.ಸಿ. ಮಿಲಾನ್ ಕ್ಲಬ್ ಮತ್ತು ಜಗತ್ತಿನಾದ್ಯಂತ ಲಕ್ಷಾಂತರ ಫುಟ್‌ಬಾಲ್ ಅಭಿಮಾನಿಗಳು ಕಂಬನಿ ಮಿಡಿದಿದ್ದಾರೆ. "ಅವರ ಮೇಲ್ಪಂಕ್ತಿ ಮತ್ತು ದೃಢನಿಷ್ಠೆ ಕ್ಲಬ್‌ನ ಡಿಎನ್‌ಎಯಲ್ಲಿ ಮಿಳಿತಗೊಂಡಿದೆ" ಎಂದು ಮಿಲಾನ್ ಕ್ಲಬ್ ಶೋಕ ವ್ಯಕ್ತಪಡಿಸಿದೆ.

**➤ ಫ್ರಾಂಕೊ ಬರೆಸಿ ಅವರ ಕ್ರೀಡಾ ಪಯಣ:**

ಪದಾರ್ಪಣೆ: ಬರೆಸಿ ಅವರು 1978ರ ಏಪ್ರಿಲ್‌ನಲ್ಲಿ ತಮ್ಮ 17ನೇ ವಯಸ್ಸಿನಲ್ಲಿ ಎ.ಸಿ. ಮಿಲಾನ್ ತಂಡದ ಮೂಲಕ ವೃತ್ತಿಪರ ಫುಟ್ ಬಾಲ್‌ಗೆ ಪದಾರ್ಪಣೆ ಮಾಡಿದರು.

**ವಿಶ್ವಕಪ್ ಸಾಧನೆಗಳು:**

1982 ಫಿಫಾ ವಿಶ್ವಕಪ್: ಇಟಲಿ ಚಾಂಪಿಯನ್ ಆದಾಗ ತಂಡದ ಪ್ರಮುಖ ಸದಸ್ಯರಾಗಿದ್ದರು.

1994 ಫಿಫಾ ವಿಶ್ವಕಪ್: ಇಟಲಿ ತಂಡದ ನಾಯಕರಾಗಿ ತಂಡವನ್ನು ಫೈನಲ್‌ಗೆ ಮುನ್ನಡೆಸಿದ್ದರು (ಫೈನಲ್‌ನಲ್ಲಿ ಬ್ರೆಜಿಲ್ ವಿರುದ್ಧ ಶೂಟೌಟ್‌ನಲ್ಲಿ ಇಟಲಿ ಸೋಲನುಭವಿಸಿ ರನ್ನರ್-ಅಪ್ ಆಯಿತು).

ಕ್ಲಬ್ ನಿಷ್ಠೆ ಮತ್ತು ನಾಯಕತ್ವ: ಸುಮಾರು 15 ವರ್ಷಗಳ ಕಾಲ ಎ.ಸಿ. ಮಿಲಾನ್ ತಂಡದ ನಾಯಕರಾಗಿ ಸೇವೆ ಸಲ್ಲಿಸಿದ ಇವರು, ಒಟ್ಟು 20 ವರ್ಷಗಳ ಕಾಲ ಕೇವಲ ಒಂದೇ ಕ್ಲಬ್‌ಗಾಗಿ ಆಡಿದ ಅಪರೂಪದ ಕ್ರೀಡಾಪಟು.

## ಮಿಸೆಸ್ ಗ್ಲೋಬ್ ಕ್ಲಾಸಿಕ್ 2026' ಕಿರೀಟ ಮುಡಿಗೇರಿಸಿಕೊಂಡ ಕನ್ನಡತಿ ಅರ್ಪಿತಾ ಲಂಕೇಶ್



➤ ಕನಸು ಕಾಣಲು ಅಥವಾ ಅದನ್ನು ಸಾಕಾರಗೊಳಿಸಲು ಯಾವುದೇ ವಯಸ್ಸಿನ ಮಿತಿ ಇಲ್ಲ ಎಂಬುದನ್ನು ಕನ್ನಡದ ಪ್ರಸಿದ್ಧ ಚಲನಚಿತ್ರ ನಿರ್ದೇಶಕ ಮತ್ತು ನಿರ್ಮಾಪಕ ಇಂದ್ರಜಿತ್ ಲಂಕೇಶ್ ಅವರ ಪತ್ನಿ ಅರ್ಪಿತಾ ಲಂಕೇಶ್ (Arpita Lankesh) ಮತ್ತೊಮ್ಮೆ ಜಗತ್ತಿಗೆ ಸಾಬೀತುಪಡಿಸಿದ್ದಾರೆ. ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ನಡೆದ ಪ್ರತಿಷ್ಠಿತ **'ಮಿಸೆಸ್ ಗ್ಲೋಬ್ ಕ್ಲಾಸಿಕ್ 2026' (Mrs. Globe Classic 2026)** ಸೌಂದರ್ಯ ಸ್ಪರ್ಧೆಯಲ್ಲಿ ಅರ್ಪಿತಾ ಲಂಕೇಶ್ ಅವರು ಭಾರತವನ್ನು ಪ್ರತಿನಿಧಿಸಿ, ಪ್ರಪಂಚದಾದ್ಯಂತದ ಸಾಧಕಿ ಮಹಿಳೆಯರೊಂದಿಗೆ ಸ್ಪರ್ಧಿಸಿ 'ಮಿಸೆಸ್ ಗ್ಲೋಬ್ ಕ್ಲಾಸಿಕ್ 2026' ಕಿರೀಟವನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ.

➤ 1979ರ ಆಗಸ್ಟ್ 21ರಂದು ಜನಿಸಿದ ಅರ್ಪಿತಾ, ಬಾಲ್ಯದಿಂದಲೂ ವಿದ್ಯಾಭ್ಯಾಸದಲ್ಲಿ ಅತ್ಯಂತ ಪ್ರತಿಭಾವಂತ ವಿದ್ಯಾರ್ಥಿನಿಯಾಗಿದ್ದರು. ಕೇವಲ 18ನೇ ವಯಸ್ಸಿನಲ್ಲಿಯೇ ವಿವಾಹವಾದರೂ ತಮ್ಮ ಕನಸುಗಳನ್ನು ಕೈಬಿಡಲಿಲ್ಲ. ಇಂಜಿನಿಯರಿಂಗ್, 25 ವರ್ಷಗಳ ಐಟಿ ವೃತ್ತಿಜೀವನ ಹಾಗೂ ತಾಯ್ತನದ ಜವಾಬ್ದಾರಿಗಳ ನಡುವೆಯೂ ಧೈರ್ಯದಿಂದ ಮುನ್ನಡೆದ ಅರ್ಪಿತಾ ಲಂಕೇಶ್ ಅವರು ವೀಣಾ ಜೈನ್ ಅವರ ಮಾರ್ಗದರ್ಶನದಲ್ಲಿ 'ಮಿಸೆಸ್ ಗ್ಲೋಬ್ ಇಂಡಿಯಾ' ಸ್ಪರ್ಧೆಯ ಮೂಲಕ ಜಾಗತಿಕ ವೇದಿಕೆಯಲ್ಲಿ ಹೊಸ ಸಾಧನೆ ಗೈದಿದ್ದಾರೆ.

**➤ ಮಿಸೆಸ್ ಗ್ಲೋಬ್ (Mrs. Globe) ಸ್ಪರ್ಧೆಯ ವಿಶೇಷತೆ:**

1996ರಲ್ಲಿ ಡಾ. ಟ್ರೇಸಿ ಕೆಂಬಲ್ (Dr. Tracy Kemble) ಅವರಿಂದ ಸ್ಥಾಪಿಸಲ್ಪಟ್ಟ 'ಮಿಸೆಸ್ ಗ್ಲೋಬ್' ಸ್ಪರ್ಧೆಯು ಜಾಗತಿಕ ಮಟ್ಟದಲ್ಲಿ ಅತ್ಯಂತ ಜನಪ್ರಿಯತೆ ಪಡೆದಿದೆ.

ಕೇವಲ ಬಾಹ್ಯ ಸೌಂದರ್ಯವಲ್ಲ: ಸಾಂಪ್ರದಾಯಿಕ ಸೌಂದರ್ಯ ಸ್ಪರ್ಧೆಗಳಂತೆ ಕೇವಲ ಬಾಹ್ಯ ರೂಪಕ್ಕೆ ಸೀಮಿತವಾಗದೆ, ಮಹಿಳೆಯರ ಆತ್ಮವಿಶ್ವಾಸ, ನಾಯಕತ್ವ ಗುಣಗಳು, ವೈಯಕ್ತಿಕ ಸಾಧನೆಗಳು ಮತ್ತು ಸಾಮಾಜಿಕ ಸೇವೆಯನ್ನು ಇದು ಗೌರವಿಸುತ್ತದೆ.

ಸಹೋದರತ್ವದ ಭಾವನೆ (Sisterhood): ವಿವಾಹಿತ ಮಹಿಳೆಯರಲ್ಲಿ ಸಬಲೀಕರಣ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಉತ್ತೇಜಿಸುವುದು ಈ ವೇದಿಕೆಯ ಮೂಲ ಉದ್ದೇಶವಾಗಿದೆ.

## ಭೋಗಾಪುರಂ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲೋಕಾರ್ಪಣೆ



➤ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಆಂಧ್ರಪ್ರದೇಶದ ವಿಜಯನಗರಂ ಜಿಲ್ಲೆಯ ಭೋಗಾಪುರಂನಲ್ಲಿ ನಿರ್ಮಿಸಲಾದ 'ಅಲ್ಲೂರಿ ಸೀತಾರಾಮ ರಾಜು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ' ವನ್ನು (Bhogapuram International Airport) ಉದ್ಘಾಟಿಸಿದ್ದಾರೆ. 2014ರಲ್ಲಿ ಆಂಧ್ರಪ್ರದೇಶ ರಾಜ್ಯ ವಿಭಜನೆಯಾದ ನಂತರ ರಾಜ್ಯದಲ್ಲಿ ನಿರ್ಮಾಣಗೊಂಡ ಮೊದಲ ಗ್ರೀನ್‌ಫೀಲ್ಡ್ (Greenfield) ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಇದಾಗಿದೆ. ಈ ಯೋಜನೆಯೊಂದಿಗೆ ಆಂಧ್ರಪ್ರದೇಶದಲ್ಲಿ ₹17,900 ಕೋಟಿಗೂ ಹೆಚ್ಚಿನ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಲಾಗಿದೆ.

**➤ ಪ್ರಸಿದ್ಧ ಕ್ರಾಂತಿಕಾರಿ ಅಲ್ಲೂರಿ ಸೀತಾರಾಮ ರಾಜು:** ಈ ವಿಮಾನ ನಿಲ್ದಾಣಕ್ಕೆ ಗಿರಿಜನ ಸ್ವಾತಂತ್ರ್ಯ ಹೋರಾಟಗಾರ ಅಲ್ಲೂರಿ ಸೀತಾರಾಮ ರಾಜು ಅವರ ಹೆಸರನ್ನು ಇಡಲಾಗಿದೆ. ಅವರು 1922-24ರಲ್ಲಿ ಬ್ರಿಟಿಷರ 'ಮದ್ರಾಸ್ ಅರಣ್ಯ ಕಾಯ್ದೆ' ವಿರುದ್ಧ 'ರಂಪಾ ಬಂಡಾಯ' (Rampa Rebellion) ನೇತೃತ್ವ ವಹಿಸಿದ್ದರು.

**➤ ಗ್ರೀನ್‌ಫೀಲ್ಡ್ vs ಬ್ರೌನ್‌ಫೀಲ್ಡ್ ವಿಮಾನ ನಿಲ್ದಾಣ:**

**ಗ್ರೀನ್‌ಫೀಲ್ಡ್ (Greenfield):** ಯಾವುದೇ ಹಳೆಯ ಮೂಲಸೌಕರ್ಯವಿಲ್ಲದೆ, ಸಂಪೂರ್ಣವಾಗಿ ಹೊಸ ಭೂಮಿಯಲ್ಲಿ ಶೂನ್ಯದಿಂದ ಆರಂಭಿಸುವ ಯೋಜನೆ. (ಉದಾ: ಭೋಗಾಪುರಂ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ).

**ಬ್ರೌನ್‌ಫೀಲ್ಡ್ (Brownfield):** ಈಗಾಗಲೇ ಇರುವ ಮೂಲಸೌಕರ್ಯ ಅಥವಾ ವಿಮಾನ ನಿಲ್ದಾಣವನ್ನು ವಿಸ್ತರಿಸಿ ನವೀಕರಿಸುವ ಯೋಜನೆ.

**➤ 'ಧಿಮ್ಸಾ' (Dhimsa) ಜಾನಪದ ನೃತ್ಯ - ಗಿನ್ನೆಸ್ ದಾಖಲೆ: ವಿಮಾನ ನಿಲ್ದಾಣದ ಉದ್ಘಾಟನಾ ಸಮಾರಂಭದ ಭಾಗವಾಗಿ 13,000ಕ್ಕೂ ಹೆಚ್ಚು ಬುಡಕಟ್ಟು ವಿದ್ಯಾರ್ಥಿನಿಯರು ಆಂಧ್ರಪ್ರದೇಶದ ಸಾಂಪ್ರದಾಯಿಕ 'ಧಿಮ್ಸಾ ನೃತ್ಯ' (Dhimsa Dance) ಪ್ರದರ್ಶಿಸಿ ಗಿನ್ನೆಸ್ ವರ್ಲ್ಡ್ ರೆಕಾರ್ಡ್ (Guinness World Record) ನಿರ್ಮಿಸಿದರು.** ಧಿಮ್ಸಾ ವಿಶಾಖಪಟ್ಟಣ ಮತ್ತು ವಿಜಯನಗರಂ ಭಾಗದ ಅರಕು ಕಣಿವೆಯ ಗಿರಿಜನರ ಪ್ರಸಿದ್ಧ ನೃತ್ಯವಾಗಿದೆ.

**➤ ದಕ್ಷಿಣ ಭಾರತದ ಮೊದಲ ISM ಅನುಮೋದಿತ ಸೆಮಿಕಂಡಕ್ಟರ್ ಘಟಕ:** ಪ್ರಧಾನಿ ಮೋದಿ ಅವರು

ವಿಶಾಖಪಟ್ಟಣಂನ ತಾರ್ಲುವಾಡದಲ್ಲಿ ASIP ಟೆಕ್ನಾಲಜೀಸ್ ಮತ್ತು ದಕ್ಷಿಣ ಕೊರಿಯಾದ APACT ಸಂಸ್ಥೆ ಜಂಟಿಯಾಗಿ ಸ್ಥಾಪಿಸುತ್ತಿರುವ ₹460 ಕೋಟಿಗೂ ಹೆಚ್ಚಿನ ಮೌಲ್ಯದ ಸೆಮಿಕಂಡಕ್ಟರ್ ಅಸೆಂಬ್ಲಿ ಮತ್ತು ಟೆಸ್ಟಿಂಗ್ ಘಟಕಕ್ಕೆ ಶಂಕುಸ್ಥಾಪನೆ ನೆರವೇರಿಸಿದರು. ಇದು 'ಇಂಡಿಯಾ ಸೆಮಿಕಂಡಕ್ಟರ್ ಮಿಷನ್' (ISM) ಅಡಿಯಲ್ಲಿ ಅನುಮೋದನೆ ಪಡೆದ ದಕ್ಷಿಣ ಭಾರತದ ಮೊದಲ ಘಟಕವಾಗಿದೆ.

## GSI ನ ಪ್ರಥಮ ಮಹಿಳಾ ಡೈರೆಕ್ಟರ್ ಜನರಲ್ ಆಗಿ ವರ್ಷಾ ಅಶೋಕ್ ಅಗ್ಲಾವೆ ಅಧಿಕಾರ ಸ್ವೀಕಾರ



➤ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣೆ (Geological Survey of India - GSI) ತನ್ನ 176 ವರ್ಷಗಳ ಸುದೀರ್ಘ ಇತಿಹಾಸದಲ್ಲೇ ಅತ್ಯಂತ ಮಹತ್ವದ ಮತ್ತು ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಿದೆ. ಹಿರಿಯ ಭೂವಿಜ್ಞಾನಿ ವರ್ಷಾ ಅಶೋಕ್ ಅಗ್ಲಾವೆ (Varsha Ashok Aglawe) ಅವರು GSI ನ ನೂತನ ಮಹಾನಿರ್ದೇಶಕಿಯಾಗಿ (Director General) ಜುಲೈ 31, 2026 ರಂದು ಅಧಿಕಾರ ವಹಿಸಿಕೊಂಡಿದ್ದಾರೆ. ಈ ಮೂಲಕ ಅವರು GSI ನ ಮುಖ್ಯಸ್ಥರಾದ ಪ್ರಥಮ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.
ಪೂರ್ವಾಧಿಕಾರಿ: ಅಸಿತ್ ಸಹಾ (Asit Saha) ಅವರ ಸೇವಾ ಅವಧಿ ಮುಕ್ತಾಯಗೊಂಡ ನಂತರ ಇವರು ಈ ಹುದ್ದೆಯನ್ನು ಅಲಂಕರಿಸಿದ್ದಾರೆ.
**ಸೇವಾ ಅನುಭವ:** ಜಿಯೋಸೈನ್ಸ್ (Geoscience) ಕ್ಷೇತ್ರದಲ್ಲಿ 3 ದಶಕಗಳಿಗಿಂತಲೂ ಹೆಚ್ಚಿನ ಅನುಭವ ಹೊಂದಿದ್ದಾರೆ.
**➤ ವರ್ಷಾ ಅಶೋಕ್ ಅಗ್ಲಾವೆ ಅವರ ವೃತ್ತಿಜೀವನ ಮತ್ತು ಸಾಧನೆಗಳು:**
**ಆರಂಭಿಕ ಸೇವೆ:** ಇವರು ಇಂಡಿಯನ್ ಬ್ಯೂರೋ ಆಫ್ ಮೈನ್ಸ್ (IBM) ನಲ್ಲಿ ಸೇವೆಯನ್ನು ಪ್ರಾರಂಭಿಸಿ, ನಂತರ 1992 ರಲ್ಲಿ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣೆಗೆ (GSI) ಸೇರ್ಪಡೆಯಾದರು.
**ಹಿಂದಿನ ಹುದ್ದೆ:** GSI ನ ಕೋಲ್ಕತ್ತಾದ ಪೂರ್ವ ವಲಯದ (Eastern Region) ಹೆಚ್ಚುವರಿ ಡೈರೆಕ್ಟರ್ ಜನರಲ್ ಮತ್ತು ವಿಭಾಗೀಯ ಮುಖ್ಯಸ್ಥರಾಗಿ (Head of Department) ಸೇವೆ ಸಲ್ಲಿಸಿದ್ದಾರೆ.
**ವಿಶೇಷ ಪರಿಣತಿ:** ಇವರು ಪ್ಯಾಲಿಯಂಟಾಲಜಿ (Palaeontology) ಮತ್ತು ಪ್ಯಾಲಿನಾಲಜಿ (Palynology) ವಿಷಯಗಳಲ್ಲಿ ಪ್ರವೀಣರಾಗಿದ್ದಾರೆ.
ಮಹತ್ವದ ಸಂಶೋಧನೆ: ಮಧ್ಯ ಭಾರತದ ಸಲ್ಬರ್ಡಿ-ಘೋರ್ಪೆಂಡ್ (Salbardi-Ghorpend) ಪ್ರದೇಶವನ್ನು ಡೈನೋಸಾರ್‌ಗಳ ಗೂಡುಕಟ್ಟುವ ತಾಣ (Dinosaur Nesting Site) ಎಂದು ಗುರುತಿಸುವಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದರು.

## ಇಸ್ರೋ ಶೀಘ್ರದಲ್ಲೇ 'NVS-03' ಉಡಾವಣೆ: ಚಂದ್ರಯಾನ-5 ಮತ್ತು ಗಗನ್‌ಯಾನ ಯೋಜನೆಯ



➤ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ಒಂದೆಡೆ ಮಹತ್ವಾಕಾಂಕ್ಷೆಯ ಚಂದ್ರಯಾನ-5 ಮತ್ತು ಗಗನ್ ಯಾನ ಯೋಜನೆಗಳಿಗೆ ಭರದಿಂದ ಸಿದ್ಧತೆ ನಡೆಸುತ್ತಿದ್ದರೆ, ಇನ್ನೊಂದೆಡೆ ಭಾರತದ ಸ್ವದೇಶಿ ದಿಕ್ಸೂಚಿ ವ್ಯವಸ್ಥೆಯಾದ 'ನಾವಿಕ್' (NavIC) ಸೇವೆಯಲ್ಲಿ ಉಂಟಾಗಿರುವ ತಾಂತ್ರಿಕ ಅಡಚಣೆಯನ್ನು ಸರಿಪಡಿಸಲು ನೂತನ ಉಪಗ್ರಹ ಉಡಾವಣೆಗೆ ಮುಂದಾಗಿದೆ. ಕೇಂದ್ರ ಬಾಹ್ಯಾಕಾಶ ಸಚಿವ ಜಿತೇಂದ್ರ ಸಿಂಗ್ ಅವರು ಸಂಸತ್ತಿನಲ್ಲಿ ಈ ಕುರಿತು ಪ್ರಮುಖ ಮಾಹಿತಿಯನ್ನು ಹಂಚಿಕೊಂಡಿದ್ದಾರೆ.
**➤ ನಾವಿಕ್ (NavIC) ಸೇವೆ ಸ್ಥಗಿತ ಹಾಗೂ NVS-03 ಉಪಗ್ರಹ ಉಡಾವಣೆ:**
ಸಮಸ್ಯೆ: ಭಾರತದ ಸ್ವದೇಶಿ ಜಿಪಿಎಸ್ ಎನಿಸಿಕೊಂಡಿರುವ 'ನಾವಿಕ್' (Navigation with Indian Constellation - NavIC) ವ್ಯವಸ್ಥೆಯು ಪ್ರಸ್ತುತ ಸ್ವತಂತ್ರವಾಗಿ ನೇವಿಗೇಶನ್ ದತ್ತಾಂಶವನ್ನು ನೀಡಲು ಸಾಧ್ಯವಾಗುತ್ತಿಲ್ಲ ಎಂದು ಕೇಂದ್ರ ಸರ್ಕಾರ ಲೋಕಸಭೆಗೆ ತಿಳಿಸಿದೆ.
ಕಾರಣ: ನಾವಿಕ್ ವ್ಯವಸ್ಥೆಯು ತಡೆರಹಿತ ಸೇವೆ ನೀಡಲು ಕನಿಷ್ಠ 4 ಕಾರ್ಯಾಚರಣಾ ಉಪಗ್ರಹಗಳ (Operational Satellites) ಅಗತ್ಯವಿದೆ.
ಪರಿಹಾರ: ಈ ತಾಂತ್ರಿಕ ಸಮಸ್ಯೆಯನ್ನು ಸರಿಪಡಿಸಲು ಇಸ್ರೋ ಶೀಘ್ರದಲ್ಲೇ 'NVS-03' ಎಂಬ ಹೊಸ ಪೀಳಿಗೆಯ ನೇವಿಗೇಷನ್ ಉಪಗ್ರಹವನ್ನು ಉಡಾವಣೆ ಮಾಡಲು ಸಿದ್ಧತೆ ನಡೆಸುತ್ತಿದೆ.
**➤ ಚಂದ್ರಯಾನ-5 (LUPEX) ಯೋಜನೆ: ಜಾಗತಿಕ ಸಹಯೋಗ:**
ಜಂಟಿ ಸಹಯೋಗ: ಭಾರತದ ISRO (ಲ್ಯಾಂಡರ್) ಮತ್ತು ಜಪಾನ್ ನ JAXA (ರೋವರ್).
ಉಡಾವಣೆ: ಜಪಾನ್‌ನ H-3 ರಾಕೆಟ್ ಮೂಲಕ ಉಡಾವಣೆ (ಸಾಧ್ಯತೆ: 2028).
ಜಾಗತಿಕ ಬೆಂಬಲ: NASA ಮತ್ತು ESA ಸಂಸ್ಥೆಗಳ ವೈಜ್ಞಾನಿಕ ಉಪಕರಣಗಳು ಸೇರಿದಂತೆ ಒಟ್ಟು 7 ಪೇಲೋಡ್‌ಗಳು ಲಭ್ಯ.
ಮುಖ್ಯ ಉದ್ದೇಶ: ಚಂದ್ರನ ದಕ್ಷಿಣ ಧ್ರುವದ ಮೇಲ್ಮೈ ಹಾಗೂ ಕೆಳಭಾಗದಲ್ಲಿರುವ ನೀರು ಮತ್ತು ಮಂಜುಗಡ್ಡೆ ಹುಡುಕುವುದು.
ಕಾರ್ಯಾವಧಿ: ರೋವರ್ ಚಂದ್ರನ ಮೇಲೆ 100 ದಿನಗಳ ಕಾಲ (ಸುಮಾರು 3.5 ತಿಂಗಳು) ಸಂಶೋಧನೆ ನಡೆಸಲಿದೆ.
➤ ಗಗನ್‌ಯಾನ-1 (Gaganyaan-1) ಅಂತಿಮ ಹಂತದ ಸಿದ್ಧತೆ: ಭಾರತದ ಮೊದಲ ಮಾನವಸಹಿತ ಬಾಹ್ಯಾಕಾಶ ಯೋಜನೆಯಾದ 'ಗಗನ್‌ಯಾನ-1' ರ ಅಂತಿಮ ಹಂತದ ಸಿದ್ಧತೆಗಳು, ಯಂತ್ರಾಂಶಗಳ ಜೋಡಣೆ (Integration) ಹಾಗೂ ವಿವಿಧ ಪರೀಕ್ಷಾರ್ಥ ಕಾರ್ಯಗಳು ವೇಗವಾಗಿ ನಡೆಯುತ್ತಿವೆ. ಶೀಘ್ರದಲ್ಲೇ ಮೊದಲ ರಹಿತ (Uncrewed) ಗಗನ್‌ಯಾನ ಪರೀಕ್ಷಾರ್ಥ ಉಡಾವಣೆ ನಡೆಯಲಿದೆ.

## ರಕ್ಷಣೆ & ನೇಮಕಾತಿ: DGAFMS ನೂತನ ಮಹಾನಿರ್ದೇಶಕರಾಗಿ ಏರ್ ಮಾರ್ಷಲ್ ಸಂದೀಪ್ ತರೇಜಾ ನೇಮಕ



➤ ಭಾರತೀಯ ಸಶಸ್ತ್ರ ಪಡೆಗಳ ವೈದ್ಯಕೀಯ ವ್ಯವಸ್ಥೆಯಲ್ಲಿ ಅತ್ಯುನ್ನತ ಹುದ್ದೆಯಾದ ಸಶಸ್ತ್ರ ಪಡೆಗಳ ವೈದ್ಯಕೀಯ ಸೇವೆಗಳ ಮಹಾನಿರ್ದೇಶಕರು (Director General Armed Forces Medical Services - DGAFMS) ಹುದ್ದೆಗೆ ಏರ್ ಮಾರ್ಷಲ್ ಸಂದೀಪ್ ತರೇಜಾ (Air Marshal Sandeep Thareja) ಅವರನ್ನು ಕೇಂದ್ರ ಸರ್ಕಾರ ನೇಮಕ ಮಾಡಿದೆ. ಇವರು ಆಗಸ್ಟ್ 31, 2026 ರಿಂದ ಜಾರಿಗೆ ಬರುವಂತೆ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಪ್ರಸ್ತುತ DGAFMS ಆಗಿ ಸೇವೆ ಸಲ್ಲಿಸುತ್ತಿರುವ ಸರ್ಜನ್ ವೈಸ್ ಅಡ್ಮಿರಲ್

ಆರತಿ ಸರಿನ್ (Surgeon Vice Admiral Arti Sarin) ಅವರು ಆಗಸ್ಟ್ 31, 2026 ರಂದು ನಿವೃತ್ತರಾಗಲಿದ್ದು, ಅವರ ನಂತರ ಸಂದೀಪ್ ತರೇಜಾ ಅವರು ಈ ಜವಾಬ್ದಾರಿಯನ್ನು ಸ್ವೀಕರಿಸಲಿದ್ದಾರೆ.

➤ **ಏರ್ ಮಾರ್ಷಲ್ ಸಂದೀಪ್ ತರೇಜಾ:**

ಆರಂಭಿಕ ಸೇವೆ: ಡಿಸೆಂಬರ್ 1986 ರಲ್ಲಿ ಸಶಸ್ತ್ರ ಪಡೆಗಳ ವೈದ್ಯಕೀಯ ಸೇವೆಗೆ (AFMS) ಕಮಿಷನ್ಡ್ ಅಧಿಕಾರಿಯಾಗಿ ಸೇರ್ಪಡೆಯಾದರು.

ಶಿಕ್ಷಣ: ಪುಣೆಯ ಪ್ರತಿಷ್ಠಿತ ಸಶಸ್ತ್ರ ಪಡೆಗಳ ವೈದ್ಯಕೀಯ ಕಾಲೇಜ್ (AFMC) ನ ಹಳೆಯ ವಿದ್ಯಾರ್ಥಿ.

ಉನ್ನತ ಶಿಕ್ಷಣ: 1997 ರಲ್ಲಿ ಜನರಲ್ ಮೆಡಿಸಿನ್‌ನಲ್ಲಿ MD ಪದವಿ ಹಾಗೂ 2005 ರಲ್ಲಿ ನವದೆಹಲಿಯ AIIMS ನಿಂದ ಗ್ಯಾಸ್ಟ್ರೋಎಂಟರಾಲಜಿಯಲ್ಲಿ DM ಪದವಿ ಪಡೆದರು. AIIMS ನಲ್ಲಿ ಇವರಿಗೆ 'ಬೆಸ್ಟ್ DM ವಿದ್ಯಾರ್ಥಿ' ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

ಮಿಲಿಟರಿ ತರಬೇತಿ: ದೆಹಲಿಯ ನ್ಯಾಷನಲ್ ಡಿಫೆನ್ಸ್ ಕಾಲೇಜಿನ (NDC) ಹಳೆಯ ವಿದ್ಯಾರ್ಥಿಯಾಗಿದ್ದು, ಎಲ್ಲಾ ಮಿಲಿಟರಿ ತರಬೇತಿ ಕೋರ್ಸ್‌ಗಳಲ್ಲಿ ಅತ್ಯುತ್ತಮ 'A' ಗ್ರೇಡಿಂಗ್ ಪಡೆದಿದ್ದಾರೆ.

➤ **ಪ್ರಮುಖ ಸಾಧನೆಗಳು ಮತ್ತು ನಿರ್ವಹಿಸಿದ ಹುದ್ದೆಗಳು:**

ಪ್ರಸ್ತುತ ಏರ್ ಮಾರ್ಷಲ್ ತರೇಜಾ ಅವರು ಡೈರೆಕ್ಟರ್ ಜನರಲ್ ಮೆಡಿಕಲ್ ಸರ್ವಿಸಸ್ - ಏರ್ (DGMS Air) ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ಗಗನಯಾನ್ ಯೋಜನೆ (Gaganyaan Mission): ಭಾರತದ ಮಹತ್ವಾಕಾಂಕ್ಷೆಯ ಮಾನವ ಸಹಿತ ಬಾಹ್ಯಾಕಾಶ ಯೋಜನೆಗೆ ಸಶಸ್ತ್ರ ಪಡೆಗಳ ವೈದ್ಯಕೀಯ ಸಿದ್ಧತೆಯನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಭೀಷ್ಮ ಕ್ಯೂಬ್ (BHISHM Cube): ತುರ್ತು ಸಂದರ್ಭಗಳಲ್ಲಿ ಕ್ಷಿಪ್ರ ವೈದ್ಯಕೀಯ ನೆರವು ನೀಡುವ 'BHISHM Cube' ತಂತ್ರಜ್ಞಾನವನ್ನು ಕಾರ್ಯಾಚರಣೆಗೆ ತರುವಲ್ಲಿ ಪ್ರಮುಖ ನಾಯಕತ್ವ ವಹಿಸಿದ್ದಾರೆ.

**ಮುಖ್ಯ ಹುದ್ದೆಗಳು:**

ಪಠಾನ್‌ಕೋಟ್ ಮಿಲಿಟರಿ ಆಸ್ಪತ್ರೆಯ ಕಮಾಂಡೆಂಟ್

ಲಕ್ನೋ ಕಮಾಂಡ್ ಆಸ್ಪತ್ರೆಯ ಕಮಾಂಡೆಂಟ್

AFMC ಪುಣೆಯ ನಿರ್ದೇಶಕ ಹಾಗೂ ಕಮಾಂಡೆಂಟ್

ಪ್ರಶಸ್ತಿ ಮತ್ತು ಗೌರವಗಳು: ಇವರ ಸೇವಾ ನಿಷ್ಠೆಯನ್ನು ಗುರುತಿಸಿ ಸೇನಾ ಪದಕ (Sena Medal) ಮತ್ತು ಎರಡು ಬಾರಿ ವಿಶಿಷ್ಟ ಸೇವಾ ಪದಕ (VSM & Bar) ನೀಡಿ ಗೌರವಿಸಲಾಗಿದೆ.

## 03 Aug 2026

## ಕಾಮನ್‌ವೆಲ್ತ್ ಕ್ರೀಡಾಕೂಟ 2026: ಭಾರತಕ್ಕೆ 4ನೇ ಸ್ಥಾನ




➤ ಸ್ಕಾಟ್‌ಲ್ಯಾಂಡ್‌ನ ಗ್ಲಾಸ್ಗೋದಲ್ಲಿ ನಡೆದ 2026ರ ಕಾಮನ್‌ವೆಲ್ತ್ ಕ್ರೀಡಾಕೂಟವು (Glasgow Commonwealth Games 2026) ಭಾನುವಾರ (02-08-2026) ಯಶಸ್ವಿಯಾಗಿ ಮುಕ್ತಾಯಗೊಂಡಿದೆ. ಈ ಬಾರಿಯ ಕೂಟದಲ್ಲಿ ಭಾರತೀಯ ಕ್ರೀಡಾಪಟುಗಳು ಅದ್ಭುತ ಪ್ರದರ್ಶನ ನೀಡಿ ಒಟ್ಟು 39 ಪದಕಗಳನ್ನು ಗೆಲ್ಲುವ ಮೂಲಕ ಪದಕ ಪಟ್ಟಿಯಲ್ಲಿ 4ನೇ ಸ್ಥಾನ ಪಡೆದುಕೊಂಡು ತಮ್ಮ ಅಭಿಯಾನವನ್ನು ಪೂರ್ಣಗೊಳಿಸಿದ್ದಾರೆ.

➤ **ಪದಕಗಳ ಪೂರ್ಣ ವಿವರ (Medal Tally Overview):**

ಚಿನ್ನ (Gold): 13

ಬೆಳ್ಳಿ (Silver): 17

ಕಂಚು (Bronze): 09

ಒಟ್ಟು ಪದಕಗಳು: 39

➤ **ಪ್ರಮುಖ ಕ್ರೀಡಾ ಪ್ರದರ್ಶನಗಳ ಮುಖ್ಯಾಂಶಗಳು:**

**ಅಥ್ಲೆಟಿಕ್ಸ್‌ನಲ್ಲಿ ಅದ್ಭುತ ಸಾಧನೆ:** ಭಾರತಕ್ಕೆ ಗರಿಷ್ಠ ಪದಕಗಳು ಒಲಿದಿದ್ದು ಅಥ್ಲೆಟಿಕ್ಸ್ ವಿಭಾಗದಲ್ಲಿ. ಅಥ್ಲೆಟಿಕ್ಸ್‌ನಲ್ಲಿ ಭಾರತ 16 ಪದಕಗಳನ್ನು ಗೆದ್ದು ಹೊಸ ಮೈಲಿಗಲ್ಲು ಸ್ಥಾಪಿಸಿತು.

**ಬಾಕ್ಸಿಂಗ್‌ನಲ್ಲಿ ಭಾರತದ ಪ್ರಾಬಲ್ಯ:** ರಿಂಗ್‌ನಲ್ಲಿ ಮಿಂಚಿದ ಭಾರತೀಯ ಮುಷ್ಟಿಯುದ್ಧ ಪಟುಗಳು ಒಟ್ಟು 10 ಪದಕಗಳನ್ನು ದೇಶಕ್ಕೆ ತಂದುಕೊಟ್ಟರು.

ಸೀಮಿತ ಕ್ರೀಡೆಗಳು: ವೆಚ್ಚ ಕಡಿತ ಹಾಗೂ ಸಂಘಟನಾತ್ಮಕ ಬದಲಾವಣೆಗಳ ಕಾರಣದಿಂದ ಈ ಬಾರಿಯ ಗ್ಲಾಸ್ಗೋ ಕೂಟದಲ್ಲಿ ಕೇವಲ 10 ಪ್ರಮುಖ ಕ್ರೀಡೆಗಳಲ್ಲಿ ಮಾತ್ರ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

**ಸಾಮಾನ್ಯ ಮತ್ತು ಪ್ಯಾರಾ ಸ್ಪರ್ಧೆಗಳು:** ಈ ಬಾರಿಯ ಕ್ರೀಡಾಕೂಟದ ವಿಶೇಷತೆಯೆಂದರೆ ಸಾಮಾನ್ಯ ಸ್ಪರ್ಧಿಗಳು ಹಾಗೂ ಪ್ಯಾರಾ ಕ್ರೀಡಾಪಟುಗಳ ಸ್ಪರ್ಧೆಗಳು ಏಕಕಾಲದಲ್ಲಿ (Integrated Event) ನಡೆದವು.

➤ **2022ರ ಬರ್ಮಿಂಗ್‌ಹ್ಯಾಮ್ ಕೂಟಕ್ಕೆ ಹೋಲಿಕೆ:**

2022 ಬರ್ಮಿಂಗ್‌ಹ್ಯಾಮ್ CWG: ಭಾರತವು 61 ಪದಕಗಳನ್ನು ಗಳಿಸಿ 4ನೇ ಸ್ಥಾನ ಪಡೆದಿತ್ತು.

2026 ಗ್ಲಾಸ್ಗೋ CWG: ಈ ಬಾರಿ ಕ್ರೀಡೆಗಳ ಸಂಖ್ಯೆ ಕಡಿಮೆಯಾಗಿದ್ದರೂ (ಶೂಟಿಂಗ್, ಕುಸ್ತಿ ಮುಂತಾದ ಸಾಂಪ್ರದಾಯಿಕ ಪದಕ ತರುವ ಕ್ರೀಡೆಗಳು ಇರಲಿಲ್ಲ), ಭಾರತವು ತನ್ನ 4ನೇ ಸ್ಥಾನವನ್ನು ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗಿದೆ.

## ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್‌ಗೆ 'ಲೋಕಮಾನ್ಯ ತಿಲಕ್ ರಾಷ್ಟ್ರೀಯ ಪ್ರಶಸ್ತಿ' ಗೌರವ



➤ ಭಾರತದ ರಾಷ್ಟ್ರೀಯ ಭದ್ರತೆಯನ್ನು ಬಲಪಡಿಸುವಲ್ಲಿ ನೀಡಿದ ಗಣನೀಯ ಕೊಡುಗೆಗಾಗಿ ರಾಷ್ಟ್ರೀಯ ಭದ್ರತಾ ಸಲಹೆಗಾರ (NSA) ಅಜಿತ್ ದೋವಲ್ ಅವರಿಗೆ 2026ರ ಲೋಕಮಾನ್ಯ ತಿಲಕ್ ರಾಷ್ಟ್ರೀಯ ಪ್ರಶಸ್ತಿ (Lokmanya Tilak National Award) ನೀಡಿ ಗೌರವಿಸಲಾಗಿದೆ. ಆಗಸ್ಟ್ 1, 2026 ರಂದು ಮಹಾರಾಷ್ಟ್ರದ ಪುಣೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಈ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

➤ **ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ಪ್ರಮುಖಾಂಶಗಳು:**

ಸ್ವಾತಂತ್ರ್ಯ ಹೋರಾಟಗಾರ ಲೋಕಮಾನ್ಯ ಬಾಲಗಂಗಾಧರ ತಿಲಕ್ ಅವರ 106ನೇ ಪುಣ್ಯಸ್ಮರಣೆಯ ಅಂಗವಾಗಿ (ಆಗಸ್ಟ್ 1, 2026) ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಉಪಮುಖ್ಯಮಂತ್ರಿಗಳಾದ ಏಕನಾಥ್ ಶಿಂಧೆ ಮತ್ತು ಸುನೇತ್ರಾ ಪವಾರ್ ಭಾಗವಹಿಸಿದ್ದರು.

ಭಾರತದ ಭದ್ರತಾ ಕಾರ್ಯತಂತ್ರವನ್ನು ರೂಪಿಸುವಲ್ಲಿ ಮತ್ತು ದೇಶದ ಆಂತರಿಕ ಹಾಗೂ ಬಾಹ್ಯ ಭದ್ರತೆಯನ್ನು ದೃಢಗೊಳಿಸುವಲ್ಲಿ ಅಜಿತ್ ದೋವಲ್ ಅವರ ಪಾತ್ರವನ್ನು ಗುರುತಿಸಿ ಈ ಗೌರವ ನೀಡಲಾಗಿದೆ.

➤ **ಲೋಕಮಾನ್ಯ ತಿಲಕ್ ರಾಷ್ಟ್ರೀಯ ಪ್ರಶಸ್ತಿ ಕುರಿತು:**

ಸ್ಥಾಪನೆ: ಈ ಪ್ರಶಸ್ತಿಯನ್ನು 1983 ರಲ್ಲಿ ಲೋಕಮಾನ್ಯ ತಿಲಕ್ ಸ್ಮಾರಕ ಟ್ರಸ್ಟ್ ಸ್ಥಾಪಿಸಿತು.

ಉದ್ದೇಶ: ದೇಶದ ಪ್ರಗತಿ ಮತ್ತು ಅಭಿವೃದ್ಧಿಗೆ ಅಸಾಧಾರಣ ಕೊಡುಗೆ ನೀಡಿದ ಗಣ್ಯರಿಗೆ ಪ್ರತಿವರ್ಷ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

ಮೊದಲ ಪುರಸ್ಕೃತರು: ಸಮಾಜವಾದಿ ನಾಯಕ ಎಸ್. ಎಂ. ಜೋಶಿ (S M Joshi) ಈ ಪ್ರಶಸ್ತಿ ಪಡೆದ ಮೊದಲ ವ್ಯಕ್ತಿ.

ಪ್ರಮುಖ ಪುರಸ್ಕೃತರು: ಮಾಜಿ ಪ್ರಧಾನಿಗಳಾದ ಇಂದಿರಾ ಗಾಂಧಿ, ಅಟಲ್ ಬಿಹಾರಿ ವಾಜಪೇಯಿ, ಡಾ. ಮನ್‌ಮೋಹನ್ ಸಿಂಗ್,

ಪ್ರಧಾನಿ ನರೇಂದ್ರ ಮೋದಿ, ಮಾಜಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಹಾಗೂ ನಿತಿನ್ ಗಡ್ಕರಿ.

➤ ಅಜಿತ್ ದೋವಲ್ ಅವರು 1968ರ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿದ್ದು, ಭಾರತದ ಅತ್ಯಂತ ದೀರ್ಘಾವಧಿಯ ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ (NSA) ಸರ್ಜಿಕಲ್ ಸ್ಟ್ರೈಕ್, ಬಾಲಾಕೋಟ್ ವೈಮಾನಿಕ ದಾಳಿ, ಡೋಕ್ಲಾಂ ಬಿಕ್ಕಟ್ಟು ಪರಿಹಾರ ಹಾಗೂ ಆಪರೇಷನ್ ಸಿಂಧೂರ್‌ಗಳಂತಹ ಪ್ರಮುಖ ಕಾರ್ಯಾಚರಣೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

## ಖೇಲೋ ಇಂಡಿಯಾ & ರಾಷ್ಟ್ರೀಯ ಕ್ರೀಡಾ ಒಕ್ಕೂಟಗಳ ಯೋಜನೆಗೆ ₹36,441 ಕೋಟಿ ಅನುಮೋದನೆ




➤ ಕೇಂದ್ರ ಸಚಿವ ಸಂಪುಟವು ಭಾರತದ ಕ್ರೀಡಾ ಕ್ಷೇತ್ರದಲ್ಲಿ ಮಹತ್ತರ ಕ್ರಾಂತಿಗೆ ನಾಂದಿ ಹಾಡುವ ನಿಟ್ಟಿನಲ್ಲಿ ₹36,441 ಕೋಟಿ ವೆಚ್ಚದ ಬೃಹತ್ ಕ್ರೀಡಾ ಉತ್ತೇಜನ ಯೋಜನೆಗೆ ಅನುಮೋದನೆ ನೀಡಿದೆ.

➤ **ಬಜೆಟ್ ವಿಭಜನೆ ಮತ್ತು ಕಾಲಮಿತಿ:** ಕೇಂದ್ರ ಕ್ರೀಡಾ ಸಚಿವಾಲಯದ ಅಡಿಯಲ್ಲಿ ಈ ಯೋಜನೆಯನ್ನು ಮುಂದಿನ 5 ವರ್ಷಗಳಿಗೆ (2026-31) ಜಾರಿಗೊಳಿಸಲಾಗುತ್ತಿದೆ.

**ಖೇಲೋ ಇಂಡಿಯಾ (Khelo India Scheme):** ಕ್ರೀಡಾ ಮೂಲಸೌಕರ್ಯ, ಮೂಲಭೂತ ಹಂತದ (Grassroots) ಪ್ರತಿಭೆಗಳ ಶೋಧ ಮತ್ತು ತರಬೇತಿಗೆ ₹29,054 ಕೋಟಿ ಮೀಸಲಿಡಲಾಗಿದೆ. (ಇದು ಹಿಂದಿನ ಯೋಜನೆಯ ಆಯವ್ಯಯಕ್ಕಿಂತ ಸುಮಾರು 8 ಪಟ್ಟು ಹೆಚ್ಚು).

ರಾಷ್ಟ್ರೀಯ ಕ್ರೀಡಾ ಒಕ್ಕೂಟಗಳಿಗೆ ನೆರವು (ANSF): ಕ್ರೀಡಾಪಟುಗಳ ತರಬೇತಿ, ವಿದೇಶಿ ತರಬೇತುದಾರರ ನೇಮಕ, ಆಧುನಿಕ ಉಪಕರಣಗಳು ಮತ್ತು ಅಂತಾರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಭಾಗವಹಿಸಲು ₹7,387 ಕೋಟಿ ಒದಗಿಸಲಾಗಿದೆ.

➤ **ಶಾಲಾ ಹಂತದ ಹೊಸ ಕ್ರೀಡಾ ಉಪಕ್ರಮಗಳು:** ಶಾಲಾ ಶಿಕ್ಷಣದೊಂದಿಗೆ ಕ್ರೀಡೆಯನ್ನು ಸಂಯೋಜಿಸಲು ಮತ್ತು ಆರಂಭಿಕ ಹಂತದಲ್ಲೇ ಪ್ರತಿಭೆಗಳನ್ನು ಗುರುತಿಸಲು ಎರಡು ಹೊಸ ಯೋಜನೆಗಳನ್ನು ಪ್ರಾರಂಭಿಸಲಾಗಿದೆ:

ಖೇಲೋ ಇಂಡಿಯಾ ಫೀಡರ್ ಸ್ಕೂಲ್ಸ್ (KIFS): ಆರಂಭಿಕ ಹಂತದಲ್ಲೇ ಕ್ರೀಡಾ ಪ್ರತಿಭೆಗಳನ್ನು ಗುರುತಿಸುವುದು.

ಖೇಲೋ ಇಂಡಿಯಾ ಉತ್ಕೃಷ್ಟ ವಿದ್ಯಾಲಯಗಳು (KIUV): ರಾಷ್ಟ್ರೀಯ ಶಿಕ್ಷಣ ನೀತಿ (NEP 2020) ಗೆ ಅನುಗುಣವಾಗಿ ಸಾಮಾನ್ಯ ಶಿಕ್ಷಣದೊಂದಿಗೆ ಕ್ರೀಡಾ ತರಬೇತಿಯನ್ನು ನೀಡುವ ಮಾದರಿ ಶಾಲೆಗಳು.

➤ **'Emerging Khelo India Athletes (E-KIAs)' ವರ್ಗ:** ಪ್ರಸ್ತುತ ಚಾಲ್ತಿಯಲ್ಲಿರುವ ಖೇಲೋ ಇಂಡಿಯಾ ಅಥ್ಲೀಟ್ ವ್ಯವಸ್ಥೆಯ ಜೊತೆಗೆ E-KIAs ಎಂಬ ಹೊಸ ವಿಭಾಗವನ್ನು ಸೇರಿಸಲಾಗಿದೆ. ಇದರಿಂದಾಗಿ ತರಬೇತಿ ಹಾಗೂ ವೈಜ್ಞಾನಿಕ ಬೆಂಬಲ ಪಡೆಯುವ ಯುವ ಕ್ರೀಡಾಪಟುಗಳ ಸಂಖ್ಯೆ 10 ಪಟ್ಟು ಹೆಚ್ಚಾಗಲಿದೆ.

➤ **ಏಕೀಕೃತ ಡಿಜಿಟಲ್ ಕ್ರೀಡಾ ವೇದಿಕೆ:** ಪಾರದರ್ಶಕ ಆಡಳಿತ ಮತ್ತು ದತ್ತಾಂಶ ಆಧಾರಿತ ಕ್ರೀಡಾಪಟುಗಳ ಪ್ರಗತಿಗಾಗಿ ಡಿಜಿಟಲ್ ವೇದಿಕೆಯನ್ನು ರೂಪಿಸಲಾಗುತ್ತಿದೆ.

ಕ್ರೀಡಾಪಟುಗಳ ಡೇಟಾಬೇಸ್, ಮೂಲಸೌಕರ್ಯಗಳ ಲಭ್ಯತೆ.

ಫಿಟ್ ಇಂಡಿಯಾ (Fit India) ಭಾಗವಹಿಸುವಿಕೆ ಮತ್ತು ಆನ್‌ಲೈನ್ ಟ್ಯಾಲೆಂಟ್ ಅಸೆಸ್‌ಮೆಂಟ್.

➤ **ವಿಶೇಷ ಆದ್ಯತೆಯ ಕ್ಷೇತ್ರಗಳು:**

ಮಹಿಳಾ ಮತ್ತು ಪ್ಯಾರಾ-ಅಥ್ಲೀಟ್‌ಗಳಿಗೆ ಹೆಚ್ಚಿನ ಪ್ರಾತಿನಿಧ್ಯ.

ದೇಶೀಯ/ಪರಂಪರಾಗತ ಕ್ರೀಡೆಗಳಿಗೆ (Indigenous Sports) ಪ್ರೋತ್ಸಾಹ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಿಕೆ.

ಗ್ಲೋಬಲ್ ಸೌತ್ (Global South) ದೇಶಗಳೊಂದಿಗೆ ಕ್ರೀಡಾ ಸಹಕಾರ.

## ಭಾರತ-ಚೀನಾ ಗಡಿ ವ್ಯಾಪಾರಕ್ಕೆ ಮರುಜೀವ: ಸಿಕ್ಕಿಂನ 'ನಾಥುಲಾ ಪಾಸ್' ವ್ಯಾಪಾರ ಮಾರ್ಗ ಪುನರಾರಂಭ



➤ ಕೋವಿಡ್ ಸಾಂಕ್ರಾಮಿಕ ಹಾಗೂ ಗಡಿ ಉದ್ವಿಗ್ನತೆಯಿಂದಾಗಿ 2020 ರಿಂದ ಸ್ಥಗಿತಗೊಂಡಿದ್ದ ಸಿಕ್ಕಿಂನ ಐತಿಹಾಸಿಕ 'ನಾಥುಲಾ ಪಾಸ್' ಗಡಿ ವ್ಯಾಪಾರವು ಸುದೀರ್ಘ 6 ವರ್ಷಗಳ ನಂತರ ಆಗಸ್ಟ್ 1 ರಿಂದ ಪುನರಾರಂಭಗೊಂಡಿದ್ದು, 600 ಕ್ಕೂ ಹೆಚ್ಚು ಸ್ಥಳೀಯ ನೋಂದಾಯಿತ ವ್ಯಾಪಾರಿಗಳು, ಸಾರಿಗೆ ಹಾಗೂ ಪ್ರವಾಸೋದ್ಯಮ ಕ್ಷೇತ್ರಗಳಿಗೆ ಹೊಸ ಆರ್ಥಿಕ ಚೈತನ್ಯ ನೀಡಲಿದೆ.

➤ **ನಾಥುಲಾ ಪಾಸ್ ಗಡಿ ವ್ಯಾಪಾರ:** ಭಾರತ ಮತ್ತು ಚೀನಾ ನಡುವೆ ಆರ್ಥಿಕ ಮತ್ತು ಸಾಂಸ್ಕೃತಿಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದ್ದ ನಾಥುಲಾ ಪಾಸ್ ಮಾರ್ಗವು 1962ರ ಭಾರತ-ಚೀನಾ ಯುದ್ಧದ ನಂತರ ಸಂಪೂರ್ಣವಾಗಿ ಮುಚ್ಚಲ್ಪಟ್ಟಿತ್ತು. ತದನಂತರ ಉಭಯ ದೇಶಗಳ ಮುಖಂಡರ ಸತತ ಮಾತುಕತೆಯ ಫಲವಾಗಿ 2006 ಜುಲೈ 6 ರಂದು ಇದನ್ನು ಪುನಃ ಗಡಿ ವ್ಯಾಪಾರಕ್ಕಾಗಿ ಮುಕ್ತಗೊಳಿಸಲಾಗಿತ್ತು. ಆದರೆ 2020ರಲ್ಲಿ ಬಂದಪ್ಪಳಿಸಿದ ಕೋವಿಡ್-19 ಸಾಂಕ್ರಾಮಿಕ ಹಾಗೂ ಲಡಾಖ್ ಗಡಿ ಪ್ರದೇಶದ ಉದ್ವಿಗ್ನತೆಯ ಕಾರಣದಿಂದಾಗಿ ಸುರಕ್ಷತಾ ದೃಷ್ಟಿಯಿಂದ ಈ ವ್ಯಾಪಾರವನ್ನು ಸ್ಥಗಿತಗೊಳಿಸಲಾಗಿತ್ತು. ಇದೀಗ 6 ವರ್ಷಗಳ ಸುದೀರ್ಘ ಕಾಯುವಿಕೆಯ ನಂತರ ಗಡಿ ಪ್ರದೇಶದಲ್ಲಿ ಶಾಂತಿ ಸ್ಥಾಪನೆ ಮತ್ತು ಸ್ಥಳೀಯರ ಆರ್ಥಿಕ ಸುಧಾರಣೆಗಾಗಿ ಈ ಮಾರ್ಗವನ್ನು ಪುನಃ ತೆರೆಯಲಾಗಿದೆ.

➤ **ಸ್ಥಳೀಯ ಆರ್ಥಿಕತೆ ಹಾಗೂ ಸಣ್ಣ ವ್ಯಾಪಾರಿಗಳಿಗೆ ಸಹಕಾರಿ:** ಗಡಿಭಾಗದ ಹಳ್ಳಿಗಳ ಜನರ ದೈನಂದಿನ ಜೀವನೋಪಾಯಕ್ಕೆ ಈ ವ್ಯಾಪಾರವೇ ಪ್ರಮುಖ ಜೀವಸೆಲೆಯಾಗಿತ್ತು. ಈ ನಿರ್ಧಾರದಿಂದ ಸ್ಥಳೀಯವಾಗಿ ಕೆಳಗಿನ ಕ್ಷೇತ್ರಗಳಿಗೆ ಭಾರಿ ಅನುಕೂಲವಾಗಲಿದೆ:

600+ ನೋಂದಾಯಿತ ವ್ಯಾಪಾರಿಗಳಿಗೆ ನೆರವು: ಸ್ಥಳೀಯವಾಗಿ ನೋಂದಾಯಿತರಾಗಿದ್ದ 600ಕ್ಕೂ ಹೆಚ್ಚು ಭಾರತೀಯ ಸಣ್ಣ ವ್ಯಾಪಾರಿಗಳಿಗೆ ಈ ಮಾರ್ಗವೇ ಆದಾಯದ ಮೂಲವಾಗಿತ್ತು. ವ್ಯಾಪಾರ ಪುನರಾರಂಭದಿಂದ ಇವರ ಬದುಕಿಗೆ ಹೊಸ ಆರ್ಥಿಕ ಚೈತನ್ಯ ಸಿಕ್ಕಂತಾಗಿದೆ.

ಸಾರಿಗೆ ಮತ್ತು ಶೇಖರಣಾ ಗೋದಾಮುಗಳು (Logistics & Warehouses): ಗಡಿ ದಾಟಿ ಸರಕುಗಳನ್ನು ಸಾಗಿಸುವ ಲಾರಿ, ಪಿಕ್ ಅಪ್ ವಾಹನ ಚಾಲಕರು, ಮಾಲೀಕರು ಹಾಗೂ ಶೇಖರಣಾ ಗೋದಾಮುಗಳಿಗೆ ಉದ್ಯೋಗಾವಕಾಶ ಹೆಚ್ಚಲಿದೆ.

ಹೋಟೆಲ್ ಮತ್ತು ಪ್ರವಾಸೋದ್ಯಮ ವೃದ್ಧಿ: ಸಿಕ್ಕಿಂನ ಪ್ರವಾಸೋದ್ಯಮಕ್ಕೆ ಇದು ದೊಡ್ಡ ಪೂರಕ ಶಕ್ತಿಯಾಗಲಿದ್ದು, ಗಡಿ ವಾಣಿಜ್ಯದ ಜತೆಗೆ ಪ್ರವಾಸಿಗರ ಸಂಖ್ಯೆಯೂ ಹೆಚ್ಚಾಗುವ ನಿರೀಕ್ಷೆಯಿದೆ.

ಸಾಮಾನ್ಯ ವಸ್ತುಗಳ ಸುಲಭ ವಿನಿಮಯ: ಭಾರತದಿಂದ ಉಣ್ಣೆ, ಕರಕುಶಲ ವಸ್ತುಗಳು, ಕಚ್ಚಾ ಸಾಮಗ್ರಿಗಳು ಹಾಗೂ ದೈನಂದಿನ ಅಗತ್ಯ ವಸ್ತುಗಳನ್ನು ಕಡಿಮೆ ವೆಚ್ಚದಲ್ಲಿ ದ್ವಿಪಕ್ಷೀಯವಾಗಿ ವಿನಿಮಯ ಮಾಡಿಕೊಳ್ಳಲು ಅನುಕೂಲವಾಗುತ್ತದೆ.




## ಇಂದಿನ ಕಿರು ಸುದ್ದಿ (03-08-2026)



➤ **ದಾನ್‌ವೀರ್ ಪ್ಲಾಟ್‌ಫಾರ್ಮ್:** ಗ್ರಾಮೀಣ ಪಂಚಾಯತ್‌ಗಳ ಡಿಜಿಟಲ್ ಮೂಲಸೌಕರ್ಯ ಬಲಪಡಿಸಲು ಮತ್ತು ಕಂಪ್ಯೂಟರ್ ಉಪಕರಣಗಳ ದೇಣಿಗೆಗೆ ಅನುವು ಮಾಡಿಕೊಡಲು ಕೇಂದ್ರ ಪಂಚಾಯತ್ ರಾಜ್ ಸಚಿವಾಲಯವು 'ಮೇರಿ ಪಂಚಾಯತ್' ಆಪ್ ಮೂಲಕ 'ದಾನ್‌ವೀರ್' ನಾಗರಿಕ ಸಹಭಾಗಿತ್ವ ವೇದಿಕೆಯನ್ನು ದೆಹಲಿಯಲ್ಲಿ ಲೋಕಾರ್ಪಣೆ ಮಾಡಿದೆ.

➤ **ಕೋಸಿ-ಮೇಚಿ ನದಿ ಜೋಡಣೆ ಯೋಜನೆ:** ಬಿಹಾರದಲ್ಲಿ ಪ್ರವಾಹ ನಿಯಂತ್ರಣ ಹಾಗೂ 2 ಲಕ್ಷಕ್ಕೂ ಹೆಚ್ಚು ಹೆಕ್ಟೇರ್ ಕೃಷಿ ಭೂಮಿಗೆ ನೀರಾವರಿ ಒದಗಿಸಲು ಕೇಂದ್ರ ಸರ್ಕಾರವು ₹6,000 ಕೋಟಿಗೂ ಹೆಚ್ಚಿನ ವೆಚ್ಚದ 'ಕೋಸಿ-ಮೇಚಿ' ಒಳನಾಡು ನದಿ ಜೋಡಣೆ ಯೋಜನೆಗೆ ಅನುಮೋದನೆ ನೀಡಿದ್ದು, ಮಾರ್ಚ್ 2029 ರೊಳಗೆ ಪೂರ್ಣಗೊಳಿಸುವ ಗಡುವು ನಿಗದಿಪಡಿಸಿದೆ.

➤ **ಸೈಬರ್ ವಂಚನೆ ತಡೆಗೆ 'ಇ-ಜೀರೋ ಎಫ್‌ಐಆರ್':** ಸೈಬರ್ ಹಣಕಾಸು ವಂಚನೆಗೊಳಗಾದ ಸಂತ್ರಸ್ತರು ಮನೆಯಲ್ಲೇ ಕುಳಿತು '1930' ಸಹಾಯವಾಣಿ ಮೂಲಕ ಸುಲಭವಾಗಿ ದೂರು ದಾಖಲಿಸಲು ಗುಜರಾತ್ ಸರ್ಕಾರವು ಗಾಂಧಿನಗರದಲ್ಲಿ ಅತ್ಯಾಧುನಿಕ 'ಸೈಬರ್ ಫೈನಾನ್ಶಿಯಲ್ ಫ್ರಾಡ್ ಇ-ಜೀರೋ ಎಫ್ ಐಆರ್' ವ್ಯವಸ್ಥೆಯನ್ನು ಜಾರಿಗೆ ತಂದಿದೆ.

➤ **ದಕ್ಷಿಣ ಆಫ್ರಿಕಾ ETA ವ್ಯವಸ್ಥೆ:** ಭಾರತೀಯ ಪ್ರವಾಸಿಗರು ಮತ್ತು ಉದ್ಯಮಿಗಳು ವೀಸಾ ಕೇಂದ್ರಗಳಿಗೆ ತೆರಳದೆ ಆನ್‌ಲೈನ್ ನಲ್ಲೇ 90 ದಿನಗಳ ಅಲ್ಪಾವಧಿ ಡಿಜಿಟಲ್ ವೀಸಾ ಪಡೆಯಲು ದಕ್ಷಿಣ ಆಫ್ರಿಕಾ ಸರ್ಕಾರವು 'ಎಲೆಕ್ಟ್ರಾನಿಕ್ ಟ್ರಾವೆಲ್ ಆಥರೈಸೇಶನ್ (ETA)' ವ್ಯವಸ್ಥೆಯನ್ನು ಪರಿಚಯಿಸಿದೆ.

➤ **ಕೃಷಿ ಅರಣ್ಯ ಪ್ರೋತ್ಸಾಹಕ ಯೋಜನೆ:** ಕರ್ನಾಟಕ ರಾಜ್ಯದಲ್ಲಿ ಹಸಿರು ಹೊದಿಕೆಯನ್ನು ಹೆಚ್ಚಿಸುವ ಹಾಗೂ ರೈತರ ಆದಾಯವನ್ನು ದ್ವಿಗುಣಗೊಳಿಸುವ ಉದ್ದೇಶದಿಂದ ಕರ್ನಾಟಕ ಅರಣ್ಯ ಇಲಾಖೆಯು ರೈತರು ತಮ್ಮ ಜಮೀನಿನಲ್ಲಿ ಸಸಿಗಳನ್ನು ನೆಟ್ಟು ಪೋಷಿಸಲು ಪ್ರೋತ್ಸಾಹಿಸುವ 'ಕೃಷಿ ಅರಣ್ಯ ಪ್ರೋತ್ಸಾಹಕ ಯೋಜನೆ'ಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿದೆ.

➤ **ವೆಬ್ ಸೀರೀಸ್ 'ಆಪರೇಷನ್ ಸಫೇದ್ ಸಾಗರ್':** 1999 ರ ಕಾರ್ಗಿಲ್ ಯುದ್ಧದಲ್ಲಿ ಭಾರತೀಯ ವಾಯುಸೇನೆಯ 'ಗೋಲ್ಡನ್ ಆರೋಸ್' ಸ್ಕ್ವಾಡ್ರನ್ ಹಾಗೂ ವೀರಮರಣ ಹೊಂದಿದ ಸ್ಕ್ವಾಡ್ರನ್ ಲೀಡರ್ ಅಜಯ್ ಅಹುಜಾ ಅವರ ಸಾಹಸಗಾಥೆಯನ್ನು ಬಿಂಬಿಸುವ 'ಆಪರೇಷನ್ ಸಫೇದ್ ಸಾಗರ್' ವೆಬ್ ಸೀರೀಸ್ ಆಗಸ್ಟ್ 7 ರಂದು ಬಿಡುಗಡೆಯಾಗಲಿದೆ.

➤ **ಅಳಿವಿನಂಚಿನಲ್ಲಿ ಮಾಲ್ವಿ ಒಂಟೆ ತಳಿ:** ಭಾರತದ 9 ಅಧಿಕೃತ ಒಂಟೆ ತಳಿಗಳಲ್ಲಿ ಒಂದಾದ ಹಾಗೂ ಮಧ್ಯಪ್ರದೇಶ ಮತ್ತು ರಾಜಸ್ಥಾನ ಭಾಗಗಳಲ್ಲಿ ಕಂಡುಬರುವ ಬಿಳಿ ಬಣ್ಣದ ಸಣ್ಣ ಗಾತ್ರದ 'ಮಾಲ್ವಿ ಒಂಟೆ' ತಳಿಯ ಸಂಖ್ಯೆ ತೀವ್ರವಾಗಿ ಕುಸಿದಿದ್ದು, ಇದನ್ನು ಅಳಿವಿನಂಚಿನಲ್ಲಿರುವ ಪ್ರಾಣಿ ಎಂದು ವರ್ಗೀಕರಿಸಲಾಗಿದೆ.

## 'ವಂದೇ ಮಾತರಂ' ವಿಧೇಯಕ-2026 ಅಂಗೀಕಾರ




➤ ಇಲ್ಲಿಯವರೆಗೆ 1971ರ 'ರಾಷ್ಟ್ರೀಯ ಗೌರವಕ್ಕೆ ಅಪಮಾನ ತಡೆ ಕಾಯಿದೆ'ಯಡಿ ರಾಷ್ಟ್ರಧ್ವಜ, ಭಾರತದ ಸಂವಿಧಾನ ಮತ್ತು ರಾಷ್ಟ್ರಗೀತೆ 'ಜನ ಗಣ ಮನ'ಗೆ ಅಪಮಾನ ಮಾಡುವುದನ್ನು ಮಾತ್ರ ಕಾನೂನಾತ್ಮಕ ಅಪರಾಧವೆಂದು ಪರಿಗಣಿಸಲಾಗುತ್ತಿತ್ತು. ಆದರೆ ನೂತನ 'ರಾಷ್ಟ್ರೀಯ ಗೌರವಕ್ಕೆ ಅವಮಾನಗಳ ತಡೆ (ತಿದ್ದುಪಡಿ) ವಿಧೇಯಕ-2026' ಅಂಗೀಕಾರದೊಂದಿಗೆ, ರಾಷ್ಟ್ರೀಯ ಗೀತೆ (National Song) 'ವಂದೇ ಮಾತರಂ'ಗೂ ಸಹ ರಾಷ್ಟ್ರಗೀತೆಯಷ್ಟೇ (National Anthem) ಕಾನೂನಾತ್ಮಕ ಭದ್ರತೆ ಮತ್ತು ಗೌರವವನ್ನು ನೀಡಲಾಗಿದೆ.

➤ **ಕಾಯಿದೆಯ ಪ್ರಮುಖ ನಿಬಂಧನೆಗಳು:**

ಉದ್ದೇಶಪೂರ್ವಕ ಅವಮಾನ ತಡೆ: ವಂದೇ ಮಾತರಂ ಗೀತೆಯನ್ನು ಉದ್ದೇಶಪೂರ್ವಕವಾಗಿ ಅವಮಾನಿಸುವುದು, ಅಸಡ್ಡೆ ತೋರುವುದು ಅಥವಾ ಅದರ ಗಾಯನಕ್ಕೆ ಅಡ್ಡಿಪಡಿಸುವುದನ್ನು ಶಿಕ್ಷಾರ್ಹ ಅಪರಾಧವಾಗಿಸಲಾಗಿದೆ.

ಕಠಿಣ ಶಿಕ್ಷೆ: ಈ ಅಪರಾಧ ಎಸಗಿದವರಿಗೆ ಗರಿಷ್ಠ 3 ವರ್ಷಗಳವರೆಗೆ ಜೈಲು ಶಿಕ್ಷೆ, ದಂಡ ಅಥವಾ ಎರಡನ್ನೂ ವಿಧಿಸಲು ವಿಧೇಯಕದಲ್ಲಿ ಸ್ಪಷ್ಟ ಅವಕಾಶ ಕಲ್ಪಿಸಲಾಗಿದೆ.

➤ 'ವಂದೇ ಮಾತರಂ' ಗೀತೆಯನ್ನು 1870ರ ದಶಕದಲ್ಲಿ ಬಂಕಿಮ ಚಂದ್ರ ಚಟರ್ಜಿ ಅವರು ರಚಿಸಿದ್ದು, 1882ರ 'ಆನಂದಮಠ' ಕಾದಂಬರಿಯಲ್ಲಿ ಸೇರ್ಪಡೆಗೊಂಡು, 1896ರ ಕೊಲ್ಕತ್ತಾ INC ಅಧಿವೇಶನದಲ್ಲಿ ರವೀಂದ್ರನಾಥ ಠಾಗೋರರಿಂದ ಮೊದಲ ಬಾರಿಗೆ ಗಾಯನಗೊಂಡು, 1905ರ ಬಂಗಾಳ ವಿಭಜನೆ ಚಳವಳಿಯ ಪ್ರಮುಖ ಪ್ರೇರಣೆಯಾಗಿ, ಕೊನೆಗೆ 1950 ಜನವರಿ 24 ರಂದು ಭಾರತದ ಅಧಿಕೃತ 'ರಾಷ್ಟ್ರೀಯ ಗೀತೆ'ಯಾಗಿ ಅಂಗೀಕರಿಸಲ್ಪಟ್ಟಿತು.

## ತೈಪೇ ಓಪನ್ ಬ್ಯಾಡ್ಮಿಂಟನ್ 2026: ಚೊಚ್ಚಲ ಬಿಡಬ್ಲ್ಯೂಎಫ್ ಸೂಪರ್ 300 ಪ್ರಶಸ್ತಿ ಗೆದ್ದು ಇತಿಹಾಸ ಬರೆದ 17 ವರ್ಷದ ತನ್ವಿ ಶರ್ಮಾ!



➤ ಭಾರತದ 17 ವರ್ಷದ ಉದಯೋನ್ಮುಖ ಬ್ಯಾಡ್ಮಿಂಟನ್ ತಾರೆ ತನ್ವಿ ಶರ್ಮಾ (Tanvi Sharma) ತಮ್ಮ ಕ್ರೀಡಾ ಜೀವನದಲ್ಲಿ ಐತಿಹಾಸಿಕ ಸಾಧನೆ ಮಾಡಿದ್ದಾರೆ. ತೈವಾನ್‌ನಲ್ಲಿ ನಡೆದ ತೈಪೇ ಓಪನ್ ಬಿಡಬ್ಲ್ಯೂಎಫ್ (BWF) ವರ್ಲ್ಡ್ ಟೂರ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ವಿಯೆಟ್ನಾಂನ ನುಯೆನ್ ತುಯ್ ಲಿನ್ (Nguyen Thuy Linh) ಅವರನ್ನು 21-16, 21-16 ರ ಗೇಮ್‌ಗಳಿಂದ ಮಣಿಸಿ ಚೊಚ್ಚಲ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಈ ಗೆಲುವಿನೊಂದಿಗೆ ತನ್ವಿ ಶರ್ಮಾ ಹಲವು ಹೊಸ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ದಾಖಲೆಗಳನ್ನು ನಿರ್ಮಿಸಿದ್ದಾರೆ.

ಅತ್ಯಂತ ಕಿರಿಯ ಆಟಗಾರ್ತಿ: ಕೇವಲ 17 ವರ್ಷ 222 ದಿನಗಳ ವಯಸ್ಸಿನಲ್ಲಿ ತೈಪೇ ಓಪನ್ ಪ್ರಶಸ್ತಿ ಗೆಲ್ಲುವ ಮೂಲಕ ಈ ಟೂರ್ನಿಯ ಇತಿಹಾಸದಲ್ಲೇ ಚಾಂಪಿಯನ್ ಆದ ಅತ್ಯಂತ ಕಿರಿಯ ಆಟಗಾರ್ತಿ (Youngest Champion) ಎಂಬ ಹೆಗ್ಗಳಿಕೆಗೆ ತನ್ವಿ ಪಾತ್ರರಾಗಿದ್ದಾರೆ. ಈ ಹಿಂದೆ ತೈವಾನ್‌ನ ದಿಗ್ಗಜ ಆಟಗಾರ್ತಿ ತೈ ತ್ಸು ಯಿಂಗ್ (Tai Tzu Ying) ಹೆಸರಲ್ಲಿದ್ದ ದಾಖಲೆಯನ್ನು ತನ್ವಿ ಮುರಿದಿದ್ದಾರೆ.

ಸೈನಾ ನೆಹ್ವಾಲ್ ನಂತರದ ಮೊದಲ ಭಾರತೀಯಳು: 2008ರಲ್ಲಿ ಭಾರತದ ಸೈನಾ ನೆಹ್ವಾಲ್ ಈ ಟೂರ್ನಿ ಗೆದ್ದಿದ್ದರು. 18 ವರ್ಷಗಳ ನಂತರ ತೈಪೇ ಓಪನ್ ಮಹಿಳಾ ಸಿಂಗಲ್ಸ್ ಶೀರ್ಷಿಕೆ ಜಯಿಸಿದ ಮೊದಲ ಭಾರತೀಯ ಆಟಗಾರ್ತಿ ಎಂಬ ಕೀರ್ತಿಗೆ ತನ್ವಿ ಪಾತ್ರರಾಗಿದ್ದಾರೆ.

**ಎಲೈಟ್ ಪಟ್ಟಿಗೆ ಸೇರ್ಪಡೆ:** ಬಿಡಬ್ಲ್ಯೂಎಫ್ ಸೂಪರ್ 300 ಅಥವಾ ಅದಕ್ಕಿಂತ ಹೆಚ್ಚಿನ ದರ್ಜೆಯ ಟೂರ್ನಿ ಜಯಿಸಿದ ಭಾರತದ 4ನೇ ಮಹಿಳಾ ಸಿಂಗಲ್ಸ್ ಆಟಗಾರ್ತಿ ತನ್ವಿ ಶರ್ಮಾ. (ಇತರರು: ಸೈನಾ ನೆಹ್ವಾಲ್, ಪಿ.ವಿ. ಸಿಂಧು, ದೇವಿಕಾ ಸಿಹಾಗ್).

ಕೋಚ್: ದಕ್ಷಿಣ ಕೊರಿಯಾದ ಮಾಜಿ ಆಟಗಾರ ಹಾಗೂ ಪಿ.ವಿ. ಸಿಂಧು ಅವರ ಮಾಜಿ ತರಬೇತುದಾರರಾದ ಪಾರ್ಕ್ ತೇ-ಸಾಂಗ್ (Park Tae-sang) ಅವರು ತನ್ವಿ ಶರ್ಮಾ ಅವರ ತರಬೇತುದಾರರಾಗಿದ್ದಾರೆ.

➤ ಫೈನಲ್ ಪಂದ್ಯದಲ್ಲಿ ಆರನೇ ಶ್ರೇಯಾಂಕದ ವಿಯೆಟ್ನಾಂ ಆಟಗಾರ್ತಿ ನುಯೆನ್ ತುಯ್ ಲಿನ್ ವಿರುದ್ಧ ಅತ್ಯಂತ ಚಾಣಾಕ್ಷ ಪ್ರದರ್ಶನ ನೀಡಿದ ಪಂಜಾಬ್‌ನ ಹೊಶಿಯಾರ್‌ಪುರದ ತನ್ವಿ ಶರ್ಮಾ, ಆರಂಭದಿಂದಲೇ ಆಕ್ರಮಣಕಾರಿ ಡ್ರಾಪ್ ಶಾಟ್‌ಗಳು ಹಾಗೂ ಕ್ರಾಸ್-ಕೋರ್ಟ್ ಸ್ಮ್ಯಾಶ್‌ಗಳ ಮೂಲಕ ಪಂದ್ಯದ ಮೇಲೆ ಹಿಡಿತ ಸಾಧಿಸಿದರು. ಕೇವಲ 36 ನಿಮಿಷಗಳಲ್ಲಿ 21-16, 21-16 ನೇರ ಗೇಮ್‌ಗಳಿಂದ ಜಯ ಸಾಧಿಸಿ ಟ್ರೋಫಿ ಎತ್ತಿಹಿಡಿದರು.

**➤ ತನ್ವಿ ಶರ್ಮಾ ಅವರ ಇತರ ಪ್ರಮುಖ ಸಾಧನೆಗಳು:**

ವರ್ಲ್ಡ್ ಜೂನಿಯರ್ ಚಾಂಪಿಯನ್‌ಶಿಪ್: ಒಂದೇ ಆವೃತ್ತಿಯ ಬಿಡಬ್ಲ್ಯೂಎಫ್ ವಿಶ್ವ ಜೂನಿಯರ್ ಚಾಂಪಿಯನ್‌ಶಿಪ್‌ನಲ್ಲಿ ಎರಡು ಪದಕಗಳನ್ನು (ಮಹಿಳಾ ಸಿಂಗಲ್ಸ್‌ನಲ್ಲಿ ಬೆಳ್ಳಿ ಹಾಗೂ ಮಿಶ್ರ ತಂಡ ವಿಭಾಗದಲ್ಲಿ ಕಂಚು) ಗೆದ್ದ ಮೊದಲ ಭಾರತೀಯ ಆಟಗಾರ್ತಿ.

**ಏಷ್ಯನ್ ಟೀಮ್ ಚಾಂಪಿಯನ್‌ಶಿಪ್:** ಭಾರತ ತಂಡವು ಇತಿಹಾಸದಲ್ಲೇ ಮೊದಲ ಬಾರಿಗೆ ಚಿನ್ನದ ಪದಕ ಗೆದ್ದ ಏಷ್ಯನ್ ಟೀಮ್ ಚಾಂಪಿಯನ್‌ಶಿಪ್ ತಂಡದ ಸದಸ್ಯೆಯಾಗಿದ್ದರು.

ರ್ಯಾಂಕಿಂಗ್: ಈ ಹಿಂದೆ ಜೂನಿಯರ್ ವಿಭಾಗದಲ್ಲಿ ವಿಶ್ವದ 1ನೇ ಶ್ರೇಯಾಂಕದ (World Junior No. 1) ಆಟಗಾರ್ತಿಯಾಗಿದ್ದರು.

## ದಕ್ಷಿಣ ಚೀನಾ ಸಮುದ್ರದಲ್ಲಿ ಚೀನಾ ಮಿಲಿಟರಿ ಸಮರಾಭ್ಯಾಸ



➤ ದಕ್ಷಿಣ ಚೀನಾ ಸಮುದ್ರದ ವಿವಾದಾಸ್ಪದ 'ಸ್ಕಾರ್‌ಬರೊ ಶೋಲ್' (Scarborough Shoal) ಜಲಮೂಲ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚೀನಾದ 'ಪೀಪಲ್ಸ್ ಲಿಬರೇಶನ್ ಆರ್ಮಿ' (PLA) ಜಂಟಿ ವಾಯು ಮತ್ತು ನೌಕಾ ಸಮರಾಭ್ಯಾಸವನ್ನು ನಡೆಸಿದೆ.

ಮಿಲಿಟರಿ ಕಾರ್ಯಾಚರಣೆ: ಚೀನಾ ಸೇನೆಯ 'ದಕ್ಷಿಣ ಥಿಯೇಟರ್ ಕಮಾಂಡ್' (Southern Theatre Command) ಈ ಜಂಟಿ ವಾಯು ಮತ್ತು ನೌಕಾ ಅಭ್ಯಾಸದ ನೇತೃತ್ವ ವಹಿಸಿತ್ತು.

ಚೀನಾದ ಹೆಸರು: ಸ್ಕಾರ್‌ಬರೊ ಶೋಲ್ ಪ್ರದೇಶವನ್ನು ಚೀನಾ ಅಧಿಕೃತವಾಗಿ 'ಹುವಾಂಗ್‌ಯಾನ್ ದ್ವೀಪ' (Huangyan Island) ಎಂದು ಕರೆಯುತ್ತದೆ.

ಉದ್ದೇಶ: ರಾಷ್ಟ್ರೀಯ ಸಾರ್ವಭೌಮತ್ವ, ಸಾಗರ ಹಕ್ಕುಗಳ ರಕ್ಷಣೆ ಮತ್ತು ಸಶಸ್ತ್ರ ಪಡೆಗಳ ಸಮರ ಸನ್ನದ್ಧತೆಯನ್ನು (Combat Readiness) ಪರಿಶೀಲಿಸುವುದು ಚೀನಾದ ಮುಖ್ಯ ಉದ್ದೇಶವಾಗಿತ್ತು.

ಪರೋಕ್ಷ ಎಚ್ಚರಿಕೆ: ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗೆ ಧಕ್ಕೆ ತರುತ್ತಿರುವ ಹೊರಗಿನ ಪಡೆಗಳಿಗೆ (ವಿಶೇಷವಾಗಿ ಅಮೆರಿಕ ಮತ್ತು ಫಿಲಿಪೀನ್ಸ್) ಉತ್ತರಿಸಲು ಈ ಅಭ್ಯಾಸ ಅಗತ್ಯವಾಗಿತ್ತು ಎಂದು ಚೀನಾ ಹೇಳಿದೆ.

**➤ ಸ್ಕಾರ್‌ಬರೊ ಶೋಲ್ ವಿವಾದ:**

ಸ್ಥಳ: ಸ್ಕಾರ್‌ಬರೊ ಶೋಲ್ ಎಂಬುದು ದಕ್ಷಿಣ ಚೀನಾ ಸಮುದ್ರದಲ್ಲಿರುವ ಒಂದು ಸಣ್ಣ, ಆದರೆ ಆಯಕಟ್ಟಿನ ದೃಷ್ಟಿಯಿಂದ ಅತ್ಯಂತ ಪ್ರಮುಖವಾದ ಹವಳದ ದಿಬ್ಬ (Coral Atoll/Reef) ಆಗಿದೆ.

ವಿವಾದಿತ ದೇಶಗಳು: ಈ ಪ್ರದೇಶದ ಮೇಲೆ ಚೀನಾ ಮತ್ತು ಫಿಲಿಪೀನ್ಸ್ ಎರಡೂ ದೇಶಗಳು ಸಾರ್ವಭೌಮತ್ವದ ಹಕ್ಕು ಸಾಧಿಸುತ್ತಿವೆ.

ಚೀನಾದ ನಿಯಂತ್ರಣ: ೨೦೧೨ ರಿಂದ ಚೀನಾ ತನ್ನ ಕಾವಲು ನೌಕೆಗಳ (Coast Guard) ಮೂಲಕ ಈ ಪ್ರದೇಶವನ್ನು ತನ್ನ ಸಂಪೂರ್ಣ ನಿಯಂತ್ರಣದಲ್ಲಿಟ್ಟುಕೊಂಡಿದೆ.

ಫಿಲಿಪೀನ್ಸ್‌ನ ವಾದ: ಈ ಪ್ರದೇಶವು ತನ್ನ Exclusive Economic Zone (EEZ) – 'ವಿಶೇಷ ಆರ್ಥಿಕ ವಲಯ'ದ ವ್ಯಾಪ್ತಿಗೆ ಬರುತ್ತದೆ ಎಂದು ಫಿಲಿಪೀನ್ಸ್ ವಾದಿಸುತ್ತದೆ

**➤ ಸಮರಾಭ್ಯಾಸಕ್ಕೆ ಹಿನ್ನೆಲೆ ಹಾಗೂ ಜಾಗತಿಕ ಪ್ರಾಮುಖ್ಯತೆ:**

ಅಮೆರಿಕ-ಫಿಲಿಪೀನ್ಸ್ ಜಂಟಿ ಸಮರಾಭ್ಯಾಸ: ಇತ್ತೀಚೆಗೆ ಅಮೆರಿಕ, ಫಿಲಿಪೀನ್ಸ್, ಆಸ್ಟ್ರೇಲಿಯಾ ಮತ್ತು ಕೆನಡಾ ದೇಶಗಳು ದಕ್ಷಿಣ ಚೀನಾ ಸಮುದ್ರದಲ್ಲಿ ಜಂಟಿ ನೌಕಾ ಅಭ್ಯಾಸ ನಡೆಸಿದ್ದವು. ಇದಕ್ಕೆ ಪ್ರತಿಯಾಗಿ ಚೀನಾ ಈ ಕ್ರಮ ಕೈಗೊಂಡಿದೆ.

ಸಮುದ್ರ ವ್ಯಾಪಾರ ಮಾರ್ಗ: ವಿಶ್ವದ ಒಟ್ಟು ಸಮುದ್ರ ವ್ಯಾಪಾರದ ಸುಮಾರು ಮೂರನೇ ಒಂದು ಭಾಗ ($3 Trillion ಗಿಂತ ಹೆಚ್ಚು) ಈ ಜಲಮೂಲದ ಮೂಲಕವೇ ಸಾಗುತ್ತದೆ.

**ಸಂಪನ್ಮೂಲ ಸಂಪನ್ನ:** ಈ ಪ್ರದೇಶದಲ್ಲಿ ಅಪಾರ ಪ್ರಮಾಣದ ತೈಲ, ನೈಸರ್ಗಿಕ ಅನಿಲ ಮತ್ತು ಮತ್ಸ್ಯ ಸಂಪತ್ತಿದೆ.

## ಭಾರತದ ಆಡಳಿತ ರಂಗದಲ್ಲಿ ಡಿಜಿಟಲ್ ಕ್ರಾಂತಿ: ಸರ್ಕಾರಿ ಸ್ವಾಮ್ಯದ ಮೊದಲ ಜಿಪಿಯು (GPU) ಕ್ಲಸ್ಟರ್ ಸ್ಥಾಪಿಸಿದ ಅಸ್ಸಾಂ!



➤ ಆಡಳಿತದಲ್ಲಿ ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ಈಶಾನ್ಯ ಭಾರತದ ಅಸ್ಸಾಂ ರಾಜ್ಯವು ಹೊಸ ಇತಿಹಾಸ ಬರೆದಿದೆ. ರಾಜ್ಯದ ಸಾರ್ವಜನಿಕ ಸೇವಾ ತಂತ್ರಜ್ಞಾನವನ್ನು ಶಕ್ತಿಗೊಳಿಸಲು ಹಾಗೂ ಇ-ಆಡಳಿತ ವ್ಯವಸ್ಥೆಯ ದಕ್ಷತೆಯನ್ನು ಹೆಚ್ಚಿಸಲು ಅಸ್ಸಾಂ ಸರ್ಕಾರವು ತನ್ನದೇ ಆದ ಸರ್ಕಾರಿ ಸ್ವಾಮ್ಯದ ಗ್ರಾಫಿಕ್ಸ್ ಪ್ರೊಸೆಸಿಂಗ್ ಯುನಿಟ್ (GPU) ಕ್ಲಸ್ಟರ್ ಅನ್ನು ಯಶಸ್ವಿಯಾಗಿ ಕಾರ್ಯಾರಂಭಗೊಳಿಸಿದೆ.

➤ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ಈ ಕುರಿತು ಮಾಹಿತಿ ನೀಡಿ, **"ಅಸ್ಸಾಂ ಅನ್ನು 'AI-First State'** ಮಾಡುವುದು ನಮ್ಮ ಕನಸು. ಕೃತಕ ಬುದ್ಧಿಮತ್ತೆಯು ಆಡಳಿತಕ್ಕೆ ಶಕ್ತಿಯನ್ನು ನೀಡುವ ಪ್ರಮುಖ ಮಾಧ್ಯಮವಾಗಲಿದ್ದು, ಈ ಸರ್ಕಾರಿ ಸ್ವಾಮ್ಯದ ಸುರಕ್ಷಿತ AI ಮೂಲಸೌಕರ್ಯವು ಮುಂದಿನ ಪೀಳಿಗೆಯ ಸಾರ್ವಜನಿಕ ಸೇವೆಗಳಿಗೆ ಬಲ ನೀಡಲಿದೆ" ಎಂದು ತಿಳಿಸಿದ್ದಾರೆ.

➤ **ಜಿಪಿಯು (GPU) ಕ್ಲಸ್ಟರ್:** ಇದು ವಿಶಾಲ ಪ್ರಮಾಣದ ದತ್ತಾಂಶಗಳನ್ನು (Data) ಮತ್ತು ಸಂಕೀರ್ಣ ಗಣಿತದ ಲೆಕ್ಕಾಚಾರಗಳನ್ನು ಒಂದೇ ಸಮಯದಲ್ಲಿ ಅತ್ಯಂತ ವೇಗವಾಗಿ ಪ್ರಕ್ರಿಯೆಗೊಳಿಸಲು (Parallel Processing) ವಿನ್ಯಾಸಗೊಳಿಸಲಾದ ಸಾಮರ್ಥ್ಯವುಳ್ಳ ಪ್ರೊಸೆಸರ್ ಆಗಿದೆ.

GPU Cluster: ಪ್ರಬಲವಾದ ಹಲವಾರು GPU ಪ್ರೊಸೆಸರ್‌ಗಳನ್ನು ಪರಸ್ಪರ ಜೋಡಿಸಿ ರೂಪಿಸಲಾದ ನೆಟ್‌ವರ್ಕ್ ವ್ಯವಸ್ಥೆಯಾಗಿದೆ.

ಉಪಯೋಗ: ಜನರೇಟಿವ್ ಎಐ (Generative AI), ಲಾರ್ಜ್ ಲ್ಯಾಂಗ್ವೇಜ್ ಮಾಡೆಲ್‌ಗಳು (LLMs) ಮತ್ತು ಬಿಗ್ ಡೇಟಾ ಅನಾಲಿಟಿಕ್ಸ್ ಪ್ರಕ್ರಿಯೆಗೊಳಿಸಲು ಸಾಮಾನ್ಯ CPUಗಳಿಗಿಂತ GPU ಕ್ಲಸ್ಟರ್‌ಗಳು ನೂರಾರು ಪಟ್ಟು ವೇಗವಾಗಿ ಕಾರ್ಯನಿರ್ವಹಿಸುತ್ತವೆ.

➤ **ಅಸ್ಸಾಂ ಜಿಪಿಯು ಕ್ಲಸ್ಟರ್‌ನ ತಾಂತ್ರಿಕ ವಿವರಗಳು:**

ಮೂಲಸೌಕರ್ಯ: ಅಸ್ಸಾಂನ 'ಮಾಹಿತಿ ತಂತ್ರಜ್ಞಾನ' (IT) ಇಲಾಖೆಯ ಪ್ರಧಾನ ಕಾರ್ಯದರ್ಶಿ K.S. ಗೋಪಿನಾಥ್ ನಾರಾಯಣ್ ನೀಡಿರುವ ಮಾಹಿತಿಯಂತೆ, L40S ಮಾದರಿಯ 8-ನೋಡ್ (8-Node) GPU ಕ್ಲಸ್ಟರ್ ಅನ್ನು ರಾಜ್ಯದ ಡೇಟಾ ಸೆಂಟರ್ ನಲ್ಲಿ (State Data Centre) ಯಶಸ್ವಿಯಾಗಿ ಸ್ಥಾಪಿಸಲಾಗಿದೆ.

ಓಪನ್ ಸೋರ್ಸ್ ಮಾಡೆಲ್‌ಗಳು: ಅಸ್ಸಾಂ ಸರ್ಕಾರವು ಯಾವುದೇ ಖಾಸಗಿ ಕಂಪನಿಗಳ ಮೇಲಿನ ಅವಲಂಬನೆ ತಪ್ಪಿಸಲು ಓಪನ್ ಸೋರ್ಸ್ AI ಮಾಡೆಲ್‌ಗಳನ್ನು (Open-source AI models) ಬಳಸಿಕೊಂಡು ತನ್ನದೇ ಆದ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸಿದೆ.

➤ **ಸರ್ಕಾರಿ ಕಚೇರಿಗಳಲ್ಲಿ ಎಐ (AI) ಹಾಗೂ e-Office ಬಳಕೆಯ ಪ್ರಯೋಜನಗಳು:**

**e-Office ನೊಂದಿಗೆ AI ಇಂಟಿಗ್ರೇಷನ್:** ಸರ್ಕಾರದ 'e-Office' ತಂತ್ರಾಂಶದ ಜೊತೆಗೆ ಎಐ ಅಸಿಸ್ಟೆಂಟ್ (AI Assistant) ಅನ್ನು ಜೋಡಿಸಲಾಗಿದೆ. ಕಚೇರಿಯ ಅಧಿಕಾರಿಗಳು ಅಥವಾ ಸಿಬ್ಬಂದಿ ನಿರ್ದಿಷ್ಟ ಸರ್ಕಾರಿ ಆದೇಶ, ಕಾಯ್ದೆ (Act), ನಿಯಮಗಳು (Rules) ಅಥವಾ ಹಳೆಯ ಕಡತಗಳ (Files) ಬಗ್ಗೆ ಪ್ರಶ್ನಿಸಿದರೆ, ಈ ಎಐ ಅಸಿಸ್ಟೆಂಟ್ ಕ್ಷಣಮಾತ್ರದಲ್ಲಿ ಸರಿ ಹೊಂದುವ ಸೂಕ್ತ ಮಾಹಿತಿಯನ್ನು ಹುಡುಕಿ ನೀಡುತ್ತದೆ.

**ತ್ವರಿತ ನಿರ್ಧಾರ ಕೈಗೊಳ್ಳುವಿಕೆ:** ದೊಡ್ಡ ಮಟ್ಟದ ದಾಖಲೆಗಳು ಮತ್ತು ಕಡತಗಳನ್ನು ಪರಿಶೀಲಿಸಲು ತೆಗೆದುಕೊಳ್ಳುತ್ತಿದ್ದ ದಿನಗಟ್ಟಲೆ ಸಮಯವನ್ನು ಎಐ ವ್ಯವಸ್ಥೆಯು ಸೆಕೆಂಡುಗಳಿಗೆ ಇಳಿಸಲಿದ್ದು, ಆಡಳಿತದಲ್ಲಿ ಪಾರದರ್ಶಕತೆ ಹಾಗೂ ತ್ವರಿತ ನಿರ್ಧಾರಗಳಿಗೆ ಹಾದಿ ಮಾಡಿಕೊಡುತ್ತದೆ.

**ಸುರಕ್ಷಿತ ಡೇಟಾ ನಿರ್ವಹಣೆ:** ಇದು ಸಂಪೂರ್ಣವಾಗಿ ರಾಜ್ಯ ಸರ್ಕಾರದ ಸ್ವಾಮ್ಯದ ಡೇಟಾ ಸೆಂಟರ್‌ನಲ್ಲಿ ನಡೆಯುವುದರಿಂದ ನಾಗರಿಕರ ಹಾಗೂ ಸರ್ಕಾರದ ಗೋಪ್ಯ ದತ್ತಾಂಶಗಳು (Data Privacy & Security) ಅತ್ಯಂತ ಸುರಕ್ಷಿತವಾಗಿರುತ್ತವೆ.

**ಸಾರ್ವಜನಿಕ ಸೇವೆಗಳ ಸರಳೀಕರಣ:** ಮುಂದಿನ ಹಂತಗಳಲ್ಲಿ ಸಾರ್ವಜನಿಕರ ಅರ್ಜಿಗಳ ಪರಿಶೀಲನೆ, ಆದಾಯ/ಜಾತಿ ಪ್ರಮಾಣಪತ್ರಗಳ ವಿತರಣೆ, ಆರೋಗ್ಯ ಸೇವೆಗಳು, ಕೃಷಿ ಸಲಹೆಗಳು ಹಾಗೂ ದುರಂತ ನಿರ್ವಹಣೆಯಲ್ಲಿ (Disaster Management) AI ತಂತ್ರಜ್ಞಾನ ಬಳಸಲ್ಪಡಲಿದೆ.

## ಮಹಾರಾಷ್ಟ್ರ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ 2026: ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಕಿತ




➤ ಮಹಾರಾಷ್ಟ್ರ ಸರ್ಕಾರವು ತಂದಿರುವ ಬಹುಚರ್ಚಿತ ಮಹಾರಾಷ್ಟ್ರ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ, 2026 (Maharashtra Freedom of Religion Act, 2026) - ಇದನ್ನು ಸಾಮಾನ್ಯವಾಗಿ 'ಮತಾಂತರ ನಿಷೇಧ ಕಾಯ್ದೆ' (Anti-Conversion Law) ಎಂದೂ ಕರೆಯಲಾಗುತ್ತದೆ - ಅಧಿಕೃತವಾಗಿ ಭಾರತದ ಗೌರವಾನ್ವಿತ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಅಂಕಿತ ಪಡೆದಿದೆ. ಸಂವಿಧಾನದ ನಿಯಮಾವಳಿಗಳಂತೆ ರಾಜ್ಯಪಾಲರ ಶಿಫಾರಸಿನ ಮೇರೆಗೆ ಕಳುಹಿಸಲಾಗಿದ್ದ ಈ ವಿಧೇಯಕಕ್ಕೆ ರಾಷ್ಟ್ರಪತಿಗಳ ಅಂಕಿತ ದೊರೆತಿದ್ದು, ರಾಜ್ಯ ಸರ್ಕಾರವು ಗೆಜೆಟ್ ಅಧಿಸೂಚನೆ ಹೊರಡಿಸುವುದರೊಂದಿಗೆ ಜಾರಿಗೆ ಬಂದಿದೆ.

➤ **ಕಾಯ್ದೆಯ ಹಿನ್ನೆಲೆ ಮತ್ತು ಶಾಸನಸಭಾ ಪಯಣ:**

ಮಂಡನೆ ಮತ್ತು ಅಂಗೀಕಾರ: ಮಹಾರಾಷ್ಟ್ರ ಶಾಸನಸಭೆಯ ಮಾರ್ಚ್ 2026 ರ ಬಜೆಟ್ ಅಧಿವೇಶನದಲ್ಲಿ ಈ ವಿಧೇಯಕವನ್ನು ಮಂಡಿಸಲಾಯಿತು. ಮಾರ್ಚ್ 16 ರಂದು ವಿಧಾನಸಭೆ ಮತ್ತು ಮಾರ್ಚ್ 17 ರಂದು ವಿಧಾನ ಪರಿಷತ್ತು ಇದನ್ನು ಅಂಗೀಕರಿಸಿದವು.

ರಾಷ್ಟ್ರಪತಿಗಳ ಅಂಕಿತ: ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್ ಅವರು ಈ ವಿಧೇಯಕವನ್ನು ರಾಷ್ಟ್ರಪತಿಗಳ ಪರಿಶೀಲನೆಗೆ ಕಾಯ್ದಿರಿಸಿದ್ದರು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಜುಲೈ 31, 2026 ರಂದು ಇದಕ್ಕೆ ಅಂಕಿತ ಹಾಕಿದ್ದಾರೆ.

13ನೇ ರಾಜ್ಯ: ಬಲವಂತದ ಅಥವಾ ವಂಚನೆಯ ಮತಾಂತರವನ್ನು ತಡೆಯಲು ಕಾನೂನು ಜಾರಿಗೊಳಿಸಿದ ಭಾರತದ 13ನೇ ರಾಜ್ಯವಾಗಿ ಮಹಾರಾಷ್ಟ್ರ ಹೊರಹೊಮ್ಮಿದೆ (ಉತ್ತರ ಪ್ರದೇಶ, ಮಧ್ಯಪ್ರದೇಶ, ಹಿಮಾಚಲ ಪ್ರದೇಶ, ಗುಜರಾತ್ ಮುಂತಾದ ರಾಜ್ಯಗಳು ಈಗಾಗಲೇ ಇಂತಹ ಕಾಯ್ದೆಗಳನ್ನು ಹೊಂದಿವೆ)

➤ **ಕಾಯ್ದೆಯ ಮುಖ್ಯ ನಿಬಂಧನೆಗಳು:**

ಅಕ್ರಮ ಮತಾಂತರಕ್ಕೆ ತಡೆ: ಬಲವಂತ, ವಂಚನೆ, ಬೆದರಿಕೆ, ದುರಾಶೆ/ಆಮಿಷ (Allurement), ತಪ್ಪು ಮಾಹಿತಿ ನೀಡುವುದು ಅಥವಾ ಮದುವೆಯ ಭರವಸೆ ನೀಡಿ ಮಾಡುವ ಮತಾಂತರಗಳನ್ನು ಈ ಕಾಯ್ದೆ ಸಂಪೂರ್ಣವಾಗಿ ನಿಷೇಧಿಸುತ್ತದೆ.

60 ದಿನಗಳ ಮುನ್ಸೂಚನೆ ಕಡ್ಡಾಯ: ಸ್ವ ಇಚ್ಛೆಯಿಂದ ಬೇರೆ ಧರ್ಮಕ್ಕೆ ಮತಾಂತರಗೊಳ್ಳಲು ಬಯಸುವ ವ್ಯಕ್ತಿಯು ಮತಾಂತರದ ದಿನಾಂಕಕ್ಕಿಂತ ಕನಿಷ್ಠ 60 ದಿನಗಳ ಮುಂಚಿತವಾಗಿ ಜಿಲ್ಲಾಧಿಕಾರಿಗಳಿಗೆ (District Magistrate) ಲಿಖಿತ ಮಾಹಿತಿ ನೀಡಬೇಕು.

**ದೂರು ನೀಡುವ ಹಕ್ಕು ಯಾರಿಗೆ?:** ಮತಾಂತರಕ್ಕೆ ಒಳಗಾದ ವ್ಯಕ್ತಿಯ ಪೋಷಕರು, ಸಹೋದರ-ಸಹೋದರಿಯರು ಅಥವಾ

ರಕ್ತಸಂಬಂಧಿಗಳಿಗೆ ಪೊಲೀಸರಲ್ಲಿ ದೂರು (FIR) ದಾಖಲಿಸಲು ಕಾಯ್ದೆಯಲ್ಲಿ ಅವಕಾಶ ನೀಡಲಾಗಿದೆ.

ಸಾಬೀತುಪಡಿಸುವ ಹೊಣೆಗಾರಿಕೆ (Burden of Proof): ಸಾಮಾನ್ಯ ಅಪರಾಧ ಕಾನೂನಿನಲ್ಲಿ ಅಭಿಯೋಗ (Police/Prosecution) ಅಪರಾಧವನ್ನು ಸಾಬೀತುಪಡಿಸಬೇಕು. ಆದರೆ ಈ ಕಾಯ್ದೆಯಡಿ, ಮತಾಂತರವು "ಸ್ವ ಇಚ್ಛೆಯಿಂದ ನಡೆದಿದೆ" ಎಂಬುದನ್ನು ಸಾಬೀತುಪಡಿಸುವ ಹೊಣೆಗಾರಿಕೆಯು ಮತಾಂತರ ಮಾಡಿಸಿದ ವ್ಯಕ್ತಿ/ಸಂಸ್ಥೆಯ ಮೇಲಿರುತ್ತದೆ.

**➢ ಶಿಕ್ಷೆ ಮತ್ತು ದಂಡದ ಪ್ರಮಾಣ:**

ಮೊದಲ ಬಾರಿಯ ಅಪರಾಧ: ಈ ಕಾಯ್ದೆಯಡಿ ಮೊದಲ ಬಾರಿಗೆ ಅಪರಾಧ ಎಸಗಿದ ವ್ಯಕ್ತಿಗೆ 7 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹ ಶಿಕ್ಷೆ ಮತ್ತು 1 ಲಕ್ಷ ರೂಪಾಯಿಗಳವರೆಗೆ ದಂಡವನ್ನು ವಿಧಿಸಲಾಗುತ್ತದೆ.

**ಮರು ಅಪರಾಧ (Repeat Offender):** ಅದೇ ಅಪರಾಧವನ್ನು ಮತ್ತೆ ಎಸಗಿದರೆ (ಮರು ಅಪರಾಧ), ಅಪರಾಧಿಗೆ 10 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹ ಶಿಕ್ಷೆ ಹಾಗೂ 7 ಲಕ್ಷ ರೂಪಾಯಿಗಳವರೆಗೆ ದಂಡವನ್ನು ವಿಧಿಸಲು ಕಾಯ್ದೆಯಲ್ಲಿ ಅವಕಾಶವಿದೆ.

## 04 Aug 2026

### ಗ್ಲೌ ಸರೋವರ: ಭಾರತದ 101ನೇ ರಾಮ್‌ಸರ್ ತಾಣವಾಗಿ ಅರುಣಾಚಲ ಪ್ರದೇಶದ 'ಗ್ಲೌ ಲೇಕ್' ಘೋಷಣೆ



➢ ಅರುಣಾಚಲ ಪ್ರದೇಶದ ಲೋಹಿತ್ ಜಿಲ್ಲೆಯಲ್ಲಿರುವ ಗ್ಲೌ ಸರೋವರವನ್ನು (Glaw Lake) ಭಾರತದ 101ನೇ ರಾಮ್‌ಸರ್ ತಾಣ (Ramsar Site) ಎಂದು ಅಧಿಕೃತವಾಗಿ ಗುರುತಿಸಲಾಗಿದೆ. ಇದು ಅರುಣಾಚಲ ಪ್ರದೇಶ ರಾಜ್ಯದ ಮೊಟ್ಟಮೊದಲ ರಾಮ್‌ಸರ್ ಜೌಗು ಪ್ರದೇಶ (Ramsar Wetland) ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

**➢ ಗ್ಲೌ ಸರೋವರದ ಪ್ರಾಮುಖ್ಯತೆ ಮತ್ತು ಜೀವವೈವಿಧ್ಯ:**

ಭೌಗೋಳಿಕ ಹಿನ್ನೆಲೆ: ಗ್ಲೌ ಸರೋವರವು ಪೂರ್ವ ಹಿಮಾಲಯದ ಎತ್ತರದ ಪ್ರದೇಶದಲ್ಲಿರುವ ಶುದ್ಧ ನೀರಿನ ಸರೋವರವಾಗಿದ್ದು (Freshwater High-altitude Lake), ಹಿಮಪಾತ ಮತ್ತು ಜೀವಂತ ಪರ್ವತ ತೊರೆಗಳಿಂದ ನೀರು ಪಡೆಯುತ್ತದೆ.

ಸಂರಕ್ಷಿತ ವಲಯ: ಇದು ಲೋಹಿತ್ ಜಿಲ್ಲೆಯ ಕಮ್ಲಾಂಗ್ ಹುಲಿ ಸಂರಕ್ಷಿತ ಪ್ರದೇಶ ಮತ್ತು ವನ್ಯಜೀವಿ ಅಭಯಾರಣ್ಯದ (Kamlang Tiger Reserve & Wildlife Sanctuary) ಒಳಭಾಗದಲ್ಲಿದೆ.

**ಸಮೃದ್ಧ ಜೀವವೈವಿಧ್ಯ:** ಈ ಸರೋವರದ ಜಲಾನಯನ ಪ್ರದೇಶದಲ್ಲಿ 150ಕ್ಕೂ ಹೆಚ್ಚು ವೃಕ್ಷ ಪ್ರಭೇದಗಳು ಹಾಗೂ 49ಕ್ಕೂ ಹೆಚ್ಚು ಆರ್ಕಿಡ್ (Orchid) ಪ್ರಭೇದಗಳು ಕಂಡುಬರುತ್ತವೆ.

ಸೂಚಕ ಪ್ರಭೇದಗಳು: ಹಿಮಾಲಯನ್ ಪರಿಸರ ವ್ಯವಸ್ಥೆಯಲ್ಲಿ ಆರ್ಕಿಡ್‌ಗಳು ಪರಿಸರದ ಗುಣಮಟ್ಟವನ್ನು ಅಳೆಯುವ ಸೂಚಕ ಪ್ರಭೇದಗಳಾಗಿ (Indicator Species) ಕಾರ್ಯನಿರ್ವಹಿಸುತ್ತವೆ.

➢ ರಾಮ್‌ಸರ್ ಒಪ್ಪಂದವು ಅಂತರರಾಷ್ಟ್ರೀಯ ಮಹತ್ವದ ಜೌಗು ಪ್ರದೇಶಗಳು (Wetlands) ಮತ್ತು ಅವುಗಳ ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸಿ, ಸುಸ್ಥಿರವಾಗಿ ಬಳಸಲು 1971 ರಲ್ಲಿ ಇರಾನ್‌ನ ರಾಮ್‌ಸರ್ ನಗರದಲ್ಲಿ ರೂಪಿಸಲಾದ ಒಂದು ಜಾಗತಿಕ ಒಪ್ಪಂದವಾಗಿದೆ.

**➢ ಭಾರತದಲ್ಲಿ ರಾಮ್‌ಸರ್ ತಾಣಗಳ ಪ್ರಸ್ತುತ ಸ್ಥಿತಿ:**

ಒಟ್ಟು ಸಂಖ್ಯೆ: ಗ್ಲೌ ಸರೋವರದ ಸೇರ್ಪಡೆಯೊಂದಿಗೆ ಭಾರತದಲ್ಲಿ ಒಟ್ಟು ರಾಮ್‌ಸರ್ ತಾಣಗಳ ಸಂಖ್ಯೆ 101 ಕ್ಕೆ ಏರಿಕೆಯಾಗಿದೆ.

ಹೆಚ್ಚು ರಾಮ್‌ಸರ್ ತಾಣ ಹೊಂದಿರುವ ರಾಜ್ಯಗಳು: ತಮಿಳುನಾಡು, ಉತ್ತರ ಪ್ರದೇಶ ಮತ್ತು ಪಂಜಾಬ್ ರಾಜ್ಯಗಳು ಭಾರತದಲ್ಲಿ ಅತಿ ಹೆಚ್ಚು ರಾಮ್‌ಸರ್ ಜೌಗು ಪ್ರದೇಶಗಳನ್ನು ಹೊಂದಿವೆ.

### ಇರಾನ್‌ಗೆ ಭಾರತದ ನೂತನ ರಾಯಭಾರಿಯಾಗಿ ವಿಶ್ವೇಶ್ ನೇಗಿ ನೇಮಕ



➢ ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು 2002ರ ಬ್ಯಾಚ್‌ನ ಹಿರಿಯ ಭಾರತೀಯ ವಿದೇಶಾಂಗ ಸೇವೆ (IFS) ಅಧಿಕಾರಿ ವಿಶ್ವೇಶ್ ನೇಗಿ ಅವರನ್ನು ಇರಾನ್ ಇಸ್ಲಾಮಿಕ್ ಗಣರಾಜ್ಯಕ್ಕೆ ಭಾರತದ ಮುಂದಿನ ರಾಯಭಾರಿಯಾಗಿ (Ambassador of India to the Islamic Republic of Iran) ನೇಮಕ ಮಾಡಿದೆ.

➢ ಪ್ರಸ್ತುತ ನವದೆಹಲಿಯ ವಿದೇಶಾಂಗ ವ್ಯವಹಾರಗಳ ಸಚಿವಾಲಯದಲ್ಲಿ ಜಂಟಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿರುವ ಅವರು, ಶೀಘ್ರದಲ್ಲೇ ಟೆಹರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯಲ್ಲಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಇವರು ಪ್ರಸ್ತುತ ರಾಯಭಾರಿಯಾಗಿರುವ ರುದ್ರ ಗೌರವ್ ಶ್ರೇಷ್ಠ (Rudra Gaurav Shresth - ಮೇ 2023ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ) ಅವರ ಉತ್ತರಾಧಿಕಾರಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.

**➢ ಭಾರತ ಮತ್ತು ಇರಾನ್ ಸಂಬಂಧಗಳ ಮಹತ್ವ:**

**ಚಾಬಹಾರ್ ಬಂದರು ಯೋಜನೆ (Chabahar Port Project):** ಭಾರತದ ಪಾಲಿಗೆ ಚಾಬಹಾರ್ ಬಂದರು ಅತ್ಯಂತ ಆಯಕಟ್ಟಿನ ಮೂಲಸೌಕರ್ಯ ಯೋಜನೆಯಾಗಿದೆ. ಪಾಕಿಸ್ತಾನವನ್ನು ಹೊರತುಪಡಿಸಿ ಅಫ್ಘಾನಿಸ್ತಾನ್ ಹಾಗೂ ಮಧ್ಯ ಏಷ್ಯಾದ ದೇಶಗಳಿಗೆ ಭಾರತೀಯ ಸರಕುಗಳನ್ನು ತಲುಪಿಸಲು ಇದು ಪ್ರಮುಖ ಹೆಜ್ಜೆಯಾಗಿದೆ.

**ಶಕ್ತಿ ಮತ್ತು ಇಂಧನ ಸಹಕಾರ (Energy & Trade):** ಭಾರತದ ಇಂಧನ ಭದ್ರತೆ ಹಾಗೂ ಪಶ್ಚಿಮ ಏಷ್ಯಾದೊಂದಿಗೆ ವ್ಯಾಪಾರ ಬಾಂಧವ್ಯವನ್ನು ವೃದ್ಧಿಸಲು ಇರಾನ್ ಜೊತೆಗಿನ ನಿಕಟ ಸಂಬಂಧ ಮಹತ್ವದ್ದಾಗಿದೆ.

ಸಾರಿಗೆ ಸಂಪರ್ಕ (INSTC): ಇಂಟರ್ನ್ಯಾಷನಲ್ ನಾರ್ತ್-ಸೌತ್ ಟ್ರಾನ್ಸ್‌ಪೋರ್ಟ್ ಕಾರಿಡಾರ್ (INSTC) ಮೂಲಸೌಕರ್ಯ ಜಾಲದಲ್ಲಿ ಇರಾನ್ ಪ್ರಮುಖ ಕೊಂಡಿಯಾಗಿದೆ.

### ಭಾರತದಲ್ಲಿ ಅಂಗದಾನ ಮತ್ತು ಕಸಿ ಚಿಕಿತ್ಸೆಯಲ್ಲಿ ಐತಿಹಾಸಿಕ ಮೈಲಿಗಲ್ಲು



➢ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಹಾಗೂ ರಾಷ್ಟ್ರೀಯ ಅಂಗಾಂಗ ಮತ್ತು ಅಂಗಾಂಶ ಕಸಿ ಸಂಸ್ಥೆ (NOTTO) ನವದೆಹಲಿಯಲ್ಲಿ ಆಯೋಜಿಸಿದ್ದ 16ನೇ ಭಾರತೀಯ ಅಂಗಾಂಗ ದಾನ ದಿನಾಚರಣೆ (16th Indian Organ Donation Day - IODD) ಸಂದರ್ಭದಲ್ಲಿ ಭಾರತವು ಆರೋಗ್ಯ ಕ್ಷೇತ್ರದಲ್ಲಿ ಐತಿಹಾಸಿಕ ಸಾಧನೆ ಮಾಡಿದೆ. 2025ರ ವರ್ಷದಲ್ಲಿ ಭಾರತವು

20,138 ಅಂಗಾಂಗ ಕಸಿ (Organ Transplants) ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವ ಮೂಲಕ ಒಂದೇ ವರ್ಷದಲ್ಲಿ ಅತ್ಯಧಿಕ ಕಸಿ ನಡೆಸಿದ ದಾಖಲೆ ನಿರ್ಮಿಸಿದೆ.

ಒಟ್ಟು ಅಂಗಾಂಗ ಕಸಿ (2025): 20,138 (2013 ರಲ್ಲಿ ಕೇವಲ 4,990 ಇತ್ತು).

**ಜಾಗತಿಕ ಶ್ರೇಯಾಂಕ (Global Ranking):** ಒಟ್ಟು ಅಂಗಾಂಗ ಕಸಿ ಸಂಖ್ಯೆಯಲ್ಲಿ ಭಾರತಕ್ಕೆ ವಿಶ್ವದಲ್ಲೇ 3 ನೇ ಸ್ಥಾನ (ಅಮೆರಿಕ ಮತ್ತು ಚೀನಾ ನಂತರದ ಸ್ಥಾನ).

ಜೀವಂತ ದಾನಿಗಳ ಅಂಗಾಂಗ ಕಸಿ (Living Donor Transplants) ವಿಭಾಗದಲ್ಲಿ ಭಾರತಕ್ಕೆ ವಿಶ್ವದಲ್ಲೇ 1 ನೇ ಸ್ಥಾನ.

ಮರಣೋತ್ತರ ದಾನಿಗಳ ಕಸಿ (Deceased Donor Transplants): 2013 ರಲ್ಲಿ 837 ರಷ್ಟಿದ್ದದ್ದು 2025 ರ ವೇಳೆಗೆ 3,526 ಕ್ಕೆ ಹೆಚ್ಚಳವಾಗಿದೆ.

**ಆಧಾರ್ ಆಧಾರಿತ ದಾನಿಗಳ ಪ್ರತಿಜ್ಞೆ (Pledges):** ರಾಷ್ಟ್ರೀಯ ಡಿಜಿಟಲ್ ಪೋರ್ಟಲ್ ಪ್ರಾರಂಭವಾದಾಗಿನಿಂದ 5 ಲಕ್ಷಕ್ಕೂ ಹೆಚ್ಚು ಆಧಾರ್-ಸತ್ಯಾಪಿತ ಅಂಗಾಂಗ ದಾನ ಪ್ರತಿಜ್ಞೆಗಳು ದಾಖಲಾಗಿವೆ (2025 ರಲ್ಲಿ 2.58 ಲಕ್ಷಕ್ಕೂ ಹೆಚ್ಚು).

➤ ಹೊಸದಾಗಿ ಚಾಲನೆ ನೀಡಲಾದ ಪ್ರಮುಖ ಯೋಜನೆಗಳು ಮತ್ತು ಮಾರ್ಗಸೂಚಿಗಳು: ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವೆ ಶ್ರೀಮತಿ ಅನುಪ್ರಿಯಾ ಪಟೇಲ್ ಅವರು ಈ ಕೆಳಗಿನ ಹೊಸ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು:

**1. ಜುಗ್ ಜುಗ್ ಜೀಯೋ ಅಭಿಯಾನ ('Jug Jug Jiyo Abhiyaan')**

ಉದ್ದೇಶ: ರಾಷ್ಟ್ರವ್ಯಾಪಿ ಅಂಗಾಂಗ ದಾನದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ವರ್ಷಪೂರ್ತಿ ನಡೆಯುವ ಅಭಿಯಾನ.

ವ್ಯಾಪ್ತಿ: ದೇಶದ ಪ್ರತಿಯೊಂದು ಗ್ರಾಮಕ್ಕೂ ಅಂಗಾಂಗ ದಾನದ ಅರಿವನ್ನು ತಲುಪಿಸುವುದು.

**2. 'e-ಪ್ರತ್ಯಾರೋಪಣ' (e-Pratyaropana) ಡಿಜಿಟಲ್ ವೇದಿಕೆ**

ಉದ್ದೇಶ: ಆಸ್ಪತ್ರೆಗಳು, ವೈದ್ಯರು, ದಾನಿಗಳು ಮತ್ತು ಸ್ವೀಕರಿಸುವವರನ್ನು ಒಂದೇ ಜಾಲತಾಣದಲ್ಲಿ ಜೋಡಿಸುವ ಏಕೀಕೃತ, ಸುರಕ್ಷಿತ ಹಾಗೂ ಪಾರದರ್ಶಕ ರಾಷ್ಟ್ರೀಯ ಡಿಜಿಟಲ್ ವೇದಿಕೆ.

ನೋಂದಣಿ, ಕಾಯುವ ಪಟ್ಟಿ ನಿರ್ವಹಣೆ, ಅಂಗಾಂಗ ಹಂಚಿಕೆ ಮತ್ತು ಉಸ್ತುವಾರಿ ಪ್ರಕ್ರಿಯೆಗಳನ್ನು ಇದು ಸರಳಗೊಳಿಸುತ್ತದೆ.

**3. NOTTO ಮೊಬೈಲ್ ಅಪ್ಲಿಕೇಶನ್ (NOTTO Mobile App)**

ಸಾರ್ವಜನಿಕರು ಮತ್ತು ಆರೋಗ್ಯ ಸಿಬ್ಬಂದಿಗೆ ಅಂಗಾಂಗ ದಾನಕ್ಕೆ ಸಂಬಂಧಿಸಿದ ಸೇವೆಗಳು ಮತ್ತು ಮಾಹಿತಿಯನ್ನು ಸುಲಭವಾಗಿ ತಲುಪಿಸಲು ಹೊಸ ಆಪ್ ಬಿಡುಗಡೆ.

**4. ರಾಷ್ಟ್ರೀಯ ಮಾರ್ಗಸೂಚಿಗಳು (National Guidelines)**

National Brain Stem Death Certification Guidelines: ಮಿದುಳು ಸಾವು ದೃಢೀಕರಣದ ಪ್ರಕ್ರಿಯೆಯನ್ನು ಪ್ರಮಾಣೀಕರಿಸಲು.

National Guidelines on Swap Transplantation: ಸ್ವಾಪ್ (Swap) ಅಂಗಾಂಗ ಕಸಿಗೆ ಸಂಬಂಧಿಸಿದ ರಾಷ್ಟ್ರೀಯ ಮಾರ್ಗಸೂಚಿಗಳು.

**➤ ರಾಷ್ಟ್ರೀಯ ಅಂಗಾಂಗ ದಾನ ಪ್ರಶಸ್ತಿಗಳು:**

ಅತ್ಯುತ್ತಮ ROTTO (ಉತ್ತರ ವಲಯ): PGI ಚಂಡೀಗಢ (PGIMER, Chandigarh)

ಅತ್ಯುತ್ತಮ ರಾಜ್ಯ (ಮರಣೋತ್ತರ ದಾನ): ತಮಿಳುನಾಡು (Tamil Nadu)

ಈಶಾನ್ಯ ವಲಯದ ಅತ್ಯುತ್ತಮ ರಾಜ್ಯ: ಅಸ್ಸಾಂ (Assam)

ಅತ್ಯುತ್ತಮ ಕೇಂದ್ರಾಡಳಿತ ಪ್ರದೇಶ: ದೆಹಲಿ (Delhi)

## ಕರ್ನಾಟಕ ಸಚಿವ ಸಂಪುಟ ವಿಸ್ತರಣೆ: 19 ನೂತನ ಸಚಿವರ ಪ್ರಮಾಣವಚನ



➤ ಆಗಸ್ಟ್ 3, 2026 ರಂದು ರಾಜಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಕರ್ನಾಟಕ ಸರ್ಕಾರದ ಸಚಿವ ಸಂಪುಟದ ಮೊದಲ ವಿಸ್ತರಣೆ ನಡೆಯಿತು. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು 19 ಶಾಸಕರಿಗೆ ಸಚಿವರಾಗಿ ಪ್ರಮಾಣವಚನ ಬೋಧಿಸಿದರು.

ಮುಖ್ಯಮಂತ್ರಿ: ಡಿ. ಕೆ. ಶಿವಕುಮಾರ್

ನೂತನವಾಗಿ ಸೇರ್ಪಡೆಯಾದ ಸಚಿವರು: 19

ಪ್ರಸ್ತುತ ಒಟ್ಟು ಸಂಪುಟ ಬಲ: 33 (ಮುಖ್ಯಮಂತ್ರಿ ಸೇರಿ)

ಖಾಲಿ ಇರುವ ಸ್ಥಾನ: 01 (ಗರಿಷ್ಠ ಮಿತಿ: 34)

**➤ ಪ್ರಮುಖ ನೂತನ ಸಚಿವರ ಪಟ್ಟಿ:** ಸಂಪುಟ ವಿಸ್ತರಣೆಯಲ್ಲಿ ವಿವಿಧ ಪ್ರದೇಶ ಹಾಗೂ ಸಾಮಾಜಿಕ ಸಮೀಕರಣಗಳನ್ನು ಗಮನದಲ್ಲಿಟ್ಟುಕೊಂಡು ನಾಯಕರನ್ನು ಆಯ್ಕೆ ಮಾಡಲಾಗಿದೆ.

**ಪ್ರಮುಖವಾಗಿ ಸೇರ್ಪಡೆಯಾದವರಲ್ಲಿ:**

ಪಿ. ಎಂ. ನರೇಂದ್ರಸ್ವಾಮಿ

ಶಿವರಾಜ್ ತಂಗಡಗಿ

ರಾಯರೆಡ್ಡಿ / ರುದ್ರಪ್ಪ ಲಮಾಣಿ

ಕೆ. ಎಸ್. ಬಸವಂತಪ್ಪ

ಬಿ. ನಾಗೇಂದ್ರ

ಟಿ. ರಘುಮೂರ್ತಿ

ಬಿ. ಝಡ್. ಜಮೀರ್ ಅಹಮದ್ ಖಾನ್

ರಿಜ್ವಾನ್ ಅರ್ಷದ್

ಸಂತೋಷ್ ಲಾಡ್

ಮಧು ಬಂಗಾರಪ್ಪ

ಸಿ. ಪುಟ್ಟರಂಗಶೆಟ್ಟಿ

ಎಸ್. ಎಸ್. ಮಲ್ಲಿಕಾರ್ಜುನ್

➤ ಸಂವಿಧಾನದ ವಿಧಿ 164(1)ರ ಪ್ರಕಾರ, ಮುಖ್ಯಮಂತ್ರಿಯನ್ನು ಹಾಗೂ ಮುಖ್ಯಮಂತ್ರಿಯವರ ಸಲಹೆಯ ಮೇರೆಗೆ ಇತರ ಸಚಿವರನ್ನು ರಾಜ್ಯಪಾಲರು ನೇಮಕ ಮಾಡುತ್ತಿದ್ದು, ಸಚಿವರು ರಾಜ್ಯಪಾಲರ ಪ್ರಸಾದವಿರುವವರೆಗೆ (ವಿಶ್ವಾಸವಿರುವವರೆಗೆ) ಅಧಿಕಾರದಲ್ಲಿರುತ್ತಾರೆ.

➤ ಸಂವಿಧಾನದ ವಿಧಿ 164(1A) ರ ಪ್ರಕಾರ, ಯಾವುದೇ ರಾಜ್ಯದಲ್ಲಿ ಮುಖ್ಯಮಂತ್ರಿ ಸೇರಿದಂತೆ ಸಚಿವರ ಸಂಖ್ಯೆ 12 ಗಿಂತ ಕಡಿಮೆ ಇರುವಂತಿಲ್ಲ (ಸಣ್ಣ ರಾಜ್ಯಗಳಿಗೂ ಇದು ಅನ್ವಯಿಸುತ್ತದೆ).

## ನೌಕಾಪಡೆಯ ನೂತನ ಮಹಾನಿರ್ದೇಶಕರಾಗಿ (DGNO) ವೈಸ್ ಅಡ್ಮಿರಲ್ ಮನೀಷ್ ಚಡ್ಡಾ ಅಧಿಕಾರ ಸ್ವೀಕಾರ



➤ ಭಾರತೀಯ ನೌಕಾಪಡೆಯ ಕಾರ್ಯಾಚರಣೆ ವಿಭಾಗದ ನೂತನ ಮಹಾನಿರ್ದೇಶಕರಾಗಿ (Director General Naval Operations - DGNO) ವೈಸ್ ಅಡ್ಮಿರಲ್ ಮನೀಷ್ ಚಡ್ಡಾ ಅವರು 2026 ರ ಆಗಸ್ಟ್ 3 (ಸೋಮವಾರ) ರಂದು ಅಧಿಕಾರ ವಹಿಸಿಕೊಂಡಿದ್ದಾರೆ.

**➤ ಪ್ರಮುಖ ಹೆಗ್ಗುರುತುಗಳು ಮತ್ತು ಸೇವಾ ವಿವರಗಳು:**

ವಿಶೇಷತೆ: ಮನೀಷ್ ಚಡ್ಡಾ ಅವರು ಸಂಪರ್ಕ (Communication) ಮತ್ತು ಎಲೆಕ್ಟ್ರಾನಿಕ್ ಯುದ್ಧತಂತ್ರ (Electronic Warfare) ವಿಷಯಗಳಲ್ಲಿ ತಜ್ಞರಾಗಿದ್ದಾರೆ.

ಸೇವಾ ಅನುಭವ: ಭಾರತೀಯ ನೌಕಾಪಡೆಯಲ್ಲಿ 35 ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದಾರೆ.

ನಿಯೋಜನೆ: ಜುಲೈ 1, 1991 ರಂದು ಭಾರತೀಯ ನೌಕಾಪಡೆಗೆ ಸೇರ್ಪಡೆಗೊಂಡರು (ಖಡಕ್‌ವಾಸ್ಲಾದ ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯ 78 ನೇ ಬ್ಯಾಚ್‌ನ ಹಳೆಯ ವಿದ್ಯಾರ್ಥಿ).

**ಮುಖ್ಯ ಹುದ್ದೆಗಳು:**

ಕೋಸ್ಟ್ ಗಾರ್ಡ್ ಇಂಟರ್‌ಸೆಪ್ಟರ್ ಬೋಟ್ CGS-05

ನೌಕಾಪಡೆಯ ಪ್ರಮುಖ ಹಡಗುಗಳಾದ INS ವೀರ್, INS ಕಿರ್ಪಾನ್ ಮತ್ತು INS ಮೈಸೂರು ಹಡಗುಗಳ ಕಮಾಂಡರ್ ಆಗಿ ಸೇವೆ.
ಮಾಸ್ಕೋದಲ್ಲಿರುವ ಭಾರತೀಯ ರಾಯಭಾರ ಕಚೇರಿಯಲ್ಲಿ ನ್ಯಾವಲ್ ಅಟ್ಯಾಚೆ (Naval Attaché) ಆಗಿ ಕಾರ್ಯನಿರ್ವಹಣೆ.
2016 ರ ಇಂಟರ್ನ್ಯಾಷನಲ್ ಫ್ಲೀಟ್ ರಿವ್ಯೂ (International Fleet Review 2016) ನ ನಿರ್ದೇಶಕರಾಗಿ ಕಾರ್ಯ.
ಪೂರ್ವಸೂಚಿ (Succeeded): ವೈಸ್ ಅಡ್ಮಿರಲ್ ಎ. ಎನ್. ಪ್ರಮೋದ್ ಅವರ ಉತ್ತರಾಧಿಕಾರಿಯಾಗಿ ಇವರು ಈ ಹುದ್ದೆಯನ್ನು ಅಲಂಕರಿಸಿದ್ದಾರೆ.
➤ **ಗೌರವಗಳು ಮತ್ತು ಪ್ರಶಸ್ತಿಗಳು:** ಅವರ ಅತ್ಯುತ್ತಮ ಮತ್ತು ನಿಷ್ಠಾವಂತ ಸೇವೆಗಾಗಿ ಭಾರತ ಸರ್ಕಾರವು ಅವರಿಗೆ ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ:
ವಿಶಿಷ್ಟ ಸೇವಾ ಪದಕ (VSM): 2017
ಅತಿ ವಿಶಿಷ್ಟ ಸೇವಾ ಪದಕ (AVSM): 2025

## ಹೈದರಾಬಾದ್‌ನಲ್ಲಿ ಬ್ರಿಕ್ಸ್ ಭ್ರಷ್ಟಾಚಾರ ವಿರೋಧಿ ಕಾರ್ಯಪಡೆ ಸಭೆ




➤ ಭಾರತದ ಬ್ರಿಕ್ಸ್ (BRICS) ಅಧ್ಯಕ್ಷತೆಯ ಅಡಿಯಲ್ಲಿ, 'ಬ್ರಿಕ್ಸ್ ಭ್ರಷ್ಟಾಚಾರ ವಿರೋಧಿ ಕಾರ್ಯಪಡೆ' (BRICS Anti-Corruption Working Group - ACWG) ಮತ್ತು 'ಆಸ್ತಿ ಮರುಪಡೆಯುವಿಕೆ ಕುರಿತ ಬ್ರಿಕ್ಸ್ ತಜ್ಞರ ಜಾಲ' (BRICS Expert Network on Asset Recovery) ಎರಡನೇ ಸಭೆಯು ಆಗಸ್ಟ್ 4 ಮತ್ತು 5, 2026 ರಂದು ತೆಲಂಗಾಣದ ಹೈದರಾಬಾದ್‌ನಲ್ಲಿ ನಡೆಯುತ್ತಿದೆ.
➤ **ಸಭೆಯ ಪ್ರಮುಖ ಉದ್ದೇಶಗಳು ಮತ್ತು ಚರ್ಚಾ ವಿಷಯಗಳು:**
**ಗಡಿಪಾರು ಮತ್ತು ಅಪರಾಧಿಗಳ ಪತ್ತೆ (Tracing Fugitives & Extradition):** ಭ್ರಷ್ಟಾಚಾರ ಪ್ರಕರಣಗಳಲ್ಲಿ ತಲೆಮರೆಸಿಕೊಂಡಿರುವ ಅಪರಾಧಿಗಳನ್ನು (Fugitives) ಪತ್ತೆಹಚ್ಚಲು ಮತ್ತು ಗಡಿಪಾರು ಪ್ರಕ್ರಿಯೆಗಳನ್ನು ವೇಗಗೊಳಿಸಲು ಸದಸ್ಯ ರಾಷ್ಟ್ರಗಳ ನಡುವೆ ಅನೌಪಚಾರಿಕ ಸಹಕಾರವನ್ನು ಬಲಪಡಿಸುವುದು.
**ಆಸ್ತಿ ಮರುಪಡೆಯುವಿಕೆ (Asset Recovery):** ಗಡಿಯಾಚೆಗಿನ ಭ್ರಷ್ಟಾಚಾರ ಮತ್ತು ಕಾನೂನುಬಾಹಿರ ಹಣಕಾಸು ಹರಿವನ್ನು (Illicit Financial Flows) ತಡೆಯಲು ಅಕ್ರಮ ಆಸ್ತಿಗಳನ್ನು ಪತ್ತೆಹಚ್ಚುವುದು, ಮುಟ್ಟುಗೋಲು ಹಾಕಿಕೊಳ್ಳುವುದು ಮತ್ತು ವಾಪಸ್ ತರುವುದು.
**ಆಡಳಿತದಲ್ಲಿ ತಂತ್ರಜ್ಞಾನ ಮತ್ತು ಪಾರದರ್ಶಕತೆ:** ಫಿನ್‌ಟೆಕ್ (Fintech) ಮತ್ತು ಡಿಜಿಟಲ್ ಆಸ್ತಿಗಳಿಂದ ಉಂಟಾಗುವ ಭ್ರಷ್ಟಾಚಾರದ ಅಪಾಯಗಳನ್ನು ಎದುರಿಸುವುದು. ಆಗಸ್ಟ್ 5 ರಂದು "ತಂತ್ರಜ್ಞಾನ ಮತ್ತು ನಾವೀನ್ಯತೆ ಮೂಲಕ ನೈತಿಕ ಆಡಳಿತ" (Ethical Governance through Innovation and Tech-Driven Systems) ವಿಷಯದ ಕುರಿತು ವಿಶೇಷ ಚರ್ಚಾ ಸ್ಪರ್ಧೆ/ಸಂವಾದ ನಡೆಯಲಿದೆ.
➤ **ಬ್ರಿಕ್ಸ್ (BRICS) ಒಕ್ಕೂಟದ ಕುರಿತು ಪರೀಕ್ಷೆಗೆ ಉಪಯುಕ್ತ ಮಾಹಿತಿ:**
ಆರಂಭ: ಬ್ರೆಜಿಲ್, ರಷ್ಯಾ, ಭಾರತ, ಮತ್ತು ಚೀನಾ ಸೇರಿ 2006ರಲ್ಲಿ 'BRIC' ಆಗಿ ಸ್ಥಾಪನೆಯಾಯಿತು. 2010ರಲ್ಲಿ ದಕ್ಷಿಣ ಆಫ್ರಿಕಾ ಸೇರ್ಪಡೆಯಾಗಿ BRICS ಆಯಿತು.
ವಿಸ್ತರಣೆ: 2024ರಲ್ಲಿ ಈಜಿಪ್ಟ್, ಇಥಿಯೋಪಿಯಾ, ಇರಾನ್, ಸೌದಿ ಅರೇಬಿಯಾ ಮತ್ತು ಯುಎಇ ಸಂಸ್ಥೆಯ ಹೊಸ ಸದಸ್ಯರಾಗಿ ಸೇರ್ಪಡೆಗೊಂಡವು.
ಒಟ್ಟು ಸದಸ್ಯ ರಾಷ್ಟ್ರಗಳು: 11 ಸದಸ್ಯ ರಾಷ್ಟ್ರಗಳು.
ಮುಖ್ಯಸ್ಥಾನ (Secretariat): ಶಾಂಘೈ, ಚೀನಾ.
ನ್ಯೂ ಡೆವಲಪ್‌ಮೆಂಟ್ ಬ್ಯಾಂಕ್ (NDB): ಬ್ರಿಕ್ಸ್ ಒಕ್ಕೂಟದ ಬ್ಯಾಂಕ್ ಆಗಿದ್ದು, ಇದರ ಕೇಂದ್ರ ಕಚೇರಿ ಶಾಂಘೈದಲ್ಲಿದೆ.

## 2028 ರಿಂದ ವಾಹನಗಳ ನಡುವೆ 'V2V ಸಂಪರ್ಕ' ಕಡ್ಡಾಯ: ಕೇಂದ್ರ ಸರ್ಕಾರದ ಕರಡು ನಿಯಮ



➤ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು (MoRTH) ರಸ್ತೆ ಅಪಘಾತಗಳನ್ನು ತಡೆಯಲು ಮತ್ತು ವಾಹನ ಸಂಚಾರ ಸುರಕ್ಷತೆಯನ್ನು ಹೆಚ್ಚಿಸಲು ಒಂದು ಮಹತ್ವದ ನಿರ್ಧಾರ ಕೈಗೊಂಡಿದೆ. ದೇಶದಲ್ಲಿ ತಯಾರಾಗುವ ಹೊಸ ವಾಹನಗಳಲ್ಲಿ 'ವೆಹಿಕಲ್-ಟು-ವೆಹಿಕಲ್' (V2V - Vehicle-to-Vehicle) ಕಮ್ಯುನಿಕೇಷನ್ ವ್ಯವಸ್ಥೆಯನ್ನು ಹಂತ-ಹಂತವಾಗಿ ಕಡ್ಡಾಯಗೊಳಿಸಲು ಕೇಂದ್ರ ಮೋಟಾರು ವಾಹನ ನಿಯಮಗಳು, 1989 ರ ತಿದ್ದುಪಡಿಗೆ ಕರಡು ಅಧಿಸೂಚನೆ (Draft Notification) ಹೊರಡಿಸಿದೆ.
➤ **V2V (Vehicle-to-Vehicle) ಸಂಪರ್ಕ ತಂತ್ರಜ್ಞಾನ:** 'ವೆಹಿಕಲ್-ಟು-ವೆಹಿಕಲ್' (V2V) ಎಂಬುದು ವೈರ್‌ಲೆಸ್ (Wireless) ಆಧಾರಿತ ಆಧುನಿಕ ತಂತ್ರಜ್ಞಾನವಾಗಿದೆ. ಇದು ರಸ್ತೆಯಲ್ಲಿ ಸಂಚರಿಸುವ ವಾಹನಗಳು ತಮ್ಮ ನಡುವೆ ರಿಯಲ್-ಟೈಮ್ (ನಿಜಾವಧಿಯ) ಮಾಹಿತಿಯನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ನೆರವಾಗುತ್ತದೆ.
ವಿನಿಮಯವಾಗುವ ಮಾಹಿತಿ: ವಾಹನದ ವೇಗ (Speed), ಪ್ರಸ್ತುತ ಸ್ಥಳ (Position), ಚಲಿಸುವ ದಿಕ್ಕೂಚಿ (Direction) ಹಾಗೂ ತಕ್ಷಣದ ಬ್ರೇಕ್ ಹಾಕುವಿಕೆ (Acceleration/Braking).
ಪ್ರಮುಖ ಅನುಕೂಲ: ಚಾಲಕನ ಕಣ್ಣಿಗೆ ಕಾಣಿಸದ ಅಥವಾ ದೂರದ ಅಪಾಯಗಳ ಕುರಿತು (Beyond line of sight) ಮುಂಚಿತವಾಗಿಯೇ ಮುನ್ಸೂಚನೆ ಹಾಗೂ ಮುನ್ನೆಚ್ಚರಿಕೆ ಸಂದೇಶ ನೀಡುತ್ತದೆ.
ಇದು ಅಡ್ವಾನ್ಸ್ಡ್ ಡ್ರೈವರ್ ಅಸಿಸ್ಟೆನ್ಸ್ ಸಿಸ್ಟಮ್ (ADAS) ನೊಂದಿಗೆ ಸೇರಿ ಅಪಘಾತಗಳನ್ನು ತಡೆಯಲು ಸಹಾಯ ಮಾಡುತ್ತದೆ.
**ಖಚಿತ ಮತ್ತು ನಿಖರ ದತ್ತಾಂಶ:** ಬೆಳೆ ಹಾನಿ ನಷ್ಟದ ಅಂದಾಜು, ಇಳುವರಿ ಅಂದಾಜು ಹಾಗೂ ಬೆಳೆ ನಮೂದಿನಲ್ಲಿ ಆಗುತ್ತಿದ್ದ ಮಾನವ ಸಹಜ ತಪ್ಪುಗಳನ್ನು ಸಂಪೂರ್ಣವಾಗಿ ತಡೆಯಬಹುದು.
**ಬೆಳೆ ವಿಮೆ ಮತ್ತು ನಷ್ಟ ಪರಿಹಾರ:** ಪ್ರಧಾನ್ ಮಂತ್ರಿ ಫಸಲ್ ಭೀಮಾ ಯೋಜನೆ (PMFBY) ಮತ್ತು ಸರ್ಕಾರಿ ಪರಿಹಾರ ಧನ ವಿತರಣೆಯಲ್ಲಿ ನೈಜ ಫಲಾನುಭವಿಗಳನ್ನು ಕ್ಷಿಪ್ರವಾಗಿ ಗುರುತಿಸಿ ನೇರ ನಗದು ವರ್ಗಾವಣೆ (DBT) ಮಾಡಲು ಸಹಕಾರಿ.
**ಕೃಷಿ ಸಾಲ ಸೌಲಭ್ಯ:** ಬ್ಯಾಂಕ್‌ಗಳು ರೈತರ ಬೆಳೆ ಮತ್ತು ಜಮೀನಿನ ಪ್ರಮಾಣೀಕೃತ ದಾಖಲೆಗಳನ್ನು ಆನ್‌ಲೈನ್‌ನಲ್ಲೇ ಪರಿಶೀಲಿಸಿ ಸುಲಭವಾಗಿ ಸಾಲ ಮಂಜೂರು ಮಾಡಲು ನೆರವಾಗುತ್ತದೆ.
**ಸಾಕ್ಷ್ಯಾಧಾರಿತ ಆಡಳಿತ (Evidence-based Governance):** ಬರ, ಪ್ರವಾಹ ಅಥವಾ ಕೀಟಬಾಧೆಯಂತಹ ತುರ್ತು ಸಂದರ್ಭಗಳಲ್ಲಿ ಸರ್ಕಾರ ಸೂಕ್ತ ನೀತಿ-ನಿರ್ಧಾರಗಳನ್ನು ತಕ್ಷಣವೇ ತೆಗೆದುಕೊಳ್ಳಲು ನೈಜ ಸಮಯದ (Real-time) ದತ್ತಾಂಶ ಸಿಗುತ್ತದೆ.
**ರೈತರಿಗೆ AI ಆಧಾರಿತ ಸಲಹೆಗಳು:** ಕೃಷಿ ಇಲಾಖೆಯು ರಾಜ್ಯದ 1 ಕೋಟಿಗೂ ಹೆಚ್ಚು ನೋಂದಾಯಿತ ರೈತರಿಗೆ ಹವಾಮಾನ, ಬೆಳೆ ನಿರ್ವಹಣೆ ಮತ್ತು ಮಾರುಕಟ್ಟೆ ಮಾಹಿತಿಯನ್ನು ನೀಡಲು AI ಆಧಾರಿತ ಸಲಹಾ ವೇದಿಕೆಯನ್ನು (AI Advisory Platform) ಅಭಿವೃದ್ಧಿಪಡಿಸುತ್ತಿದೆ.



## ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್‌ಗೆ ಗಿಫ್ಟ್ ಸಿಟಿಯಲ್ಲಿ ವೆಲ್ತ್ ಸರ್ವಿಸಸ್ ನೀಡಲು ಅನುಮೋದನೆ




➤ ಗುಜರಾತ್‌ನ ಗಾಂಧಿನಗರದಲ್ಲಿರುವ ಗಿಫ್ಟ್ ಸಿಟಿ (GIFT City) ಯಿಂದ ಬಂಡವಾಳ ಮಾರುಕಟ್ಟೆ ಮತ್ತು ಸಂಪತ್ತು ನಿರ್ವಹಣೆ (Wealth Management) ಉತ್ಪನ್ನಗಳನ್ನು ವಿತರಿಸಲು ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ (Standard Chartered Bank) ಗೆ ಅಂತರರಾಷ್ಟ್ರೀಯ ಹಣಕಾಸು ಸೇವೆಗಳ ಕೇಂದ್ರಗಳ ಪ್ರಾಧಿಕಾರ (IFSCA) ನಿಂದ ತಾತ್ವಿಕ ಅನುಮೋದನೆ (In-principle approval) ದೊರೆತಿದೆ.

ಅನುಮೋದನೆ ನೀಡಿದ ಸಂಸ್ಥೆ: ಅಂತರರಾಷ್ಟ್ರೀಯ ಹಣಕಾಸು ಸೇವೆಗಳ ಕೇಂದ್ರಗಳ ಪ್ರಾಧಿಕಾರ (IFSCA).

ಆಯ್ಕೆಯಾದ ಬ್ಯಾಂಕ್: ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ (Standard Chartered - ವಿದೇಶಿ ಬ್ಯಾಂಕ್).

ಸೇವೆಯ ಸ್ವರೂಪ: ಬಂಡವಾಳ ಮಾರುಕಟ್ಟೆ ಉತ್ಪನ್ನಗಳು, ಹೂಡಿಕೆ ಸಲಹೆ (Investment Advisory) ಹಾಗೂ ಚಿಲ್ಲರೆ ಸಂಪತ್ತು ನಿರ್ವಹಣೆ (Retail Wealth Management) ಸೇವೆಗಳು.

ಪ್ರಾರಂಭಿಕ ಯೋಜನೆ: ಬ್ಯಾಂಕ್ ತನ್ನ 'ಸಿಗ್ನೇಚರ್ ಸಿಐಒ ಫಂಡ್ಸ್' (Signature CIO Funds) ಅನ್ನು ಗಿಫ್ಟ್ ಸಿಟಿಯಿಂದ ಬಿಡುಗಡೆ ಮಾಡಲಿದ್ದು, ಮುಂಬರುವ ದಿನಗಳಲ್ಲಿ ಇತರ ರಿಟೇಲ್ ಉತ್ಪನ್ನಗಳನ್ನು ಪರಿಚಯಿಸಲಿದೆ.

**➤ ಗಿಫ್ಟ್ ಸಿಟಿಯಲ್ಲಿ ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್‌ನ ಹಿನ್ನೆಲೆ:**

ಮೊದಲ ವಿದೇಶಿ ಬ್ಯಾಂಕ್: 2020 ರಲ್ಲಿ ಗಿಫ್ಟ್ ಸಿಟಿಯಲ್ಲಿ (GIFT City IFSC) ಕಾರ್ಯಾಚರಣೆ ಪ್ರಾರಂಭಿಸಿದ ಮೊದಲ ವಿದೇಶಿ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಸ್ಟ್ಯಾಂಡರ್ಡ್ ಚಾರ್ಟರ್ಡ್ ಪಾತ್ರವಾಗಿತ್ತು.

ಸೇವಾ ವಿಸ್ತರಣೆ: ಪ್ರಸ್ತುತ ಬ್ಯಾಂಕ್ ಇಲ್ಲಿಂದ 600ಕ್ಕೂ ಹೆಚ್ಚು ಸಾಂಸ್ಥಿಕ ಮತ್ತು ಕಾರ್ಪೊರೇಟ್ ಗ್ರಾಹಕರಿಗೆ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುತ್ತಿದ್ದು, ಈಗ ರಿಟೇಲ್ ವೆಲ್ತ್ ಮ್ಯಾನೇಜ್‌ಮೆಂಟ್ ವಲಯಕ್ಕೂ ಕಾಲಿಡುತ್ತಿದೆ.

## ಭಾರತದ ಮೊದಲ ಮಹಿಳಾ 'ಫೈಟರ್ ಕಾಂಬ್ಯಾಟ್ ಲೀಡರ್' ಆಗಿ ಭಾವನಾ ಕಾಂತ್ ಇತಿಹಾಸ



➤ ಭಾರತೀಯ ವಾಯುಪಡೆಯಲ್ಲಿ (IAF) ಮತ್ತೊಂದು ಐತಿಹಾಸಿಕ ಮೈಲಿಗಲ್ಲು ಸ್ಥಾಪನೆಯಾಗಿದೆ. ಸ್ಕ್ವಾಡ್ರನ್ ಲೀಡರ್ ಭಾವನಾ ಕಾಂತ್ (Bhawana Kanth) ಅವರು ಅತ್ಯಂತ ಕಠಿಣ ಹಾಗೂ ಪ್ರತಿಷ್ಠಿತ ಫೈಟರ್ ಕಾಂಬ್ಯಾಟ್ ಲೀಡರ್ (FCL) ಕೋರ್ಸ್ ಪೂರ್ಣಗೊಳಿಸುವ ಮೂಲಕ ಭಾರತದ ಮೊದಲ ಮಹಿಳಾ 'ಫೈಟರ್ ಕಾಂಬ್ಯಾಟ್ ಲೀಡರ್' (Top Gun Pilot) ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಸಾಧನೆ: 'ಫೈಟರ್ ಕಾಂಬ್ಯಾಟ್ ಲೀಡರ್' (FCL) ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ದೇಶದ ಮೊದಲ ಮಹಿಳಾ ಫೈಟರ್ ಪೈಲಟ್.

**ತರಬೇತಿ ಸಂಸ್ಥೆ:** ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿರುವ ಟ್ಯಾಕ್ಟಿಕ್ಸ್ ಅಂಡ್ ಏರ್ ಕಾಂಬ್ಯಾಟ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್ (TACDE).

ಕೋರ್ಸ್ ಅವಧಿ: 20 ವಾರಗಳ ಅತ್ಯಂತ ಸವಾಲಿನ ತರಬೇತಿ.

ಪ್ರಮುಖ ವಿಮಾನಗಳು: ಮಿಗ್-21 ಬೈಸನ್ (MiG-21 Bison) ಮತ್ತು ಸುಖೋಯ್ ಸು-30 ಎಂಕೆಐ (Su-30 MKI).

**➤ ಫೈಟರ್ ಕಾಂಬ್ಯಾಟ್ ಲೀಡರ್ (FCL) ಕೋರ್ಸ್:** ಅಮೆರಿಕದ ನೌಕಾಪಡೆಯ 'ಟಾಪ್ ಗನ್' (Top Gun) ತರಬೇತಿಗೆ ಸಮಾನವಾದ ಈ ಕೋರ್ಸ್, ವಾಯುಪಡೆಯ ಅತ್ಯಂತ ಶ್ರೇಷ್ಠ ಹಾಗೂ ಕಠಿಣ ತರಬೇತಿಗಳಲ್ಲಿ ಒಂದಾಗಿದೆ.

ಆಯ್ಕೆ ಪ್ರಕ್ರಿಯೆ: ವಾಯುಪಡೆಯ ಪೈಲಟ್‌ಗಳಲ್ಲಿ ಕೇವಲ ಶೇ 1% ರಷ್ಟು ಅತ್ಯುತ್ತಮ ಅರ್ಹತೆ ಹೊಂದಿರುವ ಪೈಲಟ್‌ಗಳನ್ನು ಮಾತ್ರ ಈ ಕೋರ್ಸ್‌ಗೆ ಆಯ್ಕೆ ಮಾಡಲಾಗುತ್ತದೆ.

ತರಬೇತಿ ಸ್ವರೂಪ: ಮುಂಚೂಣಿ ಯುದ್ಧ ತಂತ್ರಗಳು, ಸಂಕೀರ್ಣ ಆಕಾಶ ಯುದ್ಧ (Air Combat), ಎಲೆಕ್ಟ್ರಾನಿಕ್ ವಾರ್‌ಫೇರ್ ಮತ್ತು ಆಧುನಿಕ ಅಸ್ತ್ರಗಳ ಬಳಕೆಯ ಬಗ್ಗೆ ತರಬೇತಿ ನೀಡಲಾಗುತ್ತದೆ.

ಪಾತ್ರ: FCL ಪೂರ್ಣಗೊಳಿಸಿದ ಅಧಿಕಾರಿಗಳು ವಾಯುಪಡೆಯ ಯುದ್ಧ ಕಾರ್ಯಾಚರಣೆಗಳ ಯೋಜಕರು ಮತ್ತು ಮಾರ್ಗದರ್ಶಕರಾಗಿ (Tacticians) ಕಾರ್ಯನಿರ್ವಹಿಸುತ್ತಾರೆ.

**➤ ಭಾವನಾ ಕಾಂತ್ ಅವರ ಸಾಧನೆಯ ಹಾದಿ:**

ಜನನ ಮತ್ತು ಶಿಕ್ಷಣ: ಭಾವನಾ ಕಾಂತ್ ಬಿಹಾರದ ದರ್ಭಾಂಗ ಜಿಲ್ಲೆಯವರು.

ಕರ್ನಾಟಕದ ನಂಟು (ವಿಶೇಷ): ಇವರು ತಮ್ಮ ಎಂಜಿನಿಯರಿಂಗ್ (BE - ಮೆಡಿಕಲ್ ಎಲೆಕ್ಟ್ರಾನಿಕ್ಸ್) ಪದವಿಯನ್ನು ಬೆಂಗಳೂರಿನ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ (BMSCE) ಪೂರ್ಣಗೊಳಿಸಿದ್ದಾರೆ.

ವಾಯುಪಡೆಗೆ ಸೇರ್ಪಡೆ (2016): ಜೂನ್ 2016 ರಲ್ಲಿ ಭಾರತೀಯ ವಾಯುಪಡೆಗೆ ಸೇರಿದ ಪ್ರಥಮ ತಂಗ್ಯಾ ತಂಡದ ಮೂವರು ಮಹಿಳಾ ಫೈಟರ್ ಪೈಲಟ್‌ಗಳಲ್ಲಿ (ಅವನಿ ಚತುರ್ವೇದಿ ಮತ್ತು ಮೋಹನಾ ಸಿಂಗ್ ಅವರೊಂದಿಗೆ) ಭಾವನಾ ಕೂಡ ಒಬ್ಬರು.

ಹಗಲು ಯುದ್ಧ ಕಾರ್ಯಾಚರಣೆಗೆ ಅರ್ಹತೆ (2019): ಮೇ 2019 ರಲ್ಲಿ ಮಿಗ್-21 ಬೈಸನ್ ಯುದ್ಧವಿಮಾನದಲ್ಲಿ ಹಗಲಿನ ಯುದ್ಧ ಕಾರ್ಯಾಚರಣೆಗೆ ಅರ್ಹತೆ ಪಡೆದ ದೇಶದ ಮೊದಲ ಮಹಿಳಾ ಪೈಲಟ್ ಆದರು.

ಗಣರಾಜ್ಯೋತ್ಸವ ಪರೇಡ್ (2021): 2021 ರ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ವಾಯುಪಡೆಯ ಸ್ತಬ್ಧಚಿತ್ರದಲ್ಲಿ ಭಾಗವಹಿಸಿದ ಮೊದಲ ಮಹಿಳಾ ಫೈಟರ್ ಪೈಲಟ್.

ಪ್ರಶಸ್ತಿ: 2020 ರಲ್ಲಿ ಇವರಿಗೆ ಭಾರತ ಸರ್ಕಾರದ ಅತ್ಯುನ್ನತ 'ನಾರಿ ಶಕ್ತಿ ಪುರಸ್ಕಾರ' ನೀಡಿ ಗೌರವಿಸಲಾಗಿದೆ.

## ಭಾರತೀಯ ಮೂಲದ ನಾಸಾ ಗಗನಯಾತ್ರಿ ಅನಿಲ್ ಮೆನನ್ ಅವರಿಂದ ಮೊದಲ ISS ಬಾಹ್ಯಾಕಾಶ ನಡಿಗೆ (Spacewalk) ಸಫಲ!



➤ ಭಾರತೀಯ ಮೂಲದ ನಾಸಾ (NASA) ಗಗನಯಾತ್ರಿ ಅನಿಲ್ ಮೆನನ್ ಅವರು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದ (International Space Station - ISS) ಹೊರಭಾಗದಲ್ಲಿ ತಮ್ಮ ಪ್ರಥಮ ಬಾಹ್ಯಾಕಾಶ ನಡಿಗೆಯನ್ನು (Maiden Spacewalk / Extravehicular Activity - EVA) ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಈ ಕಾರ್ಯಾಚರಣೆಯನ್ನು US Spacewalk 96 ಎಂದು ಹೆಸರಿಸಲಾಗಿದ್ದು, ಇದು ಒಟ್ಟು 6 ಗಂಟೆ 27 ನಿಮಿಷಗಳ ಕಾಲ ನಡೆಯಿತು. ಈ ಮೂಲಕ ಅನಿಲ್ ಮೆನನ್ ಅವರು

ಬಾಹ್ಯಾಕಾಶ ನಡಿಗೆ ನಡೆಸಿದ ಭಾರತೀಯ ಮೂಲದ ಪ್ರಮುಖ ಗಗನಯಾತ್ರಿಗಳ ಸಾಲಿಗೆ ಸೇರ್ಪಡೆಗೊಂಡಿದ್ದಾರೆ.

➤ **ಬಾಹ್ಯಾಕಾಶ ನಡಿಗೆಯ ಪ್ರಮುಖ ಉದ್ದೇಶಗಳು:**

ಸೋಲಾರ್ ಪ್ಯಾನಲ್ ಹಾರ್ಡ್‌ವೇರ್ ಅಳವಡಿಕೆ: ISS ನ 'Starboard 6 truss segment' ಮತ್ತು 3B ಪವರ್ ಚಾನಲ್‌ನಲ್ಲಿ ಅಗತ್ಯ ಹಾರ್ಡ್‌ವೇರ್‌ಗಳನ್ನು ಅಳವಡಿಸಲಾಯಿತು.

iROSA ವ್ಯವಸ್ಥೆಯ ನವೀಕರಣ: ಭವಿಷ್ಯದಲ್ಲಿ ಅಳವಡಿಸಲಿರುವ 7ನೇ International Space Station Roll-Out Solar Array (iROSA) ಗೆ ವಿದ್ಯುತ್ ಕೇಬಲ್‌ಗಳನ್ನು ಜೋಡಿಸಲಾಯಿತು.

ವಿದ್ಯುತ್ ಸಾಮರ್ಥ್ಯ ಹೆಚ್ಚಳ: ನಿಲ್ದಾಣದ ಹಳೆಯ ಸೋಲಾರ್ ಪ್ಯಾನಲ್‌ಗಳ ಕ್ಷೀಣಿಸುತ್ತಿರುವ ಸಾಮರ್ಥ್ಯಕ್ಕೆ ಪರ್ಯಾಯವಾಗಿ ಹೊಸ iROSA ಪ್ಯಾನಲ್‌ಗಳು ISS ನಲ್ಲಿ ನಡೆಯುವ ನೂರಾರು ವೈಜ್ಞಾನಿಕ ಪ್ರಯೋಗಗಳಿಗೆ ನಿರಂತರ ವಿದ್ಯುತ್ ಒದಗಿಸಲಿವೆ.

ಮೈಲಿಗಲ್ಲು: ಇದು ISS ನ ನಿರ್ವಹಣೆ ಮತ್ತು ವಿಸ್ತರಣೆಗೆ ಸಂಬಂಧಿಸಿದ 281 ನೇ ಬಾಹ್ಯಾಕಾಶ ನಡಿಗೆ ಹಾಗೂ Expedition 75 ಮಿಷನ್‌ಗೆ ಸಂಬಂಧಿಸಿದ ಆಗಸ್ಟ್ ತಿಂಗಳ ಮೊದಲ ಸ್ಪೇಸ್‌ವಾಕ್ ಆಗಿದೆ.

➤ **ಅನಿಲ್ ಮೆನನ್:**

ಆಯ್ಕೆ ಮತ್ತು ತರಬೇತಿ: 2021 ರಲ್ಲಿ ನಾಸಾದ ಗಗನಯಾತ್ರಿಗಳ ವಿಭಾಗಕ್ಕೆ (NASA Astronaut Class of 2021) ಆಯ್ಕೆಯಾದರು.

ಶೈಕ್ಷಣಿಕ ಮತ್ತು ವೃತ್ತಿ ಹಿನ್ನೆಲೆ: ಇವರು ತುರ್ತು ಚಿಕಿತ್ಸಾ ವೈದ್ಯರು (Emergency Physician) ಮತ್ತು ಮೆಕ್ಯಾನಿಕಲ್ ಎಂಜಿನಿಯರ್ ಆಗಿದ್ದಾರೆ.

ಸ್ಪೇಸ್‌ಎಕ್ಸ್ ಸೇವಾನುಭವ: ನಾಸಾ ಸೇರುವ ಮೊದಲು ಇವರು ಇಲಾನ್ ಮಸ್ಕ್ ನೇತೃತ್ವದ SpaceX ಸಂಸ್ಥೆಯ ಮೊದಲ ಫ್ಲೈಟ್ ಸರ್ಜನ್ (First Flight Surgeon) ಆಗಿ ಸೇವೆ ಸಲ್ಲಿಸಿದ್ದರು.

ಭಾರತೀಯ ನಂಟು: ಅನಿಲ್ ಮೆನನ್ ಅವರ ತಂದೆ ಕೇರಳ ಮೂಲದ ಭಾರತೀಯರಾಗಿದ್ದು, ತಾಯಿ ಉಕ್ರೇನಿಯನ್ ಮೂಲದವರಾಗಿದ್ದಾರೆ.

## ಅಗ್ನಿ-4 ಮಧ್ಯಮ ಶ್ರೇಣಿಯ ಬ್ಯಾಲಿಸ್ಟಿಕ್ ಕ್ಷಿಪಣಿ ಯಶಸ್ವಿ ಪರೀಕ್ಷೆ




➤ ಭಾರತವು ತನ್ನ ರಕ್ಷಣಾ ತಡೆಗೋಡೆಯನ್ನು ಮತ್ತಷ್ಟು ಸುದೃಢಗೊಳಿಸುವ ನಿಟ್ಟಿನಲ್ಲಿ ಪರಮಾಣು ಸಾಮರ್ಥ್ಯ ಹೊಂದಿರುವ ಮಧ್ಯಮ ವ್ಯಾಪ್ತಿಯ ಬ್ಯಾಲಿಸ್ಟಿಕ್ ಕ್ಷಿಪಣಿ (MRBM / IRBM) 'ಅಗ್ನಿ-4' (Agni-IV) ಅನ್ನು ಒಡಿಶಾದ ಚಂಡೀಪುರದಲ್ಲಿರುವ ಇಂಟಿಗ್ರೇಟೆಡ್ ಟೆಸ್ಟ್ ರೇಂಜ್ (ITR) ನಿಂದ ಯಶಸ್ವಿಯಾಗಿ ಪರೀಕ್ಷಿಸಿದೆ. ಈ ಉಡಾವಣೆಯು ಸ್ಟ್ರಾಟೆಜಿಕ್ ಫೋರ್ಸಸ್ ಕಮಾಂಡ್ (SFC) ನ ಉಸ್ತುವಾರಿಯಲ್ಲಿ ನಡೆದಿದ್ದು, ಕ್ಷಿಪಣಿಯ ಎಲ್ಲಾ ಕಾರ್ಯಾಚರಣೆ ಹಾಗೂ ತಾಂತ್ರಿಕ ಮಾನದಂಡಗಳನ್ನು (Operational & Technical Parameters) ಯಶಸ್ವಿಯಾಗಿ ಪರಿಶೀಲಿಸಲಾಗಿದೆ.

➤ **ಅಗ್ನಿ-4 ಕ್ಷಿಪಣಿಯ ಪ್ರಮುಖ ತಾಂತ್ರಿಕ ವೈಶಿಷ್ಟ್ಯಗಳು:**

ದಾಳಿ ವ್ಯಾಪ್ತಿ (Range): ಸುಮಾರು 4,000 ಕಿಲೋಮೀಟರ್ ಗಳವರೆಗೆ ಶತ್ರು ಗುರಿಗಳನ್ನು ನಿಖರವಾಗಿ ತಲುಪುವ ಸಾಮರ್ಥ್ಯ ಹೊಂದಿದೆ.

**ಇಂಧನ ವ್ಯವಸ್ಥೆ (Propulsion):** 2 ಹಂತಗಳ ಘನ ಇಂಧನ (Two-stage solid propellant) ಆಧರಿತ ವ್ಯವಸ್ಥೆ.

ಉದ್ದ ಹಾಗೂ ತೂಕ: ಸುಮಾರು 20 ಮೀಟರ್ ಉದ್ದವಿದ್ದು, 1,000 ಕೆಜಿ (1 ಟನ್) ತೂಕದ ಅಣುವಸ್ತ್ರ ಅಥವಾ ಸಾಂಪ್ರದಾಯಿಕ ಯುದ್ಧಸಾಮಗ್ರಿಗಳನ್ನು (Payload) ಹೊರಬಲ್ಲದು.

**ಮಾರ್ಗದರ್ಶನ ವ್ಯವಸ್ಥೆ (Guidance System):** ಅತ್ಯಾಧುನಿಕ ರಿಂಗ್ ಲೇಸರ್ ಗೈರೊಸ್ಕೋಪ್ (Ring Laser Gyroscope) ಆಧಾರಿತ ಇನರ್ಶಿಯಲ್ ನೇವಿಗೇಷನ್ ಸಿಸ್ಟಮ್ ಮತ್ತು ಫ್ಲೆಕ್ಸ್-ಸೀಲ್ ಥ್ರಸ್ಟ್ ವೆಕ್ಟರಿಂಗ್ ಕಂಟ್ರೋಲ್ ಹೊಂದಿದ್ದು, 100 ಮೀಟರ್‌ಗಿಂತ ಕಡಿಮೆ ಚಕ್ರ ದೋಷ (CEP) ಹೊಂದಿರುವ ನಿಖರ ಗುರಿ ತಲುಪುತ್ತದೆ.

**ರಿ-ಎಂಟ್ರಿ ಹೀಟ್ ಶೀಲ್ಡ್ (Heat Shield):** ವಾತಾವರಣಕ್ಕೆ ಮರುಪ್ರವೇಶಿಸುವಾಗ ಸೃಷ್ಟಿಯಾಗುವ 3,000°C ಗಿಂತ ಹೆಚ್ಚಿನ ತಾಪಮಾನವನ್ನು ತಡೆಯುವ ಸಾಮರ್ಥ್ಯ ಹೊಂದಿದೆ. ಇದರಿಂದ ಒಳಗಿನ ಎಲೆಕ್ಟ್ರಾನಿಕ್ಸ್ ಉಪಕರಣಗಳ ತಾಪಮಾನವನ್ನು 50°C ಗಿಂತ ಕಡಿಮೆಯಲ್ಲಿ ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ.

**ಮೊಬೈಲ್ ಲಾಂಚರ್ (Road-Mobile Launcher):** ರಸ್ತೆ ಅಥವಾ ಸಾರಿಗೆ ಮೊಬೈಲ್ ಲಾಂಚರ್‌ಗಳ ಮೂಲಕ ವೇಗವಾಗಿ ಸ್ಥಳಾಂತರಿಸಿ ಉಡಾವಣೆ ಮಾಡಬಹುದಾದ ಅತ್ಯಂತ ನಮ್ಯ (Flexible) ತಂತ್ರಜ್ಞಾನ ಇಲ್ಲಿದೆ.

➤ **ಆಯಕಟ್ಟಿನ ಹಾಗೂ ರಕ್ಷಣಾ ಮಹತ್ವ:**

**ಅಣ್ವಿಕ ತ್ರಿವಳಿ (Nuclear Triad):** ಭಾರತದ ಭೂ-ಆಧಾರಿತ ಕಾರ್ಯತಂತ್ರದ ಕ್ಷಿಪಣಿ ಸಾಮರ್ಥ್ಯದಲ್ಲಿ ಅಗ್ನಿ ಸರಣಿಯು ಪ್ರಮುಖ ಪಾತ್ರ ವಹಿಸುತ್ತದೆ.

**ಭೂಪ್ರದೇಶದ ವ್ಯಾಪ್ತಿ:** ಭಾರತದ ಈಶಾನ್ಯ ಅಥವಾ ಪೂರ್ವ ಭಾಗದಿಂದ ಉಡಾಯಿಸಿದಾಗ, ಅಗ್ನಿ-4 ಕ್ಷಿಪಣಿಯು ಸಂಪೂರ್ಣ ಚೀನಾ, ಆಗ್ನೇಯ ಏಷ್ಯಾ, ಮಧ್ಯ ಏಷ್ಯಾ ಹಾಗೂ ಪಶ್ಚಿಮ ಏಷ್ಯಾದ ಪ್ರಮುಖ ಆಯಕಟ್ಟಿನ ಕೇಂದ್ರಗಳನ್ನು ತಲುಪುವ ಸಾಮರ್ಥ್ಯ ಹೊಂದಿದೆ.

**ಸ್ವಯಂ ರಕ್ಷಣೆ ಮತ್ತು ನಿರೋಧಕತೆ:** ಭಾರತದ 'ವಿಶ್ವಾಸಾರ್ಹ ಕನಿಷ್ಠ ತಡೆಗೋಡೆ' (Credible Minimum Deterrence) ಮತ್ತು 'ಮೊದಲು ಅಣುವಸ್ತ್ರ ಬಳಸದಿರುವ' (No First Use) ಆಡಳಿತಾತ್ಮಕ ನೀತಿಗೆ ಇದು ಶಕ್ತಿ ತುಂಬುತ್ತದೆ.

# 08 July 206

## 'ಹರ್ ಘರ್ ತಿರಂಗಾ 2026' ಅಭಿಯಾನಕ್ಕೆ ಚಾಲನೆ




➤ ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವಾಲಯವು 2026ರ ಆಗಸ್ಟ್ 6 ರಂದು ನವದೆಹಲಿಯಲ್ಲಿ ರಾಷ್ಟ್ರವ್ಯಾಪಿ 'ಹರ್ ಘರ್ ತಿರಂಗಾ 2026' ಅಭಿಯಾನಕ್ಕೆ ಅಧಿಕೃತ ಚಾಲನೆ ನೀಡಿದೆ. ಈ ಅಭಿಯಾನವು ದೇಶಾದ್ಯಂತ ಆಗಸ್ಟ್ 9 ರಿಂದ 17, 2026 ರವರೆಗೆ ದೇಶಪ್ರೇಮ ಮತ್ತು ರಾಷ್ಟ್ರೀಯ ಐಕ್ಯತೆಯನ್ನು ಸಾರುವ ಉದ್ದೇಶದಿಂದ ನಡೆಯಲಿದೆ. 2022ರಲ್ಲಿ ಪ್ರಾರಂಭಗೊಂಡ ಈ ಅಭಿಯಾನವು ಇದೀಗ 5ನೇ ವರ್ಷಕ್ಕೆ ಕಾಲಿಟ್ಟಿದ್ದು, ದೇಶದ ಅತಿ ದೊಡ್ಡ ಜನಪರ ಚಳವಳಿಗಳಲ್ಲಿ ಒಂದಾಗಿ ಹೊರಹೊಮ್ಮಿದೆ.

➤ **ಈ ಬಾರಿಯ ಅಭಿಯಾನದ ಪ್ರಮುಖ ಆಕರ್ಷಣೆಗಳು ಹಾಗೂ ಮುಖ್ಯಾಂಶಗಳು:**

**1. 'ವಂದೇ ಮಾತರಂ' 150ನೇ ವರ್ಷಾಚರಣೆಗೆ ಸಮರ್ಪಣೆ**

ಈ ಬಾರಿಯ ಅಭಿಯಾನವನ್ನು ಭಾರತದ ರಾಷ್ಟ್ರೀಯ ಗೀತೆಯಾದ 'ವಂದೇ ಮಾತರಂ'ನ 150ನೇ ವರ್ಷಾಚರಣೆಗೆ ವಿಶೇಷವಾಗಿ ಸಮರ್ಪಿಸಲಾಗಿದೆ.

ಅಭಿಯಾನದ ಭಾಗವಾಗಿ ದೇಶಾದ್ಯಂತ ಸಮೂಹ 'ವಂದೇ ಮಾತರಂ' ಗಾಯನ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.

ಸಂಸ್ಕೃತಿ ಸಚಿವಾಲಯವು ವಂದೇ ಮಾತರಂ ಗೀತೆಯನ್ನು ಸರಿಯಾದ ರಾಗ ಮತ್ತು ತಾಳದಲ್ಲಿ ಹಾಡಲು ಕಲಿಯಲು ಹರ್ ಘರ್ ತಿರಂಗಾ ಪೋರ್ಟಲ್‌ನಲ್ಲಿ 5-ಹಂತಗಳ ಆನ್‌ಲೈನ್ ಟ್ಯುಟೋರಿಯಲ್ ಅನ್ನು ಬಿಡುಗಡೆ ಮಾಡಿದೆ.

**2. 'ಸೂರ್ಯಪಥ್ ತಿರಂಗಾ' (SURYAPATH TIRANGA) - ಜಾಗತಿಕ ಉಪಕ್ರಮ:**

2026ರ ಅಭಿಯಾನದ ಅತ್ಯಂತ ಪ್ರಮುಖ ಜಾಗತಿಕ ಆಕರ್ಷಣೆಯೆಂದರೆ 'ಸೂರ್ಯಪಥ್ ತಿರಂಗಾ'.

ಇದು ಉದಯಿಸುವ ಸೂರ್ಯನ ಹಾದಿಯನ್ನು ಅನುಸರಿಸುವ ಒಂದು ಸಾಂಕೇತಿಕ ಜಾಗತಿಕ ತಿರಂಗಾ ರಿಲೇ (Global Tiranga Relay) ಆಗಿದೆ.
ಜಗತ್ತಿನ ಪೂರ್ವ ತುದಿಯಲ್ಲಿರುವ ಭಾರತೀಯ ರಾಯಭಾರ ಕಚೇರಿಯಿಂದ (Indian Mission) ಪ್ರಾರಂಭವಾಗಿ, ಸೂರ್ಯನ ಬೆಳಕು ಸಾಗುವಂತೆ ಪೂರ್ವದಿಂದ ಪಶ್ಚಿಮಕ್ಕೆ ಜಗತ್ತಿನಾದ್ಯಂತ 54ಕ್ಕೂ ಹೆಚ್ಚು ದೇಶಗಳಲ್ಲಿರುವ ಭಾರತೀಯ ರಾಯಭಾರ ಕಚೇರಿಗಳಲ್ಲಿ ರಾಷ್ಟ್ರಧ್ವಜವನ್ನು ಅನುಕ್ರಮವಾಗಿ ಹಾರಿಸಲಾಗುತ್ತದೆ.
**3. ಡಿಜಿಟಲ್ ನಿರೂಪಣೆ ಮತ್ತು 'ಸೆಲ್ಫಿ ವಿತ್ ತಿರಂಗಾ:** ಸಾರ್ವಜನಿಕರು ರಾಷ್ಟ್ರಧ್ವಜದೊಂದಿಗೆ ಸೆಲ್ಫಿ ತೆಗೆದುಕೊಂಡು ಹರ್ ಘರ್ ತಿರಂಗಾ ಅಧಿಕೃತ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದು. ಈ ಬಾರಿಯ ಸೆಲ್ಫಿ ವೈಶಿಷ್ಟ್ಯದಲ್ಲಿ 'ವಂದೇ ಮಾತರಂ' ಸಾಲುಗಳು ಮತ್ತು ರಾಗವನ್ನು ಸಂಯೋಜಿಸಲಾಗಿದೆ.
**4. ವಿಭಜನೆಯ ಭೀಕರತೆಯ ಸ್ಮರಣೆ ದಿನ (Partition Horrors Remembrance Day):**
ದೇಶದ ವಿಭಜನೆಯ ಸಮಯದಲ್ಲಿ ಅನುಭವಿಸಿದ ನೋವು ಮತ್ತು ಸವಾಲುಗಳನ್ನು ಸ್ಮರಿಸಲು ಆಗಸ್ಟ್ 14 ರಂದು ದೇಶಾದ್ಯಂತ 'ವಿಭಜನೆಯ ಭೀಕರತೆಯ ಸ್ಮರಣೆ ದಿನ'ವನ್ನು ಆಚರಿಸಲಾಗುತ್ತದೆ. ನವದೆಹಲಿ, ಕೋಲ್ಕತ್ತಾ ಮತ್ತು ಅಮೃತಸರಗಳಲ್ಲಿ ಮುಖ್ಯ ಕಾರ್ಯಕ್ರಮಗಳು, ಮೌನ ಮೆರವಣಿಗೆಗಳು ಹಾಗೂ ಪ್ರದರ್ಶನಗಳು ನಡೆಯಲಿವೆ.

## ಮೈಕ್ರೋಸಾಫ್ಟ್‌ನಿಂದ ಹೈದರಾಬಾದ್‌ನಲ್ಲಿ ಭಾರತದ 4ನೇ ಕ್ಲೌಡ್ ರೀಜನ್ ಚಾಲನೆ




➤ ಜಾಗತಿಕ ತಂತ್ರಜ್ಞಾನ ದೈತ್ಯ ಮೈಕ್ರೋಸಾಫ್ಟ್ (Microsoft), ಭಾರತದಲ್ಲಿ ತನ್ನ 4ನೇ ಕ್ಲೌಡ್ ರೀಜನ್ ಅನ್ನು ತೆಲಂಗಾಣದ ಹೈದರಾಬಾದ್‌ನಲ್ಲಿ ಅಧಿಕೃತವಾಗಿ ಆರಂಭಿಸಿದೆ. ಈ ಹೊಸ ಕೇಂದ್ರಕ್ಕೆ 'ಇಂಡಿಯಾ ಸೌತ್ ಸೆಂಟ್ರಲ್' (India South Central) ಎಂದು ಹೆಸರಿಸಲಾಗಿದೆ. ಭಾರತದಲ್ಲಿ ಹೆಚ್ಚುತ್ತಿರುವ ಕೃತಕ ಬುದ್ಧಿಮತ್ತೆ (Artificial Intelligence - AI) ಮತ್ತು ಕ್ಲೌಡ್ ಸೇವೆಗಳ ಬೇಡಿಕೆಯನ್ನು ಪೂರೈಸಲು ಹಾಗೂ ಡೇಟಾ ಸುರಕ್ಷತೆಯನ್ನು ಹೆಚ್ಚಿಸಲು ಈ ಯೋಜನೆಯನ್ನು ರೂಪಿಸಲಾಗಿದೆ.
**➤ ಮೈಕ್ರೋಸಾಫ್ಟ್ ಕ್ಲೌಡ್ ರೀಜನ್‌ನ ಪ್ರಮುಖ ಲಕ್ಷಣಗಳು:**
**ಭಾರತದ 4 ನೇ ಕ್ಲೌಡ್ ರೀಜನ್:** ಮೈಕ್ರೋಸಾಫ್ಟ್ ಈಗಾಗಲೇ ಮುಂಬೈ, ಪುಣೆ ಮತ್ತು ಚೆನ್ನೈನಲ್ಲಿ ಕ್ಲೌಡ್ ರೀಜನ್‌ಗಳನ್ನು ಹೊಂದಿದೆ. ಹೈದರಾಬಾದ್ ಕೇಂದ್ರ ಸೇರ್ಪಡೆಯೊಂದಿಗೆ, ಭಾರತದಲ್ಲಿ ಅತ್ಯಂತ ದೊಡ್ಡ 'ಹೈಪರ್‌ಸ್ಕೇಲ್ ಕ್ಲೌಡ್' (Hyperscale Cloud) ಮೂಲಸೌಕರ್ಯ ಹೊಂದಿದ ಜಾಗತಿಕ ಸಂಸ್ಥೆಯಾಗಿ ಮೈಕ್ರೋಸಾಫ್ಟ್ ಹೊರಹೊಮ್ಮಿದೆ.
**ಪರಿಸರ ಸ್ನೇಹಿ ತಂತ್ರಜ್ಞಾನ (Zero Water Cooling):** ಹೈದರಾಬಾದ್‌ನ ಈ ಡೇಟಾಸಂಟರ್‌ನಲ್ಲಿ ತಂಪಾಗಿಸುವಿಕೆಗಾಗಿ (Cooling) ಯಾವುದೇ ನೀರನ್ನು ಬಳಸಲಾಗುವುದಿಲ್ಲ. ಬದಲಾಗಿ Air-cooled chillers ಬಳಸಲಾಗುತ್ತಿದ್ದು, ಇದು ಮೈಕ್ರೋಸಾಫ್ಟ್‌ನ 2030ರ ಜಾಗತಿಕ 'Water-Positive' ಗುರಿಗೆ ಪೂರಕವಾಗಿದೆ.
ಮೂರು ಲಭ್ಯತಾ ವಲಯಗಳು (Availability Zones): ಈ ಕೇಂದ್ರವು 3 ಭೌತಿಕ ಲಭ್ಯತಾ ವಲಯಗಳನ್ನು ಹೊಂದಿದ್ದು, ಯಾವುದೇ ತಾಂತ್ರಿಕ ಅಡಚಣೆ ಉಂಟಾದರೂ ಡೇಟಾ ಸುರಕ್ಷತೆ ಮತ್ತು ಅಡೆತಡೆ ಇಲ್ಲದ ಸೇವೆ (Data Resilience & Continuity) ಖಾತರಿಯಾಗಲಿದೆ.
**ಹೂಡಿಕೆ ಮತ್ತು ಗ್ರಾಹಕರು:** ಮೈಕ್ರೋಸಾಫ್ಟ್ ಭಾರತದಲ್ಲಿ ಕ್ಲೌಡ್ ಮತ್ತು AI ಅಭಿವೃದ್ಧಿಗಾಗಿ ಘೋಷಿಸಿರುವ ಒಟ್ಟು $20.5 ಬಿಲಿಯನ್ (ಸುಮಾರು ₹1.7 ಲಕ್ಷ ಕೋಟಿ) ಹೂಡಿಕೆಯ ಭಾಗವಾಗಿ ಈ ಕೇಂದ್ರ ನಿರ್ಮಾಣಗೊಂಡಿದೆ. ಅದಾನಿ ಗ್ರೂಪ್, ಹೆಚ್‌ಡಿಎಫ್‌ಸಿ ಬ್ಯಾಂಕ್ (HDFC Bank), ಬಜಾಜ್ ಫಿನ್‌ಸರ್ವ್ ಮುಂತಾದ ಪ್ರಮುಖ ಸಂಸ್ಥೆಗಳು ಈಗಾಗಲೇ ಇದರ ಸೇವೆ ಪಡೆದುಕೊಳ್ಳುತ್ತಿವೆ.

## ನೀತಿ ಆಯೋಗದ ಶಾಲಾ ಶಿಕ್ಷಣ ಸೂಚ್ಯಂಕ 2026: ಪ್ರಥಮ ಸ್ಥಾನಕ್ಕೇರಿದ ಪಂಜಾಬ್!




➤ ಭಾರತ ಸರ್ಕಾರದ ನೀತಿ ಆಯೋಗ (NITI Aayog) ಬಿಡುಗಡೆ ಮಾಡಿರುವ 'ಶಾಲಾ ಶಿಕ್ಷಣ ಗುಣಮಟ್ಟ ಸೂಚ್ಯಂಕ (SEQI) 2026' ಪ್ರಕಟಣೆ ಭಾರತದ ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಸಂಚಲನ ಮೂಡಿಸಿದೆ. ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಸುಧಾರಣೆಗಳನ್ನು ತಂದಿರುವ ಪಂಜಾಬ್ ರಾಜ್ಯವು ಕೇರಳ ಸೇರಿದಂತೆ ಇತರ ಪ್ರಮುಖ ರಾಜ್ಯಗಳನ್ನು ಹಿಂದಿಕ್ಕಿ ದೇಶದಲ್ಲೇ ಪ್ರಥಮ ಸ್ಥಾನ ಪಡೆದುಕೊಂಡಿದೆ. ಪಂಜಾಬ್‌ನ ಶಿಕ್ಷಣ ಸಚಿವ ಹರ್ಜೋತ್ ಸಿಂಗ್ ಬೈನ್ಸ್ (Harjot Singh Bains) ಅವರು ಪಂಜಾಬ್ ವಿಧಾನಸಭೆಯಲ್ಲಿ ಸರ್ಕಾರ ಕೈಗೊಂಡ ಶಿಕ್ಷಣ ಸುಧಾರಣೆಗಳು ಮತ್ತು ಸಾಧನೆಗಳ ವರದಿಯನ್ನು ಮಂಡಿಸುವಾಗ ಈ ವಿಷಯವನ್ನು ಅಧಿಕೃತವಾಗಿ ಹಂಚಿಕೊಂಡಿದ್ದಾರೆ.
**➤ ಅಂಕಗಳ ಅದ್ಭುತ ಜಿಗಿತ: 27ನೇ ಸ್ಥಾನದಿಂದ 1ನೇ ಸ್ಥಾನಕ್ಕೆ:** 2020ರಲ್ಲಿ ಶಾಲಾ ಶಿಕ್ಷಣ ಸೂಚ್ಯಂಕದಲ್ಲಿ 27ನೇ ಸ್ಥಾನದಲ್ಲಿದ್ದ ಪಂಜಾಬ್, ಕೇವಲ ಕೆಲವೇ ವರ್ಷಗಳಲ್ಲಿ ಮೂಲಸೌಕರ್ಯ, ಕಲಿಕಾ ಮಟ್ಟ ಮತ್ತು ಆಡಳಿತಾತ್ಮಕ ಸುಧಾರಣೆಗಳಿಂದಾಗಿ 1ನೇ ಸ್ಥಾನಕ್ಕೇರಿರುವುದು ಐತಿಹಾಸಿಕ ಸಾಧನೆಯಾಗಿದೆ.
3ನೇ ತರಗತಿಯ ಭಾಷಾ ಕಲಿಕಾ ಪ್ರಾವೀಣ್ಯತೆ: 82%
3ನೇ ತರಗತಿಯ ಗಣಿತ ಕಲಿಕಾ ಪ್ರಾವೀಣ್ಯತೆ: 78%
**➤ ಪಂಜಾಬ್ ಜಾರಿಗೆ ತಂದ ಪ್ರಮುಖ ಶೈಕ್ಷಣಿಕ ಸುಧಾರಣೆಗಳು:**
**1. ಶಾಲಾ ಮೂಲಸೌಕರ್ಯ ಅಭಿವೃದ್ಧಿ (Infrastructure Upgrade)**
ಜುಲೈ 2022 ರ ಸಮೀಕ್ಷೆಯ ಪ್ರಕಾರ, ರಾಜ್ಯದ 8,000ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಿಗೆ ಕಾಂಪೌಂಡ್ ಗೋಡೆಗಳಿರಲಿಲ್ಲ, 3,200 ಶಾಲೆಗಳಲ್ಲಿ ಶೌಚಾಲಯಗಳಿರಲಿಲ್ಲ ಹಾಗೂ ಸುಮಾರು 4 ಲಕ್ಷ ವಿದ್ಯಾರ್ಥಿಗಳು ನೆಲದ ಮೇಲೆಯೇ ಕುಳಿತು ಕಲಿಯುತ್ತಿದ್ದರು.
ಪ್ರಸ್ತುತ ರಾಜ್ಯ ಸರ್ಕಾರವು 19,125 ಶಾಲೆಗಳನ್ನು ₹2,638 ಕೋಟಿ ವೆಚ್ಚದಲ್ಲಿ ನವೀಕರಿಸಿದೆ.
ಜಾಗತಿಕ ಮಟ್ಟದ ಸೌಲಭ್ಯಕ್ಕಾಗಿ ವಿಶ್ವ ಬ್ಯಾಂಕ್‌ನಿಂದ ₹1,000 ಕೋಟಿ ಹೆಚ್ಚುವರಿ ಅನುದಾನ ಅನುಮೋದನೆಯಾಗಿದೆ.
ರಾಜ್ಯದ 80% ಸರ್ಕಾರಿ ಶಾಲೆಗಳನ್ನು ಸ್ಮಾರ್ಟ್ ತರಗತಿಗಳನ್ನಾಗಿ (Smart Classrooms) ಪರಿವರ್ತಿಸಲಾಗಿದೆ.
**2. ಮಿಷನ್ ಸಮರ್ಥ್ (Mission Samarth):**
ಈ ಯೋಜನೆಯಡಿಯಲ್ಲಿ ಮಕ್ಕಳನ್ನು ತರಗತಿಯ ಆಧಾರದ ಮೇಲೆ ವಿಂಗಡಿಸದೆ, ಅವರ ಕಲಿಕಾ ಸಾಮರ್ಥ್ಯದ (Learning Ability) ಆಧಾರದ ಮೇಲೆ ಗುಂಪುಗಳಾಗಿ ವಿಂಗಡಿಸಿ ಮೂಲಭೂತ ಓದು ಮತ್ತು ಗಣಿತ ಕಲಿಕೆಯನ್ನು ಬಲಪಡಿಸಲಾಗುತ್ತಿದೆ.
ಈ ಯೋಜನೆಗೆ ಸುಮಾರು 12 ಲಕ್ಷ ವಿದ್ಯಾರ್ಥಿಗಳು ಹಾಗೂ 70,000 ಶಿಕ್ಷಕರು ಒಳಪಟ್ಟಿದ್ದಾರೆ.
**3. ಕೃತಕ ಬುದ್ಧಿಮತ್ತೆ (AI) ಪಠ್ಯಕ್ರಮ:** ಪಂಜಾಬ್ ದೇಶದಲ್ಲೇ ಪ್ರಥಮ ರಾಜ್ಯ: 1ನೇ ತರಗತಿಯಿಂದ 12ನೇ ತರಗತಿಯವರೆಗೆ ಕೃತಕ ಬುದ್ಧಿಮತ್ತೆಯನ್ನು (Artificial Intelligence - AI) ಒಂದು ಪ್ರಮುಖ ಕೋರ್ಸ್/ವಿಷಯವಾಗಿ ಸೇರ್ಪಡೆಗೊಳಿಸಿದ ಭಾರತದ ಮೊದಲ ರಾಜ್ಯ ಪಂಜಾಬ್.
**4. ಸಮಯಕ್ಕೆ ಸರಿಯಾಗಿ ಪಠ್ಯಪುಸ್ತಕ ವಿತರಣೆ:** ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮುನ್ನವೇ ಅಂದರೆ ಫೆಬ್ರವರಿ 15ರ ಒಳಗಾಗಿ

ಜಿಲ್ಲಾ ಕೇಂದ್ರಗಳಿಗೆ ಪಠ್ಯಪುಸ್ತಕ ತಲುಪಿಸಿ, ಮಾರ್ಚ್ 31ರ ವೇಳೆಗೆ ಎಲ್ಲಾ ಶಾಲೆಗಳಿಗೆ ಸಂಪೂರ್ಣವಾಗಿ ವಿತರಿಸುವ ವ್ಯವಸ್ಥೆ ಜಾರಿಗೆ ತರಲಾಗಿದೆ.

## ಭಾರತೀಯ ರೈಲ್ವೆ: ಕಂಟೈನರ್ ರೈಲು ಕಾರ್ಯಾಚರಣೆಗಾರರಿಗೆ 'ಏಕರೂಪದ ಅಖಿಲ ಭಾರತ ಲೈಸೆನ್ಸ್' ವ್ಯವಸ್ಥೆ ಜಾರಿ



➤ ಭಾರತೀಯ ರೈಲ್ವೆಯು ಕಂಟೈನರ್ ರೈಲು ಕಾರ್ಯಾಚರಣೆಗಾರರಿಗೆ (Container Train Operators - CTOs) ದೇಶದಾದ್ಯಂತ ಸರಕು ಸಾಗಣೆ ಮಾಡಲು 'ಒಂದೇ ಅಖಿಲ ಭಾರತ ಲೈಸೆನ್ಸ್' (Single All-India Licence) ನೀಡುವ ಐತಿಹಾಸಿಕ ಸುಧಾರಣೆಯನ್ನು ಜಾರಿಗೆ ತಂದಿದೆ. ಇದಕ್ಕೂ ಮೊದಲು ಚಾಲ್ತಿಯಲ್ಲಿದ್ದ ಮಾರ್ಗ-ಆಧಾರಿತ (Route-based) ವರ್ಗೀಕರಣ ಮತ್ತು ವಿಭಿನ್ನ ಶುಲ್ಕ ಪದ್ಧತಿಯನ್ನು ರದ್ದುಗೊಳಿಸಲಾಗಿದ್ದು, ಈ ನೂತನ ನೀತಿಯನ್ನು ಮಾಡೆಲ್ ಕನ್ಸೆಷನ್ ಒಪ್ಪಂದದ (Model Concession Agreement - MCA) ತಿದ್ದುಪಡಿಗಳ ಮೂಲಕ ಅಧಿಸೂಚಿಸಲಾಗುತ್ತಿದೆ.

**➤ ನೂತನ ನೀತಿಯ ಪ್ರಮುಖ ಮುಖ್ಯಾಂಶಗಳು:**

**1. ಏಕರೂಪದ ಅಖಿಲ ಭಾರತ ಲೈಸೆನ್ಸ್:**

ಈ ಹಿಂದೆ ಇದ್ದ 4 ವಿಭಿನ್ನ ಲೈಸೆನ್ಸ್ ವರ್ಗಗಳನ್ನು ರದ್ದುಗೊಳಿಸಿ, ಇಡೀ ಭಾರತೀಯ ರೈಲ್ವೆ ಜಾಲದಲ್ಲಿ ಕಂಟೈನರ್ ರೈಲುಗಳನ್ನು ಓಡಿಸಲು ಒಂದೇ ಲೈಸೆನ್ಸ್ ನೀಡಲಾಗುತ್ತದೆ.

ಇದರಿಂದಾಗಿ ಕಾರ್ಯಾಚರಣೆಗಾರರಿಗೆ ಯಾವುದೇ ಮಾರ್ಗ, ಮೂಲ ಅಥವಾ ತಲುಪುವ ಸ್ಥಳದ (Origin/Destination) ನಿರ್ಬಂಧಗಳಿರುವುದಿಲ್ಲ.

**2. ನೋಂದಣಿ ಶುಲ್ಕದಲ್ಲಿ ಬದಲಾವಣೆ:**

ಹೊಸದಾಗಿ ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ಆಪರೇಟರ್‌ಗೆ ₹25 ಕೋಟಿ ಏಕರೂಪದ (Uniform) ಹಿಂತಿರುಗಿಸಲಾಗದ ನೋಂದಣಿ ಶುಲ್ಕ ನಿಗದಿಪಡಿಸಲಾಗಿದೆ.

ಹಿಂದೆ ಮಾರ್ಗಗಳ ಆಧಾರದ ಮೇಲೆ ₹10 ಕೋಟಿಯಿಂದ ₹50 ಕೋಟಿಯವರೆಗೆ ವಿಭಿನ್ನ ಶುಲ್ಕವನ್ನು ವಿಧಿಸಲಾಗುತ್ತಿತ್ತು.

**3. ಅವಧಿ ಮತ್ತು ನವೀಕರಣ:**

ಲೈಸೆನ್ಸ್ ಆರಂಭಿಕ ಅವಧಿ 20 ವರ್ಷಗಳು.

ತೃಪ್ತಿಕರ ಸೇವೆಯ ಆಧಾರದ ಮೇಲೆ, ಇನ್ನುಳಿದ 20 ವರ್ಷಗಳ ಹೆಚ್ಚುವರಿ ಅವಧಿಗೆ ಲೈಸೆನ್ಸ್ ವಿಸ್ತರಿಸಬಹುದು.

ವಿಶೇಷತೆ: ಹೊಸ ವಿಸ್ತರಣೆ ಅಥವಾ ನವೀಕರಣಕ್ಕೆ ಯಾವುದೇ ಹೆಚ್ಚುವರಿ ಶುಲ್ಕವನ್ನು (Zero Extension Fee) ವಿಧಿಸುವುದಿಲ್ಲ.

**4. ಹಾಲಿ ಇರುವ ಆಪರೇಟರ್‌ಗಳಿಗೆ ಹೊಸ ನಿಯಮಗಳು:**

Category I ಆಪರೇಟರ್‌ಗಳು: ತಮ್ಮ ಒಪ್ಪಂದದ ಅವಧಿ ಮುಗಿಯುವವರೆಗೆ ಹಳೆಯ ಲೈಸೆನ್ಸ್‌ನಲ್ಲೇ ಮುಂದುವರಿಯಬಹುದು. ನವೀಕರಣದ ಸಮಯದಲ್ಲಿ ಉಚಿತವಾಗಿ ಹೊಸ ವ್ಯವಸ್ಥೆಗೆ ಬದಲಾಗಬಹುದು.

Category II, III ಮತ್ತು IV ಆಪರೇಟರ್‌ಗಳು: ಹೊಸ ಲೈಸೆನ್ಸ್‌ಗೆ ಬದಲಾಗಲು ಅಥವಾ ನವೀಕರಿಸಲು ಉಳಿಕೆ ಮೊತ್ತವಾದ ₹15 ಕೋಟಿ (ಹೊಸ ಶುಲ್ಕ ₹25 ಕೋಟಿ – ಹಿಂದೆ ಪಾವತಿಸಿದ ₹10 ಕೋಟಿ) ಪಾವತಿಸಬೇಕಾಗುತ್ತದೆ.

**➤ ಸುಧಾರಣೆಯ ಪ್ರಮುಖ ಉದ್ದೇಶಗಳು ಮತ್ತು ಪ್ರಯೋಜನಗಳು:**

ವ್ಯಾಪಾರ ಸುಲಭಗೊಳಿಸುವಿಕೆ (Ease of Doing Business): ಸಿಂಗಲ್-ವಿಂಡೋ ಮಾದರಿಯ ಸರಳ ಲೈಸೆನ್ಸಿಂಗ್ ನಿಯಮಗಳಿಂದ ನಿಯಂತ್ರಣದ ಹೊರೆ ಕಡಿಮೆಯಾಗುತ್ತದೆ.

ಖಾಸಗಿ ಹೂಡಿಕೆ ಪ್ರೋತ್ಸಾಹ: ಹೆಚ್ಚು ಖಾಸಗಿ ಕಂಪನಿಗಳು ಸರಕು ಸಾಗಣೆ ವಲಯಕ್ಕೆ ಕಾಲಿಡಲು ಪ್ರೋತ್ಸಾಹ ಸಿಗುತ್ತದೆ.

ಲಾಜಿಸ್ಟಿಕ್ಸ್ ವೆಚ್ಚ ಕಡಿತ: ಸರಕು ಸಾಗಣೆಯ ವೆಚ್ಚ ಕಡಿಮೆಯಾಗಿ, ವಿಶೇಷವಾಗಿ ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ (MSME) ಹೆಚ್ಚಿನ ಅನುಕೂಲವಾಗಲಿದೆ.

ಪರಿಸರ ಸ್ನೇಹಿ ಸಾರಿಗೆ: ರಸ್ತೆ ಮಾರ್ಗದ ಮೂಲಕ ನಡೆಯುವ ಕಂಟೈನರ್ ಸಾಗಣೆಯು ರೈಲು ಮಾರ್ಗಕ್ಕೆ ವರ್ಗಾವಣೆಯಾಗುವುದರಿಂದ (Modal Shift), ರಸ್ತೆಗಳಲ್ಲಿ ಸಂಚಾರ ದಟ್ಟಣೆ ಹಾಗೂ ಕಾರ್ಬನ್ ಹೊರಸೂಸುವಿಕೆ ಕಡಿಮೆಯಾಗುತ್ತದೆ.

## ಸಿಲ್ಕ್ಯಾರ ಸುರಂಗ ರಕ್ಷಣೆ: 12 ರ್ಯಾಟ್-ಮೈನರ್‌ಗಳಿಗೆ ಸರ್ವೋತ್ತಮ ಜೀವ ರಕ್ಷಾ ಪದಕ ಪ್ರದಾನ



➤ ಉತ್ತರಾಖಂಡದ ಸಿಲ್ಕ್ಯಾರ (Silkyara) ಸುರಂಗ ಕುಸಿತದ ವೇಳೆ ಧೈರ್ಯ ಮತ್ತು ಸಾಹಸ ಮೆರೆದು 41 ಕಾರ್ಮಿಕರ ಜೀವ ಉಳಿಸಿದ 12 ರ್ಯಾಟ್-ಮೈನರ್‌ಗಳಿಗೆ (Rat Miners) ಕೇಂದ್ರ ಸರ್ಕಾರವು ಅತ್ಯುನ್ನತ ನಾಗರಿಕ ಸಾಹಸ ಪ್ರಶಸ್ತಿಯಾದ 'ಸರ್ವೋತ್ತಮ ಜೀವ ರಕ್ಷಾ ಪದಕ' (Sarvottam Jeevan Raksha Padak) ನೀಡಿ ಗೌರವಿಸಿದೆ. ನವದೆಹಲಿಯಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿಟಿನ್ ಗಡ್ಕರಿ ಅವರು ಈ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.

**➤ ಸಿಲ್ಕ್ಯಾರ ಸುರಂಗ ರಕ್ಷಣಾ ಕಾರ್ಯಾಚರಣೆ:** ನವೆಂಬರ್ 2023 ರಲ್ಲಿ ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯ ಸಿಲ್ಕ್ಯಾರ ಬಳಿ ನಿರ್ಮಾಣ ಹಂತದಲ್ಲಿದ್ದ 4.5 ಕಿ.ಮೀ ಉದ್ದದ ಸುರಂಗ ಕುಸಿದು 41 ಕಾರ್ಮಿಕರು ಸಿಲುಕಿಕೊಂಡಿದ್ದರು. ಬೃಹತ್ ಯಂತ್ರಗಳು (Auger Machines) ವಿಫಲವಾದಾಗ, ಕೊನೆಯ 12 ಮೀಟರ್‌ಗಳಷ್ಟು ಕಲ್ಲು, ಮಣ್ಣು ಮತ್ತು ಕಾಂಕ್ರೀಟ್ ಪ್ರಪಾತವನ್ನು ತೆರವುಗೊಳಿಸಲು ಈ 12 ಜನರ ರ್ಯಾಟ್-ಮೈನರ್ಸ್ ತಂಡವನ್ನು ನಿಯೋಜಿಸಲಾಯಿತು. ಕೇವಲ ಸಲಿಕೆ, ಸುತ್ತಿಗೆ ಹಾಗೂ ಡ್ರಿಲ್ಲಿಂಗ್ ಉಪಕರಣಗಳ ಸಹಾಯದಿಂದ 24 ಗಂಟೆಗಳ ಕಾಲ ಸತತವಾಗಿ ಶ್ರಮಿಸಿ 41 ಜನರ ಜೀವ ರಕ್ಷಿಸಲಾಯಿತು.

**➤ ಜೀವ ರಕ್ಷಾ ಪದಕ ಸರಣಿ ಪ್ರಶಸ್ತಿಗಳು:** ಜಲಪಾತ/ನೀರಿನಲ್ಲಿ ಮುಳುಗುವುದು, ಅಗ್ನಿ ಅವಘಡ, ವಿದ್ಯುತ್ ಆಘಾತ, ಗಣಿ ದುರಂತ ಹಾಗೂ ನೈಸರ್ಗಿಕ ವಿಕೋಪಗಳ ಸಮಯದಲ್ಲಿ ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಇತರರ ಜೀವ ಉಳಿಸಿದ ವ್ಯಕ್ತಿಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

**➤ ಮೂರು ಶ್ರೇಣಿಗಳು (Categories):**

ಸರ್ವೋತ್ತಮ ಜೀವ ರಕ್ಷಾ ಪದಕ: ಅತ್ಯಂತ ಅಪಾಯಕಾರಿ ಸನ್ನಿವೇಶದಲ್ಲಿ ಜೀವ ರಕ್ಷಿಸಿದ್ದಕ್ಕಾಗಿ (ಅತ್ಯುನ್ನತ): ₹2.00 ಲಕ್ಷ

ಉತ್ತಮ ಜೀವ ರಕ್ಷಾ ಪದಕ: ಅಪಾಯಕಾರಿ ಸನ್ನಿವೇಶದಲ್ಲಿ ಸಮಯಪ್ರಜ್ಞೆ ಮೆರೆದು ಜೀವ ರಕ್ಷಿಸಿದ್ದಕ್ಕಾಗಿ: ₹1.50 ಲಕ್ಷ

ಜೀವ ರಕ್ಷಾ ಪದಕ: ತೀವ್ರ ಗಾಯಗಳಾಗುವ ಅಪಾಯವಿದ್ದರೂ ಜೀವ ರಕ್ಷಿಸಿದ್ದಕ್ಕಾಗಿ: ₹1.00 ಲಕ್ಷ

**➤ ಅರ್ಹತೆ ಮತ್ತು ಆಯ್ಕೆ ಪ್ರಕ್ರಿಯೆ:**

ಯಾವುದೇ ಕ್ಷೇತ್ರ ಅಥವಾ ಹಿನ್ನೆಲೆಯ ವ್ಯಕ್ತಿಗೆ ಈ ಪ್ರಶಸ್ತಿ ನೀಡಬಹುದು.

ಸಶಸ್ತ್ರ ಪಡೆಗಳು, ಪೊಲೀಸ್ ಮತ್ತು ಅಗ್ನಿಶಾಮಕ ಸಿಬ್ಬಂದಿಗೆ ನೀಡಬೇಕಾದರೆ, ಆ ಕಾರ್ಯವು ಅವರ ಸಾಮಾನ್ಯ ಕರ್ತವ್ಯದ ಮಿತಿಯನ್ನು ಮೀರಿದ ಸಾಹಸ (beyond the call of duty) ಆಗಿರಬೇಕು.

ಪ್ರಶಸ್ತಿಗಳ ನಾಮನಿರ್ದೇಶನಗಳನ್ನು ಕೇಂದ್ರ ಸಚಿವಾಲಯಗಳು, ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಶಿಫಾರಸು ಮಾಡುತ್ತವೆ.

ಪ್ರಧಾನಮಂತ್ರಿ ಹಾಗೂ ಭಾರತದ ರಾಷ್ಟ್ರಪತಿಗಳು ಈ ಪ್ರಶಸ್ತಿಗಳನ್ನು ಅಂತಿಮವಾಗಿ ಅನುಮೋದಿಸುತ್ತಾರೆ.

## ಆರ್ ಪ್ರಜ್ಞಾನಂದಗೆ 'ಸೆಂಟ್ ಲೂಯಿಸ್ ರ್ಯಾಪಿಡ್ & ಬ್ಲಿಟ್ಜ್ 2026' ಕಿರೀಟ



➢ ಭಾರತದ ಯುವ ಚೆಸ್ ತಾರೆ, ಗ್ರ್ಯಾಂಡ್‌ಮಾಸ್ಟರ್ ಆರ್. ರಮೇಶ್‌ಬಾಬು ಪ್ರಜ್ಞಾನಂದ ಅಮೆರಿಕದ ಸೆಂಟ್ ಲೂಯಿಸ್‌ನಲ್ಲಿ ನಡೆದ ಗ್ರ್ಯಾಂಡ್ ಚೆಸ್ ಟೂರ್ (GCT) - ಸೆಂಟ್ ಲೂಯಿಸ್ ರ್ಯಾಪಿಡ್ & ಬ್ಲಿಟ್ಜ್ 2026 (Saint Louis Rapid & Blitz 2026) ಚಾಂಪಿಯನ್‌ಶಿಪ್ ಶೀರ್ಷಿಕೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಪಂದ್ಯಾವಳಿಯುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿದ 20 ವರ್ಷದ ಪ್ರಜ್ಞಾನಂದ, ಪೆನಲ್ಟಿಮೇಟ್ (ಕೊನೆಯ ಮುಂಚಿನ) ಸುತ್ತಿನಲ್ಲಿ ಉಜ್ಬೆಕಿಸ್ತಾನ್‌ನ ಗ್ರ್ಯಾಂಡ್‌ಮಾಸ್ಟರ್ ಜವೋಖಿರ್ ಸಿಂಡಾರೋವ್ (Javokhir Sindarov) ವಿರುದ್ಧ ಪಂದ್ಯವನ್ನು 'ಡ್ರಾ' ಮಾಡಿಕೊಳ್ಳುವ ಮೂಲಕ 1.5 ಅಂಕಗಳ ಮುನ್ನಡೆಯೊಂದಿಗೆ ಪ್ರಶಸ್ತಿ ಎತ್ತಿಹಿಡಿದರು.

**➢ ಸಾಧನೆಯ ಸಮಗ್ರ ವಿವರಣೆ:**

**ಪಂದ್ಯಾವಳಿಯ ಶೈಲಿ:** ಈ ಪಂದ್ಯಾವಳಿಯಲ್ಲಿ ಒಟ್ಟು 10 ಗಣ್ಯ ಗ್ರ್ಯಾಂಡ್‌ಮಾಸ್ಟರ್‌ಗಳು ಭಾಗವಹಿಸಿದ್ದರು. 5 ದಿನಗಳ ಕಾಲ ನಡೆದ ಈ ಸ್ಪರ್ಧೆಯಲ್ಲಿ 9 ರ್ಯಾಪಿಡ್ ಮತ್ತು 18 ಬ್ಲಿಟ್ಜ್ ಸುತ್ತುಗಳು ಸೇರಿದಂತೆ ಒಟ್ಟು 135 ಪಂದ್ಯಗಳು ನಡೆದವು.

**ಆರಂಭಿಕ ಮುನ್ನಡೆ:** ಪ್ರಜ್ಞಾನಂದ ಅವರು ಎರಡನೇ ಸುತ್ತಿನಲ್ಲೇ ಮುನ್ನಡೆ ಸಾಧಿಸಿ, ರ್ಯಾಪಿಡ್ ವಿಭಾಗದಲ್ಲಿ 12/18 ಅಂಕ ಗಳಿಸುವ ಮೂಲಕ ಕೊನೆಯವರೆಗೂ ತಮ್ಮ ಸ್ಥಾನವನ್ನು ಕಾಯ್ದುಕೊಂಡರು.

**ಡಬಲ್ ಸಾಧನೆ:** ಪ್ರಜ್ಞಾನಂದ ಅವರು ಈ ಪಂದ್ಯಾವಳಿಯ ರ್ಯಾಪಿಡ್ ಮತ್ತು ಬ್ಲಿಟ್ಜ್ ಎರಡೂ ವಿಭಾಗಗಳಲ್ಲೂ ಅಗ್ರಸ್ಥಾನ ಗಳಿಸಿದ ಅಪರೂಪದ ಸಾಧನೆ ಮಾಡಿದರು.

**ಇತ್ತೀಚಿನ ಸರಣಿ ಸಾಧನೆಗಳು:** ಪ್ರಜ್ಞಾನಂದ ಅವರು ಜೂನ್ 2026 ರಲ್ಲಿ ನಾರ್ವೆಯ ಓಸ್ಲೋದಲ್ಲಿ ನಡೆದ ನಾರ್ವೇ ಚೆಸ್ 2026 (Norway Chess 2026) ಚಾಂಪಿಯನ್‌ಶಿಪ್ ಅನ್ನು ಗೆದ್ದು ಐತಿಹಾಸಿಕ ಸಾಧನೆ ಮಾಡಿದ್ದರು.

## ಚೀನಾ ಮೇಲಿನ ಆಮದು ಅವಲಂಬನೆ ತಗ್ಗಿಸಲು 'ಪಾಲಿಸಿಲಿಕಾನ್' ತಯಾರಿಕೆಗೆ ಹೊಸ ಪಿಎಲ್‌ಐ (PLI) ಯೋಜನೆ'



➢ ಪ್ರಸ್ತುತ ಭಾರತವು ಸೌರ ಮಾಡ್ಯೂಲ್ (Solar Modules) ಮತ್ತು ಸೆಲ್ (Solar Cells) ಜೋಡಣೆಯಲ್ಲಿ ಗಮನಾರ್ಹ ಬೆಳವಣಿಗೆ ಕಂಡಿದ್ದರೂ, ಈ ಪ್ರಕ್ರಿಯೆಗೆ ಬೇಕಾಗುವ ಪ್ರಾಥಮಿಕ ಕಚ್ಚಾವಸ್ತುವಾದ ಪಾಲಿಸಿಲಿಕಾನ್ನಾಗಿ ಚೀನಾವನ್ನೇ ಸಂಪೂರ್ಣವಾಗಿ ಆಶ್ರಯಿಸಿದೆ. ಆದ್ದರಿಂದ, ದೇಶೀಯವಾಗಿ ಅಪ್‌ಸ್ಟ್ರೀಮ್ (Upstream) ಅಂದರೆ ಮೂಲ ಮಟ್ಟದ ಕಚ್ಚಾವಸ್ತು ಶುದ್ಧೀಕರಣ ಹಾಗೂ ತಯಾರಿಕೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರವು ಈ ಪ್ರತ್ಯೇಕ ಪಿಎಲ್‌ಐ ಯೋಜನೆಯನ್ನು ರೂಪಿಸುತ್ತಿದೆ.

➢ ಪಾಲಿಸಿಲಿಕಾನ್ ಎಂಬುದು ಸಂಕೀರ್ಣ ರಾಸಾಯನಿಕ ಪ್ರಕ್ರಿಯೆಯಿಂದ ತಯಾರಾಗುವ ಅತ್ಯಧಿಕ ಶುದ್ಧತೆಯ ಸಿಲಿಕಾನ್ ರೂಪವಾಗಿದ್ದು, ಇದನ್ನು ಸೌರಕೋಶಗಳು ಮತ್ತು ಸೆಮಿಕಂಡಕ್ಟರ್ ಚಿಪ್‌ಗಳ ತಯಾರಿಕೆಗೆ ಅಗತ್ಯವಿರುವ ಮುಖ್ಯ ಕಚ್ಚಾವಸ್ತುವಾಗಿ ಬಳಸಲಾಗುತ್ತದೆ.

**➢ ಈ ಹೊಸ ಪಿಎಲ್‌ಐ ಯೋಜನೆಯ ಪ್ರಮುಖ ವೈಶಿಷ್ಟ್ಯಗಳು:**

ಸ್ವತಂತ್ರ ಕೈಗಾರಿಕಾ ವಿಭಾಗವಾಗಿ ಪರಿಗಣನೆ: ಪಾಲಿಸಿಲಿಕಾನ್ ತಯಾರಿಕೆಯನ್ನು ಕೇವಲ ಸೌರ ಉದ್ಯಮದ ಭಾಗವಾಗಿ ನೋಡದೆ, ಇದನ್ನು ಪ್ರತ್ಯೇಕ ರಾಸಾಯನಿಕ ಮತ್ತು ಸಂಸ್ಕರಣಾ ಉದ್ಯಮವಾಗಿ ಸರ್ಕಾರ ಗುರುತಿಸಲಿದೆ.

10 GW ಸಾಮರ್ಥ್ಯ ವಿಸ್ತರಣೆ: ಕನಿಷ್ಠ 10 ಗಿಗಾವಾಟ್ ಉತ್ಪಾದನಾ ಸಾಮರ್ಥ್ಯ ಹೊಂದಲು ಖಾಸಗಿ ಕಂಪನಿಗಳಿಗೆ ಆರ್ಥಿಕ ಪ್ರೋತ್ಸಾಹ ನೀಡಲಾಗುತ್ತದೆ.

ಮೊದಲಿನ 'ರಾಷ್ಟ್ರೀಯ ಉನ್ನತ ದಕ್ಷತೆಯ ಸೌರ PV ಯೋಜನೆ'ಗಿಂತ ಪ್ರತ್ಯೇಕ: ಈಗಾಗಲೇ 24,000 ಕೋಟಿ ರೂ. ವೆಚ್ಚದ ಸೌರ ಪಿಎಲ್‌ಐ ಯೋಜನೆ ಚಾಲನೆಯಲ್ಲಿದೆಯಾದರೂ, ಅದು ಮೂಲ ಹಂತದ ಪಾಲಿಸಿಲಿಕಾನ್ ಹೂಡಿಕೆಯನ್ನು ನಿರೀಕ್ಷಿತ ಪ್ರಮಾಣದಲ್ಲಿ ಆಕರ್ಷಿಸದ ಕಾರಣ, ಈ ಹೊಸ ಚೌಕಟ್ಟು ರೂಪಿಸಲಾಗುತ್ತಿದೆ.

**➢ ಭಾರತಕ್ಕೆ ಇದು ಏಕೆ ಪ್ರಮುಖವಾಗಿದೆ?**

ಶಕ್ತಿ ಭದ್ರತೆ (Energy Security): 2030ರ ವೇಳೆಗೆ 500 ಗಿಗಾವಾಟ್ (500 GW) ಪಳೆಯುಳಿಕೆಯೇತರ (Non-Fossil Fuel) ವಿದ್ಯುತ್ ಸಾಮರ್ಥ್ಯ ತಲುಪುವ ಬೃಹತ್ ಗುರಿಯನ್ನು ಭಾರತ ಹೊಂದಿದೆ.

ಚೀನಾ ಮೇಲಿನ ಆಮದು ಕಡಿತ: ಜಾಗತಿಕವಾಗಿ ಪಾಲಿಸಿಲಿಕಾನ್ ಮಾರುಕಟ್ಟೆಯಲ್ಲಿ ಚೀನಾ ಶೇ. 80-90 ರಷ್ಟು ಏಕಸ್ವಾಮ್ಯ ಹೊಂದಿದೆ. ಪೂರೈಕೆ ಸರಪಳಿ (Supply Chain) ಅಡಚಣೆ ತಪ್ಪಿಸಲು ದೇಶೀಯ ಉತ್ಪಾದನೆ ಅಗತ್ಯ.

ಆತ್ಮನಿರ್ಭರ ಭಾರತ: 'ಮೇಕ್ ಇನ್ ಇಂಡಿಯಾ' ಮತ್ತು ಶಕ್ತಿ ಕ್ಷೇತ್ರದಲ್ಲಿ ಸ್ವಾವಲಂಬನೆ ನಿಟ್ಟಿನಲ್ಲಿ ನಿರ್ಣಾಯಕ ಹೆಜ್ಜೆ.

ವಿದ್ಯುತ್ ವೆಚ್ಚ ತಗ್ಗಿಸುವಿಕೆ: ಸೌರ ಹಾಗೂ ಗಾಳಿ ವಿದ್ಯುತ್ ಸಂಗ್ರಹಣೆ ಮೂಲಸೌಕರ್ಯದಿಂದಾಗಿ 'ಡಿಸ್ಕಾಮ್‌ಗಳ' (DISCOMs) ಸರಾಸರಿ ವಿದ್ಯುತ್ ಖರೀದಿ ವೆಚ್ಚವೂ ಶೇ. 10-15 ರಷ್ಟು ಕಡಿಮೆಯಾಗಲಿದೆ.

## ಭಾರತ-ಚೀನಾ 36ನೇ WMCC ಸಭೆ: ಗಡಿ ಶಾಂತಿ ಮತ್ತು ರಾಜತಾಂತ್ರಿಕ ಒಪ್ಪಂದಗಳ ಕುರಿತು ಪ್ರಮುಖ ನಿರ್ಧಾರ



➢ ಭಾರತ ಮತ್ತು ಚೀನಾ ನಡುವಿನ ಗಡಿ ಬಿಕ್ಕಟ್ಟು ಶಮನಗೊಳಿಸುವ ನಿಟ್ಟಿನಲ್ಲಿ ನವದೆಹಲಿಯಲ್ಲಿ 36ನೇ ಗಡಿ ವ್ಯವಹಾರಗಳ ಸಮಾಲೋಚನೆ ಮತ್ತು ಸಮನ್ವಯ ಕಾರ್ಯಕಾರಿ (WMCC) ಸಭೆಯು ಸಫಲವಾಗಿ ನೆರವೇರಿದೆ. ವಾಸ್ತವಿಕ ನಿಯಂತ್ರಣ ರೇಖೆಯ (LAC) ಉದ್ದಕ್ಕೂ ಶಾಂತಿ, ನೆಮ್ಮದಿ ಮತ್ತು ಸ್ಥಿರತೆಯನ್ನು ಕಾಪಾಡುವುದು ಉಭಯ ದೇಶಗಳ ದ್ವಿಪಕ್ಷೀಯ ಬಾಂಧವ್ಯಕ್ಕೆ ಅತ್ಯಂತ ಅಗತ್ಯ ಎಂದು ಎರಡೂ ರಾಷ್ಟ್ರಗಳು ಸ್ಪಷ್ಟಪಡಿಸಿವೆ.

**➢ ಸಭೆಯ ಪ್ರಮುಖ ಮುಖ್ಯಾಂಶಗಳು (Key Highlights)**

**ಪ್ರತಿನಿಧಿಗಳ ನೇತೃತ್ವ:**

ಭಾರತೀಯ ತಂಡ: ವಿದೇಶಾಂಗ ಸಚಿವಾಲಯದ ಪೂರ್ವ ಏಷ್ಯಾ ವಿಭಾಗದ ಜಂಟಿ ಕಾರ್ಯದರ್ಶಿ ಸುಜಿತ್ ಘೋಷ್.

ಚೀನಾ ತಂಡ: ಚೀನಾದ ವಿದೇಶಾಂಗ ಸಚಿವಾಲಯದ ಗಡಿ ಮತ್ತು ಸಾಗರ ವ್ಯವಹಾರಗಳ ಇಲಾಖೆ ಮಹಾನಿರ್ದೇಶಕಿ ಹೌ ಯಾನ್‌ಕಿ.

ಗಡಿ ನಿರ್ವಹಣೆ ಮತ್ತು ಗುರುತಿಸುವಿಕೆ: 24ನೇ ವಿಶೇಷ ಪ್ರತಿನಿಧಿಗಳ (SR) ಮಾತುಕತೆಯ ಮುಂದುವರಿದ ಭಾಗವಾಗಿ ಗಡಿ ಗುರುತಿಸುವಿಕೆ (Boundary Delimitation), ಗಡಿ ನಿರ್ವಹಣೆ ಮತ್ತು ರಾಜತಾಂತ್ರಿಕ ಸಹಕಾರದ ಕುರಿತು ವಿಸ್ತೃತ ಚರ್ಚೆ ನಡೆಸಲಾಯಿತು.

ಸಂವಹನ ಮಾರ್ಗಗಳ ಬಳಕೆ: ಗಡಿಯಲ್ಲಿ ಯಾವುದೇ ರೀತಿಯ ತಪ್ಪುಗ್ರಹಿಕೆ ಹಾಗೂ ಮಿಲಿಟರಿ ಅಡಚಣೆಗಳನ್ನು ತಡೆಯಲು ಸೇನಾ ಮಟ್ಟದ ಮತ್ತು ರಾಜತಾಂತ್ರಿಕ ಮಟ್ಟದ (WMCC) ಮಾತುಕತೆಗಳನ್ನು ನಿರಂತರವಾಗಿ ಕಾಯ್ದುಕೊಳ್ಳಲು ಸಮ್ಮತಿಸಲಾಯಿತು.

ನದಿನೀರಿನ ವಿಚಾರ ಹಾಗೂ ತಜ್ಞರ ಸಮಿತಿ: ಗಡಿಯಾಚೆಗಿನ ನದಿಗಳ ಕುರಿತು ಚರ್ಚಿಸಲು 'ತಜ್ಞರ ಮಟ್ಟದ ಸಮಿತಿ'ಯ (Expert Level Mechanism - ELM) ಮುಂದಿನ ಸಭೆಯನ್ನು ಶೀಘ್ರವೇ ಕರೆಯುವಂತೆ ಭಾರತ ಆಗ್ರಹಿಸಿತು. ಜೊತೆಗೆ, ನದಿಯ ಮೇಲ್ಭಾಗದಲ್ಲಿ ಕೈಗೊಳ್ಳಲಾಗುವ ಯೋಜನೆಗಳ ತಾಂತ್ರಿಕ ವಿವರಗಳನ್ನು ಹಂಚಿಕೊಳ್ಳುವಂತೆ ಭಾರತ ಒತ್ತು ನೀಡಿದೆ.

➤ **WMCC - Working Mechanism for Consultation and Coordination on India-China Border Affairs:**

ಸ್ಥಾಪನೆಯಾದ ವರ್ಷ: 2012 (ಭಾರತ ಮತ್ತು ಚೀನಾ ನಡುವೆ ಸಹಿ ಮಾಡಲ್ಪಟ್ಟಿತು)

ಮುಖ್ಯ ಉದ್ದೇಶ: ಗಡಿ ಪ್ರದೇಶಗಳಲ್ಲಿ ಶಾಂತಿ ಮತ್ತು ನೆಮ್ಮದಿಯನ್ನು ಕಾಯ್ದುಕೊಳ್ಳುವುದು, ನೈಜ ಸಮಯದಲ್ಲಿ ಮಾಹಿತಿ ಹಂಚಿಕೆ ಮತ್ತು ದ್ವಿಪಕ್ಷೀಯ ಸಂವಹನ ಸುಲಭಗೊಳಿಸುವುದು.

ಪ್ರಸ್ತುತ ಸಭೆ: 36ನೇ ಸಭೆ (ಆಗಸ್ಟ್ 6, 2026 - ನವದೆಹಲಿ)

# 10 Aug 2026

## ಫಿಸುವ್ (FISU) ವಿಶ್ವ ವಿಶ್ವವಿದ್ಯಾಲಯ ಸ್ಕ್ವಾಷ್ ಚಾಂಪಿಯನ್‌ಶಿಪ್ 2026: ಐತಿಹಾಸಿಕ ಚಿನ್ನ ಗೆದ್ದ ಸೂರಜ್ ಕುಮಾರ್ ಚಂದ್!



➤ ಮುಂಬೈನಲ್ಲಿ ನಡೆದ 2026ರ FISU ವಿಶ್ವ ವಿಶ್ವವಿದ್ಯಾಲಯ ಸ್ಕ್ವಾಷ್ ಚಾಂಪಿಯನ್‌ಶಿಪ್ (FISU World University Squash Championship)ನಲ್ಲಿ ಭಾರತದ ಸ್ಕ್ವಾಷ್ ಆಟಗಾರ ಸೂರಜ್ ಕುಮಾರ್ ಚಂದ್ (Suraj Kumar Chand) ಇತಿಹಾಸ ಬರೆದಿದ್ದಾರೆ. ಸ್ಕ್ವಾಷ್ ಕ್ರೀಡೆಯಲ್ಲಿ ಈ ಪಂದ್ಯಾವಳಿಯ ಪುರುಷರ ವ್ಯಕ್ತಿಗತ (Individual) ವಿಭಾಗದಲ್ಲಿ ಭಾರತಕ್ಕೆ ಇದುವರೆಗೆ ಲಭಿಸಿದ ಮೊದಲ ಚಿನ್ನದ ಪದಕ ಇದಾಗಿದೆ. ಹಿಂದೆ ಭಾರತ ಹಲವು ಪದಕಗಳನ್ನು ಗೆದ್ದಿತ್ತಾದರೂ, ಪುರುಷರ ಸಿಂಗಲ್ಸ್‌ನಲ್ಲಿ ಸ್ವರ್ಣ ಪದಕ ಮುಡಿಗೇರಿಸಿಕೊಂಡ ಮೊದಲ ಕ್ರೀಡಾಪಟು ಸೂರಜ್.

➤ ಫೈನಲ್ ಪಂದ್ಯದಲ್ಲಿ ಹಂಗೇರಿಯ ಬೆನೆಡೆಕ್ ಟಾಕಾಕ್ಸ್ ವಿರುದ್ಧ ಅತ್ಯಂತ ರೋಚಕವಾಗಿ ಕಾದಾಡಿದ ಸೂರಜ್, 5 ಸೆಟ್‌ಗಳ ಕಠಿಣ ಹೋರಾಟದ ನಂತರ 3-2 ಅಂತರದಲ್ಲಿ ಗೆದ್ದು ಸ್ವರ್ಣ ಪದಕಕ್ಕೆ ಮುತ್ತಿಟ್ಟರು.

➤ **ಸೂರಜ್ ಕುಮಾರ್ ಚಂದ್:** 25 ವರ್ಷ ಪ್ರಾಯದ ಸೂರಜ್ ಕುಮಾರ್, ಮಹಾರಾಷ್ಟ್ರದ ಮುಂಬೈನವರು. ಪ್ರಸ್ತುತ ಮುಂಬೈನ ಸೋಮಯ್ಯ ವಿದ್ಯಾವಿಹಾರ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ (ವಿಶೇಷವೆಂದರೆ, ಇದೇ ವಿಶ್ವವಿದ್ಯಾಲಯದಲ್ಲಿ ವಿಶ್ವ ಚಾಂಪಿಯನ್‌ಶಿಪ್ ಪಂದ್ಯಾವಳಿ ನಡೆದಿತ್ತು). ಸೂರಜ್ **ಕುಮಾರ್ ಅವರ ಪ್ರಮುಖ ಸಾಧನೆಗಳು:**

**ಶಾಲಾ ರಾಷ್ಟ್ರೀಯ ಕ್ರೀಡಾಕೂಟ:** ನ್ಯಾಷನಲ್ ಸ್ಕೂಲ್ ಗೇಮ್ಸ್ ಸ್ಕ್ವಾಷ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ.

ಜೋಹಾನ್ಸ್‌ಬರ್ಗ್ 2024: ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್‌ನಲ್ಲಿ ನಡೆದ 2024ರ ವಿಶ್ವ ವಿಶ್ವವಿದ್ಯಾಲಯ ಚಾಂಪಿಯನ್‌ಶಿಪ್‌ನಲ್ಲಿ ಪುರುಷರ ಸಿಂಗಲ್ಸ್ ಹಾಗೂ ತಂಡ ವಿಭಾಗದಲ್ಲಿ ಕಂಚಿನ ಪದಕ.

ಎಚ್‌ಸಿಎಲ್ ಪಿಎಸ್‌ಎ ಇಂಡಿಯನ್ ಟೂರ್ (HCL PSA Indian Tour 2026): ಏಪ್ರಿಲ್ 2026 ರಲ್ಲಿ ಚೆನ್ನೈನಲ್ಲಿ ನಡೆದ ಎಚ್‌ಸಿಎಲ್ ಪಿಎಸ್‌ಎ ಟೂರ್‌ನಲ್ಲಿ ಒಂದೇ ಒಂದು ಗೇಮ್ ಸೋಲದೆ ಪ್ರಶಸ್ತಿ ಗೆಲುವು.

**ಏಷ್ಯನ್ ಗೇಮ್ಸ್ ಆಯ್ಕೆ:** ಜಪಾನ್‌ನ ಐಚಿ-ನಗೋಯಾದಲ್ಲಿ ನಡೆಯಲಿರುವ 2026ರ ಏಷ್ಯನ್ ಗೇಮ್ಸ್‌ಗಾಗಿ ಭಾರತೀಯ ಪುರುಷರ ತಂಡ ಮತ್ತು ಮಿಕ್ಸೆಡ್ ಡಬಲ್ಸ್ ವಿಭಾಗಕ್ಕೆ ಆಯ್ಕೆಯಾಗಿದ್ದಾರೆ.

ಉದ್ಯೋಗದ ಹೊಸ ಅಧಿಸೂಚನೆಗಳು ಈಗ ನಿಮ್ಮ ಮೊಬೈಲ್ ನಲ್ಲಿ! ಇಂದೇ 'KPSCVaani' ಆಪ್ ಡೌನ್‌ಲೋಡ್ ಮಾಡಿ.

## ಆಗಸ್ಟ್-10: ವಿಶ್ವ ಸಿಂಹ ದಿನಾಚರಣೆ 2026



➤ ಪ್ರತಿ ವರ್ಷ ಆಗಸ್ಟ್ 10 ರಂದು ವಿಶ್ವದಾದ್ಯಂತ 'ವಿಶ್ವ ಸಿಂಹ ದಿನ' (World Lion Day) ವನ್ನು ಆಚರಿಸಲಾಗುತ್ತದೆ. ಸಿಂಹಗಳ ಸಂರಕ್ಷಣೆ, ಅವುಗಳ ಆವಾಸಸ್ಥಾನದ ರಕ್ಷಣೆ ಹಾಗೂ ಪರಿಸರ ವ್ಯವಸ್ಥೆಯಲ್ಲಿ ಅವುಗಳ ಪ್ರಾಮುಖ್ಯತೆಯ ಬಗ್ಗೆ ಜಾಗೃತಿ ಮೂಡಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ. ಭಾರತಕ್ಕೆ ಈ ದಿನ ಅತ್ಯಂತ ವಿಶೇಷ. ಏಕೆಂದರೆ ವಿಶ್ವದಲ್ಲೇ ಮುಕ್ತವಾಗಿ ಓಡಾಡುವ ಏಷ್ಯಾಟಿಕ್ ಸಿಂಹಗಳ (Asiatic Lions - Panthera leo persica) ಏಕೈಕ ನೈಸರ್ಗಿಕ ನಿವಾಸ ಭಾರತದ ಗುಜರಾತ್‌ನ ಸೌರಾಷ್ಟ್ರ ಪ್ರದೇಶವಾಗಿದೆ.

**ವಿಜ್ಞಾನ ಹೆಸರು:** Panthera leo persica (ಏಷ್ಯಾಟಿಕ್ ಸಿಂಹ).

ಮುಖ್ಯ ಆವಾಸಸ್ಥಾನ: ಗೀರ್ ರಾಷ್ಟ್ರೀಯ ಉದ್ಯಾನವನ ಮತ್ತು ಅಭಯಾರಣ್ಯ (Gir National Park & Sanctuary), ಗುಜರಾತ್.

ಸಿಂಹಗಳ ಸಂಖ್ಯೆ ಪ್ರಗತಿ: 20 ನೇ ಶತಮಾನದ ಆರಂಭದಲ್ಲಿ 50 ಕ್ಕಿಂತ ಕಡಿಮೆ ಇತ್ತು. 2020 ರ ಗಣತಿಯಲ್ಲಿ 674 ಇದ್ದ ಸಿಂಹಗಳ ಸಂಖ್ಯೆ, 2025 ರ ಅಂದಾಜಿನ ಪ್ರಕಾರ 891 ಕ್ಕೆ ಏರಿಕೆಯಾಗಿದೆ (5 ವರ್ಷಗಳಲ್ಲಿ ಸುಮಾರು 32% ಹೆಚ್ಚಳ).

ವ್ಯಾಪ್ತಿ: ಸೌರಾಷ್ಟ್ರದ 11 ಜಿಲ್ಲೆಗಳ ಸುಮಾರು 35,000 ಚದರ ಕಿಲೋಮೀಟರ್ ಪ್ರದೇಶ.

ಎರಡನೇ ಪರ್ಯಾಯ ಆವಾಸಸ್ಥಾನ: ಗುಜರಾತ್‌ನ ಬರ್ಡಾ ವನ್ಯಜೀವಿ ಅಭಯಾರಣ್ಯ (Barda Wildlife Sanctuary).

ಕೇಂದ್ರ ಸರ್ಕಾರದ ಯೋಜನೆ: ಪ್ರಾಜೆಕ್ಟ್ ಲಯನ್ (Project Lion) - 2020 ರಲ್ಲಿ ಪ್ರಧಾನಿಯವರಿಂದ ಚಾಲನೆ.

➤ **ಗುಜರಾತ್‌ನಲ್ಲಿ ಏಷ್ಯಾಟಿಕ್ ಸಿಂಹಗಳ ಚೇತರಿಕೆ:** ಒಮ್ಮೆ ದಕ್ಷಿಣ ಏಷ್ಯಾ, ಮಧ್ಯಪ್ರಾಚ್ಯ ಹಾಗೂ ಉತ್ತರ ಭಾರತದ ವಿಶಾಲ ಪ್ರದೇಶಗಳಲ್ಲಿ ಹರಡಿಕೊಂಡಿದ್ದ ಏಷ್ಯಾಟಿಕ್ ಸಿಂಹಗಳು, 19 ನೇ ಶತಮಾನದಲ್ಲಿ ಬ್ರಿಟಿಷರ ಅತಿಯಾದ ಬೇಟೆ ಹಾಗೂ ಆವಾಸಸ್ಥಾನ ನಾಶದಿಂದಾಗಿ ನಾಶದ ಅಂಚಿಗೆ ತಲುಪಿದ್ದವು. ಜುನಾಗಢದ ನವಾಬರು ಗೀರ್ ಅರಣ್ಯದಲ್ಲಿ ಬೇಟೆಯನ್ನು ನಿಷೇಧಿಸುವ ಮೂಲಕ ಸಿಂಹಗಳ ರಕ್ಷಣೆಗೆ ಅಡಿಪಾಯ ಹಾಕಿದರು. ಸ್ವಾತಂತ್ರ್ಯಾನಂತರ 1965 ರಲ್ಲಿ ಗೀರ್ ಪ್ರದೇಶವನ್ನು ವನ್ಯಜೀವಿ ಅಭಯಾರಣ್ಯವೆಂದು ಘೋಷಿಸಲಾಯಿತು.

ಸಾಧನೆಗೆ ಪ್ರಮುಖ ಕಾರಣಗಳು: ಸ್ಥಳೀಯ ಮಾಲ್ಧಾರಿ (Maldhari) ಸಮುದಾಯದ ಸಹಕಾರ, ಕಟ್ಟುನಿಟ್ಟಿನ ವನ್ಯಜೀವಿ ಸಂರಕ್ಷಣಾ ಕಾಯ್ದೆಗಳು, ಹೈಟೆಕ್ ಕಣ್ಗಾವಲು ವ್ಯವಸ್ಥೆ, ಮತ್ತು ಪರಿಸರ ಪ್ರವಾಸೋದ್ಯಮ (Eco-tourism).

➤ **ಪರಿಸರ ವ್ಯವಸ್ಥೆಯಲ್ಲಿ ಸಿಂಹಗಳ ಪಾತ್ರ:**

ಅಗ್ರಭಕ್ಷಕ (Apex Predator): ಆಹಾರ ಸರಪಳಿಯ ತುದಿಯಲ್ಲಿರುವ ಸಿಂಹಗಳು ಜಿಂಕೆ, ಸಾಂಬಾರ್, ಕಾಡುಹಂದಿಗಳಂತಹ ಸಸ್ಯಾಹಾರಿ ಪ್ರಾಣಿಗಳ ಸಂಖ್ಯೆಯನ್ನು ನಿಯಂತ್ರಣದಲ್ಲಿಡುತ್ತವೆ.

ಜೀವವೈವಿಧ್ಯದ ಸಮತೋಲನ: ಸಸ್ಯಾಹಾರಿಗಳ ಸಂಖ್ಯೆ ನಿಯಂತ್ರಣದಲ್ಲಿರುವುದರಿಂದ ಕಾಡಿನ ಸಸ್ಯವರ್ಗ ಮತ್ತು ಜೀವವೈವಿಧ್ಯತೆ ಸುರಕ್ಷಿತವಾಗಿರುತ್ತದೆ.

ಇತರ ಜೀವಿಗಳಿಗೆ ಆಹಾರ: ಸಿಂಹಗಳು ಬೇಟೆಯಾಡಿ ಬಿಟ್ಟ ಮಾಂಸವು ಕತ್ತೆಕಿರುಬ, ಕಾಗೆ ಹಾಗೂ ರಣಹದ್ದುಗಳಂತಹ ಶವಭಕ್ಷಕಗಳಿಗೆ ಆಹಾರವಾಗುತ್ತದೆ.

## ಅರುಣಾಚಲ ಪ್ರದೇಶ ನಕ್ಷೆ ನವೀಕರಣ: 27 ಪ್ರಮುಖ ಗಡಿ ಪ್ರದೇಶಗಳನ್ನು ಅಧಿಕೃತವಾಗಿ ಸೇರ್ಪಡೆಗೊಳಿಸಿದ ಭಾರತ!




➤ ಭಾರತದ ಗೃಹ ಸಚಿವಾಲಯವು (MHA) ಸರ್ವೇ ಆಫ್ ಇಂಡಿಯಾ (Survey of India) ಮೂಲಕ ಅರುಣಾಚಲ ಪ್ರದೇಶದ ಅಧಿಕೃತ ನಕ್ಷೆಯನ್ನು ನವೀಕರಿಸಿದ್ದು, ಚೀನಾ ಗಡಿಯಲ್ಲಿರುವ 27 ಪ್ರಮುಖ ಭೌಗೋಳಿಕ ಸ್ಥಳಗಳು, ಕಣಿವೆಗಳು (Passes), ಸರೋವರ ಹಾಗೂ ಯುದ್ಧ ಸ್ಮಾರಕಗಳನ್ನು ಸ್ಪಷ್ಟವಾಗಿ ಗುರುತಿಸಿ ನಮೂದಿಸಿದೆ. ಚೀನಾವು ಅರುಣಾಚಲ ಪ್ರದೇಶದ ಸ್ಥಳಗಳಿಗೆ ತಾನೇ ಕಾಲ್ಪನಿಕ/ವಿವಾದಾತ್ಮಕ ಹೆಸರುಗಳನ್ನು (Zangnan / ದಕ್ಷಿಣ ಟಿಬೆಟ್ ಎಂದು ಕರೆದು) ಇಡಲು ಯತ್ನಿಸುತ್ತಿದ್ದ ಕಾರ್ಯಾಚರಣೆಗೆ ಭಾರತ ಸರ್ಕಾರವು ನೀಡಿರುವ ತಕ್ಕ ಕೌಂಟರ್-ಉತ್ತರ (Strategic Counter) ಇದಾಗಿದೆ.

**1. 27 ಸ್ಥಳಗಳ ನಮೂದು:** ಅಧಿಕೃತ 'ಸರ್ವೇ ಆಫ್ ಇಂಡಿಯಾ' ನಕ್ಷೆಯಲ್ಲಿ 21 ಜನವಸತಿ/ಗ್ರಾಮಗಳು, 4 ಪ್ರಮುಖ ಕಣಿವೆಗಳು (Passes), 1 ಉನ್ನತ ಎತ್ತರದ ಸರೋವರ ಮತ್ತು 1 ಯುದ್ಧ ಸ್ಮಾರಕವನ್ನು ಅಧಿಕೃತವಾಗಿ ಸೇರಿಸಲಾಗಿದೆ.

**2. ಚಾರಿತ್ರಿಕ ಸ್ಥಳಗಳ ಸೇರ್ಪಡೆ:** ಲಾಂಗು (Longju) ಹಾಗೂ ಮಾಜಾ (Maja): 1959ರಲ್ಲಿ ಚೀನಾದ ಅತಿಕ್ರಮಣಕ್ಕೆ ಒಳಗಾಗಿದ್ದ ಲಾಂಗು ಮತ್ತು ಮಾಜಾ ಪ್ರದೇಶಗಳನ್ನು ನಕ್ಷೆಯಲ್ಲಿ ನಮೂದಿಸಿ, ಭಾರತದ ಸಾರ್ವಭೌಮತ್ವವನ್ನು ಎತ್ತಿಹಿಡಿಯಲಾಗಿದೆ. ಥಾಗ್ ಲಾ ಪಾಸ್ (Thag La Pass): 1962ರ ಭಾರತ-ಚೀನಾ ಯುದ್ಧದ ಆರಂಭಿಕ ಸಂಘರ್ಷ ನಡೆದ ಪ್ರಮುಖ ಗಡಿ ಕಣಿವೆ.

**3. ಸೇನಾ ನಕ್ಷೆಯಿಂದ ಸಾರ್ವಜನಿಕ ನಕ್ಷೆಗೆ:** ಹಿಂದೆ ಈ ಮಹತ್ವದ ಸ್ಥಳಗಳು ಕೇವಲ ಭಾರತೀಯ ಸೇನೆಯ ನಕ್ಷೆಗಳಲ್ಲಿ ಮಾತ್ರ ನಮೂದಾಗಿದ್ದವು. ಈಗ ಇವುಗಳನ್ನು ಅಧಿಕೃತ ನಾಗರಿಕ/ಸಾರ್ವಜನಿಕ ನಕ್ಷೆಯಲ್ಲಿ ಅಳವಡಿಸಲಾಗಿದ್ದು, ಸಾರ್ವಜನಿಕರಲ್ಲಿ ಗಡಿ ಜಾಗೃತಿ ಮೂಡಿಸಲು ನೆರವಾಗಲಿದೆ.

**4. ಯುದ್ಧ ಸ್ಮಾರಕಗಳು ಹಾಗೂ ಕಣಿವೆಗಳು:** ಯುದ್ಧ ಸ್ಮಾರಕಗಳು: ಜಸ್ವಂತ್ ಗಢ್ (Jaswant Garh - 1962ರ ಮಹಾವೀರ ಚಕ್ರ ವಿಜೇತ ಜಸ್ವಂತ್ ಸಿಂಗ್ ರಾವತ್ ಸ್ಮಾರಕ) ಮತ್ತು ಶೇರ್-ಎ-ಥಾಪಾ (Sher-e-Thapa Memorial) ಸ್ಮಾರಕಗಳನ್ನು ಸೇರಿಸಲಾಗಿದೆ.
ಇತರ ಕಣಿವೆಗಳು (Passes): ಡಿಜೋ ಲಾ (Dzo La), ರಿಜಾ ಲಾ (Riza La) ಹಾಗೂ ಪುಕುರ್ ಲಾ (Pukur La).
ಸರೋವರ: ಸಂಭೋ ಸರೋವರ (Sambho Sarovar).

**➤ ಈ ನಡೆಯ ರಾಜತಾಂತ್ರಿಕ ಮತ್ತು ಕಾರ್ಯತಾಂತ್ರಿಕ ಮಹತ್ವ:**

**1. ಚೀನಾದ ಹೆಸರು ಬದಲಾವಣೆ ತಂತ್ರಕ್ಕೆ ತಿರುಗೇಟು:** ಚೀನಾವು ಗಡಿ ಭಾಗದ ಹೆಸರುಗಳನ್ನು ಏಕಪಕ್ಷೀಯವಾಗಿ ಬದಲಾಯಿಸಿ ತನ್ನ ಹಕ್ಕು ಸಾಧಿಸಲು ಶ್ರಮಿಸುತ್ತಿತ್ತು. ಭಾರತದ ಈ ನವೀಕೃತ ನಕ್ಷೆಯು ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಭಾರತದ ಕಾನೂನಾತ್ಮಕ ಮತ್ತು ಭೌಗೋಳಿಕ ಹಕ್ಕನ್ನು ಬಲಪಡಿಸುತ್ತದೆ.

**2. ಭೌಗೋಳಿಕ ದಾಖಲೀಕರಣ (Cartographic Proof):** 'ಮೆಕ್ ಮಹೋನ್ ರೇಖೆ' (McMahon Line) ಉದ್ದಕ್ಕೂ ಭಾರತದ ಗಡಿ ವ್ಯಾಪ್ತಿಯನ್ನು ಸ್ಪಷ್ಟವಾಗಿ ದಾಖಲಿಸಲು ಸರ್ವೇ ಆಫ್ ಇಂಡಿಯಾ ನಡೆಸಿದ ಈ ಕಾರ್ಯಾಚರಣೆ ನೆರವಾಗಲಿದೆ.




## ಇಂದಿನ ಕಿರು ಸುದ್ದಿ (10-08-2026)




➤ ಸತೀಶ ಗುಜ್ರಾಲ್ ಜನ್ಮ ಶತಮಾನೋತ್ಸವದ ಸ್ಮರಣಾರ್ಥ ಅಂಚೆಚೀಟಿ ಬಿಡುಗಡೆ: ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು ದೆಹಲಿಯ ಬಿಕಾನೇರ್ ಹೌಸ್‌ನಲ್ಲಿ ಖ್ಯಾತ ಕಲಾವಿದ ಹಾಗೂ ಶಿಲ್ಪಿ ಸತೀಶ್ ಗುಜ್ರಾಲ್ ಅವರ ಜನ್ಮ ಶತಮಾನೋತ್ಸವದ ನೆನಪಿಗಾಗಿ ವಿಶೇಷ ಸ್ಮರಣಾರ್ಥ ಅಂಚೆಚೀಟಿಯನ್ನು ಬಿಡುಗಡೆ ಮಾಡಿದರು.

➤ ಅಫ್ಘಾನಿಸ್ತಾನ ವೈದ್ಯಕೀಯ ಪದವಿಗಳ ನೋಂದಣಿ ಸ್ಥಗಿತಗೊಳಿಸಿದ ಪಾಕಿಸ್ತಾನ: ಪಾಕಿಸ್ತಾನ ವೈದ್ಯಕೀಯ ಮತ್ತು ದಂತವೈದ್ಯಕೀಯ ಮಂಡಳಿಯು (PMDC) ಅಫ್ಘಾನಿಸ್ತಾನದ ಉನ್ನತ ಶಿಕ್ಷಣ ಸಂಸ್ಥೆಗಳು ನೀಡುವ ವೈದ್ಯಕೀಯ ಪದವಿಗಳನ್ನು ವೃತ್ತಿಪರ ನೋಂದಣಿಗೆ ಸ್ವೀಕರಿಸುವುದನ್ನು ನಿಲ್ಲಿಸಿದೆ.

**➤ ರಕ್ಷಣಾ ವಲಯದಲ್ಲಿ ಜಿಯೋ-ಎಐ ತಂತ್ರಜ್ಞಾನಕ್ಕೆ ಬಿಇಎಲ್ ಒಪ್ಪಂದ:** ರಕ್ಷಣಾ ವಲಯದಲ್ಲಿ ಜಿಐಎಸ್ (GIS) ಮತ್ತು ಜಿಯೋ-ಎಐ (GeoAI) ತಂತ್ರಜ್ಞಾನಗಳ ಅಭಿವೃದ್ಧಿಗಾಗಿ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (BEL) ಹಾಗೂ ಎಸಿ ಇಂಡಿಯಾ ಸಂಸ್ಥೆಗಳು ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿವೆ.

**➤ ಅಂಗಾಂಗ ಕಸಿಯಲ್ಲಿ ಭಾರತಕ್ಕೆ ವಿಶ್ವದಲ್ಲೇ ಮೊದಲ ಸ್ಥಾನ:** ಭಾರತದಲ್ಲಿ 2025ನೇ ಸಾಲಿನಲ್ಲಿ ಒಟ್ಟು 20,138 ಅಂಗಾಂಗ ಕಸಿಗಳು ದಾಖಲಾಗುವ ಮೂಲಕ 20,000 ಗಡಿ ದಾಟಿದ್ದು, ಜೀವಂತ ದಾನಿಗಳ ಅಂಗಾಂಗ ಕಸಿ ಕ್ಷೇತ್ರದಲ್ಲಿ ಭಾರತವು ಪ್ರಪಂಚದಲ್ಲೇ ಪ್ರಥಮ ಸ್ಥಾನ ಪಡೆದುಕೊಂಡಿದೆ.

**➤ ಆಳ ಸಮುದ್ರ ಯೋಜನೆಯ ಬೆಂಬಲಕ್ಕೆ 'ನ್ಯಾಷನಲ್ ಟೆಕ್ನಥಾನ್' ಚಾಲನೆ:** ಭಾರತದ ಆಳ ಸಮುದ್ರ ಮಿಷನ್‌ಗೆ (Deep Ocean Mission) ಬೆಂಬಲ ನೀಡಲು ಹಾಗೂ ಸಮುದ್ರದಾಳದ ಪಾಲಿ ಮೆಟಾಲಿಕ್ ಗಂಟುಗಳ ಸುಸ್ಥಿರ ಸಂಗ್ರಹಣೆಗೆ ತಂತ್ರಜ್ಞಾನ ಅಭಿವೃದ್ಧಿಪಡಿಸಲು 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಷಿಯನ್ ಟೆಕ್ನಾಲಜಿ' ರಾಷ್ಟ್ರೀಯ ಟೆಕ್ನಥಾನ್ ಅನ್ನು ಪ್ರಾರಂಭಿಸಿದೆ.

➤ **ಗ್ರಾಹಕರ 'ತಿಳಿಯುವ ಹಕ್ಕಿನ' ಅರ್ಜಿಗೆ ಉತ್ತರಿಸಲು ಸುಪ್ರೀಂ ಕೋರ್ಟ್ ಸೂಚನೆ:** ಉತ್ಪನ್ನಗಳ ಗುಣಮಟ್ಟ, ಶುದ್ಧತೆ ಹಾಗೂ ಮಾರಾಟಗಾರರ ವಿವರಗಳನ್ನು ತಿಳಿಯುವ ಗ್ರಾಹಕರ 'ತಿಳಿಯುವ ಹಕ್ಕನ್ನು' ಮಾನ್ಯ ಮಾಡುವಂತೆ ಕೋರಿದ ಅರ್ಜಿಗೆ ಆರು ವಾರಗಳ ಒಳಗಾಗಿ ಪ್ರತಿಕ್ರಿಯೆ ನೀಡುವಂತೆ ಸುಪ್ರೀಂ ಕೋರ್ಟ್ ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕಾಲಾವಕಾಶ ನೀಡಿದೆ.

## ಆಪರೇಷನ್ ಮುಕ್ತ (Operation Mukta): ಬೆಂಗಳೂರಿನಲ್ಲಿ ಅಕ್ರಮ ವಲಸಿಗರ ವಿರುದ್ಧ ನಗರ ಪೊಲೀಸರ ಬೃಹತ್ ಕಾರ್ಯಾಚರಣೆ



➤ ಬೆಂಗಳೂರು ನಗರದಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳನ್ನು ಪತ್ತೆ ಹಚ್ಚುವ ನಿಟ್ಟಿನಲ್ಲಿ ಬೆಂಗಳೂರು ನಗರ ಪೊಲೀಸರು 'ಆಪರೇಷನ್ ಮುಕ್ತ' ಕಾರ್ಯಾಚರಣೆಯನ್ನು ತೀವ್ರಗೊಳಿಸಿದ್ದಾರೆ. ವೈಟ್‌ಫೀಲ್ಡ್ ಹಾಗೂ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ವಿಭಾಗಗಳ 90ಕ್ಕೂ ಹೆಚ್ಚು ಸ್ಥಳಗಳಲ್ಲಿ ಏಕಕಾಲಕ್ಕೆ ನಡೆದ ಶೋಧ ಕಾರ್ಯಾಚರಣೆಯಲ್ಲಿ ಹಿರಿಯ ಅಧಿಕಾರಿಗಳು ಹಾಗೂ ನೂರಾರು ಸಿಬ್ಬಂದಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

➤ **ಕಾರ್ಯಾಚರಣೆಯ ವೈಖರಿ:**

**ದಾಖಲೆಗಳ ಪರಿಶೀಲನೆ:** ತಾತ್ಕಾಲಿಕ ಶೆಡ್‌ಗಳು, ನಿರ್ಮಾಣ ಹಂತದ ಕಟ್ಟಡಗಳು, ಕಸ ವಿಲೇವಾರಿ ಘಟಕಗಳು ಹಾಗೂ ಕಾರ್ಮಿಕರ ವಸತಿ ಪ್ರದೇಶಗಳಲ್ಲಿ ಮನೆ ಮನೆಗೆ ತೆರಳಿ ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಪಾಸ್‌ಪೋರ್ಟ್ ಮತ್ತು ವೀಸಾ ದಾಖಲೆಗಳನ್ನು ಪರಿಶೀಲಿಸಲಾಗಿದೆ.

**ಶಂಕಿತರ ವಶ ಹಾಗೂ ತನಿಖೆ:** ಅಧಿಕೃತ ದಾಖಲೆ ಒದಗಿಸಲು ವಿಫಲರಾದ ಸಾವಿರಾರು ಶಂಕಿತರನ್ನು ವಶಕ್ಕೆ ಪಡೆದು ತೀವ್ರ ತನಿಖೆಗೆ ಒಳಪಡಿಸಲಾಗಿದೆ.

**ಗಡೀಪಾರು ಪ್ರಕ್ರಿಯೆ:** ಅಕ್ರಮವಾಗಿ ನೆಲೆಸಿರುವುದು ದೃಢಪಟ್ಟ ವಿದೇಶಿ ಪ್ರಜೆಗಳನ್ನು ಕಾನೂನುರೀತ್ಯ ಬಂಧಿಸಿ, ವಿದೇಶಿಗರ ಪ್ರಾದೇಶಿಕ ನೋಂದಣಿ ಕಚೇರಿಗೆ (FRRO - Foreigners Regional Registration Office) ಹಸ್ತಾಂತರಿಸಲಾಗುತ್ತಿದ್ದು, ನೆಲಮಂಗಲದ ವಲಸಿಗರ ಕೇಂದ್ರದ ಮೂಲಕ ಗಡೀಪಾರು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

**ನಕಲಿ ದಾಖಲೆ ಸೃಷ್ಟಿಕರ್ತರ ವಿರುದ್ಧ ಕ್ರಮ:** ನಕಲಿ ಆಧಾರ್ ಕಾರ್ಡ್ ಅಥವಾ ದಾಖಲೆಗಳನ್ನು ಒದಗಿಸಲು ನೆರವಾದ ಸ್ಥಳೀಯ ಏಜೆಂಟರು, ಕಟ್ಟಡ ನಿರ್ಮಾಪಕರು ಹಾಗೂ ಆಶ್ರಯ ನೀಡಿದ ಜಮೀನು ಮಾಲೀಕರ (Landlords) ವಿರುದ್ಧವೂ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.

➤ **ಪರೀಕ್ಷೆಗೆ ನೆನಪಿಡಬೇಕಾದ ಪ್ರಮುಖ ಕಾನೂನುಗಳು:**

ವಿದೇಶಿಗರ ಕಾಯ್ದೆ 1946 (The Foreigners Act, 1946): ಅಕ್ರಮವಾಗಿ ಭಾರತ ಪ್ರವೇಶಿಸುವ ಹಾಗೂ ವಾಸಿಸುವ ವಿದೇಶಿಯರ ವಿರುದ್ಧ ಕ್ರಮ ಕೈಗೊಳ್ಳಲು ಅಧಿಕಾರ ನೀಡುತ್ತದೆ.

ಪಾಸ್‌ಪೋರ್ಟ್ (ಭಾರತಕ್ಕೆ ಪ್ರವೇಶ) ಕಾಯ್ದೆ 1920 (The Passport (Entry into India) Act, 1920): ಸಿಂಧುವಾದ ಪ್ರಯಾಣ ದಾಖಲೆಗಳಿಲ್ಲದೆ ಪ್ರವೇಶಿಸುವುದನ್ನು ತಡೆಯುತ್ತದೆ.

## ಕೆನಡಾದಿಂದ ದಾಖಲೆ ಸಂಖ್ಯೆಯ ಭಾರತೀಯರ ಗಡಿಪಾರು: ಪಟ್ಟಿಯಲ್ಲಿ ಭಾರತಕ್ಕೆ ಮೊದಲ ಸ್ಥಾನ




➤ ಕೆನಡಾ ಗಡಿ ಸೇವಾ ಸಂಸ್ಥೆ (CBSA - Canada Border Services Agency) ಇತ್ತೀಚೆಗೆ ಬಿಡುಗಡೆ ಮಾಡಿದ ಅಧಿಕೃತ ವರದಿಯ ಪ್ರಕಾರ, 2026ರ ಮೊದಲಾರ್ಧದಲ್ಲೇ (ಜನವರಿಯಿಂದ ಜೂನ್) 3,323 ಭಾರತೀಯ ಪ್ರಜೆಗಳನ್ನು ಕೆನಡಾದಿಂದ ವಾಪಸ್ ಕಳುಹಿಸಲಾಗಿದೆ. ಕಳೆದ 2025ರ ಇಡೀ ವರ್ಷದಲ್ಲಿ ಒಟ್ಟು 3,779 ಭಾರತೀಯರು ಗಡಿಪಾರಾಗಿದ್ದರು. ಆದರೆ, 2026ರ ಮೊದಲ ಆರು ತಿಂಗಳ ಸಂಖ್ಯೆಯೇ ಕಳೆದ ವರ್ಷದ ಒಟ್ಟು ಸಂಖ್ಯೆಯ ಶೇಕಡಾ 88 ರಷ್ಟನ್ನು ತಲುಪಿದ್ದು, ಈ ವರ್ಷದ ಅಂತ್ಯಕ್ಕೆ ಇದು ಸಾರ್ವಕಾಲಿಕ ದಾಖಲೆ ಬರೆಯುವ ಸಾಧ್ಯತೆಯಿದೆ.

➤ ಕಳೆದ ಐದು ವರ್ಷಗಳಿಂದ ಕೆನಡಾದ ಗಡಿಪಾರು ಪಟ್ಟಿಯಲ್ಲಿ ಮೆಕ್ಸಿಕೋ ಪ್ರಥಮ ಸ್ಥಾನದಲ್ಲಿತ್ತು. ಆದರೆ 2026ರಲ್ಲಿ ಭಾರತವು ಮೆಕ್ಸಿಕೋ (1,573 ಗಡಿಪಾರು) ಅನ್ನು ಹಿಂದಿಕ್ಕಿ ಮೊದಲ ಸ್ಥಾನ ಪಡೆದುಕೊಂಡಿದೆ.

➤ **ವರ್ಷವಾರು ಭಾರತೀಯರ ಗಡಿಪಾರು ಅಂಕಿ-ಅಂಶಗಳ ಏರಿಕೆ (2021 - 2026):**

2021: 603
2022: 786
2023: 1,132
2024: 2,004
2025: 3,779
2026 (ಮೊದಲ 6 ತಿಂಗಳು): 3,323

➤ ಕೆನಡಾ ಸರ್ಕಾರವು ತನ್ನ ವಲಸೆ ನಿಯಮಗಳನ್ನು ಬಿಗಿಗೊಳಿಸಿರುವುದರಿಂದ, ವೀಸಾ ನಿಯಮಗಳ ಉಲ್ಲಂಘನೆ, ಅವಧಿ ಮುಕ್ತಾಯ, ನಕಲಿ ದಾಖಲೆಗಳು, ಆಶ್ರಯ ಅರ್ಜಿಗಳ ತಿರಸ್ಕಾರ ಹಾಗೂ ಸಂಘಟಿತ ಅಪರಾಧ ಜಾಲಗಳ ದುರುಪಯೋಗದ ಕಾರಣಗಳಿಂದಾಗಿ ಭಾರತೀಯರ ಗಡಿಪಾರು ಹೆಚ್ಚಾಗುತ್ತಿದೆ.

➤ **ಕೆನಡಾದ ವಲಸೆ ಗಡಿಪಾರು ಆದೇಶಗಳ ವಿಧಗಳು:**

**ನಿರ್ಗಮನ ಆದೇಶ (Departure Order):** ವ್ಯಕ್ತಿಯು 30 ದಿನಗಳೊಳಗೆ ಸ್ವಯಂಪ್ರೇರಿತನಾಗಿ ಕೆನಡಾವನ್ನು ತೊರೆಯಬೇಕು. 30 ದಿನಗಳೊಳಗೆ ತೊರೆಯದಿದ್ದರೆ ಅದು ಸ್ವಯಂಚಾಲಿತವಾಗಿ 'ಡಿಪೋರ್ಟೇಶನ್ ಆರ್ಡರ್' ಆಗಿ ಬದಲಾಗುತ್ತದೆ.

**ವಿನಾಯಿತಿ/ನಿಷೇಧ ಆದೇಶ (Exclusion Order):** ಈ ಆದೇಶ ಪಡೆದ ವ್ಯಕ್ತಿಯು ನಿರ್ದಿಷ್ಟ ಅವಧಿಗೆ (ಸಾಮಾನ್ಯವಾಗಿ 1 ರಿಂದ 5 ವರ್ಷಗಳು) ಕೆನಡಾಕ್ಕೆ ಮರುಪ್ರವೇಶಿಸುವಂತಿಲ್ಲ.

**ಗಡಿಪಾರು ಆದೇಶ (Deportation Order):** ಕೆನಡಾಕ್ಕೆ ಶಾಶ್ವತವಾಗಿ ಪ್ರವೇಶಿಸುವುದನ್ನು ನಿಷೇಧಿಸಲಾಗುತ್ತದೆ. ಸರ್ಕಾರದಿಂದ ಲಿಖಿತ ಮರು-ಅನುಮತಿ (ARC) ಪಡೆಯದೇ ಪ್ರವೇಶಿಸಲು ಸಾಧ್ಯವಿಲ್ಲ.

## ವಿಶ್ವಸಂಸ್ಥೆ ಭದ್ರತಾ ಮಂಡಳಿ ಶಾಶ್ವತ ಸದಸ್ಯತ್ವಕ್ಕೆ ಭಾರತಕ್ಕೆ ಸ್ವೀಡನ್ ಬೆಂಬಲ



➤ ಜಾಗತಿಕ ಆಡಳಿತ ಸಂಸ್ಥೆಗಳು ಇಂದಿನ ವಾಸ್ತವಕ್ಕೆ ತಕ್ಕಂತೆ ಬದಲಾಗಬೇಕಿದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ (UNSC)

ಸುಧಾರಣೆಗಳಲ್ಲಿ ಭಾರತಕ್ಕೆ ಶಾಶ್ವತ ಸದಸ್ಯತ್ವ (Permanent Seat) ಸಿಗುವುದು ಜಾಗತಿಕ ಸಮತೋಲನಕ್ಕೆ ಅಗತ್ಯವಾಗಿದೆ ಎಂದು ಸ್ವೀಡನ್ ಪ್ರತಿಪಾದಿಸಿದೆ. ವಿಶ್ವಸಂಸ್ಥೆಯಲ್ಲಿ ಭಾರತ ವಹಿಸುತ್ತಿರುವ ಜಾಗತಿಕ ಪಾತ್ರ ಮತ್ತು ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಬೆಳೆದುಬಂದಿರುವ ಹಾದಿಯನ್ನು ಸ್ವೀಡನ್ ಮುಕ್ತಕಂಠದಿಂದ ಶ್ಲಾಘಿಸಿದೆ.

➤ **ರಕ್ಷಣಾ ವಲಯದಲ್ಲಿ ಸಹಕಾರ (Defence Cooperation):**

**ರಫ್ತುದಾರನಿಂದ ಉತ್ಪಾದಕನತ್ತ transformation:** 1970ರಿಂದಲೂ ಭಾರತ ಮತ್ತು ಸ್ವೀಡನ್ ನಡುವೆ ರಕ್ಷಣಾ ಸಹಕಾರವಿದೆ. ಆದರೆ ಈಗ ಕೇವಲ ಆಮದು ಮಾಡಿಕೊಳ್ಳುವುದಕ್ಕೆ ಸೀಮಿತವಾಗದೆ, 100% ಸ್ವೀಡಿಷ್ ಮಾಲೀಕತ್ವದ ರಕ್ಷಣಾ ಉತ್ಪಾದನಾ ಘಟಕಗಳನ್ನು ಭಾರತದಲ್ಲಿಯೇ ಸ್ಥಾಪಿಸಲಾಗುತ್ತಿದೆ (ಉದಾಹರಣೆಗೆ: ಸಾಬ್/Saab ಕಂಪನಿಯ ಕಾರ್ಲ್-ಗುಸ್ತಾವ್/Carl-Gustaf ಕ್ಷಿಪಣಿ ಉತ್ಪಾದನಾ ಘಟಕ).

**ಪ್ರಧಾನಿ ಮೋದಿಯವರ ಪರಿಕಲ್ಪನೆ:** "ಸ್ವೀಡನ್‌ನಲ್ಲಿ ನಾವೀನ್ಯತೆ (Innovate in Sweden), ಭಾರತದಲ್ಲಿ ಉತ್ಪಾದನೆ (Manufacture with India), ಜಗತ್ತಿಗೆ ಸೇವೆ (Serve the World)" ಎಂಬ ಪ್ರಧಾನಿ ನರೇಂದ್ರ ಮೋದಿಯವರ ಕರೆಗೆ ಸ್ವೀಡನ್ ಸಂಪೂರ್ಣ ಬೆಂಬಲ ಸೂಚಿಸಿದೆ.

➤ **ಆರ್ಥಿಕ ಮತ್ತು ದ್ವಿಪಕ್ಷೀಯ ಸಂಬಂಧಗಳು (Economic Ties):**

ಭಾರತದಲ್ಲಿ 300ಕ್ಕೂ ಹೆಚ್ಚು ಸ್ವೀಡಿಷ್ ಕಂಪನಿಗಳು ಕಾರ್ಯಾಚರಣೆ ನಡೆಸುತ್ತಿದ್ದು, 100ಕ್ಕೂ ಹೆಚ್ಚು ಕಂಪನಿಗಳು ಉತ್ಪಾದನಾ ಘಟಕಗಳನ್ನು ಸ್ಥಾಪಿಸಿವೆ.

ಜಾಗತಿಕ ಪೂರೈಕೆ ಸರಪಳಿಯಲ್ಲಿ (Global Supply Chain) ಭಾರತ ಪ್ರಮುಖ ಕೇಂದ್ರವಾಗಿ ಹೊರಹೊಮ್ಮುತ್ತಿದ್ದು, ಸ್ವೀಡನ್-ಭಾರತ ಸಹಕಾರ ನಿಯಮ-ಆಧಾರಿತ ಜಾಗತಿಕ ವ್ಯವಸ್ಥೆಗೆ (Rules-based world order) ಬಲ ತಂದಿದೆ.

## ನ್ಯಾಯಮೂರ್ತಿ ಆರ್.ವಿ. ಘುಗೆ ಮತ್ತು ಎಂ.ಸಿ. ತ್ರಿಪಾಠಿ: ಕೋಲ್ಕತ್ತಾ ಹಾಗೂ ಬಾಂಬೆ ಹೈಕೋರ್ಟ್ ನೂತನ ಮುಖ್ಯ ನ್ಯಾಯಮೂರ್ತಿಗಳಾಗಿ ಸಿಫಾರಸು



➤ ಭಾರತದ ಸುಪ್ರೀಂ ಕೋರ್ಟ್ ಕೊಲೇಜಿಯಂ ದೇಶದ ಪ್ರಮುಖ ಹೈಕೋರ್ಟ್‌ಗಳಿಗೆ ನೂತನ ಮುಖ್ಯ ನ್ಯಾಯಮೂರ್ತಿಗಳನ್ನು ನೇಮಕ ಮಾಡಲು ಪ್ರಮುಖ ಸಿಫಾರಸುಗಳನ್ನು ಮಾಡಿದೆ. ಬಾಂಬೆ ಹೈಕೋರ್ಟ್‌ನ ಕಾರ್ಯಕಾರಿ ಮುಖ್ಯ ನ್ಯಾಯಮೂರ್ತಿ ರವೀಂದ್ರ ವಿ. ಘುಗೆ ಅವರನ್ನು ಕೋಲ್ಕತ್ತಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯನ್ನಾಗಿ ಹಾಗೂ ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಮಹೇಶ್ ಚಂದ್ರ ತ್ರಿಪಾಠಿ ಅವರನ್ನು ಬಾಂಬೆ ಹೈಕೋರ್ಟ್‌ನ ನೂತನ ಮುಖ್ಯ ನ್ಯಾಯಮೂರ್ತಿಯನ್ನಾಗಿ ಬಡ್ತಿ ನೀಡಲು ಸಿಫಾರಸು ಮಾಡಲಾಗಿದೆ.

➤ **ನ್ಯಾಯಮೂರ್ತಿ ರವೀಂದ್ರ ವಿ. ಘುಗೆ (Justice Ravindra V. Ghuge):**

ಪ್ರಸ್ತುತ ಹುದ್ದೆ: ಬಾಂಬೆ ಹೈಕೋರ್ಟ್‌ನ ಕಾರ್ಯಕಾರಿ ಮುಖ್ಯ ನ್ಯಾಯಮೂರ್ತಿ

ಸಿಫಾರಸು: ಕೋಲ್ಕತ್ತಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ.

ಹಿನ್ನೆಲೆ:

- 1966 ಜುಲೈ 9 ರಂದು ಜನಿಸಿದ ಇವರು ಛತ್ರಪತಿ ಸಂಭಾಜಿನಗರದ (ಔರಂಗಾಬಾದ್) ಎಂ.ಪಿ. ಲಾ ಕಾಲೇಜಿನಲ್ಲಿ ಕಾನೂನು ಪದವಿ ಪಡೆದರು.
- 1990 ರಿಂದ ವಕೀಲರಾಗಿ ಸೇವೆ ಆರಂಭಿಸಿ ಕಾರ್ಮಿಕ ಮತ್ತು ಕೈಗಾರಿಕಾ ವ್ಯಾಜ್ಯಗಳ ಕ್ಷೇತ್ರದಲ್ಲಿ ಸುಮಾರು 2,000ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಕಾರ್ಮಿಕರ ಪರ ವಾದ ಮಂಡಿಸಿದ್ದರು.
- ಜೂನ್ 2013 ರಲ್ಲಿ ಬಾಂಬೆ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ಬಡ್ತಿ ಪಡೆದಿದ್ದರು.

➤ **ನ್ಯಾಯಮೂರ್ತಿ ಮಹೇಶ್ ಚಂದ್ರ ತ್ರಿಪಾಠಿ (Justice M. C. Tripathi):**

ಪ್ರಸ್ತುತ ಹುದ್ದೆ: ಅಲಹಾಬಾದ್ ಹೈಕೋರ್ಟ್‌ನ ಎರಡನೇ ಅತ್ಯಂತ ಹಿರಿಯ ನ್ಯಾಯಮೂರ್ತಿ.

ಸಿಫಾರಸು: ಬಾಂಬೆ ಹೈಕೋರ್ಟ್‌ನ 50ನೇ ಮುಖ್ಯ ನ್ಯಾಯಮೂರ್ತಿ.

ಹಿನ್ನೆಲೆ:

- 1966 ಜೂನ್ 21 ರಂದು ಜನಿಸಿದ ಇವರು ಲಕ್ನೋ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಪಡೆದರು.
- 1992 ರಲ್ಲಿ ವಕೀಲರಾಗಿ ನೋಂದಾಯಿಸಿಕೊಂಡು ಸಿವಿಲ್ ಪ್ರಕರಣಗಳಲ್ಲಿ ಪ್ರವೀಣರಾಗಿದ್ದರು.
- 2013 ರಲ್ಲಿ ಅಲಹಾಬಾದ್ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ಹಾಗೂ 2015 ರಲ್ಲಿ ಕಾಯಂ ನ್ಯಾಯಮೂರ್ತಿಯಾಗಿ ನೇಮಕಗೊಂಡರು.

## ಯುಪಿಐ (UPI) ವಹಿವಾಟುಗಳಿಗೆ ಶುಲ್ಕವಿದೆಯೇ? ಸ್ಪಷ್ಟನೆ ನೀಡಿದ ಕೇಂದ್ರ ಸರ್ಕಾರ




➤ ಭಾರತದಲ್ಲಿ ಯುಪಿಐ (Unified Payments Interface) ಬಳಕೆದಾರರಿಗೆ ಡಿಜಿಟಲ್ ಪಾವತಿಗಳ ಮೇಲಿನ ಶುಲ್ಕದ ಕುರಿತು ಹರಡಿದ್ದ ಗೊಂದಲಗಳಿಗೆ ಕೇಂದ್ರ ಹಣಕಾಸು ಸಚಿವಾಲಯ ತೆರೆ ಎಳೆದಿದೆ. ಸಾಮಾನ್ಯ ಬಳಕೆದಾರರಿಗೆ ಮತ್ತು ವ್ಯಕ್ತಿಯಿಂದ ವ್ಯಕ್ತಿಗೆ (P2P - Person to Person) ನಡೆಯುವ ಯುಪಿಐ ವಹಿವಾಟುಗಳು ಸಂಪೂರ್ಣ ಉಚಿತವಾಗಿರಲಿವೆ ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಸಂಸತ್ತಿನಲ್ಲಿ ಮಂಡಿಸಲಾದ ಮಸೂದೆಯೊಂದರ ನಂತರ ಶುಲ್ಕ ವಿಧಿಸಲಾಗುತ್ತದೆ ಎಂಬ ವದಂತಿಗಳು ಎದ್ದಿದ್ದವು.

➤ ಇತ್ತೀಚೆಗೆ ಲೋಕಸಭೆಯಲ್ಲಿ ತೆರಿಗೆ ಮತ್ತು ಇತರ ಕಾನೂನುಗಳ (ತಿದ್ದುಪಡಿ) ಮಸೂದೆ, 2026 ಅನ್ನು ಮಂಡಿಸಲಾಗಿತ್ತು. ಈ ಮಸೂದೆಯಲ್ಲಿ ಪಾವತಿ ಮತ್ತು ಇತ್ಯರ್ಥ ವ್ಯವಸ್ಥೆಗಳ ಕಾಯ್ದೆ (PSS Act, 2007) ಗೆ ತಿದ್ದುಪಡಿ ಪ್ರಸ್ತಾವಿಸಲಾಗಿದ್ದು, ಇದರಿಂದ ಯುಪಿಐ ಉಚಿತ ಸೇವೆಗೆ ಕಳಚು ಬೀಳಲಿದೆ ಎಂಬ ವರದಿಗಳು ಹರಿದಾಡಿದ್ದವು.ಇದಕ್ಕೆ ಸ್ಪಷ್ಟನೆ ನೀಡಿರುವ ಕೇಂದ್ರ ಹಣಕಾಸು ಸಚಿವಾಲಯ:

ಯುಪಿಐ ತಂತ್ರಜ್ಞಾನ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು, ಸೈಬರ್ ಭದ್ರತೆ ಹೆಚ್ಚಿಸಲು ಮತ್ತು ಮೂಲಸೌಕರ್ಯ ಸುಧಾರಿಸಲು ಈ ತಿದ್ದುಪಡಿ ಮಾಡಲಾಗಿದೆಯೇ ಹೊರತು ಸಾಮಾನ್ಯ ಜನರಿಗೆ ಹೊರೆಯಾಗಿಸಲು ಅಲ್ಲ.

ಬ್ಯಾಂಕುಗಳು ಮತ್ತು ಪಾವತಿ ಸೇವಾ ಪೂರೈಕೆದಾರರಿಗೆ (PSPs) ಸುಸ್ಥಿರ ಆದಾಯ ಮಾದರಿ (Sustainable Revenue Model) ರೂಪಿಸಲು ಈ ತಿದ್ದುಪಡಿ ಸಹಾಯ ಮಾಡಲಿದೆ.

ಭಾರತದಲ್ಲಿ ಉಚಿತ ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ಮುಂದುವರಿಸಲಾಗುತ್ತಿದ್ದು, ಬಾಹ್ಯ ಒತ್ತಡದಿಂದ ನಿಯಮ ಬದಲಾಯಿಸಲಾಗುತ್ತಿದೆ ಎಂಬ ಆರೋಪಗಳನ್ನು ಸರ್ಕಾರ ಸಂಪೂರ್ಣವಾಗಿ ತಳ್ಳಿಹಾಕಿದೆ.

➤ **ಯುಪಿಐ (UPI) ಅಂಕಿ-ಅಂಶಗಳು:**

ವಿಶ್ವದ ಅತಿದೊಡ್ಡ ರಿಯಲ್-ಟೈಮ್ ಪಾವತಿ ವ್ಯವಸ್ಥೆ: ಯುಪಿಐ ಪ್ರಸ್ತುತ ಜಗತ್ತಿನ ಅತಿ ದೊಡ್ಡ ರಿಯಲ್-ಟೈಮ್ ಇಂಟರ್ ಆಪರೇಬಲ್ ಪಾವತಿ ವ್ಯವಸ್ಥೆಯಾಗಿದೆ.

**ಜುಲೈ 2026 ವಹಿವಾಟು ಸಾಧನೆ:** ಜುಲೈ 2026 ರ ಒಂದೇ ತಿಂಗಳಲ್ಲಿ ಯುಪಿಐ ಮೂಲಕ 2,366 ಕೋಟಿಗಿಂತಲೂ ಹೆಚ್ಚು ವಹಿವಾಟುಗಳು ನಡೆದಿದ್ದು, ಇದರ ಒಟ್ಟು ಮೌಲ್ಯ ₹29.9 ಲಕ್ಷ ಕೋಟಿ ಆಗಿದೆ.
**ಜಾಗತಿಕ ವಿಸ್ತರಣೆ:** ಯುಪಿಐ ವ್ಯವಸ್ಥೆಯು ಪ್ರಸ್ತುತ ಜಗತ್ತಿನ 11 ದೇಶಗಳಲ್ಲಿ ಕಾರ್ಯಾಚರಣೆಯಲ್ಲಿದೆ.

## ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ರಾಜೀನಾಮೆ



➤ ಕರ್ನಾಟಕ ರಾಜ್ಯ ರಾಜಕೀಯದಲ್ಲಿ ಮತ್ತೊಂದು ಮಹತ್ವದ ಬೆಳವಣಿಗೆಯಾಗಿದ್ದು, ವಿಧಾನ ಪರಿಷತ್ ಸಭಾಪತಿ (Chairman of Legislative Council) ಬಸವರಾಜ ಹೊರಟ್ಟಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.
ರಾಜೀನಾಮೆ ಯಾರಿಗೆ ಸಲ್ಲಿಕೆ?: ಉಪಸಭಾಪತಿ ಹುದ್ದೆ ಖಾಲಿ ಇರುವ ಕಾರಣ, ಸಂವಿಧಾನಾತ್ಮಕ ನಿಯಮಗಳಂತೆ ವಿಧಾನ ಪರಿಷತ್ತಿನ ಕಾರ್ಯದರ್ಶಿಗೆ (Council Secretary) ರಾಜೀನಾಮೆ ಪತ್ರ ಸಲ್ಲಿಸಲಾಗಿದೆ.
ರಾಜಕೀಯ ಹಿನ್ನೆಲೆ: ಕಾಂಗ್ರೆಸ್ ಪಕ್ಷವು ವಿಧಾನ ಪರಿಷತ್ತಿನಲ್ಲಿ ಬಹುಮತ ಸಾಧಿಸಿದ ನಂತರ ತನ್ನದೇ ಅಭ್ಯರ್ಥಿಯನ್ನು ಸಭಾಪತಿಯನ್ನಾಗಿ ಆಯ್ಕೆ ಮಾಡಲು ಪ್ರಕ್ರಿಯೆ ಆರಂಭಿಸಿದೆ.
ವಿಪಕ್ಷಗಳ ಪ್ರತಿಭಟನೆ: ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟದ ನಾಯಕರು ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಭೇಟಿಯಾಗಿ, ಈ ರಾಜೀನಾಮೆ ಪ್ರಕ್ರಿಯೆಯು ಅಸಂವಿಧಾನಿಕವಾಗಿದ್ದು, ಇದನ್ನು ತಿರಸ್ಕರಿಸಬೇಕೆಂದು ಮನವಿ ಸಲ್ಲಿಸಿದ್ದಾರೆ.
**➤ ಸಂವಿಧಾನ ಮತ್ತು ವಿಧಾನ ಪರಿಷತ್ ಸಭಾಪತಿ:**
ವಿಧಿ 169 (Article 169): ರಾಜ್ಯಗಳಲ್ಲಿ ವಿಧಾನ ಪರಿಷತ್ತಿನ ಸೃಷ್ಟಿ (Abolition/Creation of Legislative Council).
ವಿಧಿ 182 (Article 182): ರಾಜ್ಯ ವಿಧಾನ ಪರಿಷತ್ತಿಗೆ ಸಭಾಪತಿ (Chairman) ಮತ್ತು ಉಪಸಭಾಪತಿ (Deputy Chairman) ಆಯ್ಕೆ.
ವಿಧಿ 183 (Article 183): ಸಭಾಪತಿ ಹಾಗೂ ಉಪಸಭಾಪತಿಯವರ ಹುದ್ದೆಯ ತೆರವು, ರಾಜೀನಾಮೆ ಮತ್ತು ಹುದ್ದೆಯಿಂದ ತೆಗೆದುಹಾಕುವಿಕೆ.
ವಿಧಿ 184 (Article 184): ಸಭಾಪತಿ ಹುದ್ದೆ ಖಾಲಿ ಇದ್ದಾಗ ಉಪಸಭಾಪತಿ ಅಥವಾ ಇತರ ಸದಸ್ಯರು ಸಭಾಪತಿಯಾಗಿ ಕಾರ್ಯನಿರ್ವಹಿಸುವುದು (Pro-tem Chairman).
**➤ ರಾಜೀನಾಮೆ ಪ್ರಕ್ರಿಯೆ ಹೇಗೆ ನಡೆಯುತ್ತದೆ?**
ಭಾರತೀಯ ಸಂವಿಧಾನದ ವಿಧಿ 183(b) ರ ಪ್ರಕಾರ, ವಿಧಾನ ಪರಿಷತ್ತಿನ ಸಭಾಪತಿಯು ತಮ್ಮ ಕೈಬರಹದ ರಾಜೀನಾಮೆ ಪತ್ರವನ್ನು ಉಪಸಭಾಪತಿಗೆ (Deputy Chairman) ಸಲ್ಲಿಸಬೇಕು.
ಒಂದು ವೇಳೆ ಉಪಸಭಾಪತಿಯ ಹುದ್ದೆಯೂ ಖಾಲಿಯಿದ್ದರೆ, ರಾಜೀನಾಮೆಯನ್ನು ವಿಧಾನ ಪರಿಷತ್ತಿನ ಕಾರ್ಯದರ್ಶಿಗೆ (Secretary of the Legislative Council) ಸಲ್ಲಿಸಲಾಗುತ್ತದೆ.
**➤ ಬಸವರಾಜ ಹೊರಟ್ಟಿ ಅವರ ಪ್ರಮುಖ ಹಿನ್ನೆಲೆ:**
ದಾಖಲೆಯ ಸಾಧನೆ: ಬಸವರಾಜ ಹೊರಟ್ಟಿ ಅವರು ಶಿಕ್ಷಕರ ಕ್ಷೇತ್ರದಿಂದ ಸತತ 8 ಬಾರಿ (8 consecutive terms) ವಿಧಾನ ಪರಿಷತ್ ಸದಸ್ಯರಾಗಿ (MLC) ಆಯ್ಕೆಯಾಗಿ ದಾಖಲೆ ಬರೆದಿದ್ದಾರೆ.
ಪಕ್ಷಾಂತರ ಮತ್ತು ಹುದ್ದೆ: ಜೆಡಿಎಸ್‌ನಲ್ಲಿದ್ದ ಇವರು ಮೇ 2022ರಲ್ಲಿ ಬಿಜೆಪಿಗೆ ಸೇರ್ಪಡೆಗೊಂಡು, ತದನಂತರ ವಿಧಾನ ಪರಿಷತ್ ಸಭಾಪತಿಯಾಗಿ ಆಯ್ಕೆಯಾಗಿದ್ದರು.

# 11 Aug 2026

## ಜಿನೀವಾದ UN ಕಚೇರಿಗೆ 5 ನವಿಲುಗಳನ್ನು ಉಡುಗೊರೆಯಾಗಿ ನೀಡಿದ ಭಾರತ: ದಶಕಗಳ ಹಳೆಯ ರಾಜತಾಂತ್ರಿಕ ಸಂಪ್ರದಾಯ ಮರುಜೀವ!



➤ ಜಿನೀವಾದಲ್ಲಿರುವ ವಿಶ್ವಸಂಸ್ಥೆಯ ಕಚೇರಿಗೆ (UNOG) ಭಾರತವು ಅಪರೂಪದ ಬಿಳಿ ನವಿಲು ಸೇರಿದಂತೆ 5 ಭಾರತೀಯ ನವಿಲುಗಳನ್ನು ಉಡುಗೊರೆಯಾಗಿ ನೀಡುವ ಮೂಲಕ ದಶಕಗಳ ಹಳೆಯ ಅಪರೂಪದ ರಾಜತಾಂತ್ರಿಕ ಹಾಗೂ ಪರಿಸರ ಸಂಪ್ರದಾಯವನ್ನು ಮರುಜೀವಗೊಳಿಸಿದೆ. ಆಗಸ್ಟ 7, 2026 ರಂದು ಸ್ವಿಟ್ಜರ್‌ಲ್ಯಾಂಡ್‌ನ ಜಿನೀವಾದಲ್ಲಿ ನಡೆದ ವಿಶೇಷ ಕಾರ್ಯಕ್ರಮದಲ್ಲಿ ಈ ಐತಿಹಾಸಿಕ ಹಸ್ತಾಂತರ ನೆರವೇರಿತು.
ನೀಡಿದ ಉಡುಗೊರೆ: 4 ಸಾಮಾನ್ಯ ನೀಲಿ ನವಿಲುಗಳು (Blue Peafowl) ಮತ್ತು 1 ಅಪರೂಪದ ಬಿಳಿ ಗಂಡು ನವಿಲು (White Peacock).
ಸಮಾರಂಭದ ವಿವರ: ಜಿನೀವಾದ ವಿಶ್ವಸಂಸ್ಥೆ ಕಚೇರಿಯ ಭಾರತದ ಖಾಯಂ ಪ್ರತಿನಿಧಿ ಅರಿಂದಮ್ ಬಾಗ್ಚಿ (Arindam Bagchi) ಅವರು ವಿಶ್ವಸಂಸ್ಥೆ ಜಿನೀವಾ ಕಚೇರಿಯ ಡೈರೆಕ್ಟರ್ ಜನರಲ್ ತಾತ್ಯಾನಾ ವಲೋವಾಯಾ (Tatiana Valovaya) ಅವರಿಗೆ ಈ ನವಿಲುಗಳನ್ನು ಹಸ್ತಾಂತರಿಸಿದರು.
ಬಣ್ಣದ ಸಂಕೇತ: ನೀಲಿ ಮತ್ತು ಬಿಳಿ ಬಣ್ಣಗಳು ವಿಶ್ವಸಂಸ್ಥೆಯ (UN) ಧ್ವಜ ಹಾಗೂ ಲಾಂಛನದ ಬಣ್ಣಗಳನ್ನು ಪ್ರತಿನಿಧಿಸುತ್ತವೆ.
ವಸತಿ ಸ್ಥಾನ: ಈ ನವಿಲುಗಳನ್ನು ಜಿನೀವಾದ ಅರಿಯಾನಾ ಪಾರ್ಕ್ (Ariana Park) ನಲ್ಲಿರುವ ಹೆಕ್ಟೇರ್ ಪ್ರದೇಶದಲ್ಲಿ ಮುಕ್ತವಾಗಿ ಹಾರಾಡಲು ಬಿಡಲಾಗುತ್ತದೆ.
➤ ಇಂದಿರಾ ಗಾಂಧಿ ಸಂಪ್ರದಾಯದ ಪುನರುಜ್ಜೀವನ (1981): 1981 ರಲ್ಲಿ ಭಾರತದ ಅಂದಿನ ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು ದೆಹಲಿ ಮೃಗಾಲಯದಿಂದ ಒಂದು ಜೋಡಿ ನವಿಲುಗಳನ್ನು ಜಿನೀವಾದ UN ಕಚೇರಿಗೆ ಪ್ರಥಮ ಬಾರಿಗೆ ಉಡುಗೊರೆಯಾಗಿ ನೀಡಿದ್ದರು. ಪ್ರಸ್ತುತ ನೀಡಲಾಗಿರುವ 5 ನವಿಲುಗಳು ಅದೇ 45 ವರ್ಷಗಳ ಹಳೆಯ ಸಂಪ್ರದಾಯಕ್ಕೆ ಮರುಜೀವ ನೀಡಿದೆ.
➤ ಅರಿಯಾನಾ ಪಾರ್ಕ್ ಮತ್ತು ನವಿಲುಗಳ ಇತಿಹಾಸ:
ಜಿನೀವಾದ ವಿಶ್ವಸಂಸ್ಥೆಯ 'ಪ್ಯಾಲೇಸ್ ಡೆಸ್ ನೇಷನ್ಸ್' ಕಚೇರಿ ಇರುವ 46 ಹೆಕ್ಟೇರ್ ವಿಸ್ತೀರ್ಣದ ಅರಿಯಾನಾ ಪಾರ್ಕ್ ನವಿಲುಗಳಿಗೆ ಹೆಸರುವಾಸಿಯಾಗಿದೆ.
1890 ರಲ್ಲಿ ಸ್ವಿಸ್ ಪುರಾತತ್ವಶಾಸ್ತ್ರಜ್ಞ ಗುಸ್ತಾವ್ ರೆವಿಲಿಯೋಡ್ (Gustave Revilliod) ಅವರು ಈ ರಮಣೀಯ ಭೂಮಿಯನ್ನು ಜಿನೀವಾ ನಗರಕ್ಕೆ ವಹಿಸಿಕೊಡುವಾಗ, 'ಇಲ್ಲಿ ನವಿಲುಗಳು ಸದಾ ಸಂಚರಿಸುತ್ತಿರಬೇಕು' ಎಂಬ ಷರತ್ತು ವಿಧಿಸಿದ್ದರು.
1997 ರಲ್ಲಿ ಜಪಾನ್‌ನ ಮೃಗಾಲಯವೊಂದು ಜಿನೀವಾ UN ಕಚೇರಿಗೆ ನವಿಲುಗಳನ್ನು ಕೊಡುಗೆಯಾಗಿ ನೀಡಿತ್ತು.
**➤ ನವಿಲುಗಳ ಆರೈಕೆ ಮತ್ತು ಜೈವಿಕ ವೈವಿಧ್ಯತೆ:**
ಆರೈಕೆ: 'ಜಿನೀವಾ ಬಯೋಪಾರ್ಕ್' (Geneva Bioparc) ಸಂಸ್ಥೆಯು ತಜ್ಞ ಪಶುವೈದ್ಯರೊಂದಿಗೆ ಈ ನವಿಲುಗಳ ಆರೋಗ್ಯ ಮತ್ತು ಆರೈಕೆಯ ಮೇಲ್ವಿಚಾರಣೆ ವಹಿಸಲಿದೆ.
ಆರಂಭಿಕ ಹಂತ: ಮೊದಲ 3 ತಿಂಗಳು ಇವುಗಳನ್ನು ಆವರಣದಲ್ಲಿದ್ದು (Enclosed Habitat) ವಾತಾವರಣಕ್ಕೆ ಒಗ್ಗಿಕೊಳ್ಳಲು ಬಿಡಲಾಗುತ್ತದೆ. ತದನಂತರ ಅರಿಯಾನಾ ಪಾರ್ಕ್ ನಲ್ಲಿ ಸ್ವತಂತ್ರವಾಗಿ ಸಂಚರಿಸಲು ಬಿಡಲಾಗುತ್ತದೆ.
ಹೆಸರಿಡುವ ಸ್ಪರ್ಧೆ: ವಿಶ್ವಸಂಸ್ಥೆಯು ಈ 5 ನವಿಲುಗಳಿಗೆ ಸಾರ್ವಜನಿಕರಿಂದ ಸೂಕ್ತ ಹೆಸರುಗಳನ್ನು ಆಯ್ಕೆ ಮಾಡಲು ಸ್ಪರ್ಧೆಯನ್ನು ಆಯೋಜಿಸಲು ನಿರ್ಧರಿಸಿದೆ.

## ಭಾರತದ ಖ್ಯಾತ ಭೌತವಿಜ್ಞಾನಿ ದೀಪಕ್ ಧಾರ್‌ಗೆ ಪ್ರತಿಷ್ಠಿತ 'ಡಿರಾಕ್ ಪದಕ 2026' ಗೌರವ!




➤ ಭಾರತದ ಪ್ರಮುಖ ಸೈದ್ಧಾಂತಿಕ ಭೌತವಿಜ್ಞಾನಿ (Theoretical Physicist) ಪ್ರೊ. ದೀಪಕ್ ಧಾರ್ (Deepak Dhar) ಅವರಿಗೆ 2026ನೇ ಸಾಲಿನ ಪ್ರತಿಷ್ಠಿತ 'ಡಿರಾಕ್ ಪದಕ' (Dirac Medal) ನೀಡಿ ಗೌರವಿಸಲಾಗಿದೆ. ಸಾಂಖ್ಯಿಕ ಬಲವಿಜ್ಞಾನ (Statistical Mechanics) ಹಾಗೂ ಸಂಕೀರ್ಣ ವ್ಯವಸ್ಥೆಗಳ (Complex Systems) ಕ್ಷೇತ್ರದಲ್ಲಿ ಅವರು ಮಾಡಿದ ಕ್ರಾಂತಿಕಾರಿ ಸಂಶೋಧನೆಗಳಿಗಾಗಿ ಇಟಲಿಯ ಇಂಟರ್ನ್ಯಾಷನಲ್ ಸೆಂಟರ್ ಫಾರ್ ಥಿಯರೆಟಿಕಲ್ ಫಿಸಿಕ್ಸ್ (ICTP) ಈ ಪ್ರಶಸ್ತಿಯನ್ನು ಘೋಷಿಸಿದೆ.

➤ ಇಟಲಿಯ ಟ್ರೈಸ್ಟೆಯಲ್ಲಿರುವ ICTP (International Centre for Theoretical Physics) ಸಂಸ್ಥೆಯು ಪ್ರತಿವರ್ಷ ಸೈದ್ಧಾಂತಿಕ ಭೌತಶಾಸ್ತ್ರದಲ್ಲಿ ಅತ್ಯುತ್ತಮ ಕೊಡುಗೆ ನೀಡಿದ ವಿಜ್ಞಾನಿಗಳಿಗೆ 'ಡಿರಾಕ್ ಪದಕ' ನೀಡುತ್ತದೆ. 2026ರ ಈ ಪದಕವನ್ನು ಪ್ರೊ. ದೀಪಕ್ ಧಾರ್ ಅವರೊಂದಿಗೆ ಜಗತ್ತಿನ ಇತರ ಮೂವರು ಅಗ್ರಗಣ್ಯ ವಿಜ್ಞಾನಿಗಳಿಗೆ ಜಂಟಿಯಾಗಿ ಘೋಷಿಸಲಾಗಿದೆ:

ಪ್ರೊ. ದೀಪಕ್ ಧಾರ್ (ICTS-TIFR, ಭಾರತ)
ಬರ್ನಾರ್ಡ್ ಡೆರಿಡಾ (Bernard Derrida) (ಫ್ರಾನ್ಸ್)
ಮಾರ್ಕ್ ಮೇಜಾರ್ಡ್ (Marc Mézard) (ಇಟಲಿ)
ಹೈಮ್ ಸೋಂಪೋಲಿನ್ಸ್ಕಿ (Haim Sompolinsky) (ಇಸ್ರೇಲ್/ಅಮೆರಿಕ)

**➤ ಪ್ರೊ. ದೀಪಕ್ ಧಾರ್ ಅವರ ಸಂಶೋಧನೆಯ ಪ್ರಾಮುಖ್ಯತೆ:**
ಪ್ರೊ. ಧಾರ್ ಅವರು 'ಸಾಂಖ್ಯಿಕ ಬಲವಿಜ್ಞಾನ' (Statistical Mechanics) ಕ್ಷೇತ್ರದಲ್ಲಿ ಮೂಲಭೂತ ಸಂಶೋಧನೆಗಳನ್ನು ನಡೆಸಿದ್ದಾರೆ.
ಮರಳು ರಾಶಿ ಮಾದರಿ (Sandpile Model): ಸಂಕೀರ್ಣ ವ್ಯವಸ್ಥೆಗಳಲ್ಲಿ ಸಣ್ಣ ಸಣ್ಣ ಬದಲಾವಣೆಗಳು ಹೇಗೆ ದೊಡ್ಡ ಮಟ್ಟದ ತೀಕ್ಷ್ಣ ಘಟನೆಗಳಿಗೆ (Critical Events) ಕಾರಣವಾಗುತ್ತವೆ ಎಂಬುದನ್ನು ವಿವರಿಸಲು ಇವರು ರೂಪಿಸಿದ ಮಾದರಿ ಮತ್ತು 'ಧಾರ್ಸ್ ಬರ್ನಿಂಗ್ ಅಲ್ಗಾರಿದಮ್' (Dhar's Burning Algorithm) ಅತ್ಯಂತ ಪ್ರಸಿದ್ಧವಾಗಿದೆ.
ಅನ್ವಯಗಳು (Applications): ಈ ಸಿದ್ಧಾಂತವನ್ನು ಭೂಕಂಪಗಳು (Earthquakes), ಸಂಚಾರ ದಟ್ಟಣೆ (Traffic Jams), ಷೇರು ಮಾರುಕಟ್ಟೆಯ ಏರಿಳಿತಗಳು, ಕೃತಕ ಬುದ್ಧಿಮತ್ತೆ (Artificial Intelligence) ಹಾಗೂ ನ್ಯೂರೋಸೈನ್ಸ್ ಕ್ಷೇತ್ರಗಳಲ್ಲಿ ಬಳಸಲಾಗುತ್ತಿದೆ.

**➤ ಡಿರಾಕ್ ಪದಕ:** ಪ್ರಸಿದ್ಧ ಭೌತವಿಜ್ಞಾನಿ, ನೋಬೆಲ್ ವಿಜೇತ ಪಾಲ್ ಡಿರಾಕ್ (Paul Dirac) ಅವರ ಗೌರವಾರ್ಥವಾಗಿ 1985ರಲ್ಲಿ ಈ ಪದಕವನ್ನು ICTP ಸ್ಥಾಪಿಸಿತು. ಸೈದ್ಧಾಂತಿಕ ಭೌತಶಾಸ್ತ್ರದ ಅತ್ಯುನ್ನತ ಬಹುಮಾನಗಳಲ್ಲಿ ಒಂದಾಗಿದ್ದು, ಸ್ಟೀಫನ್ ಹಾಕಿಂಗ್ ಸೇರಿದಂತೆ ಜಗತ್ತಿನ ಪ್ರಸಿದ್ಧ ವಿಜ್ಞಾನಿಗಳು ಈ ಪದಕ ಪಡೆದಿದ್ದಾರೆ.

## ಇರಾನ್‌ನ ಉನ್ನತ ಭದ್ರತಾ ಮಂಡಳಿ (SNSC) ನೂತನ ಕಾರ್ಯದರ್ಶಿಯಾಗಿ ಮೊಹ್ಸೆನ್ ರೆಜಾಯಿ ನೇಮಕ



➤ ಇರಾನ್ ದೇಶದ ಅತ್ಯುನ್ನತ ಭದ್ರತಾ ಹಾಗೂ ವಿದೇಶಾಂಗ ನೀತಿ ನಿರ್ಧಾರಕ ಸಂಸ್ಥೆಯಾದ ಸುಪ್ರೀಂ ನ್ಯಾಷನಲ್ ಸೆಕ್ಯುರಿಟಿ ಕೌನ್ಸಿಲ್ (Supreme National Security Council - SNSC) ನ ನೂತನ ಕಾರ್ಯದರ್ಶಿ (Secretary) ಮತ್ತು ಮುಖ್ಯಸ್ಥರಾಗಿ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (IRGC) ನ ಮಾಜಿ ಕಮಾಂಡರ್ ಮೊಹ್ಸೆನ್ ರೆಜಾಯಿ (Mohsen Rezaei) ಅವರು ನೇಮಕಗೊಂಡಿದ್ದಾರೆ. ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯನ್ (Masoud Pezeshkian) ಅವರು ಈ ನೇಮಕಾತಿಯನ್ನು ಅಧಿಕೃತವಾಗಿ ಘೋಷಿಸಿದ್ದಾರೆ.

**➤ ಮೊಹ್ಸೆನ್ ರೆಜಾಯಿ:**
IRGC ಮಾಜಿ ಕಮಾಂಡರ್: 1981 ರಿಂದ 1997 ರವರೆಗೆ (ಇರಾನ್-ಇರಾಕ್ ಯುದ್ಧದ ನಿರ್ಣಾಯಕ ಅವಧಿ ಸೇರಿದಂತೆ) ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (IRGC) ನ ಪ್ರಧಾನ ಕಮಾಂಡರ್ ಆಗಿ ಸೇವೆ ಸಲ್ಲಿಸಿದ್ದಾರೆ.
ಆರ್ಥಿಕ ಉಪಾಧ್ಯಕ್ಷ: 2021 ರಿಂದ 2023 ರವರೆಗೆ ಇರಾನ್‌ನ ಆರ್ಥಿಕ ವ್ಯವಹಾರಗಳ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.
ಸಲಹಾ ಮಂಡಳಿ: ಇರಾನ್‌ನ ಸಂಸತ್ತು ಮತ್ತು ಗಾರ್ಡಿಯನ್ ಕೌನ್ಸಿಲ್ ನಡುವಿನ ಭಿನ್ನಾಭಿಪ್ರಾಯ ಬಗೆಹರಿಸುವ 'ಎಕ್ಸ್‌ಪೀಡಿಯನ್ಸಿ ಡಿಸರ್ನ್‌ಮೆಂಟ್ ಕೌನ್ಸಿಲ್' (Expediency Discernment Council) ನ ಕಾರ್ಯದರ್ಶಿಯಾಗಿಯೂ ಎರಡು ದಶಕಗಳಿಗೂ ಹೆಚ್ಚು ಕಾಲ ಕಾರ್ಯನಿರ್ವಹಿಸಿದ್ದಾರೆ.
ಶಿಕ್ಷಣ: ಇವರು ತೆಹ್ರಾನ್ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಪಿಎಚ್‌ಡಿ (PhD in Economics) ಪದವಿ ಪಡೆದಿದ್ದಾರೆ.

➤ ಇರಾನ್ ಸುಪ್ರೀಂ ನ್ಯಾಷನಲ್ ಸೆಕ್ಯುರಿಟಿ ಕೌನ್ಸಿಲ್ (SNSC) ಕುರಿತು:
ಸಂಸ್ಥೆಯ ಸ್ವರೂಪ: SNSC ಇರಾನ್‌ನ ರಾಷ್ಟ್ರೀಯ ರಕ್ಷಣೆ, ಭದ್ರತೆ ಮತ್ತು ವಿದೇಶಾಂಗ ನೀತಿಗಳನ್ನು ಸಂಘಟಿಸುವ ಅತ್ಯುನ್ನತ ಅಧಿಕಾರ ಹೊಂದಿದ ಮಂಡಳಿಯಾಗಿದೆ.
ಅಧ್ಯಕ್ಷತೆ: ದೇಶದ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಅಧ್ಯಕ್ಷರು (ಪ್ರಸ್ತುತ ಮಸೌದ್ ಪೆಜೆಶ್ಕಿಯನ್) ಈ ಮಂಡಳಿಯ ಅಧ್ಯಕ್ಷರಾಗಿರುತ್ತಾರೆ.
ಸದಸ್ಯರು: ಮಿಲಿಟರಿ ಮುಖ್ಯಸ್ಥರು, ಗುಪ್ತಚರ ಇಲಾಖೆ ಅಧಿಕಾರಿಗಳು, ಸರ್ಕಾರದ ಪ್ರಮುಖ ಸಚಿವರು ಹಾಗೂ ಸುಪ್ರೀಂ ಲೀಡರ್ ಅವರ ಪ್ರತಿನಿಧಿಗಳು ಈ ಕೌನ್ಸಿಲ್‌ನ ಸದಸ್ಯರಾಗಿರುತ್ತಾರೆ.

## ಭಾರತೀಯ ನೌಕಾಪಡೆ - ಯುಎಸ್ ನೌಕಾಪಡೆ ನಡುವಿನ 'EOD' ಸಮರಾಭ್ಯಾಸ 2026: ಕೊಚ್ಚಿಯಲ್ಲಿ ಚಾಲನೆ!



➤ ಭಾರತೀಯ ನೌಕಾಪಡೆ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನದ (US) ನೌಕಾಪಡೆಯ ವಿಶೇಷ ಡೈವಿಂಗ್ ಮತ್ತು ಎಕ್ಸ್‌ಪ್ಲೋಸಿವ್ ಆರ್ಡ್ನೆನ್ಸ್ ಡಿಸ್ಪೋಸಲ್ (EOD - ಸ್ಫೋಟಕ ವಸ್ತುಗಳ ನಿಷ್ಕ್ರಿಯಗೊಳಿಸುವಿಕೆ) ತಂಡಗಳ ನಡುವೆ ದ್ವಿಪಕ್ಷೀಯ ಮಿಲಿಟರಿ ಅಭ್ಯಾಸವು ಕೊಚ್ಚಿಯಲ್ಲಿ ಆರಂಭವಾಗಿದೆ. ಈ 5 ದಿನಗಳ ವಿಶೇಷ ತರಬೇತಿ ಕಾರ್ಯಕ್ರಮದಲ್ಲಿ ಎರಡೂ ದೇಶಗಳ ನೌಕಾಪಡೆಯ ನಿಪುಣ ಸಿಬ್ಬಂದಿಗಳು ಜಂಟಿಯಾಗಿ ಪಾಲ್ಗೊಂಡು, ಸಮುದ್ರದಾಳದಲ್ಲಿರುವ ಸ್ಫೋಟಕಗಳನ್ನು ಸುರಕ್ಷಿತವಾಗಿ ಶಮನಗೊಳಿಸುವ ಹಾಗೂ ಸಾಲ್ವೇಜ್ (ಉದ್ಧಾರ/ರಕ್ಷಣೆ) ತಂತ್ರಗಳನ್ನು ಹಂಚಿಕೊಳ್ಳಲಿದ್ದಾರೆ.

**➤ ಅಭ್ಯಾಸದ ಪ್ರಮುಖ ಉದ್ದೇಶಗಳು:**
ಇಂಟರ್‌ಆಪರೇಬಿಲಿಟಿ ಹೆಚ್ಚಳ (Interoperability): ಎರಡೂ ನೌಕಾಪಡೆಗಳ ಕಾರ್ಯತಂತ್ರ ವಿಧಾನಗಳು ಮತ್ತು ಸಮುದ್ರ ಕಾರ್ಯಾಚರಣೆಗಳ ನಡುವೆ ಸಾಮರಸ್ಯ ಸಾಧಿಸುವುದು.

ತಂತ್ರಜ್ಞಾನ ವಿನಿಮಯ: ಆಧುನಿಕ ಇಒಡಿ (EOD) ವಿಧಾನಗಳು, ಹೊಸ ತಂತ್ರಜ್ಞಾನಗಳು ಹಾಗೂ ಅತ್ಯುತ್ತಮ ಕಾರ್ಯಾಚರಣಾ ಪದ್ಧತಿಗಳನ್ನು (Best Practices) ಪರಸ್ಪರ ಹಂಚಿಕೊಳ್ಳುವುದು.
ಪ್ರಾಯೋಗಿಕ ತರಬೇತಿ (Scenario-based Training): ನೈಜ ಪರಿಸ್ಥಿತಿಗೆ ಅನುಗುಣವಾದ ಪ್ರಾಯೋಗಿಕ ಅಭ್ಯಾಸಗಳು, ಉಪಕರಣಗಳ ಪ್ರದರ್ಶನ (Equipment Demonstrations) ಹಾಗೂ ವಿಷಯ ತಜ್ಞರ ವಿನಿಮಯ (SMEEs).
**ಸಮುದ್ರ ಸುರಕ್ಷತೆ ಮತ್ತು ಸಾಮರ್ಥ್ಯ:** ಸಂಕೀರ್ಣ ಸಮುದ್ರ ಸವಾಲುಗಳನ್ನು ಜಂಟಿಯಾಗಿ ಎದುರಿಸುವ ಸಾಮರ್ಥ್ಯವನ್ನು ವೃದ್ಧಿಸುವುದು.
➤ ಹಿನ್ನೆಲೆ ಮತ್ತು ಪ್ರಾಮುಖ್ಯತೆ:
ಪ್ರಾರಂಭ: ಭಾರತ ಮತ್ತು ಯುಎಸ್ ನೌಕಾಪಡೆಗಳು 2005 ರಿಂದ ಜಂಟಿ ಸಾಲ್ವೇಜ್ ಮತ್ತು ಇಒಡಿ ಅಭ್ಯಾಸಗಳನ್ನು (SALVEX ಸರಣಿ) ನಡೆಸಿಕೊಂಡು ಬರುತ್ತಿವೆ.
**ಭಾರತ-ಯುಎಸ್ ರಕ್ಷಣಾ ಸಂಬಂಧ:** ಇಂಡೋ-ಪೆಸಿಫಿಕ್ ವಲಯದಲ್ಲಿ ಸಮುದ್ರ ಭದ್ರತೆಯನ್ನು ಬಲಪಡಿಸಲು ಮತ್ತು ದ್ವಿಪಕ್ಷೀಯ ರಕ್ಷಣಾ ಸಹಕಾರವನ್ನು ವೃದ್ಧಿಸಲು ಈ ಜಂಟಿ ಅಭ್ಯಾಸಗಳು ಪ್ರಮುಖ ಪಾತ್ರ ವಹಿಸುತ್ತವೆ.

## ಕೊರಿಯಾ ಮಾಸ್ಟರ್ಸ್ 2026: ಚೊಚ್ಚಲ BWF ವರ್ಲ್ಡ್ ಟೂರ್ ಶೀರ್ಷಿಕೆ ಗೆದ್ದ ಅಶ್ಮಿತಾ ಚಾಲಿಹಾ



➤ ಭಾರತದ ಉದಯೋನ್ಮುಖ ಬ್ಯಾಡ್ಮಿಂಟನ್ ಆಟಗಾರ್ತಿ ಅಶ್ಮಿತಾ ಚಾಲಿಹಾ (Ashmita Chaliha) ಅವರು ಕೊರಿಯಾ ಮಾಸ್ಟರ್ಸ್ 2026 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್ ಶೀರ್ಷಿಕೆಯನ್ನು ಮುಡಿಗೇರಿಸಿಕೊಳ್ಳುವ ಮೂಲಕ ಐತಿಹಾಸಿಕ ಸಾಧನೆ ಮಾಡಿದ್ದಾರೆ. ಫೈನಲ್ ಪಂದ್ಯದಲ್ಲಿ ಚೀನಾದ ಬಲಶಾಲಿ ಆಟಗಾರ್ತಿಯನ್ನು ಮಣಿಸಿದ ಅವರು ತಮ್ಮ ವೃತ್ತಿಜೀವನದ ಮೊದಲ BWF (Badminton World Federation) ವರ್ಲ್ಡ್ ಟೂರ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ.
➤ **ಪಂದ್ಯದ ಪ್ರಮುಖ ವಿವರಗಳು:**
ರೋಮಾಂಚಕ ಫೈನಲ್ ಹಣಿತ: ಫೈನಲ್ ಪಂದ್ಯದ ಆರಂಭಿಕ ಗೇಮ್‌ನಲ್ಲಿ 14-21 ಅಂತರದಿಂದ ಹಿನ್ನಡೆ ಅನುಭವಿಸಿದ ಅಶ್ಮಿತಾ, ನಂತರದ ಎರಡು ಗೇಮ್‌ಗಳಲ್ಲಿ (21-14, 21-14) ಅದ್ಭುತ ಕಂಬ್ಯಾಕ್ ಮಾಡುವ ಮೂಲಕ 53 ನಿಮಿಷಗಳಲ್ಲಿ ಪಂದ್ಯವನ್ನು ಗೆದ್ದುಕೊಂಡರು.
ಸೆಮಿಫೈನಲ್ ಪಂದ್ಯ: ಸೆಮಿಫೈನಲ್ ಹಣಿತದಲ್ಲಿ ಅಶ್ಮಿತಾ ಚಾಲಿಹಾ ಅವರು ಭಾರತದ ಮತ್ತೊಬ್ಬ ಆಟಗಾರ್ತಿ ರಕ್ಷಿತಾ ರಾಮ್ ರಾಜ್ ಅವರನ್ನು 21-13, 16-21, 21-13 ಸೆಟ್‌ಗಳಿಂದ ಸೋಲಿಸಿ ಫೈನಲ್ ಪ್ರವೇಶಿಸಿದ್ದರು.
➤ **ಅಶ್ಮಿತಾ ಚಾಲಿಹಾ ಅವರ ಪ್ರಮುಖ ಕ್ರೀಡಾ ಸಾಧನೆಗಳು:**
ರಾಜ್ಯ: ಅಸ್ಸಾಂ (ಭಾರತ)
2024 ಏಷ್ಯಾ ಟೀಮ್ ಚಾಂಪಿಯನ್‌ಶಿಪ್: ಭಾರತೀಯ ಮಹಿಳಾ ತಂಡದೊಂದಿಗೆ ಚಿನ್ನದ ಪದಕ ಗೆದ್ದಿದ್ದರು.
2019 ದಕ್ಷಿಣ ಏಷ್ಯನ್ ಗೇಮ್ಸ್ (South Asian Games): ಮಹಿಳಾ ಸಿಂಗಲ್ಸ್ ಮತ್ತು ಟೀಮ್ ವಿಭಾಗ ಎರಡರಲ್ಲೂ ಚಿನ್ನದ ಪದಕ (Gold Medal) ಪಡೆದಿದ್ದಾರೆ.
2026 ಕೊರಿಯಾ ಮಾಸ್ಟರ್ಸ್: ಚೊಚ್ಚಲ ಬಿಡಬ್ಲ್ಯೂಎಫ್ (BWF) ವರ್ಲ್ಡ್ ಟೂರ್ ಟ್ರೋಫಿ.

## ಅಂತರರಾಷ್ಟ್ರೀಯ ಭಾಷಾವಿಜ್ಞಾನ ಒಲಿಂಪಿಯಾಡ್ 2026: ಭಾರತಕ್ಕೆ 1 ಚಿನ್ನ, 3 ಕಾಂಸ್ಯ ಪದಕ!



➤ ರೊಮೇನಿಯಾದಲ್ಲಿ ನಡೆದ ಅಂತರರಾಷ್ಟ್ರೀಯ ಭಾಷಾವಿಜ್ಞಾನ ಒಲಿಂಪಿಯಾಡ್ (IOL) 2026 ರಲ್ಲಿ ಭಾರತದ ವಿದ್ಯಾರ್ಥಿಗಳ ತಂಡವು ಅದ್ಭುತ ಸಾಧನೆ ಮಾಡಿದ್ದು, 1 ಚಿನ್ನ, 3 ಕಾಂಸ್ಯ ಪದಕ ಹಾಗೂ ಒಂದು ಗೌರವಾನ್ವಿತ ಉಲ್ಲೇಖ (Honourable Mention) ಪಡೆದುಕೊಂಡಿದೆ.
ಆಯೋಜಿತ ದೇಶ: ರೊಮೇನಿಯಾ (Romania)
ಪದಕಗಳ ಸಂಖ್ಯೆ: 1 ಚಿನ್ನ, 3 ಕಾಂಸ್ಯ ಹಾಗೂ 1 ಗೌರವಾನ್ವಿತ ಉಲ್ಲೇಖ (ಒಟ್ಟು 4 ಪದಕಗಳು)
ಚಿನ್ನದ ಪದಕ ವಿಜೇತರು: ಶ್ರೀಲಕ್ಷ್ಮಿ ವೆಂಕಟರಾಮನ್ (Shrilakshmi Venkatraman)
ಕಾಂಸ್ಯ ಪದಕ ವಿಜೇತರು:
ಆರವ್ ಅನಿಲ್ ರಾವ್ (Aarav Anil Rao)
ನಿಶಾಂತ್ ಶಂಕರ್ ಲಕ್ಷ್ಮಣನ್ (Nishanth Shankar Lakshmanan)
ಅದ್ವಯ್ ಮಿಶ್ರಾ (Advay Misra)
ಗೌರವಾನ್ವಿತ ಉಲ್ಲೇಖ (Honourable Mention): ಸೋಹಂ ಅಮಿತ್ ಪೆಡ್ನೇಕರ್ (Soham Amit Pednekar)
ರಾಷ್ಟ್ರೀಯ ಆಯ್ಕೆ ಸಂಸ್ಥೆ: ಪಾಣಿನಿ ಭಾಷಾವಿಜ್ಞಾನ ಒಲಿಂಪಿಯಾಡ್ (Panini Linguistics Olympiad - PLO) & IIIT ಹೈದರಾಬಾದ್.
➤ **ಸಾಧನೆಯ ವಿವರ:** ಅಂತರರಾಷ್ಟ್ರೀಯ ಭಾಷಾವಿಜ್ಞಾನ ಒಲಿಂಪಿಯಾಡ್‌ನಲ್ಲಿ ಪ್ರಪಂಚದ 40 ಕ್ಕೂ ಹೆಚ್ಚು ದೇಶಗಳ ಶಾಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಸ್ಪರ್ಧೆಯಲ್ಲಿ ಶ್ರೀಲಕ್ಷ್ಮಿ ವೆಂಕಟರಾಮನ್ ಅವರು ಅತ್ಯುತ್ತಮ ಸಾಧನೆ ತೋರಿ ಚಿನ್ನದ ಪದಕ ಗಳಿಸಿದರು. ಇವರ ಜೊತೆಗೆ ಆರವ್ ಅನಿಲ್ ರಾವ್, ನಿಶಾಂತ್ ಶಂಕರ್ ಲಕ್ಷ್ಮಣನ್ ಮತ್ತು ಅದ್ವಯ್ ಮಿಶ್ರಾ ಕಾಂಸ್ಯ ಪದಕಗಳನ್ನು ತಮ್ಮದಾಗಿಸಿಕೊಂಡರೆ, ಸೋಹಂ ಅಮಿತ್ ಪೆಡ್ನೇಕರ್ ಗೌರವಾನ್ವಿತ ಉಲ್ಲೇಖಕ್ಕೆ ಭಾಜನರಾದರು.
➤ ಭಾರತವು 2009 ರಿಂದ ಅಂತರರಾಷ್ಟ್ರೀಯ ಭಾಷಾವಿಜ್ಞಾನ ಒಲಿಂಪಿಯಾಡ್‌ನಲ್ಲಿ ಭಾಗವಹಿಸುತ್ತಿದ್ದು, ಇದುವರೆಗೆ ಒಟ್ಟು 37 ಪದಕಗಳನ್ನು (6 ಚಿನ್ನ, 9 ಬೆಳ್ಳಿ ಮತ್ತು 22 ಕಾಂಸ್ಯ ಪದಕಗಳು) ಗೆದ್ದುಕೊಂಡಿದೆ.
➤ **ಭಾರತೀಯ ತಂಡದ ಆಯ್ಕೆ ಪ್ರಕ್ರಿಯೆ ಹೇಗೆ ನಡೆಯುತ್ತದೆ?**
ಪಾಣಿನಿ ಭಾಷಾವಿಜ್ಞಾನ ಒಲಿಂಪಿಯಾಡ್ (PLO): ಭಾರತೀಯ ತಂಡವನ್ನು 'ಪಾಣಿನಿ ಭಾಷಾವಿಜ್ಞಾನ ಒಲಿಂಪಿಯಾಡ್' ಎಂಬ ರಾಷ್ಟ್ರೀಯ ಮಟ್ಟದ ಸ್ಪರ್ಧೆಯ ಮೂಲಕ ಆಯ್ಕೆ ಮಾಡಲಾಗುತ್ತದೆ.
IIIT ಹೈದರಾಬಾದ್ ಪಾತ್ರ: IIIT ಹೈದರಾಬಾದ್ ಸಂಸ್ಥೆಯು 2015 ರಿಂದ ಈ ಕಾರ್ಯಕ್ರಮಕ್ಕೆ ಮಾರ್ಗದರ್ಶನ (Mentorship) ನೀಡುತ್ತಿದೆ.
ತರಬೇತಿ ಶಿಬಿರ: ಮೊದಲ ಸುತ್ತಿನಲ್ಲಿ ಅರ್ಹತೆ ಪಡೆದ ವಿದ್ಯಾರ್ಥಿಗಳಿಗೆ IIIT ಹೈದರಾಬಾದ್‌ನಲ್ಲಿ 10 ದಿನಗಳ ವಸತಿ ತರಬೇತಿ ಶಿಬಿರ ಆಯೋಜಿಸಿ, ಮಾಕ್ ಟೆಸ್ಟ್ ಹಾಗೂ ಸಮಸ್ಯೆ ಪರಿಹಾರ ತಂತ್ರಗಳನ್ನು ಕಲಿಸಿ ಅಂತಿಮ ತಂಡವನ್ನು ರೊಮೇನಿಯಾಕ್ಕೆ ಕಳುಹಿಸಿಕೊಡಲಾಗಿತ್ತು.
➤ **ಅಂತರರಾಷ್ಟ್ರೀಯ ಭಾಷಾವಿಜ್ಞಾನ ಒಲಿಂಪಿಯಾಡ್ (IOL):**
IOL ಎಂಬುದು ಪ್ರಪಂಚದ 13 ಅಂತರರಾಷ್ಟ್ರೀಯ ವಿಜ್ಞಾನ ಒಲಿಂಪಿಯಾಡ್‌ಗಳಲ್ಲಿ ಒಂದಾಗಿದೆ.
ಈ ಸ್ಪರ್ಧೆಯಲ್ಲಿ ಭಾಗವಹಿಸಲು ವಿದ್ಯಾರ್ಥಿಗಳಿಗೆ ಮುಂಚಿತವಾಗಿ ಭಾಷಾವಿಜ್ಞಾನದ (Linguistics) ಜ್ಞಾನ ಅಗತ್ಯವಿಲ್ಲ.

KPSCVaani

ಅಪರಿಚಿತ ಭಾಷೆಗಳ ವಾಕ್ಯರಚನೆ, ಶಬ್ದಕೋಶ ಮತ್ತು ವ್ಯಾಕರಣದ ಮಾದರಿಗಳನ್ನು (Patterns) ತರ್ಕ ಹಾಗೂ ವಿಶ್ಲೇಷಣಾತ್ಮಕ ಸಾಮರ್ಥ್ಯದ (Logical & Analytical Reasoning) ಮೂಲಕ ಕಂಡುಹಿಡಿಯುವುದು ಈ ಸ್ಪರ್ಧೆಯ ಮುಖ್ಯ ಸವಾಲಾಗಿದೆ.
ಈ ಸಾಮರ್ಥ್ಯವು ಕೃತಕ ಬುದ್ಧಿಮತ್ತೆ (Artificial Intelligence - AI), ನ್ಯಾಚುರಲ್ ಲ್ಯಾಂಗ್ವೇಜ್ ಪ್ರೊಸೆಸಿಂಗ್ (NLP) ಮತ್ತು ಭಾಷಾ ತಂತ್ರಜ್ಞಾನ ಬೆಳೆಸಲು ಅತ್ಯಂತ ಉಪಯುಕ್ತವಾಗಿದೆ.

## ಭಾರತ-ನೇಪಾಳ ಬಾಂಧವ್ಯ: ಭಾರತೀಯ ರಾಯಭಾರಿ ಜೊತೆ ನೇಪಾಳ ಪ್ರಧಾನಿ ಬಾಲೇಂದ್ರ ಶಾ ಮಹತ್ವದ ಸಭೆ



➤ ನೇಪಾಳದ ನೂತನ ಪ್ರಧಾನಿ ಬಾಲೇಂದ್ರ ಶಾ (Balen Shah) ಅವರು ಅಧಿಕಾರ ವಹಿಸಿಕೊಂಡ ನಂತರ ಪ್ರಥಮ ಬಾರಿಗೆ ಭಾರತೀಯ ರಾಯಭಾರಿ ನವೀನ್ ಶ್ರೀವಾಸ್ತವ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ. ನೇಪಾಳದ ಪ್ರಧಾನ ಮಂತ್ರಿ ಕಾರ್ಯಾಲಯವಾದ 'ಸಿಂಹ ದರ್ಬಾರ್'ನಲ್ಲಿ ನಡೆದ ಈ ಸಭೆಯು ಭಾರತ-ನೇಪಾಳ ರಾಜತಾಂತ್ರಿಕ ಸಂಬಂಧದಲ್ಲಿ ಹೊಸ ಮೈಲಿಗಲ್ಲಾಗಿದೆ.
➤ ಅಧಿಕಾರ ಸ್ವೀಕರಿಸಿದ ಆರಂಭದಲ್ಲಿ ವಿದೇಶಿ ರಾಯಭಾರಿಗಳೊಂದಿಗೆ ನೇರ ಸಭೆಗಳನ್ನು ತಪ್ಪಿಸುತ್ತಿದ್ದ ಪ್ರಧಾನಿ ಬಾಲೇಂದ್ರ ಶಾ, ಇದೀಗ ತಮ್ಮ ವಿದೇಶಾಂಗ ನೀತಿಯಲ್ಲಿ ಬದಲಾವಣೆ ತಂದಿದ್ದಾರೆ. ಭಾರತೀಯ ರಾಯಭಾರಿಯೊಂದಿಗೆ ಪ್ರತ್ಯೇಕ ದ್ವಿಪಕ್ಷೀಯ ಸಭೆ ನಡೆಸುವ ಮೂಲಕ ನೇಪಾಳವು ಭಾರತದೊಂದಿಗಿನ ರಾಜತಾಂತ್ರಿಕ ಮತ್ತು ಬಾಂಧವ್ಯದ ಆದ್ಯತೆಯನ್ನು ಸ್ಪಷ್ಟಪಡಿಸಿದೆ.
➤ **ಪ್ರಧಾನಿ ನರೇಂದ್ರ ಮೋದಿ ಅವರ ಶುಭಾಶಯ:** ಸಭೆಯ ವೇಳೆ ಭಾರತೀಯ ರಾಯಭಾರಿ ನವೀನ್ ಶ್ರೀವಾಸ್ತವ್ ಅವರು ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆತ್ಮೀಯ ಶುಭಾಶಯ ಸಂದೇಶವನ್ನು ನೇಪಾಳ ಪ್ರಧಾನಿಗೆ ತಲುಪಿಸಿದರು. ಉಭಯ ದೇಶಗಳ ನಡುವಿನ ಬಹುಮುಖಿ ಸಹಕಾರ ಮತ್ತು ಮೂಲಸೌಕರ್ಯ ಅಭಿವೃದ್ಧಿ ಪಾಲುದಾರಿಕೆಯನ್ನು ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಈ ಚರ್ಚೆ ಅತ್ಯಂತ ಫಲಪ್ರದವಾಗಿದೆ ಎಂದು ಶ್ರೀವಾಸ್ತವ್ ತಿಳಿಸಿದ್ದಾರೆ.
➤ **ಪರಸ್ಪರ ಹಿತಾಸಕ್ತಿ ಮತ್ತು ಅಭಿವೃದ್ಧಿ:**
ಶಕ್ತಿ ಮತ್ತು ಜಲಸಂಪನ್ಮೂಲ: ನೇಪಾಳದ ಜಲವಿದ್ಯುತ್ ಕ್ಷೇತ್ರ ಮತ್ತು ಭಾರತಕ್ಕೆ ವಿದ್ಯುತ್ ರಫ್ತು ಮಾಡುವ ಯೋಜನೆಯ ಕುರಿತು ಚರ್ಚೆ.
ವ್ಯಾಪಾರ ಮತ್ತು ಸಾರಿಗೆ: ಭಾರತವು ನೇಪಾಳದ ಶೇ. 60ಕ್ಕಿಂತ ಹೆಚ್ಚಿನ ವ್ಯಾಪಾರ ಪಾಲುದಾರನಾಗಿದ್ದು, ವ್ಯಾಪಾರ ಮಾರ್ಗಗಳ ಸುಗಮಗೊಳಿಸುವಿಕೆ.
ಸಂಸ್ಕೃತಿ ಮತ್ತು ಸಾಂಸ್ಕೃತಿಕ ಬಾಂಧವ್ಯ: ಉಭಯ ದೇಶಗಳ ನಡುವಿನ ಐತಿಹಾಸಿಕ 'ರೋಟಿ-ಬೇಟಿ' (ಸಾಂಸ್ಕೃತಿಕ ಹಾಗೂ ಜನಸಾಮಾನ್ಯರ) ಸಂಬಂಧದ ಬಲವರ್ಧನೆ.
➤ **ಭಾರತ - ನೇಪಾಳ ಬಾಂಧವ್ಯದ ಹಿನ್ನೆಲೆ:**
ಆರ್ಟಿಕಲ್ / ಒಪ್ಪಂದ: 1950ರ "ಶಾಂತಿ ಮತ್ತು ಮೈತ್ರಿ ಒಪ್ಪಂದ" (Indo-Nepal Treaty of Peace and Friendship) ಭಾರತ ಮತ್ತು ನೇಪಾಳದ ದ್ವಿಪಕ್ಷೀಯ ಸಂಬಂಧಗಳ ಅಡಿಪಾಯವಾಗಿದೆ.
ಸೇನಾ ಸಹಕಾರ: ಭಾರತ ಮತ್ತು ನೇಪಾಳ ಜಂಟಿಯಾಗಿ 'ಸೂರ್ಯ ಕಿರಣ್' (Surya Kiran) ಮಿಲಿಟರಿ ಅಭ್ಯಾಸವನ್ನು ನಡೆಸುತ್ತವೆ.
ಪ್ರಾದೇಶಿಕ ವೇದಿಕೆಗಳು: SAARC ಮತ್ತು BIMSTEC ನಂತಹ ಪ್ರಾದೇಶಿಕ ಒಕ್ಕೂಟಗಳಲ್ಲಿ ಭಾರತ ಮತ್ತು ನೇಪಾಳ ಸಕ್ರಿಯ ಸದಸ್ಯ ದೇಶಗಳಾಗಿವೆ.

## ಕೊಲಂಬಿಯಾದ 36ನೇ ಅಧ್ಯಕ್ಷರಾಗಿ ಅಬೆಲಾರ್ಡೊ ಡಿ ಲಾ ಎಸ್ಪ್ರಿಯೆಲ್ಲ ಅಧಿಕಾರ ಸ್ವೀಕಾರ




➤ ದಕ್ಷಿಣ ಅಮೆರಿಕ ಖಂಡದ ಪ್ರಮುಖ ದೇಶವಾದ ಕೊಲಂಬಿಯಾದ ನೂತನ 36ನೇ ಅಧ್ಯಕ್ಷರಾಗಿ ಅಬೆಲಾರ್ಡೊ ಡಿ ಲಾ ಎಸ್ಪ್ರಿಯೆಲ್ಲ (Abelardo de la Espriella) ಅವರು ಪ್ರಮಾಣವಚನ ಸ್ವೀಕರಿಸಿದ್ದಾರೆ. ರಾಜಧಾನಿ ಬೊಗೋಟಾದಲ್ಲಿ ನಡೆಯುತ್ತಿದ್ದ ಸಾಂಪ್ರದಾಯಿಕ ಶೈಲಿಯನ್ನು ಬದಿಗೊತ್ತಿ, ಕ್ಯಾಲಿ ನಗರದಲ್ಲಿರುವ ಸಾಂಟಿಯಾಗೊ ಡಿ ಕ್ಯಾಲಿ ವಿಶ್ವವಿದ್ಯಾಲಯದ (USC Arena) ಆವರಣದಲ್ಲಿ ಆಯೋಜಿಸಲಾಗಿದ್ದ ವಿಶೇಷ ಸಮಾರಂಭದಲ್ಲಿ ಅವರು ಅಧಿಕಾರ ವಹಿಸಿಕೊಂಡರು. ಸೆನೆಟ್ ಅಧ್ಯಕ್ಷ ಹಾಗೂ ಸ್ಪೀಕರ್ ಹೊನೊರಿಯೊ ಹೆನ್ರಿಕ್ವೆಸ್ ಅವರು ನೂತನ ಅಧ್ಯಕ್ಷರಿಗೆ ಪ್ರಮಾಣವಚನ ಬೋಧಿಸಿದರು.
ಹೊಸ ಅಧ್ಯಕ್ಷರು: ಅಬೆಲಾರ್ಡೊ ಡಿ ಲಾ ಎಸ್ಪ್ರಿಯೆಲ್ಲ (Abelardo de la Espriella) - ಕೊಲಂಬಿಯಾದ 36ನೇ ಅಧ್ಯಕ್ಷರು.
ಅಧಿಕಾರಾವಧಿ: 2026 ರಿಂದ 2030 (4 ವರ್ಷಗಳ ಅವಧಿ).
ಪ್ರಮಾಣವಚನ ಬೋಧಿಸಿದವರು: ಸೆನೆಟ್ ಅಧ್ಯಕ್ಷ ಹೊನೊರಿಯೊ ಹೆನ್ರಿಕ್ವೆಸ್ (Honorio Henríquez).
ಸಮಾರಂಭದ ಸ್ಥಳ: ಸಾಂಟಿಯಾಗೊ ಡಿ ಕ್ಯಾಲಿ ವಿಶ್ವವಿದ್ಯಾಲಯ (USC ಅರೆನಾ), ಕ್ಯಾಲಿ.
ಉಪಾಧ್ಯಕ್ಷರು: ಜೋಸೆ ಮಾನುವೆಲ್ ರೆಸ್ಟ್ರೆಪೋ (José Manuel Restrepo).
ನಿರ್ಗಮಿತ ಅಧ್ಯಕ್ಷರು: ಗುಸ್ತಾವೊ ಪೆಟ್ರೋ (Gustavo Petro - ಕೊಲಂಬಿಯಾದ ಮೊದಲ ಎಡಪಂಥೀಯ ಅಧ್ಯಕ್ಷರು).
➤ 2026ರ ಜೂನ್ 21ರಂದು ನಡೆದ ಅಧ್ಯಕ್ಷೀಯ ಚುನಾವಣೆಯ ಎರಡನೇ ಹಂತದ (Runoff) ಮತದಾನದಲ್ಲಿ, ಬಲಪಂಥೀಯ ಅಭ್ಯರ್ಥಿಯಾದ ಎಸ್ಪ್ರಿಯೆಲ್ಲ ಅವರು ಶೇಕಡಾ 49.66 ರಷ್ಟು (ಸುಮಾರು 1.29 ಕೋಟಿ) ಮತಗಳನ್ನು ಗಳಿಸಿ ಜಯಗಳಿಸಿದರು. ಇವರು ತಮ್ಮ ಹತ್ತಿರದ ಎಡಪಂಥೀಯ ಎದುರಾಳಿ ಇವಾನ್ ಸೆಪೆಡಾ (Iván Cepeda) ಅವರನ್ನು ಸೋಲಿಸಿದರು. ಪ್ರಸಿದ್ಧ ವಕೀಲರೂ ಆಗಿರುವ 48 ವರ್ಷದ ಎಸ್ಪ್ರಿಯೆಲ್ಲ ಅವರನ್ನು ಬೆಂಬಲಿಗರು "ದಿ ಟೈಗರ್" (The Tiger) ಎಂದು ಕರೆಯುತ್ತಾರೆ.

## ಬಂಗಾಳ ಕೊಲ್ಲಿಯ ಮೇಲೆ ಅಪರೂಪದ ಓಝೋನ್ ಪದರ ಪತ್ತೆ



➤ ಭಾರತದ ವಾಯುಮಂಡಲ ಸಂಶೋಧನಾ ಸಂಸ್ಥೆಗಳ ಒಕ್ಕೂಟ ನಡೆಸಿದ 'ನೆಟ್‌ರಾಡ್-ಆಸ್ಮಾ' (NetRAD-ASMA) ಅಭಿಯಾನದ ವೇಳೆ ಉತ್ತರ ಬಂಗಾಳ ಕೊಲ್ಲಿಯ ಆಕಾಶದಲ್ಲಿ ಅಭೂತಪೂರ್ವ ರೀತಿಯಲ್ಲಿ ಓಝೋನ್ ಮಟ್ಟ ಹೆಚ್ಚಾಗಿರುವುದು ಕಂಡುಬಂದಿದೆ. ಸಾಮಾನ್ಯವಾಗಿ ಓಝೋನ್ ಪದರವು ಭೂಮಿಯ ವಾಯುಮಂಡಲದ ಸ್ಟ್ರಾಟೋಸ್ಪಿಯರ್ (Stratosphere) ವಲಯದಲ್ಲಿ 25 ರಿಂದ 30 ಕಿ.ಮೀ ಎತ್ತರದಲ್ಲಿ ಗರಿಷ್ಠ ಸಾಂದ್ರತೆಯನ್ನು ಹೊಂದಿರುತ್ತದೆ. ಆದರೆ ಈ ಹೊಸ ಸಂಶೋಧನೆಯಲ್ಲಿ ಓಝೋನ್ ಸಾಂದ್ರತೆಯು 21-23 ಕಿ.ಮೀ ಎತ್ತರದಲ್ಲೇ ಹೆಚ್ಚಾಗಿ ಕಂಡುಬಂದಿದ್ದು, 24 ಗಂಟೆಗಳಿಗಿಂತ ಹೆಚ್ಚು ಕಾಲ ಸ್ಥಿರವಾಗಿ ಉಳಿದಿರುವುದು ವಿಜ್ಞಾನಿಗಳಲ್ಲಿ ತೀವ್ರ ಕುತೂಹಲ ಮೂಡಿಸಿದೆ.

**ಪ್ರಮುಖ ಸಂಶೋಧಕರು: ಡಾ. ಮನೀಶ್ ನಾಜಾ (Dr. Manish Naja) ಮತ್ತು ಡಾ. ಸಮರೇಶ್ ಭಟ್ಟಾಚಾರ್ಜಿ (Dr. Samaresh Bhattacharjee).**

➤ ಬಳಸಲಾದ ತಂತ್ರಜ್ಞಾನಗಳು ಮತ್ತು ಉಪಗ್ರಹಗಳು: ಈ ಅಸಾಮಾನ್ಯ ಓಝೋನ್ ಪದರವನ್ನು ಪತ್ತೆಹಚ್ಚಲು ಮತ್ತು ವಿಶ್ಲೇಷಿಸಲು ಭಾರತೀಯ ವಿಜ್ಞಾನಿಗಳು ನೆಲ ಆಧಾರಿತ ರೇಡಾರ್ ಗಳು, ಹವಾಮಾನ ಬಲೂನ್‌ಗಳು ಮತ್ತು ಬಾಹ್ಯಾಕಾಶ ಉಪಗ್ರಹಗಳನ್ನು ಜಂಟಿಯಾಗಿ ಬಳಸಿದ್ದಾರೆ:

ನೆಲ ಆಧಾರಿತ ರೇಡಾರ್‌ಗಳು: ARIES (ನೈನಿತಾಲ್) ಸಂಸ್ಥೆಯ 206.5 MHz Stratosphere-Troposphere (ST) Radar, ಹರಿನ್‌ಘಟ, ಗಡಂಕಿ (ಇಸ್ರೋ) ಮತ್ತು ಕೊಚ್ಚಿಯ ರೇಡಾರ್‌ಗಳು.

**ಉಪಗ್ರಹಗಳು (Satellites):**

INSAT-3DR (ಭಾರತೀಯ ಹವಾಮಾನ ಉಪಗ್ರಹ)

Aura MLS (ನಾಸಾದ ವಾಯುಮಂಡಲ ಅಧ್ಯಯನ ಉಪಗ್ರಹ)

ಹವಾಮಾನ ಬಲೂನ್‌ಗಳು (Ozonosondes): ವಾಯುಮಂಡಲದ ತಾಪಮಾನ ಮತ್ತು ಓಝೋನ್ ಸಾಂದ್ರತೆಯನ್ನು ಪ್ರತ್ಯಕ್ಷವಾಗಿ ಅಳೆಯಲು ಬಳಸಲಾಯಿತು.

➤ ವಿಜ್ಞಾನಿಗಳ ಪ್ರಕಾರ, ಈ ಅಸಾಮಾನ್ಯ ಓಝೋನ್ ಹೆಚ್ಚಳಕ್ಕೆ ಸೂರ್ಯನ ಬೆಳಕಿನಿಂದ ನಡೆಯುವ ರಾಸಾಯನಿಕ ಕ್ರಿಯೆಗಳಿಗಿಂತ ವಾಯುಮಂಡಲದ ಚಲನಶಾಸ್ತ್ರ (Atmospheric Dynamics) ಮುಖ್ಯ ಕಾರಣವಾಗಿದೆ:ಮೇಲ್ಪಟ್ಟದ ಸ್ಟ್ರಾಟೋಸ್ಫಿಯರ್‌ನಲ್ಲಿದ್ದ ಓಝೋನ್ ಸಮೃದ್ಧ ಗಾಳಿಯು ಕೆಳಮುಖವಾಗಿ ಚಲಿಸಿ (Downward Transport) ಬಂಗಾಳ ಕೊಲ್ಲಿಯ ಮೇಲ್ಭಾಗದಲ್ಲಿ ಸಂಗ್ರಹಗೊಂಡು ಸಂಕುಚಿತಗೊಂಡಿದೆ (Compression). ಹಗಲು ಮತ್ತು ರಾತ್ರಿ ಎರಡೂ ಸಮಯದಲ್ಲಿ ಈ ಪದರ ಕಂಡುಬಂದಿರುವುದರಿಂದ, ಇದು ಚಲನಶಾಸ್ತ್ರದ ಚಲನೆಯಿಂದಾಗಿದೆ ಎಂಬುದು ದೃಢಪಟ್ಟಿದೆ.

## 80ನೇ ಸ್ವಾತಂತ್ರ್ಯ ದಿನಾಚರಣೆ: ಕೆಂಪು ಕೋಟೆಯಲ್ಲಿ ಮೊದಲ ಬಾರಿಗೆ ಮೊಳಗಲಿದೆ 'ವಂದೇ ಮಾತರಂ'



➤ ಭಾರತದ 80ನೇ ಸ್ವಾತಂತ್ರ್ಯ ದಿನಾಚರಣೆಯು ಚಾರಿತ್ರಿಕ ಕ್ಷಣವೊಂದಕ್ಕೆ ಸಾಕ್ಷಿಯಾಗಲಿದೆ. ಈ ಬಾರಿ ದೆಹಲಿಯ ಐತಿಹಾಸಿಕ ಕೆಂಪು ಕೋಟೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಧ್ವಜಾರೋಹಣ ನೆರವೇರಿಸುವ ಮುನ್ನ, ರಾಷ್ಟ್ರೀಯ ಗೀತೆ 'ವಂದೇ ಮಾತರಂ' ಪ್ರಮುಖ ಆಕರ್ಷಣೆಯಾಗಿ ಮೊಳಗಲಿದೆ. ದೇಶಭಕ್ತಿ ಗೀತೆಗೆ 150 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಈ ವಿಶೇಷ ಗೌರವ ಅರ್ಪಿಸಲು ಕೇಂದ್ರ ರಕ್ಷಣಾ ಸಚಿವಾಲಯ ನಿರ್ಧರಿಸಿದೆ.

**150 ವರ್ಷಗಳ ಇತಿಹಾಸ:** ಬಂಕಿಮಚಂದ್ರ ಚಟ್ಟೋಪಾಧ್ಯಾಯರಿಂದ ರಚಿತವಾದ 'ವಂದೇ ಮಾತರಂ' ಗೀತೆಗೆ 150 ವರ್ಷ ತುಂಬಿದ ನೆನಪಿನಲ್ಲಿ ಈ ಬಾರಿಯ ಸ್ವಾತಂತ್ರ್ಯೋತ್ಸವದ ಪ್ರಮುಖ ಥೀಮ್ ಆಗಿ ಗೀತೆಯನ್ನು ಆಯ್ಕೆ ಮಾಡಲಾಗಿದೆ.

**ಆರೂ ಚರಣಗಳ ಗಾಯನ:** ಸಾರ್ವಜನಿಕ ಸಮಾರಂಭಗಳಲ್ಲಿ ಸಾಮಾನ್ಯವಾಗಿ ಮೊದಲ ಎರಡು ಚರಣಗಳನ್ನು ಮಾತ್ರ ಹಾಡಲಾಗುತ್ತಿತ್ತು. ಆದರೆ ಈ ಬಾರಿ ಗೀತೆಯ ಎಲ್ಲಾ ಆರೂ ಚರಣಗಳನ್ನು ಹಾಡುವ ವ್ಯವಸ್ಥೆ ಮಾಡಲಾಗಿದೆ.

**ಜ್ಞಾನಪಥದಲ್ಲಿ 'ವಂದೇ ಮಾತರಂ' ರಚನೆ:** ಎನ್‌ಸಿಸಿ (NCC) ಕೆಡೆಟ್‌ಗಳು ಹಾಗೂ 'ಮೈ ಭಾರತ್' (MY Bharat) ಸ್ವಯಂಸೇವಕರು ಸೇರಿ ರ್‍ಯಾಂಪಾರ್ಟ್ ಎದುರಿನ ಜ್ಞಾನಪಥದಲ್ಲಿ ಮಾನವ ಶೃಂಗಾರದ ಮೂಲಕ 'ವಂದೇ ಮಾತರಂ' ಅಕ್ಷರ ವಿನ್ಯಾಸ ಮೂಡಿಸಲಿದ್ದಾರೆ.

ವೈಮಾನಿಕ ಗೌರವ: ಭಾರತೀಯ ವಾಯುಪಡೆಯ Mi-17 ಹೆಲಿಕಾಪ್ಟರ್ 'ವಂದೇ ಮಾತರಂ' ಬ್ಯಾನರ್ ಹೊತ್ತು ಸಾಗಲಿದ್ದು, ಕಾರ್ಯಕ್ರಮದ ಸಭಿಕರ ಮೇಲೆ ಪುಷ್ಪವೃಷ್ಟಿ ಕರೆಯಲಿದೆ.

**➤ ಕಾರ್ಯಕ್ರಮದ ರೂಪುರೇಷೆ ಹಾಗೂ ಹಂತಗಳು:**

ಆಗಮನ ಹಾಗೂ 'ವಂದೇ ಮಾತರಂ': ಪ್ರಧಾನಿ ನರೇಂದ್ರ ಮೋದಿ ಅವರು ಕೆಂಪು ಕೋಟೆಗೆ ಆಗಮಿಸುತ್ತಿದ್ದಂತೆ ರಾಷ್ಟ್ರೀಯ ಗೀತೆ 'ವಂದೇ ಮಾತರಂ' ಮೊಳಗಲಿದೆ. ಈ ವೇಳೆ ಸಭೆಯಲ್ಲಿರುವ ಪ್ರತಿಯೊಬ್ಬರೂ ಎದ್ದುನಿಂತು ಗೌರವ ಸೂಚಿಸುವುದು ಕಡ್ಡಾಯವಾಗಿದೆ.

ಧ್ವಜಾರೋಹಣ ಮತ್ತು ರಾಷ್ಟ್ರಗೀತೆ: ವಂದೇ ಮಾತರಂ ಗಾಯನದ ನಂತರ ಪ್ರಧಾನಿಯವರಿಂದ ತ್ರಿವರ್ಣ ಧ್ವಜಾರೋಹಣ ನಡೆಯಲಿದ್ದು, ರಾಷ್ಟ್ರಗೀತೆ 'ಜನ ಗಣ ಮನ' ನುಡಿಸಲಾಗುವುದು.

ಪ್ರಧಾನಿ ಭಾಷಣ: ದೇಶವನ್ನು ಉದ್ದೇಶಿಸಿ ಪ್ರಧಾನಿ ಮೋದಿ ಸುದೀರ್ಘ ಸಂದೇಶ ನೀಡಲಿದ್ದಾರೆ.

ಪಥಸಂಚಲನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ: ಸಶಸ್ತ್ರ ಪಡೆಗಳು, ದೆಹಲಿ ಪೊಲೀಸ್ ತುಕಡಿಗಳ ಪಥಸಂಚಲನ ಮತ್ತು ವಿವಿಧ ಕಲಾತಂಡಗಳಿಂದ ಸಾಂಸ್ಕೃತಿಕ ಪ್ರದರ್ಶನ ಜರುಗಲಿದೆ.

➤ ಆಹ್ವಾನ ಪತ್ರಿಕೆಯಲ್ಲಿ 'ವಂದೇ ಮಾತರಂ' ಸಾಲುಗಳು: ಕೇಂದ್ರ ರಕ್ಷಣಾ ಸಚಿವಾಲಯ ಮುದ್ರಿಸಿರುವ ಸ್ವಾತಂತ್ರ್ಯ ದಿನಾಚರಣೆಯ ಅಧಿಕೃತ ಆಹ್ವಾನ ಪತ್ರಿಕೆಯಲ್ಲಿ ವಂದೇ ಮಾತರಂ ಗೀತೆಯ ಸಂಪೂರ್ಣ ಆರೂ ಚರಣಗಳನ್ನು ಮುದ್ರಿಸಲಾಗಿದೆ. ಕಾರ್ಯಕ್ರಮಕ್ಕೆ ಆಗಮಿಸುವ ಗಣ್ಯರು ಹಾಗೂ ಸಾರ್ವಜನಿಕರು ರಾಷ್ಟ್ರೀಯ ಗೀತೆಯನ್ನು ಸುಲಭವಾಗಿ ಜೊತೆಯಲ್ಲಿ ಹಾಡಲು ಅನುಕೂಲವಾಗುವಂತ ಈ ಕ್ರಮ ಕೈಗೊಳ್ಳಲಾಗಿದೆ.

# 12 Aug 2026

## ಆಗಸ್ಟ್ 12 : ವಿಶ್ವ ಆನೆ ದಿನ



➤ ಪ್ರತಿ ವರ್ಷ ಆಗಸ್ಟ್ 12 ರಂದು ಆಚರಿಸುವ ವಿಶ್ವ ಆನೆ ದಿನವು ಆನೆಗಳ ಸಂರಕ್ಷಣೆ, ರಕ್ಷಣೆ ಮತ್ತು ಕಲ್ಯಾಣದ ಬಗ್ಗೆ ಜಾಗತಿಕ ಜಾಗೃತಿ ಮೂಡಿಸಲು ಉದ್ದೇಶಿಸಿದೆ.

**➤ 2026 ರ ವಿಶ್ವ ಆನೆ ದಿನದ ಧ್ಯೇಯವಾಕ್ಯ(ಥೀಮ್) " ಆನೆಗಳಿಗೆ ಸಹಾಯ ಮಾಡಲು ಜಗತ್ತನ್ನು ಒಟ್ಟುಗೂಡಿಸುವುದು".**

➤ 2012ರಲ್ಲಿ ಕೆನಡಾದ ಪ್ಯಾಟ್ರಿಷಿಯಾ ಸಿಮ್ಸ್ ಮತ್ತು ಥೈಲ್ಯಾಂಡ್ ನ ಎಲಿಫೆಂಟ್ ರೀಇಂಟ್ರೋಡಕ್ಷನ್ ಫೌಂಡೇಶನ್ ವಿಶ್ವ ಆನೆ ದಿನವನ್ನು ಪ್ರಾರಂಭಿಸಿದರು. ಪ್ಯಾಟ್ರಿಷಿಯಾ ಸಿಮ್ಸ್ ಅವರ "ರಿಟರ್ನ್ ಟು ದ ಫಾರೆಸ್ಟ್" ದಸ್ತಾವೇಜು ಚಿತ್ರದ ಮೂಲಕ ಮೊದಲ ಆಚರಣೆ ನಡೆಯಿತು.

➤ ಆನೆಗಳ ವಾಸಸ್ಥಾನ ಸಂರಕ್ಷಣೆ, ದಂತದ ಕಳ್ಳಬೇಟೆ ನಿಲ್ಲಿಸುವುದು, ಸೆರೆಯಾದ ಆನೆಗಳ ಕಲ್ಯಾಣ ಸುಧಾರಿಸುವುದು, ಸಾರ್ವಜನಿಕ ಜಾಗೃತಿ ಮೂಡಿಸುವುದು ಹಾಗೂ ಬಲವಾದ ಕಾನೂನುಗಳನ್ನು ಜಾರಿಗೆ ತರುವುದು.

➤ ಭಾರತದ ಉಪಪ್ರಭೇದ ಎಲೆಫಾಸ್ ಮಾಕ್ಸಿಮ್ಸ್ ಇಂಡಿಕಸ್ ಅಪಾಯದಲ್ಲಿರುವ ಜಾತಿಯಾಗಿ IUCN ಪಟ್ಟಿಯಲ್ಲಿದೆ.

➤ ವನ್ಯಜೀವಿ ಸಂರಕ್ಷಣಾ ಕಾಯಿದೆ 1972ರ ಮೊದಲ ವೇಳಾಪಟ್ಟಿಯಲ್ಲಿ ಸೇರಿದೆ ಮತ್ತು ರಾಷ್ಟ್ರದ ಪರಂಪರೆ ಪ್ರಾಣಿಯಾಗಿದೆ.

➤ ಪ್ರಮುಖ ಯೋಜನೆಗಳಲ್ಲಿ ಪ್ರಾಜೆಕ್ಟ್ ಎಲಿಫೆಂಟ್, ಆನೆ ಕಾರಿಡಾರ್ ಅಭಿವೃದ್ಧಿ, ಗಜಯಾತ್ರೆ ಅಭಿಯಾನ ಮತ್ತು MIKE ಪ್ರೋಗ್ರಾಂ ಸೇರಿವೆ.

➤ ದಂತದ ಕಳ್ಳಬೇಟೆ, ವಾಸಸ್ಥಾನ ನಾಶ, ಮನುಷ್ಯ-ಆನೆ ಸಂಘರ್ಷ, ಅಕ್ರಮ ವ್ಯಾಪಾರ ಮತ್ತು ಹವಾಮಾನ

ಬದಲಾವಣೆಯಿಂದ ಉಂಟಾಗುವ ಆಹಾರ-ನೀರಿನ ಕೊರತೆ ಇವು ಆನೆಗಳಿಗಾಗುವ ಅಪಾಯಗಳಾಗಿವೆ.

➤ ಆನೆಗಳ ವಾಸಸ್ಥಾನ ರಕ್ಷಣೆಗೆ, ಸಂಘರ್ಷ ಕಡಿಮೆ ಮಾಡಲು ಮತ್ತು ಅಕ್ರಮ ಹತ್ಯೆಗಳನ್ನು ತಡೆಯಲು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಯೋಜನೆಗಳು ಜಾರಿಗೆ ಇವೆ.

**ಆನೆಗಳ ಪ್ರಕಾರಗಳು :**

- ಆಫ್ರಿಕನ್ ಆನೆ – ದೊಡ್ಡ ಕಿವಿಗಳು, ಹೆಚ್ಚು ಗಾತ್ರ, ಉಪ-ಸಹಾರಾ ಆಫ್ರಿಕಾದಲ್ಲಿ ಕಂಡುಬರುತ್ತವೆ.
- ಏಷಿಯನ್ ಆನೆ – ಚಿಕ್ಕ ಗಾತ್ರ, ಸಣ್ಣ ಕಿವಿಗಳು, ಭಾರತ ಸೇರಿದಂತೆ ಏಷ್ಯಾದ ಕೆಲವು ರಾಷ್ಟ್ರಗಳಲ್ಲಿ ಕಂಡುಬರುತ್ತವೆ.

## ಆಗಸ್ಟ್-12: ಅಂತರರಾಷ್ಟ್ರೀಯ ಯುವ ದಿನಾಚರಣೆ 2026




➤ ಪ್ರತಿ ವರ್ಷ ಆಗಸ್ಟ್ 12 ರಂದು ಜಗತ್ತಿನಾದ್ಯಂತ ಅಂತರರಾಷ್ಟ್ರೀಯ ಯುವ ದಿನಾಚರಣೆ (International Youth Day) ಯನ್ನು ಆಚರಿಸಲಾಗುತ್ತದೆ. ಯುವಜನರು ಎದುರಿಸುತ್ತಿರುವ ಸಾಮಾಜಿಕ, ಆರ್ಥಿಕ ಹಾಗೂ ತಾಂತ್ರಿಕ ಸವಾಲುಗಳ ಕುರಿತು ಜಾಗೃತಿ ಮೂಡಿಸಲು ಮತ್ತು ಜಾಗತಿಕ ಅಭಿವೃದ್ಧಿಯಲ್ಲಿ ಅವರ ಸಕ್ರಿಯ ಪಾತ್ರವನ್ನು ಗುರುತಿಸಲು ವಿಶ್ವಸಂಸ್ಥೆಯು ಈ ದಿನವನ್ನು ಮೀಸಲಿಟ್ಟಿದೆ.

**2026ರ ಧ್ಯೇಯವಾಕ್ಯ (Theme): "Different Contexts, Common Aspirations" (ವಿಭಿನ್ನ ಹಿನ್ನಲೆಗಳು, ಒಂದೇ ಆಕಾಂಕ್ಷೆಗಳು)**

**➤ ಮೂರು ಉಪ-ಧ್ಯೇಯಗಳು (Sub-themes):**

ಜಾಗತಿಕ ಒಗ್ಗಟ್ಟು (Global Solidarity): ಸಮಾನ ಅವಕಾಶ ಮತ್ತು ಸಂಪನ್ಮೂಲಗಳ ಹಂಚಿಕೆ.

ಹಂಚಿಕೆಯ ಸವಾಲುಗಳು (Shared Challenges): ಹವಾಮಾನ ಬದಲಾವಣೆ, ನಿರುದ್ಯೋಗ ಮತ್ತು ಡಿಜಿಟಲ್ ಅಸಮಾನತೆ ಮೆಟ್ಟಿ ನಿಲ್ಲುವುದು.

ಯುವ ಆವಿಷ್ಕಾರ (Youth Innovation): ಕೃತಕ ಬುದ್ಧಿಮತ್ತೆ (AI) ಮತ್ತು ಡಿಜಿಟಲ್ ತಂತ್ರಜ್ಞಾನಗಳ ಮೂಲಕ ಸ್ಥಳೀಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು.

➤ ಆಸ್ಟ್ರಿಯಾದ ವಿಯೆನ್ನಾದಲ್ಲಿ 1991ರಲ್ಲಿ ಪ್ರಸ್ತಾಪಗೊಂಡು, 1998ರ ಲಿಸ್ಬನ್ ಸಮ್ಮೇಳನದ ಶಿಫಾರಸಿನಂತೆ 1999ರಲ್ಲಿ ವಿಶ್ವಸಂಸ್ಥೆಯ ಮಹಾಸಭೆಯು Resolution 54/120 ಮೂಲಕ ಅಂಗೀಕರಿಸಿದ ನಂತರ, ಮೊದಲ ಅಂತರರಾಷ್ಟ್ರೀಯ ಯುವ ದಿನವನ್ನು ಆಗಸ್ಟ್ 12, 2000 ರಂದು ವಿಶ್ವದಾದ್ಯಂತ ಆಚರಿಸಲಾಯಿತು.

**➤ ಕೇಂದ್ರ ಸರ್ಕಾರದ ಯೋಜನೆಗಳು:**

ಪ್ರಧಾನಮಂತ್ರಿ ಕೌಶಲ್ಯ ವಿಕಾಸ ಯೋಜನೆ (PMKVY): ಯುವಜನರಲ್ಲಿ ವೃತ್ತಿಪರ ಕೌಶಲ್ಯಗಳನ್ನು ಹೆಚ್ಚಿಸಿ ಉದ್ಯೋಗಾವಕಾಶ ಕಲ್ಪಿಸುವುದು.

ಮೈ ಭಾರತ್ (MY Bharat - Mera Yuva Bharat): ಯುವ ಶಕ್ತಿಯನ್ನು ದೇಶ ನಿರ್ಮಾಣ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಲು ಆರಂಭಿಸಲಾದ ಸ್ವಾಯತ್ತ ವೇದಿಕೆ.

ಜನರೇಶನ್ ಅನ್‌ಲಿಮಿಟೆಡ್ / ಯುವಾ (YuWaah): ಯೂನಿಸೆಫ್ (UNICEF) ಮತ್ತು ಭಾರತ ಸರ್ಕಾರದ ಜಂಟಿ ಉಪಕ್ರಮ.

**➤ ಕರ್ನಾಟಕ ಸರ್ಕಾರದ ಯೋಜನೆಗಳು:**

ಸ್ವಾಮಿ ವಿವೇಕಾನಂದ ಯುವ ಶಕ್ತಿ ಯೋಜನೆ: ಗ್ರಾಮೀಣ ಯುವಕರಲ್ಲಿ ಸ್ವಯಂ ಉದ್ಯೋಗ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸುವುದು.

ಯುವನಿಧಿ ಯೋಜನೆ: ಪದವಿ ಮತ್ತು ಡಿಪ್ಲೊಮಾ ಪೂರ್ಣಗೊಳಿಸಿ ನಿರುದ್ಯೋಗಿಗಳಾಗಿರುವ ಯುವಕರಿಗೆ ಮಾಸಿಕ ಭತ್ಯೆ ನೀಡುವ ಗ್ಯಾರಂಟಿ ಯೋಜನೆ.

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ (KSDC): ಕೌಶಲ್ಯ ತರಬೇತಿ ನೀಡುವ ಮೂಲಕ ಉದ್ಯೋಗಾರ್ಹತೆ ಹೆಚ್ಚಿಸುವುದು.

## ಬೈಕ್ ಟ್ಯಾಕ್ಸಿ ತೀರ್ಪು: ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ ಕರ್ನಾಟಕ ಸರ್ಕಾರ



➤ ಕರ್ನಾಟಕ ಸರ್ಕಾರವು ಬೈಕ್ ಟ್ಯಾಕ್ಸಿಗಳ (Bike Taxis) ಕಾರ್ಯಚರಣೆಗೆ ಅನುಮತಿ ನೀಡಿದ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ (Supreme Court) ಮೇಲ್ಮನವಿ ಸಲ್ಲಿಸಿದೆ. ಪ್ರಯಾಣಿಕರ ಸುರಕ್ಷತೆ, ವಿಮೆ ರಕ್ಷಣೆ, ಸಂಚಾರ ದಟ್ಟಣೆ ಮತ್ತು ಸೂಕ್ತ ನಿಯಮಾವಳಿಗಳ ಕೊರತೆಯನ್ನು ಉಲ್ಲೇಖಿಸಿ ರಾಜ್ಯ ಸರ್ಕಾರ ಈ ಕ್ರಮ ಕೈಗೊಂಡಿದೆ.

➤ ಕರ್ನಾಟಕ ಹೈಕೋರ್ಟ್ ದ್ವಿಚಕ್ರ ವಾಹನಗಳನ್ನು ಸಾರಿಗೆ ವಾಹನಗಳಾಗಿ ನೋಂದಾಯಿಸಲು ಮತ್ತು ಬೈಕ್ ಟ್ಯಾಕ್ಸಿ ಸೇವೆಗಳಿಗೆ ಪರವಾನಗಿ ನೀಡುವ ಅರ್ಜಿಗಳನ್ನು ಪರಿಶೀಲಿಸುವಂತೆ ಸಾರಿಗೆ ಇಲಾಖೆಗೆ ನಿರ್ದೇಶನ ನೀಡಿತ್ತು. ಆದಾಗ್ಯೂ, ಸೂಕ್ತ ನೀತಿ ಮತ್ತು ನಿಯಮಾವಳಿಗಳಿಲ್ಲದೆ ಬೈಕ್ ಟ್ಯಾಕ್ಸಿ ಸೇವೆಗಳನ್ನು ವಾಣಿಜ್ಯಕವಾಗಿ ನಡೆಸುವುದು ರಸ್ತೆ ಸುರಕ್ಷತೆಯ ದೃಷ್ಟಿಯಿಂದ ಅಪಾಯಕಾರಿ ಎಂದು ವಾದಿಸಿ ರಾಜ್ಯ ಸರ್ಕಾರ ಈ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಸವಾಲು ಮಾಡಿದೆ.

**➤ ಸರ್ಕಾರ ಬೈಕ್ ಟ್ಯಾಕ್ಸಿಗಳನ್ನು ವಿರೋಧಿಸಲು ಮುಖ್ಯ ಕಾರಣಗಳು:**

ಪ್ರಯಾಣಿಕರ ಸುರಕ್ಷತೆ (Passenger Safety): ಕಾರುಗಳು ಮತ್ತು ಇತರ ನಾಲ್ಕು ಚಕ್ರಗಳ ವಾಹನಗಳಿಗೆ ಹೋಲಿಸಿದರೆ ದ್ವಿಚಕ್ರ ವಾಹನಗಳಲ್ಲಿ ಅಪಘಾತ ಮತ್ತು ಜೀವಹಾನಿಯ ಅಪಾಯ ಹೆಚ್ಚಾಗಿರುತ್ತದೆ.

ವಿಮೆ ರಕ್ಷಣೆ (Insurance Coverage): ಖಾಸಗಿ ದ್ವಿಚಕ್ರ ವಾಹನಗಳನ್ನು ವಾಣಿಜ್ಯ ಉದ್ದೇಶಗಳಿಗಾಗಿ ಬಳಸಿದಾಗ, ಅಪಘಾತ ಸಂಭವಿಸಿದರೆ ಪ್ರಯಾಣಿಕರಿಗೆ ಮತ್ತು ಸವಾರರಿಗೆ ಸೂಕ್ತ ವಿಮೆ ಪರಿಹಾರ ದೊರೆಯುವುದರ ಬಗ್ಗೆ ಸ್ಪಷ್ಟತೆ ಇಲ್ಲ.

ನಿಯಂತ್ರಣ ಚೌಕಟ್ಟಿನ ಕೊರತೆ (Lack of Regulation): ಕರ್ನಾಟಕದ On-Demand Transportation Technology Aggregator Rules, 2016 ಕೇವಲ ನಾಲ್ಕು ಚಕ್ರಗಳ ಮೋಟಾರ್ ಕ್ಯಾಬ್‌ಗಳಿಗೆ ಮಾತ್ರ ಅನ್ವಯಿಸುತ್ತದೆ. ಬೈಕ್ ಟ್ಯಾಕ್ಸಿಗಳಿಗೆ ಪ್ರತ್ಯೇಕ ನಿಯಮಗಳಿಲ್ಲ.

ಮೋಟಾರು ವಾಹನಗಳ ಕಾಯ್ದೆ (Motor Vehicles Act, 1988): ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಸ್ಪಷ್ಟನೆಯಂತೆ, ಮೋಟಾರು ವಾಹನಗಳ ಕಾಯ್ದೆಯಲ್ಲಿ 'ಬೈಕ್ ಟ್ಯಾಕ್ಸಿ' ಎಂಬ ಪದಕ್ಕೆ ನಿರ್ದಿಷ್ಟ ವ್ಯಾಖ್ಯಾನವಿಲ್ಲ.

ಪರಿಸರ ಮತ್ತು ಸಂಚಾರ ದಟ್ಟಣೆ: ನಗರಗಳಲ್ಲಿ ಅನಿಯಂತ್ರಿತ ದ್ವಿಚಕ್ರ ವಾಹನ ಸಂಚಾರದಿಂದ ಟ್ರಾಫಿಕ್ ದಟ್ಟಣೆ ಮತ್ತು ವಾಯು ಮಾಲಿನ್ಯ ಹೆಚ್ಚಾಗುವ ಸಾಧ್ಯತೆಯಿದೆ.

➤ ಹೈಕೋರ್ಟ್‌ನ ಅಭಿಪ್ರಾಯ: ಸಂವಿಧಾನದ ವಿಧಿ 19(1)(g): ಭಾರತದ ಸಂವಿಧಾನದ ವಿಧಿ 19(1)(g) ಪ್ರಕಾರ ಯಾವುದೇ ವೃತ್ತಿ ಅಥವಾ ವ್ಯಾಪಾರ ಮಾಡುವ ಹಕ್ಕು ಪ್ರಜೆಗಳಿಗಿದೆ. ಬೈಕ್ ಟ್ಯಾಕ್ಸಿ ಕೇವಲ ಒಂದು ಸಿಂಧುವಾದ ವೃತ್ತಿಯಾಗಿದೆ ಎಂದು ಹೈಕೋರ್ಟ್ ಹೇಳಿತ್ತು. ಸ್ಪಷ್ಟವಾದ ಕಾಯ್ದೆ ಅಥವಾ ನಿಷೇಧವಿಲ್ಲದಿದ್ದಾಗ ಬೈಕ್ ಟ್ಯಾಕ್ಸಿಗಳನ್ನು ಸಂಪೂರ್ಣವಾಗಿ ತಡೆಯುವುದು ಅಸಮಂಜಸ ನಿಯಂತ್ರಣವಾಗುತ್ತದೆ ಎಂಬುದು ಹೈಕೋರ್ಟ್‌ನ ವಾದವಾಗಿತ್ತು.

➤ ಗಿಗ್ ಕಾರ್ಮಿಕರ (Gig Workers) ಹಿತರಕ್ಷಣೆ: ಬೈಕ್ ಟ್ಯಾಕ್ಸಿ ನಿಷೇಧದಿಂದ ದ್ವಿಚಕ್ರ ವಾಹನ ಸವಾರರ ಜೀವನೋಪಾಯಕ್ಕೆ

ಧಕ್ಕೆಯಾಗುತ್ತದೆ ಎಂಬ ವಾದವನ್ನು ಸರ್ಕಾರ ತಳ್ಳಿಹಾಕಿದೆ. ಡೆಲಿವರಿ ಸೇವೆಗಳಾದ ಸ್ವಿಗ್ಗಿ, ಜೊಮಾಟೊ, ಅಮೆಜಾನ್ ಮುಂತಾದ ಸಂಸ್ಥೆಗಳ ಮೂಲಕ ಸವಾರರು ಉದ್ಯೋಗ ಕಂಡುಕೊಳ್ಳಬಹುದು ಎಂದು ಸರ್ಕಾರ ತಿಳಿಸಿದೆ. ಅಲ್ಲದೆ, ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಕಾಯ್ದೆ, 2025 ಮೂಲಕ ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲಾಗಿದೆ.

## ಕೃಷಿ ವಿದ್ಯಾರ್ಥಿಗಳಿಗೆ NSP-DBT ವಿದ್ಯಾರ್ಥಿವೇತನ ಬಿಡುಗಡೆ: ಕೇಂದ್ರ ಸಚಿವ ಶಿವ್‌ರಾಜ್ ಸಿಂಗ್ ಚೌಹಾಣ್ ಚಾಲನೆ



➤ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವರಾದ ಶಿವ್‌ರಾಜ್ ಸಿಂಗ್ ಚೌಹಾಣ್ ಅವರು ನವದೆಹಲಿಯ ICAR-IARI (ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ) ಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೃಷಿ ವಿದ್ಯಾರ್ಥಿಗಳಿಗಾಗಿ ರಾಷ್ಟ್ರೀಯ ವಿದ್ಯಾರ್ಥಿವೇತನ ಪೋರ್ಟಲ್ (NSP) ಮತ್ತು ನೇರ ನಗದು ವರ್ಗಾವಣೆ (DBT) ವ್ಯವಸ್ಥೆಯಡಿ ವಿದ್ಯಾರ್ಥಿವೇತನ ಹಾಗೂ ಫೆಲೋಶಿಪ್ ಹಣವನ್ನು ನೇರವಾಗಿ ಬಿಡುಗಡೆ ಮಾಡಿದರು. ಈ ನೂತನ ವ್ಯವಸ್ಥೆಯಡಿ ಪ್ರಥಮ ಹಂತವಾಗಿ ದೇಶದ 6,000ಕ್ಕೂ ಹೆಚ್ಚು ಕೃಷಿ ಸಂಶೋಧಕರು ಮತ್ತು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ₹21.35 ಕೋಟಿ ರೂಪಾಯಿಗಳನ್ನು ನೇರವಾಗಿ ಜಮಾ ಮಾಡಲಾಗಿದೆ.

**➤ ಈ ಯೋಜನೆಯ ಪ್ರಮುಖ ಅಂಶಗಳು ಹಾಗೂ ಉದ್ದೇಶಗಳು:**

ಮಾಸಿಕ ಆಧಾರದಲ್ಲಿ ವಿದ್ಯಾರ್ಥಿವೇತನ (Monthly Disbursement): ಸಾಂಪ್ರದಾಯಿಕ ವಿಧಾನದಲ್ಲಿ ವಿದ್ಯಾರ್ಥಿವೇತನ ತಲುಪಲು ಆಗುತ್ತಿದ್ದ ವಿಳಂಬವನ್ನು ತಪ್ಪಿಸಲು, ಇನ್ನುಂದೆ ಪ್ರತಿ ತಿಂಗಳು ನೇರವಾಗಿ ವಿದ್ಯಾರ್ಥಿಗಳ ಖಾತೆಗೆ ವಿದ್ಯಾರ್ಥಿವೇತನ ಜಮೆಯಾಗಲಿದೆ.

ಪಾರದರ್ಶಕತೆ ಮತ್ತು ವೇಗ: NSP ಮತ್ತು DBT ತಂತ್ರಜ್ಞಾನದ ಬಳಕೆಯಿಂದ ಮಧ್ಯವರ್ತಿಗಳ ಹಸ್ತಕ್ಷೇಪವಿಲ್ಲದೆ, ವ್ಯವಸ್ಥೆಯು ಹೆಚ್ಚು ಪಾರದರ್ಶಕ, ಸುಲಭ ಹಾಗೂ ಶೀಘ್ರವಾಗಲಿದೆ.

ಪ್ರಾಯೋಗಿಕ ತರಬೇತಿಗೆ ಆದ್ಯತೆ: ಕೃಷಿ ಶಿಕ್ಷಣದಲ್ಲಿ ಸೈದ್ಧಾಂತಿಕ ಕಲಿವಿನ ಜೊತೆಗೆ ಪ್ರಾಯೋಗಿಕ ತರಬೇತಿ (Practical Training) ಮತ್ತು ಸಂಶೋಧನೆ ಅತ್ಯಗತ್ಯ. ಸಮಯಕ್ಕೆ ಸರಿಯಾಗಿ ಆರ್ಥಿಕ ನೆರವು ಸಿಗುವುದರಿಂದ ವಿದ್ಯಾರ್ಥಿಗಳು ತಮ್ಮ ಅಧ್ಯಯನ ಮತ್ತು ಸಂಶೋಧನೆಯತ್ತ ಹೆಚ್ಚಿನ ಗಮನ ಹರಿಸಬಹುದು ಎಂದು ಸಚಿವರು ತಿಳಿಸಿದರು.

## V.O. ಚಿದಂಬರನಾರ್ ಬಂದರು: ಭಾರತದ ಮೊದಲ 'Scope-2 ಹೊರಸೂಸುವಿಕೆ ಮುಕ್ತ' ಪ್ರಮುಖ ಬಂದರು



➤ ತಮಿಳುನಾಡಿನ ತೂತುಕುಡಿಯ (Thoothukudi) V.O. ಚಿದಂಬರನಾರ್ (VOC) ಬಂದರು ಪ್ರಾಧಿಕಾರವು ಭಾರತದ ಮೊದಲ 'Scope-2 ಹೊರಸೂಸುವಿಕೆ ಮುಕ್ತ' (Scope-2 Emission-Free) ಪ್ರಮುಖ ಬಂದರು ಎಂಬ ಐತಿಹಾಸಿಕ ಸಾಧನೆಗೆ ಪಾತ್ರವಾಗಿದೆ. ಜೊತೆಗೆ, ಶಕ್ತಿ ನಿರ್ವಹಣಾ ವ್ಯವಸ್ಥೆಗಾಗಿ ISO 50001:2018 ಪ್ರಮಾಣಪತ್ರ ಪಡೆದ ದೇಶದ ಮೊದಲ ಪ್ರಮುಖ ಬಂದರು ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ.

Scope-1 ಹೊರಸೂಸುವಿಕೆ: ಸಂಸ್ಥೆಯು ನೇರವಾಗಿ ತನ್ನ ಸ್ವಂತ ಮೂಲಗಳಿಂದ (ಉದಾ: ಬಂದರಿನಲ್ಲಿ ಬಳಕೆಯಾಗುವ ಡೀಸೆಲ್ ವಾಹನಗಳು) ಮಾಡುವ ಇಂಧನ ದಹನ.

Scope-2 ಹೊರಸೂಸುವಿಕೆ: ಸಂಸ್ಥೆಯು ಹೊರಗಿನಿಂದ ಖರೀದಿಸುವ ವಿದ್ಯುತ್, ಉಗಿ, ಕಾಯಿಸುವಿಕೆ ಅಥವಾ ತಂಪಾಗಿಸುವ ಶಕ್ತಿಯ ಬಳಕೆಯಿಂದ ಉಂಟಾಗುವ ಪರೋಕ್ಷ (Indirect) ಹಸಿರುಮನೆ ಅನಿಲ ಹೊರಸೂಸುವಿಕೆ.

ಸಾಧನೆ: ವಿಒಸಿ ಬಂದರು ತನ್ನ ವಿದ್ಯುತ್ ಬಳಕೆಗಿಂತ ಹೆಚ್ಚಿನ ಪ್ರಮಾಣದ ನವೀಕರಿಸಬಹುದಾದ ಶಕ್ತಿಯನ್ನು (ಸೌರ ಮತ್ತು ಪವನ ಶಕ್ತಿ) ಉತ್ಪಾದಿಸುವ ಮೂಲಕ Scope-2 ಹಂತದಲ್ಲಿ 'ಶೂನ್ಯ ನಿವ್ವಳ ಹೊರಸೂಸುವಿಕೆ' (Zero Net Emission) ಸಾಧಿಸಿದೆ. 2025-26ರ ಹಣಕಾಸು ವರ್ಷದಲ್ಲಿ ಬಂದರಿನ ಒಟ್ಟು ವಿದ್ಯುತ್ ಅಗತ್ಯದ 93.89% ನಷ್ಟು ಭಾಗವನ್ನು ಮರುಬಳಕೆ ಇಂಧನವೇ ಪೂರೈಸಿದೆ.

**➤ ಪ್ರಮುಖ ಸಾಧನೆಗಳು ಮತ್ತು ಪ್ರಮಾಣಪತ್ರಗಳು:**

Scope-2 Emission-Free ಮಾನ್ಯತೆ: ಜಾಗತಿಕ ಪ್ರಮಾಣೀಕರಣ ಸಂಸ್ಥೆಯಾದ ಬ್ಯೂರೋ ವೆರಿಟಾಸ್ (Bureau Veritas) ಈ ಮಾನ್ಯತೆಯನ್ನು ನೀಡಿದೆ.

ISO 50001:2018 ಪ್ರಮಾಣಪತ್ರ: ಶಕ್ತಿ ನಿರ್ವಹಣೆಯಲ್ಲಿನ (Energy Management System) ಅತ್ಯುತ್ತಮ ಕಾರ್ಯಕ್ಷಮತೆಗಾಗಿ ಇಂಡಿಯನ್ ರಿಜಿಸ್ಟರ್ ಕ್ವಾಲಿಟಿ ಸಿಸ್ಟಮ್ಸ್ (IRQS) ಈ ಅಂತರರಾಷ್ಟ್ರೀಯ ಪ್ರಮಾಣಪತ್ರ ನೀಡಿದೆ.

ಹಸಿರು ಮೂಲಸೌಕರ್ಯ (Green Infrastructure): ಪ್ರಸ್ತುತ 7.04 MW ಸೌರ ವಿದ್ಯುತ್ ಹಾಗೂ 2 MW ಪವನ ವಿದ್ಯುತ್ ಸಾಮರ್ಥ್ಯ ಹೊಂದಿದೆ. ಮುಂಬರುವ ಯೋಜನೆಗಳು: 2 MW ನೆಲದ ಮೇಲೆ ಸ್ಥಾಪಿಸುವ ಸೌರ ವಿದ್ಯುತ್, 17 MW ಪವನ ವಿದ್ಯುತ್ + 5 MWh ಬ್ಯಾಟರಿ ಸಂಗ್ರಹಣೆ (Battery Storage) ಮತ್ತು 'ಗ್ರೀನ್ ಹೈಡ್ರೋಜನ್ ಹಬ್'.

**➤ VOC ಬಂದರಿನ ಇತ್ತೀಚಿನ ಇತರ ಪ್ರಮುಖ ಉಪಕ್ರಮಗಳು:**

ನಿವ್ವಳ ಇಂಗಾಲ ಹೊರಸೂಸುವಿಕೆ 45% ಕಡಿತ: ಬಂದರಿನ ಮೊದಲ 'ಸುಸ್ಥಿರತೆ ವರದಿ'ಯ (Sustainability Report) ಪ್ರಕಾರ, ಕಳೆದ 4 ವರ್ಷಗಳಲ್ಲಿ ಸರಕು ಸಾಗಣೆಯ ಇಂಗಾಲ ಸಾಂದ್ರತೆಯು ಅರ್ಧದಷ್ಟು ಕಡಿಮೆಯಾಗಿದೆ.

PortGPT – AI ಮೊಬೈಲ್ ಆಪ್: ಭಾರತದಲ್ಲಿಯೇ ಉದ್ಯಮ ದರ್ಜೆಯ Generative AI ಚಾಲಿತ ಮೊಬೈಲ್ ಅಪ್ಲಿಕೇಶನ್ ('PortGPT') ಅನ್ನು ಪರಿಚಯಿಸಿದ ಮೊದಲ ಪ್ರಮುಖ ಬಂದರು ವಿಒಸಿ ಬಂದರಾಗಿದೆ.

ಗತಿ ಶಕ್ತಿ ವಿಶ್ವವಿದ್ಯಾಲಯದೊಂದಿಗೆ ಒಪ್ಪಂದ: ವಡೋದರಾದ ಗತಿ ಶಕ್ತಿ ವಿಶ್ವವಿದ್ಯಾಲಯದೊಂದಿಗೆ MOU ಸಹಿ ಮಾಡಲಾಗಿದ್ದು, 'ಸಮುದ್ರ ಸಾರಿಗೆ ಮತ್ತು ಬಂದರು ನಿರ್ವಹಣಾ ಶ್ರೇಷ್ಠತಾ ಕೇಂದ್ರ' (Centre of Excellence) ಸ್ಥಾಪಿಸಲಾಗುತ್ತಿದೆ.

ಹೈಡ್ರೋಜನ್ ಪಿವೋಟ್ (The Hydrogen Pivot): IIM ಕಲ್ಕತ್ತಾ ಸಿದ್ಧಪಡಿಸಿದ "The Hydrogen Pivot" ಕೇಸ್ ಸ್ಟಡಿಯನ್ನು ಬಿಡುಗಡೆ ಮಾಡಲಾಯಿತು. ಇದು ಭಾರತದ ಪ್ರಮುಖ ಬಂದರೊಂದರಲ್ಲಿ ಕೈಗೊಳ್ಳಲಾದ ಮೊದಲ ಗ್ರೀನ್ ಹೈಡ್ರೋಜನ್ ಪೈಲಟ್ ಯೋಜನೆಯಾಗಿದೆ.

ಕೇಂದ್ರೀಯ ವಿದ್ಯಾಲಯ ಸ್ಥಾಪನೆ: ಬಂದರು ನೌಕರರ ಹಾಗೂ ಸ್ಥಳೀಯರ ಮಕ್ಕಳ ಅನುಕೂಲಕ್ಕಾಗಿ ವಿಒಸಿ ಬಂದರು ಆವರಣದಲ್ಲಿ ಕೇಂದ್ರೀಯ ವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳಿಗೆ ಚಾಲನೆ ನೀಡಲಾಯಿತು.




## ಇ-ವೀಸಾ ಹೊಂದಿರುವವರಿಗೆ ಭಾರತದ ಪ್ರವೇಶದ್ವಾರಗಳು ವಿಸ್ತರಣೆ: 11 ನೂತನ ಪ್ರವೇಶ ತಾಣಗಳ ಸೇರ್ಪಡೆ, ಒಟ್ಟು ಸಂಖ್ಯೆ 88ಕ್ಕೆ ಏರಿಕೆ!



➤ ಕೇಂದ್ರ ಗೃಹ ಸಚಿವಾಲಯವು (Ministry of Home Affairs - MHA) ವಿದೇಶಿ ಪ್ರಜೆಗಳಿಗೆ ಭಾರತ ಪ್ರವೇಶವನ್ನು ಮತ್ತಷ್ಟು ಸುಲಭಗೊಳಿಸುವ ನಿಟ್ಟಿನಲ್ಲಿ ಪ್ರಮುಖ ನಿರ್ಧಾರವೊಂದನ್ನು ಕೈಗೊಂಡಿದೆ. ಇ-ವೀಸಾ (e-Visa) ಹೊಂದಿರುವ ವಿದೇಶಿಯರು ಭಾರತಕ್ಕೆ ಆಗಮಿಸಲು ಅವಕಾಶ ನೀಡುವ 11 ನೂತನ ಅಂತರರಾಷ್ಟ್ರೀಯ ಪ್ರವೇಶ ತಾಣಗಳನ್ನು (Entry Ports) ಹೊಸದಾಗಿ ಅಧಿಸೂಚಿಸಿದೆ.ಈ ನೂತನ ಸೇರ್ಪಡೆಯೊಂದಿಗೆ, ಇ-ವೀಸಾ ಪ್ರವೇಶಕ್ಕೆ ಅನುಮತಿಸಲಾದ ದೇಶದ ಒಟ್ಟು ಅಂತರರಾಷ್ಟ್ರೀಯ ತಾಣಗಳ ಸಂಖ್ಯೆ 77 ರಿಂದ 88 ಕ್ಕೆ ಏರಿಕೆಯಾಗಿದೆ.

➤ ಹೊಸದಾಗಿ ಸೇರ್ಪಡೆಯಾದ 11 ಪ್ರವೇಶ ತಾಣಗಳ ಪಟ್ಟಿ: 11 ನೂತನ ಪ್ರವೇಶ ತಾಣಗಳಲ್ಲಿ 2 ವಿಮಾನ ನಿಲ್ದಾಣಗಳು ಹಾಗೂ 9 ಭೂಪ್ರದೇಶದ ಚೆಕ್‌ಪೋಸ್ಟ್‌ಗಳು (Land Ports) ಸೇರಿವೆ.

**1. ವಿಮಾನ ನಿಲ್ದಾಣಗಳು (2):**

ಭೋಪಾಲ್ (Bhopal) – ಮಧ್ಯಪ್ರದೇಶ
ತಿರುಪತಿ (Tirupati) – ಆಂಧ್ರಪ್ರದೇಶ

**2. ಭೂಪ್ರದೇಶದ ಬಂದರುಗಳು / ಚೆಕ್‌ಪೋಸ್ಟ್‌ಗಳು (9):**

ಅಗರ್ತಲಾ (Agartala) – ತ್ರಿಪುರಾ
ದರಂಗಾ (Darranga) – ಅಸ್ಸಾಂ
ಗೆಡೆ (Gede) – ಪಶ್ಚಿಮ ಬಂಗಾಳ
ಘೋಜಾಡಂಗಾ (Ghojadanga) – ಪಶ್ಚಿಮ ಬಂಗಾಳ
ಹರಿದಾಸಪುರ (Haridaspur) – ಪಶ್ಚಿಮ ಬಂಗಾಳ
ಜೈಗಾಂವ್ (Jaigaon) – ಪಶ್ಚಿಮ ಬಂಗಾಳ
ಡಾವ್‌ಕಿ (Dawki) – ಮೇಘಾಲಯ
ಮೊರೆಹ್ (Moreh) – ಮಣಿಪುರ
ಅಟ್ಟಾರಿ - ರಸ್ತೆ (Attari - Road) – ಪಂಜಾಬ್

➤ **ಭಾರತದ ಇ-ವೀಸಾ ಯೋಜನೆಯ ಹಿನ್ನೆಲೆ ಮತ್ತು ಪ್ರಮುಖ ಅಂಕಿ-ಅಂಶಗಳು:**

ಆರಂಭ: ಭಾರತ ಸರ್ಕಾರವು ಇ-ವೀಸಾ ಯೋಜನೆಯನ್ನು 2014 ರಲ್ಲಿ ಪ್ರಾರಂಭಿಸಿತು. ಆರಂಭದಲ್ಲಿ ಇದು ಕೇವಲ 43 ದೇಶಗಳ ನಾಗರಿಕರಿಗೆ ಲಭ್ಯವಿತ್ತು.
ವಿಸ್ತರಣೆ: ಪ್ರಸ್ತುತ ಈ ಸೌಲಭ್ಯವನ್ನು 172 ದೇಶಗಳ ಪ್ರಜೆಗಳಿಗೆ ವಿಸ್ತರಿಸಲಾಗಿದೆ.
ವಿಭಾಗಗಳು: ಪ್ರವಾಸಿ (Tourist), ಉದ್ಯಮ (Business), ವೈದ್ಯಕೀಯ (Medical), ವಿದ್ಯಾರ್ಥಿ (Student), ಟ್ರಾನ್ಸಿಟ್ (Transit) ಮುಂತಾದ 17 ಉಪ-ವಿಭಾಗಗಳಲ್ಲಿ ಇ-ವೀಸಾಗಳನ್ನು ನೀಡಲಾಗುತ್ತಿದೆ.
ವೇಗದ ಪ್ರಕ್ರಿಯೆ: ಶೇ. 95 ಕ್ಕಿಂತ ಹೆಚ್ಚು ಇ-ವೀಸಾ ಅರ್ಜಿಗಳನ್ನು 72 ಗಂಟೆಗಳ ಒಳಗೆ ಪರಿಶೀಲಿಸಿ ವಿಲೇವಾರಿ ಮಾಡಲಾಗುತ್ತದೆ.
ವಿಜಿಟ್ ಪ್ರಮಾಣ: ಪ್ರಸ್ತುತ ಭಾರತ ವಿತರಿಸುವ ಒಟ್ಟು ವೀಸಾಗಳಲ್ಲಿ ಸುಮಾರು ಶೇ. 78 ರಷ್ಟು ವೀಸಾಗಳು ಇ-ವೀಸಾಗಳೇ ಆಗಿವೆ.

## ಟಾಟಾ ಸನ್ಸ್ ಅಧ್ಯಕ್ಷ ಸ್ಥಾನಕ್ಕೆ ಎನ್. ಚಂದ್ರಶೇಖರನ್ ರಾಜೀನಾಮೆ



➤ ಟಾಟಾ ಸಮೂಹದ ಪ್ರಮುಖ ಹಿಡುವಳಿ ಕಂಪನಿಯಾದ (Holding Company) ಟಾಟಾ ಸನ್ಸ್ ಅಧ್ಯಕ್ಷ ಸ್ಥಾನಕ್ಕೆ ಎನ್. ಚಂದ್ರಶೇಖರನ್ ಅವರು ತಮ್ಮ ಹುದ್ದೆಯನ್ನು ತ್ಯಜಿಸಿದ್ದಾರೆ. ಎನ್. ಚಂದ್ರಶೇಖರನ್ ಅವರಿಗೆ ಮುಂದಿನ 5 ವರ್ಷಗಳ ಕಾಲ (2027 ರಿಂದ 2032) ಅಧಿಕಾರಾವಧಿ ವಿಸ್ತರಿಸಲು ಸರ್ ದೊರಾಬ್‌ಜಿ ಟಾಟಾ ಟ್ರಸ್ಟ್ ಮತ್ತು ಸರ್ ರತನ್ ಟಾಟಾ ಟ್ರಸ್ಟ್ ಶಿಫಾರಸು ಮಾಡಿದ್ದವು. ಆದರೆ, ಟಾಟಾ ಸನ್ಸ್ ಮಂಡಳಿಯ ಸಭೆಯಲ್ಲಿ (Board Meeting) ಎಲ್ಲ ನಿರ್ದೇಶಕರಿಂದ ಸರ್ವಾನುಮತದ ಬೆಂಬಲ (Unanimous Support) ಸಿಗದ ಕಾರಣ, ಅವರು ಸ್ವತಃ ಮರುನೇಮಕಾತಿ ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ. ಸಂಸ್ಥೆಯ ಸುಗಮ ಆಡಳಿತ ಮತ್ತು ಭವಿಷ್ಯದ ಕಾರ್ಯತಂತ್ರಗಳ ಸ್ಪಷ್ಟತೆಗಾಗಿ ಹೊಸ ನಾಯಕನ ಆಯ್ಕೆಗೆ ಮಂಡಳಿಗೆ ವಿನಂತಿಸಿದ್ದಾರೆ.

➤ **ಎನ್. ಚಂದ್ರಶೇಖರನ್:**

ಆರಂಭಿಕ ಜೀವನ: ತಮಿಳುನಾಡಿನ ಮೋಹನೂರಿನಲ್ಲಿ ಜನಿಸಿದ ಇವರು, ತಿರುಚಿರಾಪಳ್ಳಿಯ ಎನ್‌ಐಟಿಯಲ್ಲಿ (NIT Trichy) MCA ಪದವಿ ಪಡೆದರು.
TCS ಸೇರ್ಪಡೆ (1987): ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (TCS) ಗೆ ಸಾಫ್ಟ್‌ವೇರ್ ಪ್ರೋಗ್ರಾಮರ್ / ಟ್ರೇನಿಯಾಗಿ ಸೇರಿದರು.
TCS ಸಿಇಒ (2009): ತಮ್ಮ ಕಾರ್ಯಕ್ಷಮತೆಯಿಂದ 2009ರಲ್ಲಿ TCS ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ (CEO & MD) ಆಯ್ಕೆಯಾದರು.
ಟಾಟಾ ಸನ್ಸ್ ಅಧ್ಯಕ್ಷ (2017): ಸೈರಸ್ ಮಿಸ್ತ್ರಿ ಅವರ ನಿರ್ಗಮನದ ನಂತರ, 2017ರ ಜನವರಿಯಲ್ಲಿ ಟಾಟಾ ಸನ್ಸ್‌ನ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು.

➤ **ಚಂದ್ರಶೇಖರನ್ ಅವರ ಅವಧಿಯಲ್ಲಿ ಟಾಟಾ ಗ್ರೂಪ್ ಸಾಧನೆಗಳು:**

ಏರ್ ಇಂಡಿಯಾ ಖರೀದಿ (Air India Acquisition): 2022 ರಲ್ಲಿ ಕೇಂದ್ರ ಸರ್ಕಾರದಿಂದ 'ಏರ್ ಇಂಡಿಯಾ' ವಿಮಾನಯಾನ

ಸಂಸ್ಥೆಯನ್ನು ಮರಳಿ ಟಾಟಾ ಸಮೂಹಕ್ಕೆ ಸೇರಿಸಿದ್ದು ಇವರ ಪ್ರಮುಖ ಸಾಧನೆ. (ವಿಸ್ತಾರ ಹಾಗೂ ಏರ್ ಇಂಡಿಯಾ ವಿಲೀನಪ್ರಕ್ರಿಯೆ).
ಸೆಮಿಕಂಡಕ್ಟರ್ ಮತ್ತು ಬ್ಯಾಟರಿ ಗಿಗಾಫ್ಯಾಕ್ಟರಿ: ಭಾರತದಲ್ಲಿ ಚಿಪ್ ತಯಾರಿಕೆ (Semiconductor) ಹಾಗೂ ಎಲೆಕ್ಟ್ರಿಕ್ ವಾಹನಗಳ ಬ್ಯಾಟರಿ ಉತ್ಪಾದನೆಯಲ್ಲಿ ಹೊಸ ಮೈಲಿಗಲ್ಲು ಸ್ಥಾಪನೆ.
ಟಾಟಾ ನ್ಯೂ (Tata Neu): ಡಿಜಿಟಲ್ ಕ್ಷೇತ್ರದಲ್ಲಿ ಟಾಟಾ ಸಮೂಹದ ಸೂಪರ್ ಆಪ್ 'Tata Neu' ಬಿಡುಗಡೆ.
ವ್ಯಾಪಾರ ಮರುಸಂಘಟನೆ: ಟಾಟಾ ಕನ್ಸ್ಯೂಮರ್ ಪ್ರಾಡಕ್ಟ್ಸ್ ರಚನೆ ಹಾಗೂ ಟಾಟಾ ಮೋಟಾರ್ಸ್ ಸಂಸ್ಥೆಯ ವಿಭಾಗೀಕರಣ ಪ್ರಕ್ರಿಯೆಗಳು.

## ನಾಸಾದ ಮಹತ್ವಾಕಾಂಕ್ಷೆಯ 'ಮೂನ್‌ಬೇಸ್' ಯೋಜನೆಗೆ ಇಸ್ರೋಗೆ ಅಧಿಕೃತ ಆಹ್ವಾನ!




➤ ಭಾರತ ಮತ್ತು ಅಮೆರಿಕ ನಡುವೆ ಬಾಹ್ಯಾಕಾಶ ವಿಜ್ಞಾನ, ಉಪಗ್ರಹ ತಂತ್ರಜ್ಞಾನ ಹಾಗೂ ಮಾನವ ಸಹಿತ ಬಾಹ್ಯಾಕಾಶ ಯಾನ ಕ್ಷೇತ್ರದಲ್ಲಿ ಸಹಕಾರ ತೀವ್ರಗೊಳ್ಳುತ್ತಿರುವ ಬೆನ್ನಲ್ಲೇ, ವಿಶ್ವ ಬಾಹ್ಯಾಕಾಶ ರಂಗದಲ್ಲಿ ಭಾರತದ ಹಿರಿಮೆ ಮತ್ತಷ್ಟು ಹೆಚ್ಚಾಗಿದೆ. ಆಗಸ್ಟ್ 5 ಮತ್ತು 6 ರಂದು ಬೆಂಗಳೂರಿನ ಇಸ್ರೋ ಪ್ರಧಾನ ಕಚೇರಿಯಲ್ಲಿ 'ಭಾರತ-ಅಮೆರಿಕ ನಾಗರಿಕ ಬಾಹ್ಯಾಕಾಶ ಜಂಟಿ ಕಾರ್ಯಪಡೆ' (CSJWG) ಸಭೆ ನಡೆಯಿತು. ಈ ಸಭೆಯಲ್ಲಿ ಯುಎಸ್ ರಾಯಭಾರ ಕಚೇರಿ ಬಿಡುಗಡೆ ಮಾಡಿದ ಪ್ರಕಟಣೆಯ ಪ್ರಕಾರ, ನಾಸಾ ಇಸ್ರೋವನ್ನು ತನ್ನ ಮಹತ್ವಾಕಾಂಕ್ಷೆಯ 'ಮೂನ್‌ಬೇಸ್' ಯೋಜನೆಗೆ ಜೊತೆಯಾಗುವಂತೆ ಆಹ್ವಾನಿಸಿದೆ.
➤ ಈ ಉನ್ನತ ಮಟ್ಟದ ಸಭೆಯನ್ನು ಇಸ್ರೋ ಅಧ್ಯಕ್ಷ ಹಾಗೂ ಬಾಹ್ಯಾಕಾಶ ಇಲಾಖೆಯ ಕಾರ್ಯದರ್ಶಿ ಡಾ. ವಿ. ನಾರಾಯಣನ್ ಹಾಗೂ ಭಾರತದಲ್ಲಿನ ಅಮೆರಿಕದ ರಾಯಭಾರಿ ಸೆರ್ಗಿಯೋ ಗೋರ್ ಅವರು ಆರಂಭಿಸಿದರು. ಜಂಟಿ ಸಭೆಯ ಅಧ್ಯಕ್ಷತೆಯನ್ನು ಯು.ಆರ್. ರಾವ್ ಉಪಗ್ರಹ ಕೇಂದ್ರದ (URSC) ನಿರ್ದೇಶಕ ಎಂ. ಶಂಕರನ್ ಮತ್ತು ನಾಸಾ ಹಾಗೂ ಅಮೆರಿಕ ವಿದೇಶಾಂಗ ಇಲಾಖೆಯ ಹಿರಿಯ ಅಧಿಕಾರಿಗಳು ವಹಿಸಿದ್ದರು.
➤ ನಾಸಾದ 'ಮೂನ್‌ಬೇಸ್' (Moon Base) ಯೋಜನೆ: ನಾಸಾ ಸಂಸ್ಥೆಯು ಚಂದ್ರನ ದಕ್ಷಿಣ ಧ್ರುವ ಪ್ರದೇಶದಲ್ಲಿ ಮಾನವನ ದೀರ್ಘಕಾಲೀನ ವಾಸ ಹಾಗೂ ಸಂಶೋಧನೆಗಾಗಿ 'ಮೂನ್ ಬೇಸ್' ಯೋಜನೆಯನ್ನು ಹಂತ ಹಂತವಾಗಿ ಜಾರಿಗೆ ತರುತ್ತಿದೆ:
ಹಂತ ೧ (2029 ರವರೆಗೆ): ರೋಬೋಟಿಕ್ ಮಿಷನ್‌ಗಳ ಮೂಲಕ ಚಂದ್ರನ ದಕ್ಷಿಣ ಧ್ರುವದ ಖನಿಜಗಳು, ನೀರು ಮತ್ತು ವಾತಾವರಣದ ಅಧ್ಯಯನ.
ಹಂತ ೨ (2029 - 2032): ಚಂದ್ರನ ಮೇಲ್ಮೈನಲ್ಲಿ ಗಗನಯಾತ್ರಿಗಳು ವಾಸಿಸಲು ಅಗತ್ಯವಿರುವ ಮೂಲಸೌಕರ್ಯ, ಶಕ್ತಿ ಸಂಪನ್ಮೂಲ ಹಾಗೂ ಸಂಪರ್ಕ ವ್ಯವಸ್ಥೆಗಳ ನಿರ್ಮಾಣ.
ಹಂತ ೩ (2032ರ ನಂತರ): ಪೂರ್ಣಪ್ರಮಾಣದ 'ಮೂನ್ ಬೇಸ್' ಸ್ಥಾಪನೆ. ಇದು ಮುಂದೆ ಮಂಗಳ ಗ್ರಹದ (Mars) ಮಾನವ ಸಹಿತ ಬಾಹ್ಯಾಕಾಶ ಯಾತ್ರೆಗೆ ತಂಗುದಾಣವಾಗಿ (Stepping Stone) ಕಾರ್ಯನಿರ್ವಹಿಸಲಿದೆ.
➤ ದ್ವಿಪಕ್ಷೀಯ ಹಿನ್ನೆಲೆ: 2025ರ ಫೆಬ್ರವರಿಯಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡುವೆ ನಡೆದ 'ಭಾರತ-ಅಮೆರಿಕ TRUST' (Transforming the Relationship Utilizing Strategic Technology) ಉಪಕ್ರಮದ ಭಾಗವಾಗಿ ಈ ಒಪ್ಪಂದ ಮುನ್ನೆಲೆಗೆ ಬಂದಿದೆ.

## ಅರುಣಾಚಲ ಪ್ರದೇಶದ 27 ಸ್ಥಳಗಳಿಗೆ ಭಾರತದ ಅಧಿಕೃತ ನಾಮಕರಣ: ಚೀನಾ ಆಕ್ಷೇಪ



➤ ಇತ್ತೀಚೆಗೆ ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ ಅಡಿಯಲ್ಲಿ ಬರುವ 'ಸರ್ವೇ ಆಫ್ ಇಂಡಿಯಾ' (Survey of India) ಸಂಸ್ಥೆಯು ತನ್ನ ಅಧಿಕೃತ ನಕ್ಷೆಯನ್ನು ನವೀಕರಿಸಿ, ಅರುಣಾಚಲ ಪ್ರದೇಶದ 27 ಪ್ರಮುಖ ಭೌಗೋಳಿಕ ಸ್ಥಳಗಳಿಗೆ ಅಧಿಕೃತ ಹೆಸರುಗಳನ್ನು ಪ್ರಕಟಿಸಿದೆ. ಈ ಕ್ರಮಕ್ಕೆ ನೆರೆಯ ಚೀನಾ ತೀವ್ರ ವಿರೋಧ ಹಾಗೂ ಆಕ್ಷೇಪ ವ್ಯಕ್ತಪಡಿಸಿದ್ದು, ಈ ಪ್ರದೇಶಗಳು ತನ್ನ 'ಝಾಂಗ್ನಾನ್' (ದಕ್ಷಿಣ ಟಿಬೆಟ್) ವ್ಯಾಪ್ತಿಗೆ ಬರುತ್ತವೆ ಎಂದು ಪ್ರತಿಪಾದಿಸಿದೆ.
**➤ ಅಧಿಕೃತ ನಾಮಕರಣಗೊಂಡ 27 ಸ್ಥಳಗಳ ವಿವರಣೆ:**
21 ಭೂಪ್ರದೇಶಗಳು: ಪ್ರಮುಖ ಬೆಟ್ಟಗಳು, ಗ್ರಾಮಗಳು ಮತ್ತು ಪ್ರಾಂತ್ಯಗಳು.
4 ಪರ್ವತ ಕಣಿವೆಗಳು (Mountain Passes/Valleys): ಆಯಕಟ್ಟಿನ ಮಿಲಿಟರಿ/ಸಂಚಾರ ಮಾರ್ಗಗಳು.
1 ಹಿಮಸರೋವರ (Glacial Lake): ಹಿಮಾಲಯದ ಪ್ರದೇಶದಲ್ಲಿರುವ ಪ್ರಮುಖ ನೈಸರ್ಗಿಕ ಜಲಮೂಲ.
1 ಯುದ್ಧ ಸ್ಮಾರಕ: 1962ರ ಭಾರತ-ಚೀನಾ ಯುದ್ಧದ ವೀರ ಯೋಧರ ಸ್ಮಾರಕ.
**➤ ಚೀನಾದ ಆಕ್ಷೇಪ ಮತ್ತು ರಾಜತಾಂತ್ರಿಕ ಹಿನ್ನೆಲೆ:**
ಝಾಂಗ್ನಾನ್' (Zangnan) ವಾದ: ಅರುಣಾಚಲ ಪ್ರದೇಶವು ದಕ್ಷಿಣ ಟಿಬೆಟ್‌ಗೆ ಸೇರಿದ ಭೂಭಾಗವಾಗಿದ್ದು, ಅದನ್ನು ಚೀನಾ 'ಝಾಂಗ್ನಾನ್' ಎಂದು ಕರೆಯುತ್ತದೆ.
ಅಸ್ತಿತ್ವದ ನಿರಾಕರಣೆ: ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಗುವೋ ಜಿಯಾಕುನ್ ಮಾತನಾಡಿ, "ಅರುಣಾಚಲ ಪ್ರದೇಶ ಎಂಬ ಅಸ್ತಿತ್ವವನ್ನೇ ನಾವು ಗುರುತಿಸುವುದಿಲ್ಲ. ಸ್ಥಳಗಳ ಹೆಸರು ಬದಲಾಯಿಸುವುದು ಅಕ್ರಮ ಹಾಗೂ ಇದು ಭಾರತದ ಸಾರ್ವಭೌಮತ್ವದ ಹಕ್ಕಾಗಲು ಸಾಧ್ಯವಿಲ್ಲ" ಎಂದು ಹೇಳಿದ್ದಾರೆ.
WMCC ಸಭೆಯ ಹಿನ್ನೆಲೆ: ಆಗಸ್ಟ್ 6ರಂದು ನವದೆಹಲಿಯಲ್ಲಿ ಭಾರತ ಮತ್ತು ಚೀನಾ ನಡುವೆ 36ನೇ ಗಡಿ ವ್ಯವಹಾರಗಳ ಸಮಾಲೋಚನಾ ಸಭೆ (WMCC - Working Mechanism for Consultation and Coordination) ನಡೆದ ಬೆನ್ನಲ್ಲೇ ಈ ಗಡಿ ಸಂಘರ್ಷ ಮತ್ತೆ ಮುನ್ನೆಲೆಗೆ ಬಂದಿದೆ.
➤ ಭಾರತದ ದಿಟ್ಟ ಸ್ಪಷ್ಟನೆ:ಭಾರತ ಸರ್ಕಾರವು ಚೀನಾದ ಈ ಎಲ್ಲಾ ವಾದಗಳನ್ನು ಸಂಪೂರ್ಣವಾಗಿ ತಳ್ಳಿಹಾಕಿದೆ:
ಅಖಂಡ ಭಾಗ: ಅರುಣಾಚಲ ಪ್ರದೇಶವು ಭಾರತದ ಅವಿಭಾಜ್ಯ ಹಾಗೂ ಅಖಂಡ ಅಂಗವಾಗಿದೆ (Integral and Inalienable Part of India).
ಸಾರ್ವಭೌಮ ಹಕ್ಕು: ತನ್ನ ಭೌಗೋಳಿಕ ಗಡಿಯೊಳಗಿನ ಯಾವುದೇ ಸ್ಥಳಕ್ಕೆ ಹೆಸರು ನಿಗದಿಪಡಿಸುವುದು ಭಾರತದ ಪೂರ್ಣ ಕಾನೂನಾತ್ಮಕ ಮತ್ತು ಸಾರ್ವಭೌಮ ಹಕ್ಕಾಗಿದೆ.

## ಮಾಜಿ ರಾಷ್ಟ್ರಪತಿ ರಾಮ್‌ನಾಥ್ ಕೋವಿಂದ್ ಅವರ ಆತ್ಮಚರಿತ್ರೆ ಬಿಡುಗಡೆ ಮಾಡಿದ ಪ್ರಧಾನಿ ಮೋದಿ




➤ ನವದೆಹಲಿಯ ವಿಜ್ಞಾನ ಭವನದಲ್ಲಿ ಆಯೋಜಿಸಲಾಗಿದ್ದ ವಿಶೇಷ ಸಮಾರಂಭದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ

ಅವರು ಭಾರತದ 14ನೇ ರಾಷ್ಟ್ರಪತಿ ರಾಮ್‌ನಾಥ್ ಕೋವಿಂದ್ ಅವರ ಆತ್ಮಚರಿತ್ರೆಯಾದ "Triumph of the Indian Republic: My Life, My Struggles" ಅನ್ನು ಅಧಿಕೃತವಾಗಿ ಬಿಡುಗಡೆ ಮಾಡಿದರು.

➤ ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಿ ಮೋದಿ, ರಾಮ್ ನಾಥ್ ಕೋವಿಂದ್ ಅವರ ಜೀವನ ಪ್ರತಿಯೊಬ್ಬ ಭಾರತೀಯನಿಗೂ ಮತ್ತು ಯುವ ಪೀಳಿಗೆಗೆ ಪ್ರೇರಣಾದಾಯಿಯಾಗಿದೆ ಎಂದು ಬಣ್ಣಿಸಿದರು. ಕೋವಿಂದ್ ಅವರ ವೈಯಕ್ತಿಕ ಹೋರಾಟಗಳು ಭಾರತೀಯ ಪ್ರಜಾಪ್ರಭುತ್ವದ ವಿಜಯವನ್ನು ಪ್ರತಿಬಿಂಬಿಸುತ್ತವೆ ಎಂದು ಅವರು ತಿಳಿಸಿದರು. ರಾಷ್ಟ್ರಪತಿ ಹುದ್ದೆಯಿಂದ ನಿವೃತ್ತರಾದ ಮೇಲೆಯೂ ಕೋವಿಂದ್ ಅವರು ರಾಷ್ಟ್ರ ಸೇವೆಯಲ್ಲಿ ತೊಡಗಿದ್ದು, 'ಒಂದು ದೇಶ, ಒಂದು ಚುನಾವಣೆ' ಉನ್ನತ ಮಟ್ಟದ ಸಮಿತಿಯ ಅಧ್ಯಕ್ಷರಾಗಿ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

**➤ ರಾಮ್‌ನಾಥ್ ಕೋವಿಂದ್ ಅವರ ಪ್ರಮುಖ ಹಿನ್ನೆಲೆ:**

14ನೇ ರಾಷ್ಟ್ರಪತಿ: ರಾಮ್‌ನಾಥ್ ಕೋವಿಂದ್ ಅವರು 2017 ರಿಂದ 2022 ರವರೆಗೆ ಭಾರತದ 14ನೇ ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದರು.

ವೃತ್ತಿಜೀವನ: ಮೂಲತಃ ವಕೀಲರಾಗಿದ್ದ ಇವರು, ದೆಹಲಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಕೇಂದ್ರ ಸರ್ಕಾರದ ಪರವಾಗಿ ವಾದ ಮಂಡಿಸಿದ್ದರು (Advocate-on-Record).

ರಾಜ್ಯಪಾಲರು: ರಾಷ್ಟ್ರಪತಿಯಾಗುವ ಮೊದಲು ಇವರು ಬಿಹಾರದ ರಾಜ್ಯಪಾಲರಾಗಿ ಕರ್ತವ್ಯ ನಿರ್ವಹಿಸಿದ್ದರು.

ಜನ್ಮಸ್ಥಳ: ಇವರು 1945 ರ ಅಕ್ಟೋಬರ್ 1 ರಂದು ಉತ್ತರ ಪ್ರದೇಶದ ಕಾನ್‌ಪುರ ಜಿಲ್ಲೆಯ ಪರೌಂಖ್ ಗ್ರಾಮದಲ್ಲಿ ಜನಿಸಿದರು.

## 13 Aug 2026

## ಆಗಸ್ಟ್-13: ವಿಶ್ವ ಅಂಗಾಂಗ ದಾನ ದಿನ




➤ ಅಂಗಾಂಗ ವೈಫಲ್ಯದಿಂದ ಬಳಲುತ್ತಿರುವ ಲಕ್ಷಾಂತರ ಜನರಿಗೆ ನವಜೀವನ ನೀಡುವ ಅತ್ಯಂತ ಶ್ರೇಷ್ಠ ಕಾರ್ಯ ಅಂಗಾಂಗ ದಾನ (Organ Donation). ಅಂಗಾಂಗ ದಾನದ ಕುರಿತು ಜನರಲ್ಲಿ ಅರಿವು ಮೂಡಿಸಲು ಮತ್ತು ಈ ಕುರಿತಾದ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ಪ್ರತಿವರ್ಷ ಆಗಸ್ಟ್ 13 ರಂದು ವಿಶ್ವ ಅಂಗಾಂಗ ದಾನ ದಿನ (World Organ Donation Day) ವನ್ನು ಆಚರಿಸಲಾಗುತ್ತದೆ.

**➤ ಇತಿಹಾಸ ಮತ್ತು ಹಿನ್ನೆಲೆ:**

ಮೊದಲ ಯಶಸ್ವಿ ಮೂತ್ರಪಿಂಡ ಕಸಿ (1954): ಡಾ. ಜೋಸೆಫ್ ಮುರ್ರೆ (Dr. Joseph Murray) ಅವರು ಮೊದಲ ಬಾರಿಗೆ ಅವಳಿ ಸಹೋದರರ ನಡುವೆ ಯಶಸ್ವಿ ಕಿಡ್ನಿ ಕಸಿ ಶಸ್ತ್ರಚಿಕಿತ್ಸೆ ನೆರವೇರಿಸಿದರು.

ಮೊದಲ ಯಶಸ್ವಿ ಹೃದಯ ಕಸಿ (1967): ದಕ್ಷಿಣ ಆಫ್ರಿಕಾದ ಡಾ. ಕ್ರಿಸ್ಟಿಯನ್ ಬರ್ನಾರ್ಡ್ (Dr. Christiaan Barnard) ಮಾನವನ ಮೊದಲ ಹೃದಯ ಕಸಿ ಮಾಡಿ ವೈದ್ಯಕೀಯ ಕ್ಷೇತ್ರದಲ್ಲಿ ಕ್ರಾಂತಿ ಸೃಷ್ಟಿಸಿದರು.

ಭಾರತದ ಮೈಲಿಗಲ್ಲು (ಆಗಸ್ಟ್ 3, 1994): ನವದೆಹಲಿಯ AIIMS ನಲ್ಲಿ ಡಾ. ಪಿ.ವೇಣುಗೋಪಾಲ್ ಅವರ ನೇತೃತ್ವದಲ್ಲಿ ಭಾರತದ ಮೊದಲ ಯಶಸ್ವಿ ಮರಣೋತ್ತರ ಹೃದಯ ಕಸಿ ನಡೆಯಿತು.

➤ ಅಂಗಾಂಗ ದಾನದ ಕುರಿತು ಸಮಾಜದಲ್ಲಿರುವ ವಯಸ್ಸಿನ ಮಿತಿ, ರೋಗಗಳ ಭಯ, ಧಾರ್ಮಿಕ ಚೌಕಟ್ಟು ಹಾಗೂ ವೆಚ್ಚದಂತಹ ಪ್ರಮುಖ 7 ಮೂಢನಂಬಿಕೆಗಳನ್ನು ತೊಡೆದುಹಾಕಿ, ಬದುಕಿರುವಾಗ ಅಥವಾ ಮರಣೋತ್ತರವಾಗಿ ಮಾಡುವ ಅಂಗಾಂಗ ದಾನವು ಮಾನವೀಯತೆಯ ಅತ್ಯುನ್ನತ ಸೇವೆಯಾಗಿದೆ ಎಂಬ ಸತ್ಯವನ್ನು ತಿಳಿಸುವುದೇ ಈ ಜಾಗೃತಿಯ ಮುಖ್ಯ ಉದ್ದೇಶವಾಗಿದೆ.

**➤ ಕರ್ನಾಟಕದ ಐತಿಹಾಸಿಕ ಸಾಧನೆ ಮತ್ತು 'ಜೀವಸಾರ್ಥಕತೆ'**

ದಾಖಲೆಯ ಸಾಧನೆ (2025-2026): ಕರ್ನಾಟಕ ರಾಜ್ಯವು 'ಜೀವಸಾರ್ಥಕತೆ' ಸಂಸ್ಥೆಯ ಮೂಲಕ 198 ಅಂಗಾಂಗ ದಾನಿಗಳಿಂದ ಅಂಗಾಂಗ ಸಂಗ್ರಹಿಸಿ ಸಾರ್ವಕಾಲಿಕ ದಾಖಲೆ ಬರೆದಿದೆ. ರಾಷ್ಟ್ರಮಟ್ಟದಲ್ಲಿ ಕರ್ನಾಟಕವು 3ನೇ ಸ್ಥಾನ ಪಡೆದುಕೊಂಡಿದೆ (ಮೊದಲ ಎರಡು ಸ್ಥಾನಗಳು: ತಮಿಳುನಾಡು ಮತ್ತು ತೆಲಂಗಾಣ).

ಜೀವಸಾರ್ಥಕತೆ (SOTTO - Karnataka): ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಡಿಯಲ್ಲಿ ಕಾರ್ಯಾಚರಿಸುವ State Organ and Tissue Transplant Organisation (SOTTO) ಅನ್ನು ಕರ್ನಾಟಕದಲ್ಲಿ 'ಜೀವಸಾರ್ಥಕತೆ' ಎಂದು ಕರೆಯಲಾಗುತ್ತದೆ. ಇದು 'ಅಂಗಾಂಗ ಕಸಿ ಕಾಯ್ದೆ 1994' (Transplantation of Human Organs Act 1994) ನ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುತ್ತದೆ.

ಹಸಿರು ಕಾರಿಡಾರ್ (Green Corridor): ಮಿದುಳು ಸಾವು (Brain Death) ಸಂಭವಿಸಿದ ವ್ಯಕ್ತಿಯಿಂದ ಸಂಗ್ರಹಿಸಿದ ಅಂಗಾಂಗಗಳನ್ನು ನಿಗದಿತ ಸಮಯದೊಳಗೆ ಮತ್ತೊಂದು ಆಸ್ಪತ್ರೆಗೆ ತಲುಪಿಸಲು ಪೋಲಿಸ್ ಇಲಾಖೆಯ ನೆರವಿನಿಂದ 'ಗ್ರೀನ್ ಕಾರಿಡಾರ್' ಸಂಚಾರ ವ್ಯವಸ್ಥೆಯನ್ನು ಮಾಡಲಾಗುತ್ತದೆ.

➤ 1994ರ ಆಗಸ್ಟ್ 3 ರಂದು ಭಾರತದ ಮೊದಲ ಯಶಸ್ವಿ ಮರಣೋತ್ತರ ಹೃದಯ ಕಸಿ ಶಸ್ತ್ರಚಿಕಿತ್ಸೆ ನೆರವೇರಿದ ಐತಿಹಾಸಿಕ ಮೈಲಿಗಲ್ಲಿನ ನೆನಪಿಗಾಗಿ ಪ್ರತಿ ವರ್ಷ ಆಗಸ್ಟ್ 3 ಅನ್ನು 'ರಾಷ್ಟ್ರೀಯ ಅಂಗಾಂಗ ದಾನ ದಿನ'ವಾಗಿ ಆಚರಿಸಲಾಗುತ್ತದೆ.

## ಆಂಧ್ರಪ್ರದೇಶದ ಕಡಪ ಬೇಸಿನ್‌ನಲ್ಲಿ ಲಿಥಿಯಂ ಮತ್ತು ಗ್ಯಾಲಿಯಂ ಶೋಧನೆ



➤ ಆಂಧ್ರಪ್ರದೇಶ ಸರ್ಕಾರವು ತನ್ನ ಕಡಪ ಬೇಸಿನ್ (Kadapa Basin) ವ್ಯಾಪ್ತಿಯಲ್ಲಿ ಅತ್ಯಂತ ಪ್ರಮುಖ 'ಕ್ರಿಟಿಕಲ್ ಮಿನರಲ್ಸ್' (Critical Minerals) ಗಳಾದ ಲಿಥಿಯಂ (Lithium) ಮತ್ತು ಗ್ಯಾಲಿಯಂ (Gallium) ಖನಿಜಗಳ ಅನ್ವೇಷಣೆಗಾಗಿ CSIR - ನ್ಯಾಷನಲ್ ಜಿಯೋಫಿಸಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ (NGRI) ಜೊತೆಗೆ ತಿಳುವಳಿಕೆ ಒಪ್ಪಂದಕ್ಕೆ (MoU) ಸಹಿ ಹಾಕಿದೆ.

➤ ಇದೇ ಸಂದರ್ಭದಲ್ಲಿ ಆಂಧ್ರಪ್ರದೇಶ ಸರ್ಕಾರವು ಗಣಿಗಾರಿಕೆ ಕ್ಷೇತ್ರದಲ್ಲಿ ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿಗೆ ಉತ್ತೇಜನ ನೀಡಲು IIT (ISM) ಧನ್‌ಬಾದ್ - TEXMiN ಜೊತೆಗೂ ಮತ್ತೊಂದು ಒಪ್ಪಂದ ಮಾಡಿಕೊಂಡಿದೆ. ಇದರಡಿಯಲ್ಲಿ ರಾಜ್ಯದಲ್ಲಿ 'Centre of Excellence for Mining' ಸ್ಥಾಪಿಸಲಾಗುವುದು.

➤ ಕ್ರಿಟಿಕಲ್ ಮಿನರಲ್ಸ್: ಆಧುನಿಕ ತಂತ್ರಜ್ಞಾನ, ಹಸಿರು ಇಂಧನ (Green Energy), ಮತ್ತು ರಕ್ಷಣಾ ಕ್ಷೇತ್ರಕ್ಕೆ ಅತ್ಯಗತ್ಯವಾದ ಹಾಗೂ ಪೂರೈಕೆ ಸರಪಳಿಯಲ್ಲಿ ಕೊರತೆ ಉಂಟಾಗುವ ಅಪಾಯವಿರುವ ಖನಿಜಗಳನ್ನು ಕ್ರಿಟಿಕಲ್ ಮಿನರಲ್ಸ್ ಎನ್ನಲಾಗುತ್ತದೆ.

➤ ಗ್ಯಾಲಿಯಂ (Gallium): ಒಂದು ವಿಶಿಷ್ಟ ಪೋಸ್ಟ್-ಟ್ರಾನ್ಸಿಸ್ಟರ್ ಲೋಹ. ಸೆಮಿಕಂಡಕ್ಟರ್‌ಗಳು (Semiconductors), LED ಗಳು, ಇಂಟಿಗ್ರೇಟೆಡ್ ಸರ್ಕ್ಯೂಟ್‌ಗಳು (IC) ಮತ್ತು ಸೋಲಾರ್ ಪ್ಯಾನಲ್ ತಂತ್ರಜ್ಞಾನದಲ್ಲಿ ವ್ಯಾಪಕವಾಗಿ ಬಳಸಲಾಗುತ್ತದೆ.

➤ ಲಿಥಿಯಂ (Lithium): ಅತ್ಯಂತ ಹಗುರವಾದ ಮತ್ತು ಕಡಿಮೆ ಸಾಂದ್ರತೆಯ ಲೋಹ. ಇದನ್ನು ಹೆಚ್ಚಾಗಿ 'ವೈಟ್ ಗೋಲ್ಡ್' (White Gold) ಎಂದು ಕರೆಯಲಾಗುತ್ತದೆ. ವಿದ್ಯುತ್ ವಾಹನಗಳ (EV) ಬ್ಯಾಟರಿಗಳು, ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್, ಎನರ್ಜಿ ಸ್ಟೋರೇಜ್ ಸಿಸ್ಟಮ್, ಸೆರಾಮಿಕ್ಸ್ ಹಾಗೂ ಲುಬ್ರಿಕೆಂಟ್ಸ್‌ಗಳಲ್ಲಿ ಬಳಸಲಾಗುತ್ತದೆ.

➤ ಕಡಪ ಬೇಸಿನ್ ಎಂಬುದು ಆಂಧ್ರಪ್ರದೇಶದಲ್ಲಿರುವ ಪ್ರಸಿದ್ಧ ಪಾಲಿಯೋಪ್ರೊಟೆರೋಜೋಯಿಕ್ (Paleoproterozoic) ಸಂಚಿತ

ಬೇಸಿನ್ (Sedimentary Basin) ಆಗಿದೆ. ಇದು ಯುರೇನಿಯಂ (ತುಮ್ಮಲಪಲ್ಲೆ), ಸುಣ್ಣದಕಲ್ಲು (Limestone), ಬೆರೈಟ್ಸ್ ಮತ್ತು ಬ್ಯಾರೈಟ್ ನಿಕ್ಷೇಪಗಳಿಗೆ ಹೆಸರುವಾಸಿಯಾಗಿದೆ.

## ರಷ್ಯಾ-ಉಕ್ರೇನ್ ಬ್ಯಾಂಕ್ ವಿವಾದ: ಮಾಜಿ ಸಿಜೆಐ ಡಿ. ವೈ. ಚಂದ್ರಚೂಡ್‌ರನ್ನು ಮಧ್ಯಸ್ಥಗಾರರನ್ನಾಗಿ ನೇಮಿಸಿದ ರಷ್ಯಾ




➤ ರಷ್ಯಾ ಮತ್ತು ಉಕ್ರೇನ್ ನಡುವಿನ ಸುದೀರ್ಘ ಯುದ್ಧವು ಈಗ ಕಾನೂನು ಮತ್ತು ಅಂತಾರಾಷ್ಟ್ರೀಯ ಮಧ್ಯಸ್ಥಿಕೆ ಹಂತ ತಲುಪಿದೆ. 2022ರ ಮಿಲಿಟರಿ ಕಾರ್ಯಾಚರಣೆಯ ನಂತರ ಉಕ್ರೇನ್‌ನ ಸರ್ಕಾರಿ ಸ್ವಾಮ್ಯದ ಓಶಚಾಡ್‌ಬ್ಯಾಂಕ್ ತನ್ನ ಪ್ರಮುಖ ಆಸ್ತಿ-ಪಾಸ್ತಿಗಳನ್ನು ಕಳೆದುಕೊಂಡಿದೆ ಎಂದು ಆರೋಪಿಸಿ ರಷ್ಯಾ ವಿರುದ್ಧ ನೂರಾರು ಮಿಲಿಯನ್ ಡಾಲರ್ ಪರಿಹಾರ ಕೋರಿ ಕೇಸ್ ದಾಖಲಿಸಿದೆ. ಈ ಪ್ರಮುಖ ಅಂತಾರಾಷ್ಟ್ರೀಯ ನ್ಯಾಯಾಂಗ ವ್ಯಾಜ್ಯದಲ್ಲಿ ರಷ್ಯಾ ತನ್ನ ಪರವಾಗಿ ಮಧ್ಯಸ್ಥಿಕೆ ವಹಿಸಲು ಭಾರತದ ಮಾಜಿ ಸಿಜೆಐ ಡಿ. ವೈ. ಚಂದ್ರಚೂಡ್ ಅವರನ್ನು ಆಯ್ಕೆ ಮಾಡಿದೆ.

**➤ 3-ಸದಸ್ಯರ ಅಂತಾರಾಷ್ಟ್ರೀಯ ಮಧ್ಯಸ್ಥಿಕೆ ಮಂಡಳಿ:** ಈ ಪ್ರಕರಣದ ವಿಚಾರಣೆ ನಡೆಸಲು ಮೂರು ಸದಸ್ಯರ ಮಧ್ಯಸ್ಥಿಕೆ ಮಂಡಳಿಯನ್ನು (Arbitral Tribunal) ರಚಿಸಲಾಗಿದೆ:

ಡಯಾಲಾ ಜಿಮೆನೆಜ್ (Dyalá Jiménez): ಕೋಸ್ಟರಿಕಾದ ಮಾಜಿ ವಾಣಿಜ್ಯ ಸಚಿವೆ ಹಾಗೂ ಪ್ರಸಿದ್ಧ ಮಧ್ಯಸ್ಥಗಾರ್ತಿ. ಇವರನ್ನು ಎರಡೂ ದೇಶಗಳು ಜಂಟಿಯಾಗಿ ಟ್ರಿಬ್ಯೂನಲ್‌ನ ಅಧ್ಯಕ್ಷರನ್ನಾಗಿ (President of Tribunal) ಆಯ್ಕೆ ಮಾಡಿವೆ.

ಸ್ಟಾವ್ರೊಸ್ ಬ್ರೆಕೌಲಾಕಿಸ್ (Stavros Brekoulakis): ಸಿಂಗಾಪುರದ ನ್ಯಾಷನಲ್ ಯುನಿವರ್ಸಿಟಿಯ ಪ್ರೊಫೆಸರ್ ಹಾಗೂ ಗ್ರೀಕ್ ಮಧ್ಯಸ್ಥಗಾರ. ಇವರನ್ನು ಉಕ್ರೇನ್‌ನ ಓಶಚಾಡ್‌ಬ್ಯಾಂಕ್ ನೇಮಿಸಿದೆ.

ಡಿ. ವೈ. ಚಂದ್ರಚೂಡ್ (D. Y. Chandrachud): ಭಾರತದ ಮಾಜಿ ಮುಖ್ಯ ನ್ಯಾಯಮೂರ್ತಿ. ಇವರನ್ನು ರಷ್ಯಾ ನೇಮಕ ಮಾಡಿದೆ.

**➤ ವಿವಾದದ ಮೂಲ ಕಾರಣ:**

ನಾಲ್ಕು ಪ್ರದೇಶಗಳ ನಷ್ಟ: ಉಕ್ರೇನ್‌ನ ಡೊನೆಟ್ಸ್ಕ್, ಲುಹಾನ್ಸ್ಕ್, ಖೆರ್ಸನ್ ಮತ್ತು ಜಪೋರಿಝಿಯಾ (Donetsk, Luhansk, Kherson, Zaporizhzhia) ಪ್ರದೇಶಗಳಲ್ಲಿ ಇದ್ದ ಓಶಚಾಡ್ ಬ್ಯಾಂಕ್‌ನ ಶಾಖೆಗಳು ಹಾಗೂ ಹೂಡಿಕೆಗಳು ರಷ್ಯಾದ ಸಶಸ್ತ್ರ ಪಡೆಗಳ ವಶವಾದ ಕಾರಣ ಬ್ಯಾಂಕ್ ಭಾರಿ ಆರ್ಥಿಕ ನಷ್ಟ ಅನುಭವಿಸಿದೆ.

ಉಲ್ಲಂಘನೆ: 1998 ರಲ್ಲಿ ರಷ್ಯಾ ಮತ್ತು ಉಕ್ರೇನ್ ಸರ್ಕಾರಗಳ ನಡುವೆ ಸಹಿಯಾದ ದ್ವಿಪಕ್ಷೀಯ ಹೂಡಿಕೆ ಉತ್ತೇಜನ ಮತ್ತು ಪರಸ್ಪರ ರಕ್ಷಣೆ ಒಪ್ಪಂದದ (BIT) ನಿಯಮಗಳನ್ನು ರಷ್ಯಾ ಉಲ್ಲಂಘಿಸಿದೆ ಎಂದು ಬ್ಯಾಂಕ್ ಆರೋಪಿಸಿದೆ.

ನೋಟಿಸ್: 2025ರ ಜುಲೈನಲ್ಲಿ ಬ್ಯಾಂಕ್ ನೀಡಿದ ನೋಟಿಸ್‌ಗೆ ರಷ್ಯಾ ಸ್ಪಂದಿಸದ ಕಾರಣ 2026ರ ಏಪ್ರಿಲ್‌ನಲ್ಲಿ ಅಧಿಕೃತವಾಗಿ ಈ ಮಧ್ಯಸ್ಥಿಕೆ ಪ್ರಕ್ರಿಯೆಯನ್ನು ಆರಂಭಿಸಲಾಯಿತು.

➤ ಎರಡು ದೇಶಗಳು ಅಥವಾ ದೇಶ ಮತ್ತು ವಿದೇಶಿ ಕಂಪನಿಗಳ ನಡುವೆ ವಾಣಿಜ್ಯ/ಹೂಡಿಕೆ ವಿವಾದಗಳು ಉಂಟಾದಾಗ ನ್ಯಾಯಾಲಯದ ಹೊರಗೆ ಅಂತಾರಾಷ್ಟ್ರೀಯ ಕಾನೂನುಗಳ ಪ್ರಕಾರ ವಿವಾದ ಬಗೆಹರಿಸಿಕೊಳ್ಳುವ ಪ್ರಕ್ರಿಯೆಗೆ ಅಂತಾರಾಷ್ಟ್ರೀಯ ಮಧ್ಯಸ್ಥಿಕೆ ಎನ್ನಲಾಗುತ್ತದೆ.

## ಸೂಪರ್ ಕಂಪ್ಯೂಟರ್ 'ಪರಮ್ ಪ್ರಜ್ಞಾ': ಭಾರತೀಯ ವಿಜ್ಞಾನ ಮತ್ತು ತಂತ್ರಜ್ಞಾನ ರಂಗದಲ್ಲಿ ಹೊಸ ಕ್ರಾಂತಿ



➤ ಭಾರತದ ಉನ್ನತ ತಂತ್ರಜ್ಞಾನ ಮತ್ತು ವೈಜ್ಞಾನಿಕ ಸಂಶೋಧನಾ ಕ್ಷೇತ್ರಕ್ಕೆ ಬೃಹತ್ ಬಲ ತುಂಬುವ ನಿಟ್ಟಿನಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನವದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (IIT Delhi) ಆವರಣದಲ್ಲಿ ಅತ್ಯಾಧುನಿಕ 'ಪರಮ್ ಪ್ರಜ್ಞಾ' (PARAM Pragya) ಸೂಪರ್ ಕಂಪ್ಯೂಟಿಂಗ್ ಸೌಲಭ್ಯವನ್ನು ಉದ್ಘಾಟಿಸಿದ್ದಾರೆ.

➤ ಕೇಂದ್ರ ಸರ್ಕಾರದ ರಾಷ್ಟ್ರೀಯ ಸೂಪರ್‌ಕಂಪ್ಯೂಟಿಂಗ್ ಮಿಷನ್ (National Supercomputing Mission - NSM) ಅಡಿಯಲ್ಲಿ ಈ ಸೂಪರ್ ಕಂಪ್ಯೂಟರ್ ಅನ್ನು ಸ್ಥಾಪಿಸಲಾಗಿದೆ. ಇದು ಕೃತಕ ಬುದ್ಧಿಮತ್ತೆ (AI), ಹವಾಮಾನ ಮುನ್ಸೂಚನೆ, ಔಷಧ ಸಂಶೋಧನೆ ಹಾಗೂ ಜೈವಿಕ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಹೊಸ ಮೈಲಿಗಲ್ಲುಗಳನ್ನು ಸೃಷ್ಟಿಸಲು ನೆರವಾಗಲಿದೆ.

**➤ ಪರಮ್ ಪ್ರಜ್ಞಾ ಸೂಪರ್ ಕಂಪ್ಯೂಟರ್‌ನ ತಾಂತ್ರಿಕ ವೈಶಿಷ್ಟ್ಯಗಳು:**

ಪೆಟಾಫ್ಲಾಪ್ಸ್ ಮಟ್ಟದ ಗಣನಾ ವೇಗ (Petaflops Computational Speed): 'ಪರಮ್ ಪ್ರಜ್ಞಾ' ಸೂಪರ್ ಕಂಪ್ಯೂಟರ್ ಪೆಟಾಫ್ಲಾಪ್ಸ್ ಸಾಮರ್ಥ್ಯವನ್ನು ಹೊಂದಿದ್ದು, ಪ್ರತಿ ಸೆಕೆಂಡಿಗೆ ಟ್ರಿಲಿಯನ್‌ಗಟ್ಟಲೆ ಸಂಕೀರ್ಣ ಗಣಿತದ ಲೆಕ್ಕಾಚಾರಗಳನ್ನು ಕನಿಷ್ಠ ಅವಧಿಯಲ್ಲಿ ನಿಖರವಾಗಿ ಪೂರ್ಣಗೊಳಿಸುತ್ತದೆ.

ಅತ್ಯಾಧುನಿಕ ಪ್ರೊಸೆಸರ್ ವ್ಯವಸ್ಥೆ: ಇದು ಬಹು-ಕೋರ್ (Multi-core) CPU ಮತ್ತು ಅತ್ಯಾಧುನಿಕ GPU ಆಧಾರಿತ ಆರ್ಕಿಟೆಕ್ಚರ್ ಅನ್ನು ಒಳಗೊಂಡಿದೆ. ಬೃಹತ್ ಪ್ರಮಾಣದ ಬಿಗ್ ಡೇಟಾ (Big Data) ವಿಶ್ಲೇಷಣೆ ಮತ್ತು ಸಂಕೀರ್ಣ ಎಐ ಮಾಡೆಲ್‌ಗಳನ್ನು ರನ್ ಮಾಡಲು ಇದು ಪೂರಕವಾಗಿದೆ.

ಪರಿಸರಸ್ನೇಹಿ 'ಲಿಕ್ವಿಡ್ ಕೂಲಿಂಗ್' ತಂತ್ರಜ್ಞಾನ: ನಿರಂತರ ಕಾರ್ಯಾಚರಣೆಯ ಸಮಯದಲ್ಲಿ ಉಂಟಾಗುವ ಶಾಖವನ್ನು ಕಡಿಮೆ ಮಾಡಲು ಅತ್ಯಾಧುನಿಕ 'ಡೈರೆಕ್ಟ್ ಲಿಕ್ವಿಡ್ ಕೂಲಿಂಗ್' (Direct Liquid Cooling) ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಇದು ವಿದ್ಯುತ್ ಬಳಕೆಯನ್ನು ಗಣನೀಯವಾಗಿ ಕಡಿತಗೊಳಿಸುವ ಮೂಲಕ ಪರಿಸರಸ್ನೇಹಿ (Eco-friendly) ಕಾರ್ಯನಿರ್ವಹಣೆಗೆ ಸಾಕ್ಷಿಯಾಗಿದೆ.

**➤ ಪ್ರಮುಖ ಅನ್ವಯಗಳು ಮತ್ತು ಬಳಕೆಯ ಕ್ಷೇತ್ರಗಳು:**

ಔಷಧ ಸಂಶೋಧನೆ ಮತ್ತು ಜೀನೋಮಿಕ್ಸ್ (Healthcare & Genomics): ಜೈವಿಕ ಅಣುಗಳ (Biomolecules) ವಿನ್ಯಾಸ, ಹೊಸ ಲಸಿಕೆಗಳ ಪರೀಕ್ಷೆ ಮತ್ತು ವಿವಿಧ ವೈರಸ್/ರೋಗಾಣುಗಳ ನಡವಳಿಕೆಯನ್ನು ಕ್ಷಣಮಾತ್ರದಲ್ಲಿ ವಿಶ್ಲೇಷಿಸಿ ಹೊಸ ಔಷಧ ಕಂಡುಹಿಡಿಯಲು ಇದು ಅತ್ಯಂತ ಸಹಕಾರಿ.

**ಹವಾಮಾನ ಮುನ್ಸೂಚನೆ (Weather Forecasting):** ಭಾರತೀಯ ಮಾನ್ಸೂನ್ ಮಾದರಿಗಳು, ಚಂಡಮಾರುತಗಳ ಪಥ (Cyclones), ಮತ್ತು ಜಾಗತಿಕ ತಾಪಮಾನ ವೈಪರೀತ್ಯಗಳ ಕುರಿತು ನಿಖರ ಮುನ್ಸೂಚನೆ ನೀಡಲು ಈ ಸೂಪರ್ ಕಂಪ್ಯೂಟರ್ ಸಹಾಯ ಮಾಡಲಿದೆ.

**ಮೆಟೀರಿಯಲ್ ಸೈನ್ಸ್ ಮತ್ತು ಇಂಜಿನಿಯರಿಂಗ್ (Material Science & Engineering):** ಬಾಹ್ಯಾಕಾಶ (ISRO) ಮತ್ತು ರಕ್ಷಣಾ ರಂಗಕ್ಕೆ (DRDO) ಅಗತ್ಯವಿರುವ ಹೊಸ ಸಂಯುಕ್ತ ವಸ್ತುಗಳ ರಚನೆ ಹಾಗೂ ನ್ಯಾನೊ ತಂತ್ರಜ್ಞಾನ ಸಂಶೋಧನೆಗೆ ವೇಗ ನೀಡಲಿದೆ.

**ಎಐ ಮತ್ತು ಭಾರತೀಯ ಭಾಷೆಗಳ ತರಬೇತಿ (AI & Indian Language LLMs):** ಭಾರತೀಯ ಭಾಷೆಗಳ ಬೃಹತ್ ಭಾಷಾ ಮಾದರಿಗಳಿಗೆ (Large Language Models - LLM) ಮತ್ತು

ಆಳವಾದ ದತ್ತಾಂಶ ಮಾದರಿಗಳಿಗೆ (Deep Learning Models) ತರಬೇತಿ ನೀಡಲು ಈ ಮೂಲಸೌಕರ್ಯ ಬಳಸಲ್ಪಡುತ್ತದೆ.

## ಸಿಂಕೆಫೀಲ್ಡ್ ಕಪ್ 2026: ಉಜ್ಬೇಕಿಸ್ತಾನ್‌ನ ಸಿಂಡರೋವ್ ವಿರುದ್ಧ ಭಾರತದ ಗ್ರ್ಯಾಂಡ್ ಮಾಸ್ಟರ್ ಪ್ರಜ್ಞಾನಂದಗೆ ರೋಚಕ ಗೆಲುವು!



➤ ಕ್ರೀಡಾ ಲೋಕದಲ್ಲಿ ಭಾರತದ ಚೆಸ್ ಸಾಮ್ರಾಜ್ಯ ಮತ್ತೆ ಮುಂಚೂಣಿಗೆ ಬಂದಿದೆ. ಅಮೆರಿಕದ ಮಿಸೌರಿಯ ಸೆಂಟ್ ಲೂಯಿಸ್‌ನಲ್ಲಿ ನಡೆಯುತ್ತಿರುವ ಪ್ರತಿಷ್ಠಿತ ಸಿಂಕೆಫೀಲ್ಡ್ ಕಪ್ (Sinquefield Cup 2026) ಚೆಸ್ ಪಂದ್ಯಾವಳಿಯ ಎರಡನೇ ಸುತ್ತಿನಲ್ಲಿ ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ (R. Praggnanandhaa) ಭರ್ಜರಿ ಜಯ ದಾಖಲಿಸಿದ್ದಾರೆ.

➤ ಅಮೆರಿಕದ ಸೆಂಟ್ ಲೂಯಿಸ್‌ನಲ್ಲಿ ನಡೆದ ಸಿಂಕೆಫೀಲ್ಡ್ ಕಪ್ ಚೆಸ್ ಪಂದ್ಯಾವಳಿಯ ಎರಡನೇ ಸುತ್ತಿನಲ್ಲಿ ಭಾರತದ ಆರ್. ಪ್ರಜ್ಞಾನಂದ ಅವರು 95 ನಡೆಗಳ ಸುದೀರ್ಘ ಕಾದಾಟದ ನಂತರ ಉಜ್ಬೇಕಿಸ್ತಾನ್‌ನ ಜವೋಖಿರ್ ಸಿಂಡರೋವ್ ವಿರುದ್ಧ ರೋಚಕ ಗೆಲುವು ಸಾಧಿಸಿ, ಜಂಟಿ ಅಗ್ರಸ್ಥಾನಕ್ಕೇರಿದ್ದಾರೆ.

➤ **ಪ್ರಜ್ಞಾನಂದ ಅವರ ಇತ್ತೀಚಿನ ಪ್ರಮುಖ ಸಾಧನೆಗಳು:**

ಸೆಂಟ್ ಲೂಯಿಸ್ ರ್‍ಯಾಪಿಡ್ ಮತ್ತು ಬ್ಲಿಟ್ಜ್ (2026): ಆಗಸ್ಟ್ ಆರಂಭದಲ್ಲಿ ನಡೆದ ಈ ಚಾಂಪಿಯನ್‌ಶಿಪ್‌ನಲ್ಲಿ ಪ್ರಜ್ಞಾನಂದ ಚಾಂಪಿಯನ್ ಆಗಿ ಹೊರಹೊಮ್ಮಿದ್ದರು.

ನಾರ್ವೆ ಚೆಸ್ (2026): ಜೂನ್‌ನಲ್ಲಿ ನಡೆದ ನಾರ್ವೆ ಚೆಸ್ ಕೂಟದಲ್ಲಿ ಸತತ 4 ಕ್ಲಾಸಿಕಲ್ ಗೆಲುವುಗಳೊಂದಿಗೆ ಚಾಂಪಿಯನ್ ಪಟ್ಟಕ್ಕೇರಿದ್ದರು.

## ಅಕ್ರಮ ಆಪ್‌ಗಳ ನಿಷೇಧ: ಸೈಬರ್ ವಂಚನೆ ತಡೆಗೆ ಕೇಂದ್ರ ಸರ್ಕಾರದ ಬೃಹತ್ ಕ್ರಮ




➤ ದೇಶದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಸೈಬರ್ ವಂಚನೆ ಮತ್ತು ಅಕ್ರಮ ಸಾಲದ ಆಪ್‌ಗಳ ಜಾಲಕ್ಕೆ ಕನ್ನಿಕ್ಕಲು ಕೇಂದ್ರ ಗೃಹ ಸಚಿವಾಲಯವು (MHA) ಮಹತ್ವದ ಹೆಜ್ಜೆ ಇಟ್ಟಿದೆ. ಲೋಕಸಭೆಯಲ್ಲಿ ಗೃಹ ರಾಜ್ಯ ಸಚಿವ ಬಂಡಿ ಸಂಜಯ್ ಕುಮಾರ್ ಅವರು ನೀಡಿದ ಅಧಿಕೃತ ಮಾಹಿತಿಯಂತೆ, ದೇಶಾದ್ಯಂತ ಸಾರ್ವಜನಿಕರನ್ನು ವಂಚಿಸುತ್ತಿದ್ದ 3,718 ಮೊಬೈಲ್ ಆಪ್‌ಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

➤ ಆನ್‌ಲೈನ್ ಸಾಲದ ಹೆಸರಿನಲ್ಲಿ ಬ್ಲ್ಯಾಕ್‌ಮೇಲ್ ಮಾಡುವುದು, ವೈಯಕ್ತಿಕ ಡೇಟಾ ಕದಿಯುವುದು ಮತ್ತು ಹಣಕಾಸು ವಂಚನೆ ಎಸಗುತ್ತಿದ್ದ ಆಪ್‌ಗಳ ವಿರುದ್ಧ ಭಾರತೀಯ ಸೈಬರ್ ಕ್ರೈಮ್ ಸಮನ್ವಯ ಕೇಂದ್ರ (I4C) ನೀಡಿದ ವರದಿ ಆಧಾರದ ಮೇಲೆ ಐಟಿ ಕಾಯಿದೆಯಡಿ ಈ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ.

➤ **ಐಟಿ ಕಾಯಿದೆಯಡಿ ಕ್ರಮ (Action under IT Act):** ವಂಚನೆ ಜಾಲಗಳಲ್ಲಿ ತೊಡಗಿದ್ದ ಈ ಅಪ್ಲಿಕೇಶನ್‌ಗಳನ್ನು ಮಾಹಿತಿ ತಂತ್ರಜ್ಞಾನ ಕಾಯಿದೆ (IT Act), 2000 ನ ಸೆಕ್ಷನ್ 69(A) ಮತ್ತು ಸೆಕ್ಷನ್ 79(3)(b) ಅಡಿಯಲ್ಲಿ ನಿಷೇಧಿಸಲಾಗಿದೆ. ದೇಶದ ಭದ್ರತೆ, ಸಾರ್ವಜನಿಕ ಸುವ್ಯವಸ್ಥೆ ಮತ್ತು ನಾಗರಿಕರ ಹಣಕಾಸಿನ ಸುರಕ್ಷತೆಗೆ ಧಕ್ಕೆ ತರುವ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳನ್ನು ನಿರ್ಬಂಧಿಸಲು ಈ ಸೆಕ್ಷನ್‌ಗಳು ಅಧಿಕಾರ ನೀಡುತ್ತವೆ.

➤ ಸೈಬರ್ ವಂಚಕರು ನಕಲಿ ದಾಖಲೆಗಳನ್ನು ಬಳಸಿ ಸಿಮ್ ಕಾರ್ಡ್ ಪಡೆದುಕೊಳ್ಳುತ್ತಿದ್ದುದನ್ನು ತಡೆಯಲು:15.75 ಲಕ್ಷಕ್ಕೂ ಅಧಿಕ ಸಿಮ್ ಕಾರ್ಡ್‌ಗಳನ್ನು ರದ್ದುಗೊಳಿಸಲಾಗಿದೆ. ಅಪರಾಧಕ್ಕೆ ಬಳಸುತ್ತಿದ್ದ 5.77 ಲಕ್ಷ IMEI ಸಂಖ್ಯೆಗಳನ್ನು ಹೊಂದಿರುವ ಮೊಬೈಲ್ ಸಾಧನಗಳನ್ನು ಬ್ಲಾಕ್ ಮಾಡಲಾಗಿದೆ.

➤ ₹11,158 ಕೋಟಿ ವಂಚನೆ ತಡೆ: ಗೃಹ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ CFCFRMS (Citizen Financial Cyber Fraud Reporting and Management System) ವ್ಯವಸ್ಥೆಯ ಮೂಲಕ, ನಾಗರಿಕರು ಸೈಬರ್ ವಂಚನೆ ನಡೆದ ತಕ್ಷಣ ದೂರು ನೋಂದಾಯಿಸಿದ ಪರಿಣಾಮವಾಗಿ ಸುಮಾರು ₹11,158 ಕೋಟಿ ರೂಪಾಯಿಗಳನ್ನು ವಂಚಕರ ಕೈಸೇರದಂತೆ ತಡೆಯಲಾಗಿದೆ.

➤ 'ಸಸ್ಪೆಕ್ಟ್ ರಿಜಿಸ್ಟ್ರಿ' ಮತ್ತು 'ಸಹಯೋಗ್' ಪೋರ್ಟಲ್:

Suspect Registry: ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳ ಸಹಯೋಗದೊಂದಿಗೆ ಸೃಷ್ಟಿಸಲಾದ ಈ ನೋಂದಣಿಯ ಮೂಲಕ 32.08 ಲಕ್ಷ ಮುಲೇ (Mule) ಅಕೌಂಟ್‌ಗಳನ್ನು ಪತ್ತೆಹಚ್ಚಿ, ಸುಮಾರು ₹25,698 ಕೋಟಿ ಮೌಲ್ಯದ ಅನುಮಾನಾಸ್ಪದ ವಹಿವಾಟುಗಳನ್ನು ತಡೆಯಲಾಗಿದೆ.

Sahyog Portal: ಕಾನೂನುಬಾಹಿರ ಆನ್‌ಲೈನ್ ವಿಷಯಗಳು ಮತ್ತು ಅಕ್ರಮ ಆಪ್‌ಗಳ ವಿರುದ್ಧ ಐಟಿ ಮಧ್ಯವರ್ತಿಗಳಿಗೆ (Intermediaries) ಕ್ಷಿಪ್ರ ನೋಟಿಸ್ ನೀಡಲು 'ಸಹಯೋಗ್' ಪೋರ್ಟಲ್ ನೆರವಾಗುತ್ತಿದೆ.

## ಕರ್ನಾಟಕದಲ್ಲಿ ತಂಬಾಕು ಮತ್ತು ನಿಕೋಟಿನ್‌ಯುಕ್ತ ಗುಟ್ಕಾ, ಪಾನ್ ಮಸಾಲಾ ನಿಷೇಧ (2026)




➤ ಸಾರ್ವಜನಿಕ ಆರೋಗ್ಯ ಹಿತದೃಷ್ಟಿಯಿಂದ ಕರ್ನಾಟಕ ಸರ್ಕಾರವು ರಾಜ್ಯಾದ್ಯಂತ ತಂಬಾಕು ಮತ್ತು ನಿಕೋಟಿನ್ ಹೊಂದಿರುವ ಗುಟ್ಕಾ, ಪಾನ್ ಮಸಾಲಾ ಹಾಗೂ ಸಂಬಂಧಿತ ಉತ್ಪನ್ನಗಳ ಉತ್ಪಾದನೆ, ಶೇಖರಣೆ, ವಿತರಣೆ ಮತ್ತು ಮಾರಾಟವನ್ನು ಒಂದು ವರ್ಷದ ಅವಧಿಗೆ ಸಂಪೂರ್ಣವಾಗಿ ನಿಷೇಧಿಸಿ ಆದೇಶ ಹೊರಡಿಸಿದೆ.

➤ ಆಹಾರ ಸುರಕ್ಷತೆ ಮತ್ತು ಔಷಧಗಳ ಆಡಳಿತ ಇಲಾಖೆಯ ಆಯುಕ್ತರು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯಿದೆ 2006 ರ ಸೆಕ್ಷನ್ 30(2)(a) ಅಡಿಯಲ್ಲಿ ಪ್ರಸಾರ ಮಾಡಲಾದ ಅಧಿಕಾರವನ್ನು ಬಳಸಿ ಈ ಮಹತ್ವದ ಅಧಿಸೂಚನೆಯನ್ನು ಹೊರಡಿಸಿದ್ದಾರೆ.

➤ **ನಿಷೇಧಕ್ಕೆ ಒಳಪಡುವ ಉತ್ಪನ್ನಗಳು:**

ಗುಟ್ಕಾ ಮತ್ತು ಪಾನ್ ಮಸಾಲಾ: ತಂಬಾಕು ಅಥವಾ ನಿಕೋಟಿನ್ ಅನ್ನು ಘಟಕಾಂಶವಾಗಿ ಹೊಂದಿರುವ ಯಾವುದೇ ಮಾದರಿಯ ಪಾಕೆಟ್, ಸ್ಯಾಚೆ (Sachet) ಹಾಗೂ ಕಂಟೈನರ್‌ಗಳು.

ಟ್ವಿನ್ ಪ್ಯಾಕ್/ಮಿಕ್ಸಿಂಗ್ ಉತ್ಪನ್ನಗಳು (Twin-pack mixing): ತಂಬಾಕು ಮತ್ತು ಪಾನ್ ಮಸಾಲಾವನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ, ಗ್ರಾಹಕರು ಸುಲಭವಾಗಿ ಬೆರೆಸಿ ಸೇವಿಸುವಂತೆ ಮಾರಾಟ ಮಾಡುವ ತಂತ್ರಜ್ಞಾನ ಆಧಾರಿತ ಪ್ಯಾಕೆಟ್‌ಗಳಿಗೂ ಈ ನಿಷೇಧ ಅನ್ವಯಿಸುತ್ತದೆ.

ರಾಜ್ಯಾದ್ಯಂತ ಇವುಗಳ ತಯಾರಿಕೆ, ಶೇಖರಣೆ, ವಿತರಣೆ, ಸಾಗಾಣಿಕೆ ಮತ್ತು ಮಾರಾಟವನ್ನು ಸಂಪೂರ್ಣವಾಗಿ ತಡೆಹಿಡಿಯಲಾಗಿದೆ.

➤ **ಸಂವಿಧಾನಾತ್ಮಕ ಮತ್ತು ಕಾನೂನು ಚೌಕಟ್ಟು:** ರಾಜ್ಯ ನೀತಿಯ ನಿರ್ದೇಶಕ ತತ್ವಗಳ (DPSP) ಪ್ರಕಾರ, ಸಾರ್ವಜನಿಕ ಆರೋಗ್ಯವನ್ನು ಸುಧಾರಿಸುವುದು ಮತ್ತು ಆರೋಗ್ಯಕ್ಕೆ ಹಾನಿಕರವಾದ ಮಾದಕ ಪಾನೀಯ ಹಾಗೂ ದ್ರವ್ಯಗಳನ್ನು ನಿಷೇಧಿಸುವುದು ರಾಜ್ಯ ಸರ್ಕಾರದ ಮೂಲಭೂತ

ಕರ್ತವ್ಯವಾಗಿದೆ. Section 30(2)(a): ರಾಜ್ಯದ ಆಹಾರ ಸುರಕ್ಷತಾ ಆಯುಕ್ತರಿಗೆ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಯಾವುದೇ ಆಹಾರ ಪದಾರ್ಥದ ಉತ್ಪಾದನೆ ಅಥವಾ ಮಾರಾಟವನ್ನು ರಾಜ್ಯಾದ್ಯಂತ ತಾತ್ಕಾಲಿಕವಾಗಿ ನಿಷೇಧಿಸುವ ಅಧಿಕಾರ ನೀಡುತ್ತದೆ.

**COTPA ಕಾಯಿದೆ 2003:** ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ ಜಾಹೀರಾತು ನಿಷೇಧ ಹಾಗೂ ವ್ಯಾಪಾರ-ವಹಿವಾಟು ನಿಯಂತ್ರಣಕ್ಕೆ ಸಂಬಂಧಿಸಿದ ಕೇಂದ್ರ ಕಾಯಿದೆ. (ಇತ್ತೀಚೆಗೆ ಕರ್ನಾಟಕ ಸರ್ಕಾರವು ಹುಕ್ಕಾ ಬಾರ್‌ಗಳನ್ನು ಸಂಪೂರ್ಣವಾಗಿ ನಿಷೇಧಿಸಲು COTPA ಕಾಯಿದೆಗೆ ತಿದ್ದುಪಡಿ ತಂದಿರುವುದನ್ನು ಇಲ್ಲಿ ಸ್ಮರಿಸಬಹುದು).

## ತಮಿಳುನಾಡಿನ 'ವೆಟ್ರಿ ಹೂಡಿಕೆ ಸಮಾವೇಶ 2026': ₹67,452 ಕೋಟಿ ಮೌಲ್ಯದ 97 ಒಪ್ಪಂದಗಳಿಗೆ (MoU) ಸಹಿ!



➤ ತಮಿಳುನಾಡಿನಲ್ಲಿ ಹೊಸದಾಗಿ ಅಧಿಕಾರಕ್ಕೆ ಬಂದಿರುವ 'ತಮಿಳಗ ವೆಟ್ರಿ ಕಳಗಂ' (TVK) ಸರ್ಕಾರವು ತನ್ನ ಮೊದಲ ಬೃಹತ್ ಹೂಡಿಕೆ ಸಮಾವೇಶವಾದ 'ವೆಟ್ರಿ ತಮಿಳುನಾಡು ಹೂಡಿಕೆದಾರರ ಸಮಾವೇಶ 2026' (Vettri Tamil Nadu Investment Conclave 2026) ಅನ್ನು ಚೆನ್ನೈನಲ್ಲಿ ಯಶಸ್ವಿಯಾಗಿ ಆಯೋಜಿಸಿದೆ. ಈ ಸಮಾವೇಶದಲ್ಲಿ ಒಟ್ಟು ₹67,452 ಕೋಟಿ ಮೌಲ್ಯದ 97 ಪ್ರಮುಖ ತಿಳುವಳಿಕಾ ಒಪ್ಪಂದಗಳಿಗೆ (MoU) ಸಹಿ ಹಾಕಲಾಗಿದ್ದು, ರಾಜ್ಯಾದ್ಯಂತ 1,06,998ಕ್ಕೂ ಹೆಚ್ಚು ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ.

**➤ ಹೂಡಿಕೆ ಮತ್ತು ವಲಯಗಳ ವಿವರಣೆ:**

1. ವಲಯಗಳ ಹಂಚಿಕೆ (Sectoral Coverage): ಆಟೋಮೊಬೈಲ್, ನವೀಕರಿಸಬಹುದಾದ ಇಂಧನ (Renewable Energy), ಎಲೆಕ್ಟ್ರಾನಿಕ್ಸ್, ಲೈಫ್ ಸೈನ್ಸಸ್, ಡೇಟಾ ಸೆಂಟರ್‌ಗಳು, ಬಾಹ್ಯಾಕಾಶ ತಂತ್ರಜ್ಞಾನ (Space Tech) ಮತ್ತು ಜಾಗತಿಕ ಸಾಮರ್ಥ್ಯ ಕೇಂದ್ರಗಳ (GCC) ವಲಯಗಳಲ್ಲಿ ಈ ಹೂಡಿಕೆಗಳು ಬಂದಿವೆ.

**2. ಗ್ರೀನ್‌ಫೀಲ್ಡ್ ಮತ್ತು ಬ್ರೌನ್‌ಫೀಲ್ಡ್ ಯೋಜನೆಗಳು:** ಒಪ್ಪಂದಗಳಲ್ಲಿ ಅರ್ಧಕ್ಕಿಂತ ಹೆಚ್ಚು ಗ್ರೀನ್‌ಫೀಲ್ಡ್ ಯೋಜನೆಗಳು (ಹೊಸ ಕೈಗಾರಿಕಾ ಘಟಕಗಳ ಸ್ಥಾಪನೆ) ಹಾಗೂ ಕೆಲವು ಬ್ರೌನ್ ಫೀಲ್ಡ್ ಯೋಜನೆಗಳು (ಹಾಲಿ ಇರುವ ಘಟಕಗಳ ವಿಸ್ತರಣೆ) ಸೇರಿವೆ.

**3. ಪ್ರಮುಖ ವಿದೇಶಿ ಹಾಗೂ ದೇಶೀಯ ಕಂಪನಿಗಳು:**

- ಹಿಂದೂಜಾ ಗ್ರೂಪ್: ನವೀಕರಿಸಬಹುದಾದ ಇಂಧನ ಮತ್ತು ಇವಿ (EV) ವಲಯದಲ್ಲಿ ₹2,500 ಕೋಟಿ ಹೂಡಿಕೆ.ಫ್ರಾನ್ಸ್‌ನ ಸೆಂಟ್-ಗೋಬೈನ್ (Saint-Gobain): ಕೃಷ್ಣಗಿರಿ ಮತ್ತು ಕಾಂಚೀಪುರಂನಲ್ಲಿ ₹2,000 ಕೋಟಿ ಹೂಡಿಕೆ.

- ಜಪಾನ್‌ನ YKK: ತಿರುವಳ್ಳೂರಿನಲ್ಲಿ ₹1,651 ಕೋಟಿ ಹೂಡಿಕೆ.ಸ್ವಿಸ್ ಟೆಕ್ ಸಂಸ್ಥೆಗಳು: ಅಗ್ನಿಕುಲ್ ಕಾಸ್ಮೋಸ್ (₹400 ಕೋಟಿ) ಮತ್ತು ಸ್ಕೈರೂಟ್ ಏರೋಸ್ಪೇಸ್ (₹250 ಕೋಟಿ) ಉದ್ಯಮ ವಿಸ್ತರಣೆ.

ಲಾರ್ಸನ್ & ಟೂಬ್ರೊ (L&T) ₹15,000 ಕೋಟಿಯ AI ಡೇಟಾ ಸೆಂಟರ್ ಬೃಹತ್ ಆರ್ಡರ್

➤ ಇತ್ತೀಚೆಗೆ ಭಾರತದ ಮುಂಚೂಣಿ ಎಂಜಿನಿಯರಿಂಗ್ ಮತ್ತು ಮೂಲಸೌಕರ್ಯ ದೈತ್ಯ ಸಂಸ್ಥೆಯಾದ ಲಾರ್ಸನ್ & ಟೂಬ್ರೊ (L&T), ದೇಶದ ಅತ್ಯಂತ ದೊಡ್ಡ ಕೃತಕ ಬುದ್ಧಿಮತ್ತೆ (AI) ಮೂಲಸೌಕರ್ಯ ಯೋಜನೆಗಾಗಿ ₹10,000 ಕೋಟಿಯಿಂದ ₹15,000 ಕೋಟಿ ಮೌಲ್ಯದ ಬೃಹತ್ (Mega Order) ಗುತ್ತಿಗೆಯನ್ನು ಪಡೆದುಕೊಂಡಿದೆ.

ಒಪ್ಪಂದದ ಮೌಲ್ಯ: ₹10,000 ಕೋಟಿಯಿಂದ ₹15,000 ಕೋಟಿ (Mega Order).

ಆರ್ಡರ್ ನೀಡಿದ ಸಂಸ್ಥೆ: ಅಮೆರಿಕ (US) ಮೂಲದ AI ಕ್ಲೌಡ್ ಪ್ಲಾಟ್‌ಫಾರ್ಮ್ ಸಂಸ್ಥೆ 'Together AI' (ಸಹ-ಸಂಸ್ಥಾಪಕ ಮತ್ತು ಸಿಇಒ: ವಿಪುಲ್ ವೇದ್ ಪ್ರಕಾಶ್).

ಯೋಜನೆಯ ಸ್ವರೂಪ: ಭಾರತದ ಅತಿ ದೊಡ್ಡ ಸಿಂಗಲ್-ಕ್ಲಸ್ಟರ್ AI ಇನ್ಫ್ರಾಸ್ಟ್ರಕ್ಚರ್ ಫೆಸಿಲಿಟಿ (AI Factory).

ಅನುಷ್ಠಾನ ಸಂಸ್ಥೆಗಳು: L&T ನ AI ಮೂಲಸೌಕರ್ಯ ಅಂಗಸಂಸ್ಥೆ 'LTN Compute' ಮತ್ತು ಡಿಜಿಟಲ್ ಮೂಲಸೌಕರ್ಯ ವಿಭಾಗ 'Vyoma.AI'.

ಯೋಜನೆಯ ಸ್ಥಳ: ಚೆನ್ನೈನಲ್ಲಿರುವ Vyoma.AI ನ ಗಿಗಾವ್ಯಾಟ್-ಸ್ಕೇಲ್ ಡೇಟಾ ಸೆಂಟರ್ ಕ್ಯಾಂಪಸ್ (Phase 1: 250 MW ಸಾಮರ್ಥ್ಯ).

**➤ ಯೋಜನೆಯ ತಾಂತ್ರಿಕ ವಿವರಗಳು:**

NVIDIA B300 GPU ಬಳಕೆ: ಈ AI ಫ್ಯಾಕ್ಟರಿಯಲ್ಲಿ 10,000 NVIDIA B300 GPUs (Graphics Processing Units) ಗಳನ್ನು ಅಳವಡಿಸಲಾಗುತ್ತಿದೆ. ಇದು ಕಾಂಪ್ಲೆಕ್ಸ್ ಮೆಷಿನ್ ಲರ್ನಿಂಗ್ ಹಾಗೂ ಜನರೇಟಿವ್ AI ಮಾದರಿಗಳ ತರಬೇತಿಗೆ (AI Model Training & Fine-Tuning) ನೆರವಾಗಲಿದೆ.

ಶಕ್ತಿ ಸಾಮರ್ಥ್ಯ (Power Capacity): ಮೊದಲ ಹಂತದಲ್ಲಿ (Phase 1) ಈ ಕ್ಯಾಂಪಸ್ 250 MW ಸಾಮರ್ಥ್ಯ ಹೊಂದಿದ್ದು, 150 MVA ವಿದ್ಯುತ್ ಮೂಲಸೌಕರ್ಯ ಸಿದ್ಧತೆಯನ್ನು ಹೊಂದಿದೆ.

AI ಫ್ಯಾಕ್ಟರಿ (AI Factory): ಇದು AI ಮಾಡೆಲ್‌ಗಳ ತರಬೇತಿ (Training), ಇನ್‌ಫರೆನ್ಸ್ (Inference) ಮತ್ತು ಫೈನ್-ಟ್ಯೂನಿಂಗ್ ಕೆಲಸಗಳನ್ನು ನಿರ್ವಹಿಸುವ ತಾಂತ್ರಿಕ ಕೇಂದ್ರವಾಗಿರುತ್ತದೆ.

## ಲಾರ್ಸನ್ & ಟೂಬ್ರೊ (L&T) ₹15,000 ಕೋಟಿಯ AI ಡೇಟಾ ಸೆಂಟರ್ ಬೃಹತ್ ಆರ್ಡರ್

➤ ಇತ್ತೀಚೆಗೆ ಭಾರತದ ಮುಂಚೂಣಿ ಎಂಜಿನಿಯರಿಂಗ್ ಮತ್ತು ಮೂಲಸೌಕರ್ಯ ದೈತ್ಯ ಸಂಸ್ಥೆಯಾದ ಲಾರ್ಸನ್ & ಟೂಬ್ರೊ (L&T), ದೇಶದ ಅತ್ಯಂತ ದೊಡ್ಡ ಕೃತಕ ಬುದ್ಧಿಮತ್ತೆ (AI) ಮೂಲಸೌಕರ್ಯ ಯೋಜನೆಗಾಗಿ ₹10,000 ಕೋಟಿಯಿಂದ ₹15,000 ಕೋಟಿ ಮೌಲ್ಯದ ಬೃಹತ್ (Mega Order) ಗುತ್ತಿಗೆಯನ್ನು ಪಡೆದುಕೊಂಡಿದೆ.

ಒಪ್ಪಂದದ ಮೌಲ್ಯ: ₹10,000 ಕೋಟಿಯಿಂದ ₹15,000 ಕೋಟಿ (Mega Order).

ಆರ್ಡರ್ ನೀಡಿದ ಸಂಸ್ಥೆ: ಅಮೆರಿಕ (US) ಮೂಲದ AI ಕ್ಲೌಡ್ ಪ್ಲಾಟ್‌ಫಾರ್ಮ್ ಸಂಸ್ಥೆ 'Together AI' (ಸಹ-ಸಂಸ್ಥಾಪಕ ಮತ್ತು ಸಿಇಒ: ವಿಪುಲ್ ವೇದ್ ಪ್ರಕಾಶ್).

ಯೋಜನೆಯ ಸ್ವರೂಪ: ಭಾರತದ ಅತಿ ದೊಡ್ಡ ಸಿಂಗಲ್-ಕ್ಲಸ್ಟರ್ AI ಇನ್ಫ್ರಾಸ್ಟ್ರಕ್ಚರ್ ಫೆಸಿಲಿಟಿ (AI Factory).

ಅನುಷ್ಠಾನ ಸಂಸ್ಥೆಗಳು: L&T ನ AI ಮೂಲಸೌಕರ್ಯ ಅಂಗಸಂಸ್ಥೆ 'LTN Compute' ಮತ್ತು ಡಿಜಿಟಲ್ ಮೂಲಸೌಕರ್ಯ ವಿಭಾಗ 'Vyoma.AI'.

ಯೋಜನೆಯ ಸ್ಥಳ: ಚೆನ್ನೈನಲ್ಲಿರುವ Vyoma.AI ನ ಗಿಗಾವ್ಯಾಟ್-ಸ್ಕೇಲ್ ಡೇಟಾ ಸೆಂಟರ್ ಕ್ಯಾಂಪಸ್ (Phase 1: 250 MW ಸಾಮರ್ಥ್ಯ).

**➤ ಯೋಜನೆಯ ತಾಂತ್ರಿಕ ವಿವರಗಳು:**

NVIDIA B300 GPU ಬಳಕೆ: ಈ AI ಫ್ಯಾಕ್ಟರಿಯಲ್ಲಿ 10,000 NVIDIA B300 GPUs (Graphics Processing Units) ಗಳನ್ನು ಅಳವಡಿಸಲಾಗುತ್ತಿದೆ. ಇದು ಕಾಂಪ್ಲೆಕ್ಸ್ ಮೆಷಿನ್ ಲರ್ನಿಂಗ್

ಹಾಗೂ ಜನರೇಟಿವ್ AI ಮಾದರಿಗಳ ತರಬೇತಿಗೆ (AI Model Training & Fine-Tuning) ನೆರವಾಗಲಿದೆ.
ಶಕ್ತಿ ಸಾಮರ್ಥ್ಯ (Power Capacity): ಮೊದಲ ಹಂತದಲ್ಲಿ (Phase 1) ಈ ಕ್ಯಾಂಪಸ್ 250 MW ಸಾಮರ್ಥ್ಯ ಹೊಂದಿದ್ದು, 150 MVA ವಿದ್ಯುತ್ ಮೂಲಸೌಕರ್ಯ ಸಿದ್ಧತೆಯನ್ನು ಹೊಂದಿದೆ.
AI ಫ್ಯಾಕ್ಟರಿ (AI Factory): ಇದು AI ಮಾಡೆಲ್‌ಗಳ ತರಬೇತಿ (Training), ಇನ್‌ಫರೆನ್ಸ್ (Inference) ಮತ್ತು ಫೈನ್-ಟ್ಯೂನಿಂಗ್ ಕೆಲಸಗಳನ್ನು ನಿರ್ವಹಿಸುವ ತಾಂತ್ರಿಕ ಕೇಂದ್ರವಾಗಿರುತ್ತದೆ.

## MMDR ತಿದ್ದುಪಡಿ ವಿಧೇಯಕ 2026 ಸಂಸತ್ತಿನಲ್ಲಿ ಅಂಗೀಕಾರ: ರಾಜ್ಯಗಳ ಗಣಿ ತೆರಿಗೆ ಅಧಿಕಾರಕ್ಕೆ ಬ್ರೇಕ್!




➤ ಸಂಸತ್ತಿನ ಎರಡೂ ಮನೆಗಳು (ಲೋಕಸಭೆ ಮತ್ತು ರಾಜ್ಯಸಭೆ) ಗಣಿ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ತಿದ್ದುಪಡಿ ವಿಧೇಯಕ, 2026 (Mines and Minerals Development and Regulation - MMDR Amendment Bill, 2026) ಅನ್ನು ಯಶಸ್ವಿಯಾಗಿ ಅಂಗೀಕರಿಸಿವೆ. ಕೇಂದ್ರ ಗಣಿ ಮತ್ತು ಕಲ್ಲಿದ್ದಲು ಸಚಿವ ಜಿ. ಕಿಷನ್ ರೆಡ್ಡಿ ಅವರು ಆಗಸ್ಟ್ 10, 2026 ರಂದು ಲೋಕಸಭೆಯಲ್ಲಿ ಮಂಡಿಸಿದ ಈ ವಿಧೇಯಕಕ್ಕೆ ಆಗಸ್ಟ್ 12 ರಂದು ಲೋಕಸಭೆ ಹಾಗೂ ಆಗಸ್ಟ್ 13, 2026 ರಂದು ರಾಜ್ಯಸಭೆ ಅನುಮೋದನೆ ನೀಡಿದೆ. ಸಂವಿಧಾನದ ವಿಧಿ 111 ರ ಅಡಿಯಲ್ಲಿ ರಾಷ್ಟ್ರಪತಿಗಳ ಅಂಕಿತ ಬಿದ್ದ ನಂತರ ಇದು ಕಾಯಿದೆಯಾಗಿ ಜಾರಿಗೆ ಬರಲಿದೆ.

**➤ MMDR ತಿದ್ದುಪಡಿ ವಿಧೇಯಕ 2026:**

1.ರಾಜ್ಯಗಳ ತೆರಿಗೆ ವಿಧಿಸುವ ಅಧಿಕಾರಕ್ಕೆ ನಿರ್ಬಂಧ (ಸೆಕ್ಷನ್ 9D ಸೇರ್ಪಡೆ)
ಹೊಸ ಸೆಕ್ಷನ್ 9D: ಮೂಲ ಕಾಯಿದೆಗೆ ಹೊಸ ಸೆಕ್ಷನ್ 9D ಅನ್ನು ಸೇರಿಸಲಾಗಿದ್ದು, ಇದರ ಪ್ರಕಾರ ರಾಜ್ಯ ಸರ್ಕಾರಗಳು ಖನಿಜ ಹಕ್ಕುಗಳು (Mineral Rights) ಅಥವಾ ಖನಿಜಯುಕ್ತ ಭೂಮಿಯ ಮೇಲಿನ ತೆರಿಗೆ, ಸೆಸ್ (Cess) ಅಥವಾ ಹೆಚ್ಚುವರಿ ಸುಂಕಗಳನ್ನು ಕೇಂದ್ರದ ಮಾರ್ಗದರ್ಶಿ ಸೂತ್ರಗಳಿಲ್ಲದೆ ಸ್ವತಂತ್ರವಾಗಿ ವಿಧಿಸುವಂತಿಲ್ಲ.
ಕೇಂದ್ರದ ನಿಯಂತ್ರಣ: ಖನಿಜ ಉತ್ಪಾದನೆ, ಮೌಲ್ಯ ಅಥವಾ ರಾಯಲ್ಟಿ ಆಧಾರದ ಮೇಲೆ ರಾಜ್ಯಗಳು ವಿಧಿಸುವ ತೆರಿಗೆಗಳ ಮೇಲೆ ಕೇಂದ್ರ ಸರ್ಕಾರವು ಸಾರ್ವತ್ರಿಕ ನಿಯಂತ್ರಣ ಹೊಂದಿರಲಿದೆ.

**2. ಬಾಕಿ ತೆರಿಗೆ ರದ್ದತಿ (Unrecovered Dues Invalidation)**
ತಿದ್ದುಪಡಿ ಕಾಯಿದೆ ಜಾರಿಗೆ ಬರುವ ಮೊದಲು ರಾಜ್ಯ ಸರ್ಕಾರಗಳು ವಿಧಿಸಿದ, ಆದರೆ ಇದುವರೆಗೆ ವಸೂಲಿಯಾಗದ ಅಥವಾ ಜಮೆಯಾಗದ ಹಳೆಯ ತೆರಿಗೆ ಬಾಕಿಗಳನ್ನು (Unrecovered/Unpaid Dues) ಈ ಕಾಯಿದೆ ರದ್ದುಗೊಳಿಸುತ್ತದೆ.
ಆದರೆ, ಈಗಾಗಲೇ ಕಂಪನಿಗಳು ಅಥವಾ ಗಣಿಗಾರಿಕೆ ಸಂಸ್ಥೆಗಳು ರಾಜ್ಯ ಸರ್ಕಾರಕ್ಕೆ ಪಾವತಿಸಿರುವ ತೆರಿಗೆ ಹಣವನ್ನು ಹಿಂತಿರುಗಿಸುವ ಅಗತ್ಯವಿರುವುದಿಲ್ಲ.

**3. ಖನಿಜಯುಕ್ತ ಭೂಮಿಯ ನಿಯಂತ್ರಣ (Mineral-bearing Lands Control)**
ಈವರೆಗೂ ಕೇಂದ್ರ ಸರ್ಕಾರ ಗಣಿ ಮತ್ತು ಖನಿಜ ಅಭಿವೃದ್ಧಿಯ ನಿಯಂತ್ರಣ ಹೊಂದಿತ್ತು. ಆದರೆ, ಈ ಹೊಸ ವಿಧೇಯಕದ ಮೂಲಕ ಖನಿಜಯುಕ್ತ ಭೂಮಿಗಳ (Mineral-bearing lands) ಮೇಲೆಯೂ ಕೇಂದ್ರ ಸರ್ಕಾರ ನಿಯಮಗಳನ್ನು ರೂಪಿಸುವ ಅಧಿಕಾರ ಪಡೆದಿದೆ.

4. ನಿರ್ಣಾಯಕ ಖನಿಜಗಳು ಹಾಗೂ ಕ್ಯಾಪ್ಟಿವ್ ಗಣಿಗಳಿಗೆ ವಿನಾಯಿತಿ
ಮಲ್ಟಿ-ಮಿನರಲ್ ಗುತ್ತಿಗೆ (Multi-mineral leasing): ಪ್ರಸ್ತುತ ಇರುವ ಗಣಿ ಗುತ್ತಿಗೆದಾರರು ಹೆಚ್ಚುವರಿ ಶುಲ್ಕ ಪಾವತಿಸದೆ ಲೀಥಿಯಂ (Lithium), ಕೋಬಾಲ್ಟ್ (Cobalt), ಗ್ರ್ಯಾಫೈಟ್, ಚಿನ್ನ ಮತ್ತು ಬೆಳ್ಳಿಯಂತಹ ನಿರ್ಣಾಯಕ ಹಾಗೂ ಆಯಕಟ್ಟಿನ ಖನಿಜಗಳನ್ನು (Critical Minerals) ಹೊರತೆಗೆಯಲು ಅವಕಾಶ ಕಲ್ಪಿಸಲಾಗಿದೆ.
ಕ್ಯಾಪ್ಟಿವ್ ಗಣಿಗಳ ಮೇಲಿನ ಮಿತಿ ರದ್ದು: ಸ್ವಂತ ಕೈಗಾರಿಕಾ ಬಳಕೆಗೆ ಮೀಸಲಾದ ಕ್ಯಾಪ್ಟಿವ್ ಗಣಿಗಳಿಂದ (Captive Mines) ಖನಿಜಗಳನ್ನು ಹೊರಗಿನ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಮೇಲಿದ್ದ ಮಿತಿಯನ್ನು ತೆರವುಗೊಳಿಸಲಾಗಿದೆ.

# 14 Aug 2026

## ದೇಶವಿಭಜನೆಯ ಭೀಕರತೆಯ ಸ್ಮರಣೆ ದಿನ 2026




ಸಮುದ್ರ ಗೋಡೆ ಹಾಗೂ ಸರ್ವಿಸ್ ರಸ್ತೆಗಳು (Sea Wall-cum-Service Roads): ಕರಾವಳಿ ರಕ್ಷಣೆಯೊಂದಿಗೆ ಸಾರಿಗೆ ವ್ಯವಸ್ಥೆಗೂ ಅನುಕೂಲವಾಗುವ ದ್ವಿಪಥ ತಡೆಗೋಡೆಗಳ ನಿರ್ಮಾಣ.

## 4ನೇ ಭಾರತ-ಸಿಂಗಾಪುರ ಮಂತ್ರಿ ಮಟ್ಟದ ದುಂಡು ಮೇಜಿನ ಸಭೆ (ISMR 2026)



➤ 4ನೇ ಭಾರತ-ಸಿಂಗಾಪುರ ಮಂತ್ರಿ ಮಟ್ಟದ ದುಂಡುಮೇಜಿನ ಸಭೆ (India-Singapore Ministerial Roundtable - ISMR) ಸಿಂಗಾಪುರದಲ್ಲಿ ಯಶಸ್ವಿಯಾಗಿ ಆಯೋಜನೆಗೊಂಡಿದೆ. ದ್ವಿಪಕ್ಷೀಯ ಆರ್ಥಿಕ, ತಾಂತ್ರಿಕ ಮತ್ತು ಕಾರ್ಯತಂತ್ರ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ಇದು ಎರಡೂ ದೇಶಗಳ ನಡುವಿನ ಅತ್ಯುನ್ನತ ಮಟ್ಟದ ವೇದಿಕೆಯಾಗಿದೆ.

➤ ನಿಯೋಗದ ನೇತೃತ್ವ ಮತ್ತು ಭಾಗವಹಿಸಿದ ಪ್ರಮುಖರು: ಈ ಸಭೆಯಲ್ಲಿ ಭಾರತದ ಪರವಾಗಿ ಉನ್ನತ ಮಟ್ಟದ ಮಂತ್ರಿಗಳ ನಿಯೋಗ ಭಾಗವಹಿಸಿತ್ತು:

ನಿರ್ಮಲಾ ಸೀತಾರಾಮನ್ – ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವೆ.

ಡಾ. ಎಸ್. ಜೈಶಂಕರ್ – ಕೇಂದ್ರ ವಿದೇಶಾಂಗ ಸಚಿವರು.

ಪಿಯೂಷ್ ಗೋಯಲ್ – ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು.

ಜಿತಿನ್ ಪ್ರಸಾದ್ – ವಾಣಿಜ್ಯ ಮತ್ತು ಕೈಗಾರಿಕೆ ಹಾಗೂ ಎಲೆಕ್ಟ್ರಾನಿಕ್ಸ್ ಮತ್ತು ಐಟಿ ರಾಜ್ಯ ಸಚಿವರು.

➤ ISMR ಸಭೆಯ ಹಿನ್ನೆಲೆ ಮತ್ತು ಪ್ರಯಾಣ: ಭಾರತ ಮತ್ತು ಸಿಂಗಾಪುರ ನಡುವಿನ ಆರ್ಥಿಕ ಕಾರ್ಯವಿಧಾನವನ್ನು ಹೆಚ್ಚಿಸಲು 2022ರಲ್ಲಿ ISMR ಅನ್ನು ಸ್ಥಾಪಿಸಲಾಯಿತು.

1ನೇ ಸಭೆ: ಸೆಪ್ಟೆಂಬರ್ 2022 – ನವದೆಹಲಿ

2ನೇ ಸಭೆ: ಆಗಸ್ಟ್ 2024 – ಸಿಂಗಾಪುರ

3ನೇ ಸಭೆ: ಆಗಸ್ಟ್ 2025 – ನವದೆಹಲಿ

4ನೇ ಸಭೆ: ಆಗಸ್ಟ್ 2026 – ಸಿಂಗಾಪುರ

➤ ಸಹಕಾರದ 6 ಪ್ರಮುಖ ಸ್ತಂಭಗಳು: ISMR ಕಾರ್ಯವಿಧಾನವು ಭಾರತ-ಸಿಂಗಾಪುರ ಸಂಬಂಧವನ್ನು ಬಲಪಡಿಸಲು ಆರು ಪ್ರಮುಖ ಕ್ಷೇತ್ರಗಳ ಮೇಲೆ ಗಮನ ಹರಿಸುತ್ತದೆ:

ಸುಧಾರಿತ ಉತ್ಪಾದನೆ (Advanced Manufacturing): ಸೆಮಿಕಂಡಕ್ಟರ್ ಮತ್ತು ತಂತ್ರಜ್ಞಾನ ವಲಯದಲ್ಲಿ ಸಹಕಾರ.

ಡಿಜಿಟಲೀಕರಣ (Digitalization): ಡಿಜಿಟಲ್ ಪಾವತಿ (UPI - PayNow ಜೋಡಣೆ) ಹಾಗೂ ಡಿಜಿಟಲ್ ಮೂಲಸೌಕರ್ಯ.

ಸಂಪರ್ಕ (Connectivity): ಸರಕು ಸಾಗಣೆ (Logistics) ಹಾಗೂ ಹಸಿರು ಹಡಗು ಮಾರ್ಗಗಳು.

ಆರೋಗ್ಯ ಮತ್ತು ವೈದ್ಯಕೀಯ (Healthcare & Medicine): ಹೆಲ್ತ್ ಟೆಕ್ ಮತ್ತು ವೈದ್ಯಕೀಯ ಸಂಶೋಧನೆ.

ಕೌಶಲ್ಯ ಅಭಿವೃದ್ಧಿ (Skills Development): ಯುವಜನರಿಗೆ ಕೌಶಲ್ಯ ತರಬೇತಿ ಮತ್ತು ಉದ್ಯೋಗಾವಕಾಶ ಉತ್ತೇಜನ.

ಸುಸ್ಥಿರತೆ (Sustainability): ನವೀಕರಿಸಬಹುದಾದ ಇಂಧನ ಹಾಗೂ ಹಸಿರು ಆರ್ಥಿಕತೆ (Green Economy).

➤ ಭಾರತೀಯ ವಿದೇಶಾಂಗ ಸಚಿವಾಲಯದ (MEA) ಪ್ರಕಾರ, ಈ ಉನ್ನತ ಮಟ್ಟದ ಸಭೆಗಳಲ್ಲಿ ನಡೆಯುವ ಚರ್ಚೆಗಳು ಭಾರತ ಸರ್ಕಾರ ಹಮ್ಮಿಕೊಂಡಿರುವ 'ವಿಕಸಿತ ಭಾರತ 2047' (Viksit Bharat) ಗುರಿಯನ್ನು ತಲುಪಲು ನೇರ ಬೆಂಬಲ ಮತ್ತು ವೇಗವನ್ನು ನೀಡಲಿವೆ.

## ಭಾರತೀಯ ವಿಜ್ಞಾನಿಗಳಿಂದ 'RK-251' ಕ್ಯಾನ್ಸರ್ ಔಷಧ ಅಭಿವೃದ್ಧಿ: ಕಿಮೋಥೆರಪಿಗೆ ಪರ್ಯಾಯವಾಗಬಲ್ಲ 'ಸ್ಮಾರ್ಟ್ ಡ್ರಗ್'




➤ ಭಾರತೀಯ ವಿಜ್ಞಾನಿಗಳು ಕ್ಯಾನ್ಸರ್ ಚಿಕಿತ್ಸಾ ಕ್ಷೇತ್ರದಲ್ಲಿ ಮಹತ್ವದ ಮೈಲಿಗಲ್ಲು ಸಾಧಿಸಿದ್ದಾರೆ. ಆರೋಗ್ಯಕರ ಕೋಶಗಳಿಗೆ ಧಕ್ಕೆ ತರದೆ, ಕೇವಲ ಕ್ಯಾನ್ಸರ್ ಕೋಶಗಳನ್ನು ಮಾತ್ರ ಗುರಿಯಾಗಿಸಿಕೊಂಡು ನಾಶಪಡಿಸುವ 'RK-251' ಎಂಬ ಹೊಸ 'ಸ್ಮಾರ್ಟ್' ಕ್ಯಾನ್ಸರ್ ಔಷಧವನ್ನು (Smart Cancer Drug) ಅಭಿವೃದ್ಧಿಪಡಿಸಲಾಗಿದೆ. ಈ ಔಷಧಿಯು ಭವಿಷ್ಯದಲ್ಲಿ ಸಾಂಪ್ರದಾಯಿಕ ಕಿಮೋಥೆರಪಿ (Chemotherapy) ಚಿಕಿತ್ಸೆಗೆ ಉತ್ತಮ ಪರ್ಯಾಯವಾಗುವ ನಿರೀಕ್ಷೆಯಿದೆ.

➤ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ (DST) ಅಡಿಯಲ್ಲಿ ಬರುವ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡಿ ಇನ್ ಸೈನ್ಸ್ ಅಂಡ್ ಟೆಕ್ನಾಲಜಿ (IASST) ಸಂಸ್ಥೆಯ ಡಾ. ಅಸಿಸ್ ಬಾಲಾ ಮತ್ತು ಐಐಟಿ ಗುವಾಹಾಟಿ (IIT Guwahati) ಸಂಸ್ಥೆಯ ಡಾ. ಕೆ.ಪಿ. ಭಾಬಕ್ ಅವರ ಜಂಟಿ ನೇತೃತ್ವದ ಸಂಶೋಧನಾ ತಂಡವು ಈ ಔಷಧವನ್ನು ಅಭಿವೃದ್ಧಿಪಡಿಸಿದೆ.

**➤ 'RK-251' ಹೇಗೆ ಕೆಲಸ ಮಾಡುತ್ತದೆ? (Working Mechanism):**

ಪ್ರೊಡ್ರಗ್ (Prodrug) ತಂತ್ರಜ್ಞಾನ: RK-251 ಅನ್ನು 'ಪ್ರೊಡ್ರಗ್' ರೂಪದಲ್ಲಿ ವಿನ್ಯಾಸಗೊಳಿಸಲಾಗಿದೆ. ಅಂದರೆ, ಇದು ದೇಹದ ಸಾಮಾನ್ಯ ಕೋಶಗಳ ಮೂಲಕ ಹಾದುಹೋಗುವಾಗ ನಿಷ್ಕ್ರಿಯ (Inactive) ಸ್ಥಿತಿಯಲ್ಲಿರುತ್ತದೆ.

**ಆರ್.ಒ.ಎಸ್ (ROS) ಪ್ರಚೋದನೆ:** ಕ್ಯಾನ್ಸರ್ ಕೋಶಗಳಲ್ಲಿ ರಿಯಾಕ್ಟಿವ್ ಆಕ್ಸಿಜನ್ ಸ್ಪೀಷೀಸ್ (Reactive Oxygen Species - ROS) ಎಂಬ ಹಾನಿಕಾರಕ ಕಣಗಳ ಮಟ್ಟ ಹೆಚ್ಚಿರುತ್ತದೆ. RK-251 ಕ್ಯಾನ್ಸರ್ ಕೋಶಗಳನ್ನು ತಲುಪಿದ ತಕ್ಷಣ, ಅಲ್ಲಿನ ROS ಸಂಕೇತವನ್ನು ಪಡೆದು ಸಕ್ರಿಯಗೊಳ್ಳುತ್ತದೆ (Switch On).

NBDHEX ಬಿಡುಗಡೆ: ಸಕ್ರಿಯಗೊಂಡ ನಂತರ ಈ ಔಷಧವು NBDHEX ಎಂಬ ಶಕ್ತಿಯುತ ಕ್ಯಾನ್ಸರ್-ವಿರೋಧಿ ಸಂಯುಕ್ತವನ್ನು ಬಿಡುಗಡೆ ಮಾಡುತ್ತದೆ. ಇದು ಕ್ಯಾನ್ಸರ್ ಕೋಶಗಳ ಬೆಳವಣಿಗೆಗೆ ಬೆಂಬಲ ನೀಡುವ ಪ್ರೋಟೀನ್‌ಗಳನ್ನು ತಡೆದು, ಆ ಕೋಶಗಳನ್ನು ನಾಶಪಡಿಸುತ್ತದೆ.

**➤ ಪ್ರಮುಖ ಪ್ರಯೋಗಗಳು ಮತ್ತು ಫಲಿತಾಂಶಗಳು:**

ಟ್ರಿಪಲ್-ನೆಗೆಟಿವ್ ಸ್ತನ ಕ್ಯಾನ್ಸರ್ ವಿರುದ್ಧ ಯಶಸ್ಸು: ಪ್ರಯೋಗಾಲಯದಲ್ಲಿ ನಡೆಸಿದ ಆರಂಭಿಕ ಪ್ರಯೋಗಗಳಲ್ಲಿ (Preclinical studies) ತೀವ್ರ ಸ್ವರೂಪದ 'ಟ್ರಿಪಲ್-ನೆಗೆಟಿವ್ ಬ್ರೆಸ್ಟ್ ಕ್ಯಾನ್ಸರ್' (Triple-Negative Breast Cancer) ಕೋಶಗಳ ವಿರುದ್ಧ RK-251 ಅತ್ಯುತ್ತಮ ಫಲಿತಾಂಶ ನೀಡಿದೆ.

ಜಿಬ್ರಾಫಿಶ್ (Zebrafish) ಪ್ರಯೋಗ: ಜಿಬ್ರಾಫಿಶ್ ಭ್ರೂಣಗಳ ಮೇಲಿನ ಪರೀಕ್ಷೆಯಲ್ಲಿ ಈ ಔಷಧವು ಯಾವುದೇ ವಿಷಕಾರಿ ಪ್ರಭಾವವನ್ನು (Toxicity) ಬೀರದೆ ಸುರಕ್ಷಿತವಾಗಿರುವುದು ಕಂಡುಬಂದಿದೆ.

**➤ ಸಾಂಪ್ರದಾಯಿಕ ಕಿಮೋಥೆರಪಿಗಿಂತ ಇದು ಹೇಗೆ ಭಿನ್ನ?**

ಸಾಂಪ್ರದಾಯಿಕ ಕಿಮೋಥೆರಪಿ: ಇದು ಕ್ಯಾನ್ಸರ್ ಕೋಶಗಳ ಜೊತೆಗೆ ದೇಹದ ಆರೋಗ್ಯಕರ ಜೀವಕೋಶಗಳನ್ನೂ ನಾಶಪಡಿಸುತ್ತದೆ. ಇದರಿಂದ ತೀವ್ರ ಅಡ್ಡಪರಿಣಾಮಗಳು ಉಂಟಾಗುತ್ತವೆ.
RK-251 ಸ್ಮಾರ್ಟ್ ಡ್ರಗ್: ಇದು ಕೇವಲ ಕ್ಯಾನ್ಸರ್ ಕೋಶಗಳ ಒಳಗೆ ಮಾತ್ರ ಸಕ್ರಿಯಗೊಳ್ಳುವುದರಿಂದ ದೇಹದ ಇತರ ಆರೋಗ್ಯಕರ ಅಂಗಾಂಶಗಳಿಗೆ ಹಾನಿಯಾಗುವುದಿಲ್ಲ.

## ಔಷಧಿ ಮತ್ತು ವೈದ್ಯಕೀಯ ಉಪಕರಣಗಳ ಬೆಲೆಗೆ 20% ಕ್ಯಾಪ್: ಸಂಸದೀಯ ಸಮಿತಿ ಶಿಫಾರಸು!



➤ ಭಾರತದಲ್ಲಿ ಔಷಧಿಗಳು ಹಾಗೂ ವೈದ್ಯಕೀಯ ಉಪಕರಣಗಳ ಬೆಲೆಯಲ್ಲಿನ ಭಾರಿ ವ್ಯತ್ಯಾಸಕ್ಕೆ ಕಡಿವಾಣ ಹಾಕಲು ಕೇಂದ್ರ ಸಂಸದೀಯ ಸಮಿತಿಯು ಪ್ರಮುಖ ಶಿಫಾರಸೊಂದನ್ನು ಮಾಡಿದೆ. ತಯಾರಿಕಾ ಅಥವಾ ಆಮದು ವೆಚ್ಚ (Landing Cost) ಮತ್ತು ಗ್ರಾಹಕರಿಗೆ ಮಾರಾಟ ಮಾಡುವ ಗರಿಷ್ಠ ಬೆಲೆ (MRP) ನಡುವಿನ ಶೇಕಡಾವಾರು ಅಂತರವನ್ನು ಗರಿಷ್ಠ 20% ಗೆ ನಿಯಂತ್ರಿಸಬೇಕು ಎಂದು ಸಮಿತಿ ಸರ್ಕಾರಕ್ಕೆ ಒತ್ತಾಯಿಸಿದೆ.

➤ **ಈ ಶಿಫಾರಸಿಗೆ ಕಾರಣ:** ಪ್ರಸ್ತುತ ಮಾರುಕಟ್ಟೆಯಲ್ಲಿ ಕೆಲವೊಂದು ಜೀವರಕ್ಷಕ ಗಂಭೀರ ಔಷಧಿಗಳ ಬೆಲೆಯಲ್ಲಿ ಶೇಕಡಾ ನೂರಕ್ಕೂ ಹೆಚ್ಚು ಲಾಭಾಂಶ (Mark-up) ಸೇರಿಸಲಾಗುತ್ತಿದೆ. ಉದಾಹರಣೆಗೆ: ಹೃದಯಾಘಾತದ (Heart Attack) ಸಮಯದಲ್ಲಿ ಬಳಸುವ ಅತ್ಯಂತ ಪ್ರಮುಖ 'ಟೆನೆಕ್ಟೆಪ್ಲೇಸ್' (Tenecteplase) ಎಂಬ ಔಷಧಿಯ ಮೂಲ ಲ್ಯಾಂಡಿಂಗ್ ವೆಚ್ಚ ಸುಮಾರು ₹18,000 ಆಗಿದ್ದರೆ, ಮಾರುಕಟ್ಟೆಯಲ್ಲಿ ಅದರ MRP ₹50,000 ವರೆಗೆ ಇರುತ್ತದೆ. ಇದರಿಂದಾಗಿ ರೋಗಿಗಳು ಭಾರಿ ಹಣ ತೆರಬೇಕಾಗುತ್ತದೆ.

➤ **ಇತರ ಪ್ರಮುಖ ಶಿಫಾರಸುಗಳು:**
ಪೆರಿಫೆರಲ್ ಸ್ಟೆಂಟ್ ಹಾಗೂ ಬಲೂನ್‌ಗಳ ಬೆಲೆ ನಿಯಂತ್ರಣ: ಹೃದಯ ಚಿಕಿತ್ಸೆಯಲ್ಲಿ ಬಳಸುವ ಪೆರಿಫೆರಲ್ ಸ್ಟೆಂಟ್‌ಗಳು (Peripheral Stents) ಮತ್ತು ಡ್ರಗ್-ಎಲ್ಯೂಟಿಂಗ್ ಬಲೂನ್‌ಗಳ ಬೆಲೆಯನ್ನು ನಿಯಂತ್ರಿಸುವುದು. (2017 ರಲ್ಲಿ ಕಾರ್ಡಿಯಾಕ್ ಸ್ಟೆಂಟ್ ಬೆಲೆಯನ್ನು ₹1.9 ಲಕ್ಷದಿಂದ ₹25,000 - ₹30,000 ಗೆ ಇಳಿಸಿದ್ದನ್ನು ಸಮಿತಿ ಉಲ್ಲೇಖಿಸಿದೆ).
ಡೆಂಟಲ್ ಕೇರ್ ಸಲಕರಣೆಗಳು: ಹಲ್ಲು ನೇರಗೊಳಿಸುವ 'ಕ್ಲಿಯರ್ ಅಲೈನರ್ಸ್' (Clear Aligners) ಬೆಲೆ ₹1.5 ಲಕ್ಷದಿಂದ ₹5 ಲಕ್ಷದವರೆಗೆ ಇದ್ದು, ಇವುಗಳ ಬೆಲೆಯನ್ನೂ ನಿಯಂತ್ರಣಕ್ಕೊಳಪಡಿಸಲು ಸೂಚಿಸಲಾಗಿದೆ.
ಸ್ವದೇಶಿ ಉತ್ಪಾದನೆಗೆ ಉತ್ತೇಜನ (Make in India): ಪೇಸ್‌ಮೇಕರ್ (Pacemakers), ಹಾರ್ಟ್ ವಾಲ್ವ್, PET ಸ್ಕ್ಯಾನರ್‌ಗಳಂತಹ ದುಬಾರಿ ಉಪಕರಣಗಳನ್ನು ಭಾರತದಲ್ಲೇ ತಯಾರಿಸಲು ಪ್ರೋತ್ಸಾಹ ನೀಡುವುದು. ಕನಿಷ್ಠ 50% ದೇಶೀಯ ಬಿಡಿಭಾಗ ಬಳಸುವ ಕಂಪನಿಗಳಿಗೆ ಸರ್ಕಾರಿ ಉದ್ಯೋಗ/ಖರೀದಿಯಲ್ಲಿ ಆದ್ಯತೆ ನೀಡುವುದು.
ಗುಣಮಟ್ಟ ಮತ್ತು ಅಭಾವ ತಡೆ: ಬೆಲೆ ಕಡಿಮೆ ಮಾಡುವಾಗ ಉಪಕರಣಗಳ ಗುಣಮಟ್ಟದಲ್ಲಿ ಯಾವುದೇ ರಾಜಿ ಇರಬಾರದು ಹಾಗೂ ಕೃತಕ ಅಭಾವ ಅಥವಾ ಕಾಳಸಂತೆ ವ್ಯಾಪಾರ ನಡೆಯದಂತೆ ಜಾಗ್ರತೆ ವಹಿಸಬೇಕು.

## ವೈದ್ಯರಿಗೆ ಏಕರೂಪದ ಯುಐಡಿ (UID): ರಾಷ್ಟ್ರೀಯ ವೈದ್ಯಕೀಯ ಆಯೋಗದ (NMC) ಹೊಸ ಕರಡು ನಿಯಮಗಳು




➤ ಭಾರತೀಯ ವೈದ್ಯಕೀಯ ಕ್ಷೇತ್ರದಲ್ಲಿ ಮಹತ್ವದ ಸುಧಾರಣೆ ತರಲು ಮುಂದಾಗಿರುವ ರಾಷ್ಟ್ರೀಯ ವೈದ್ಯಕೀಯ ಆಯೋಗ (NMC), ದೇಶದ ಎಲ್ಲಾ ನೋಂದಾಯಿತ ವೈದ್ಯರಿಗೆ ವಿಶಿಷ್ಟ ಗುರುತಿನ ಸಂಖ್ಯೆ (Unique Identification - UID) ನೀಡಲು ಪ್ರಸ್ತಾಪಿಸಿದೆ. NMC ಇತ್ತೀಚೆಗೆ 'ವೈದ್ಯಕೀಯ ಅಭ್ಯಾಸಕಾರರ ನೋಂದಣಿ ಮತ್ತು ವೈದ್ಯಕೀಯ ಚಿಕಿತ್ಸೆ ಅಭ್ಯಾಸ ಮಾಡಲು ಪರವಾನಗಿ ( ತಿದ್ದುಪಡಿ) ನಿಯಮಾವಳಿಗಳು, 2026' (Registration of Medical Practitioners and Licence to Practice Medicine (Amendment) Regulations, 2026) ಕರಡನ್ನು ಬಿಡುಗಡೆ ಮಾಡಿದೆ.

➤ **ಒಂದು ದೇಶ, ಒಂದು ಪರವಾನಗಿ" (One Nation, One Licence):**
ಪ್ರಸ್ತಾಪಿತ ನಿಯಮದಂತೆ, ಒಮ್ಮೆ ರಾಜ್ಯ ವೈದ್ಯಕೀಯ ಮಂಡಳಿಯಲ್ಲಿ (State Medical Council) ನೋಂದಾಯಿಸಿಕೊಂಡು ಯುಐಡಿ (UID) ಪಡೆದ ವೈದ್ಯರು, ದೇಶದ ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ಪ್ರತ್ಯೇಕ ನೋಂದಣಿ ಇಲ್ಲದೆ ಚಿಕಿತ್ಸೆ ನೀಡಲು ಅರ್ಹರಾಗುತ್ತಾರೆ.
ಪ್ರಸ್ತುತ ಪ್ರತಿಯೊಂದು ರಾಜ್ಯದಲ್ಲೂ ಪ್ರತ್ಯೇಕವಾಗಿ ನೋಂದಣಿ ಮಾಡಿಕೊಳ್ಳುವ ಅಗತ್ಯವಿತ್ತು, ಹೊಸ ವ್ಯವಸ್ಥೆಯಿಂದ ಈ ಶ್ರಮ ತಪ್ಪಲಿದೆ.

➤ **ಯುಐಡಿ ಸಂಖ್ಯೆ ರಚನೆ (UID Generation):**
ಈ ಯುಐಡಿ ಸಂಖ್ಯೆಯನ್ನು ಎನ್‌ಎಂಸಿಯ 'ಎಥಿಕ್ಸ್ ಮತ್ತು ಮೆಡಿಕಲ್ ರಿಜಿಸ್ಟ್ರೇಷನ್ ಬೋರ್ಡ್' (EMRB) ಕೇಂದ್ರೀಕೃತವಾಗಿ ನೀಡುತ್ತದೆ.
ಯುಐಡಿಯಲ್ಲಿ ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಕೋಡ್ ಹಾಗೂ ರಾಜ್ಯ ವೈದ್ಯಕೀಯ ಮಂಡಳಿಯ ನೋಂದಣಿ ಸಂಖ್ಯೆ ಒಳಗೊಂಡಿರುತ್ತದೆ.

➤ **ರಾಷ್ಟ್ರೀಯ ವೈದ್ಯಕೀಯ ನೋಂದಣಿ (National Medical Register - NMR):**
ರಾಜ್ಯ ಮತ್ತು ರಾಷ್ಟ್ರೀಯ ವೈದ್ಯಕೀಯ ನೋಂದಣಿ ಪುಸ್ತಕಗಳು ಎಲೆಕ್ಟ್ರಾನಿಕ್ ರೂಪದಲ್ಲಿ ಪರಸ್ಪರ ಬೆಸೆಯಲ್ಪಡುತ್ತವೆ (Automatic Electronic Synchronisation).
ಒಂದು ಕಡೆ ಬದಲಾವಣೆಯಾದರೆ ಅದು ಸ್ವಯಂಚಾಲಿತವಾಗಿ ಮತ್ತೊಂದು ರಿಜಿಸ್ಟರ್‌ನಲ್ಲೂ ಅಪ್‌ಡೇಟ್ ಆಗುತ್ತದೆ.
ಇದರಲ್ಲಿ ವೈದ್ಯರ ಶೈಕ್ಷಣಿಕ ಅರ್ಹತೆ, ಪರವಾನಗಿ ಸ್ಥಿತಿ, ಹಾಗೂ ಶಿಸ್ತುಕ್ರಮಗಳ (ಅಮಾನತು/ರದ್ದು) ಮಾಹಿತಿಯೂ ಸಾರ್ವಜನಿಕವಾಗಿ ಲಭ್ಯವಿರುತ್ತದೆ.

➤ **ಚಾಲ್ತಿಯಲ್ಲಿರುವ ವೈದ್ಯರಿಗೆ ಉಚಿತ ಅವಕಾಶ:** ಈಗಾಗಲೇ ನೋಂದಾಯಿತರಾಗಿರುವ ವೈದ್ಯರು ಯುಐಡಿ ಪಡೆಯಲು EMRB ಪೋರ್ಟಲ್‌ನಲ್ಲಿ ತಮ್ಮ ವಿವರಗಳನ್ನು ನವೀಕರಿಸಬೇಕು. ಈ ಒನ್ ಟೈಮ್ ಪ್ರಕ್ರಿಯೆಗೆ ಯಾವುದೇ ಶುಲ್ಕ ಇರುವುದಿಲ್ಲ.

➤ **ಲೈಸೆನ್ಸ್ ಸಿಂಧುತ್ವ (Licence Validity):** ವೈದ್ಯಕೀಯ ಅಭ್ಯಾಸದ ಪರವಾನಗಿಯು 5 ವರ್ಷಗಳ ಕಾಲ ಸಿಂಧುವಾಗಿರುತ್ತದೆ. ಅವಧಿ ಮುಗಿದ 3 ತಿಂಗಳೊಳಗೆ ನವೀಕರಿಸದಿದ್ದರೆ 'ಇನ್‌ಆಕ್ಟಿವ್' (Inactive) ಎಂದು ಗುರುತಿಸಲಾಗುತ್ತದೆ.

## ₹9,450 ಕೋಟಿ ವೆಚ್ಚದಲ್ಲಿ 4 ರಾಜ್ಯಗಳಲ್ಲಿ ರೈಲ್ವೆ ಬಹುಪಥ ಯೋಜನೆಗಳಿಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ



➤ ಕೇಂದ್ರ ಸರ್ಕಾರದ ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿಯು (CCEA) ದೇಶದ ರೈಲ್ವೆ ಮೂಲಸೌಕರ್ಯವನ್ನು ಬಲಪಡಿಸುವ ನಿಟ್ಟಿನಲ್ಲಿ ಒಂದು ಪ್ರಮುಖ ನಿರ್ಧಾರವನ್ನು ತೆಗೆದುಕೊಂಡಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ₹9,450 ಕೋಟಿ ಅಂದಾಜು ವೆಚ್ಚದ ನಾಲ್ಕು ಪ್ರಮುಖ ರೈಲ್ವೆ ಬಹುಪಥ (Multi-tracking) ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಈ ಯೋಜನೆಗಳು ದೇಶದ ಪೂರ್ವ ಕರಾವಳಿ ಪ್ರದೇಶದ ಆರ್ಥಿಕ ಪ್ರಗತಿಗೆ, ಗೂಡ್ಸ್ ಸಾರಿಗೆ ಮತ್ತು ಪ್ರಯಾಣಿಕರ ರೈಲು ಸಂಚಾರಕ್ಕೆ ಹೊಸ ವೇಗವನ್ನು ನೀಡಲಿವೆ.

ಒಟ್ಟು ವೆಚ್ಚ: ₹9,450 ಕೋಟಿ.

ಆವರಿಸುವ ರಾಜ್ಯಗಳು (4): ಪಶ್ಚಿಮ ಬಂಗಾಳ, ಒಡಿಶಾ, ಆಂಧ್ರಪ್ರದೇಶ ಮತ್ತು ತಮಿಳುನಾಡು.

ಒಟ್ಟು ಜಿಲ್ಲೆಗಳು ಹಾಗೂ ಹಳ್ಳಿಗಳು: 8 ಜಿಲ್ಲೆಗಳು ಮತ್ತು ಸುಮಾರು 6,448 ಹಳ್ಳಿಗಳಿಗೆ ಸಂಪರ್ಕ ಲಭಿಸಲಿದೆ.

ಹೊಸ ಹಳಿ ಜೋಡಣೆ: ಸುಮಾರು 410 ಕಿ.ಮೀ ಹೆಚ್ಚುವರಿ ರೈಲ್ವೆ ಮಾರ್ಗವನ್ನು ನಿರ್ಮಿಸಲಾಗುತ್ತದೆ.

ಪೂರ್ಣಗೊಳ್ಳುವ ಗುರಿ: 2030-31ರ ಹಣಕಾಸು ವರ್ಷ.

ಸರಕು ಸಾಗಣೆ ಸಾಮರ್ಥ್ಯ: ವರ್ಷಕ್ಕೆ ಹೆಚ್ಚುವರಿಯಾಗಿ 76 ಮಿಲಿಯನ್ ಟನ್ (MT) ಸರಕು ಸಾಗಣೆಗೆ ನೆರವಾಗಲಿದೆ.

**➤ ಅನುಮೋದನೆ ಪಡೆದ 4 ಪ್ರಮುಖ ರೈಲ್ವೆ ಕಾರಿಡಾರ್‌ಗಳು:**

**1. ಖರಗ್‌ಪುರ - ಭದ್ರಕ್ (ರಾಣಿತಾಲ್) 4ನೇ ಮಾರ್ಗ:** ಪಶ್ಚಿಮ ಬಂಗಾಳ ಮತ್ತು ಒಡಿಶಾ ನಡುವಿನ ಈ 173 ಕಿ.ಮೀ ಉದ್ದದ ಮಾರ್ಗವು ₹3,352 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿದ್ದು, ಅನುಮೋದಿತ ಯೋಜನೆಗಳಲ್ಲೇ ಅತಿ ದೊಡ್ಡದಾಗಿದೆ.

**2. ಭದ್ರಕ್ - ಹರಿದಾಸಪುರ 4ನೇ ಮಾರ್ಗ:** ಒಡಿಶಾ ರಾಜ್ಯದಲ್ಲಿ ಹಾದುಹೋಗುವ ಈ 75 ಕಿ.ಮೀ ರೈಲ್ವೆ ಮಾರ್ಗದ ವಿಸ್ತರಣೆಗೆ ₹1,583 ಕೋಟಿ ಅಂದಾಜು ವೆಚ್ಚವನ್ನು ನಿಗದಿಪಡಿಸಲಾಗಿದೆ.

**3. ಕಟಕ್ - ಪಾರಾದೀಪ್ (ಬಡಾಬಂಧ) 3ನೇ ಮತ್ತು 4ನೇ ಮಾರ್ಗ:** ಒಡಿಶಾದ ಬಂದರು ಪ್ರದೇಶದ ಸಂಪರ್ಕವನ್ನು ಹೆಚ್ಚಿಸುವ ಈ 72 ಕಿ.ಮೀ ಮಾರ್ಗದ 3ನೇ ಮತ್ತು 4ನೇ ಹಳಿಗಳ ನಿರ್ಮಾಣಕ್ಕಾಗಿ ₹2,286 ಕೋಟಿ ವೆಚ್ಚ ಮಾಡಲಾಗುತ್ತಿದೆ.

**4. ಗುಮ್ಮಿಡಿಪೂಂಡಿ - ಗೂಡೂರು 3ನೇ ಮತ್ತು 4ನೇ ಮಾರ್ಗ:** ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳ ನಡುವಿನ ಸಂಚಾರ ದಟ್ಟಣೆ ಕಡಿಮೆ ಮಾಡಲು ಈ 90 ಕಿ.ಮೀ ಮಾರ್ಗವನ್ನು ₹2,229 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ.

# 21 Aug 2026

## ಆಗಸ್ಟ್-21: ವಿಶ್ವ ಹಿರಿಯ ನಾಗರಿಕರ ದಿನಾಚರಣೆ 2026




➤ ಪ್ರತಿ ವರ್ಷ ಆಗಸ್ಟ್ 21 ರಂದು ಪ್ರಪಂಚದಾದ್ಯಂತ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯನ್ನು (World Senior Citizens Day) ಆಚರಿಸಲಾಗುತ್ತದೆ. ಸಮಾಜಕ್ಕೆ ಹಿರಿಯರು ನೀಡಿದ ಜೀವಮಾನದ ಕೊಡುಗೆಗಳನ್ನು ಗೌರವಿಸಲು, ಅವರ ಅನುಭವವನ್ನು ಸ್ಮರಿಸಲು ಮತ್ತು ಅವರ ಆರೋಗ್ಯ, ಭದ್ರತೆ ಹಾಗೂ ಯೋಗಕ್ಷೇಮದ ಬಗ್ಗೆ ಜಾಗೃತಿ ಮೂಡಿಸಲು ಈ ದಿನವನ್ನು ಮೀಸಲಿಡಲಾಗಿದೆ.

➤ ವಿಶ್ವ ಹಿರಿಯ ನಾಗರಿಕರ ದಿನದ ಇತಿಹಾಸ (History): ಈ ದಿನಾಚರಣೆಯು 1988 ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ (USA) ಪ್ರಾರಂಭವಾಯಿತು.

ಆಗಸ್ಟ್ 19, 1988 ರಂದು ಅಮೆರಿಕದ ತತ್ಕಾಲೀನ ಅಧ್ಯಕ್ಷರಾದ ರೊನಾಲ್ಡ್ ರೇಗನ್ (Ronald Reagan) ಅವರು 'ಘೋಷಣೆ 5847' (Proclamation 5847) ಗೆ ಸಹಿ ಹಾಕುವ ಮೂಲಕ ಪ್ರತಿ ವರ್ಷ ಆಗಸ್ಟ್ 21 ರಂದು ರಾಷ್ಟ್ರೀಯ ಹಿರಿಯ ನಾಗರಿಕರ ದಿನವಾಗಿ ಆಚರಿಸಲು ಕರೆ ನೀಡಿದರು.

ಕಾಲಕ್ರಮೇಣ ಈ ದಿನವನ್ನು ಭಾರತ ಸೇರಿದಂತೆ ವಿಶ್ವದ ಅನೇಕ ದೇಶಗಳಲ್ಲಿ ವಿಶ್ವ ಹಿರಿಯ ನಾಗರಿಕರ ದಿನ (World Senior Citizens Day) ಎಂದು ಆಚರಿಸಿಕೊಂಡು ಬರಲಾಗುತ್ತಿದೆ.

**➤ ಗಮನಿಸಿ:**

ಆಗಸ್ಟ್ 21: ವಿಶ್ವ ಹಿರಿಯ ನಾಗರಿಕರ ದಿನ (World Senior Citizens Day)

ಅಕ್ಟೋಬರ್ 1: ವಿಶ್ವಸಂಸ್ಥೆ (UN) ಘೋಷಿಸಿರುವ ಅಂತರರಾಷ್ಟ್ರೀಯ ಹಿರಿಯ ವ್ಯಕ್ತಿಗಳ ದಿನ (International Day of Older Persons). ಪರೀಕ್ಷೆಗಳಲ್ಲಿ ಈ ಎರಡು ದಿನಾಂಕಗಳ ನಡುವೆ ಗೊಂದಲ ಮಾಡಿಕೊಳ್ಳಬೇಡಿ.

➤ ಸಮಾಜದಲ್ಲಿ ಹಿರಿಯರ ಪಾತ್ರ ಅತ್ಯಂತ ದೊಡ್ಡದು. ತಮ್ಮ ಕುಟುಂಬ ಮತ್ತು ದೇಶದ ಅಭಿವೃದ್ಧಿಗಾಗಿ ಶ್ರಮಿಸಿದ ಹಿರಿಯರನ್ನು ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

ಹಿರಿಯ ನಾಗರಿಕರು ಎದುರಿಸುತ್ತಿರುವ ಪ್ರಮುಖ ಸವಾಲುಗಳು:

ಒಂಟಿತನ ಮತ್ತು ಮಾನಸಿಕ ಖಿನ್ನತೆ: ಆಧುನಿಕ ಜೀವನಶೈಲಿ ಮತ್ತು ಸಣ್ಣ ಕುಟುಂಬಗಳ (Nuclear Families) ಕಾರಣದಿಂದಾಗಿ ಹಿರಿಯರಲ್ಲಿ ಒಂಟಿತನ ಹೆಚ್ಚುತ್ತಿದೆ.

ಆರೋಗ್ಯ ಸಮಸ್ಯೆಗಳು: ವಯೋಸಹಜ ಕಾಯಿಲೆಗಳು ಮತ್ತು ತುರ್ತು ವೈದ್ಯಕೀಯ ವೆಚ್ಚಗಳ ಸವಾಲು.

ಹಣಕಾಸಿನ ಅಭದ್ರತೆ: ನಿವೃತ್ತಿಯ ನಂತರ ಸೂಕ್ತ ಆದಾಯ ಅಥವಾ ಪಿಂಚಣಿ ವ್ಯವಸ್ಥೆಯ ಕೊರತೆ.

ಹಿರಿಯರ ಮೇಲಿನ ದೌರ್ಜನ್ಯ ಮತ್ತು ನಿರ್ಲಕ್ಷ್ಯ: ಕುಟುಂಬ ಹಾಗೂ ಸಮಾಜದಲ್ಲಿ ಗೌರವದ ಕೊರತೆ.

➤ 'ಹಿರಿಯ ನಾಗರಿಕರ ಮತ್ತು ಪೋಷಕರ ಪೋಷಣೆ ಮತ್ತು ಯೋಗಕ್ಷೇಮ ಕಾಯ್ದೆ, 2007' (Maintenance and Welfare of Parents and Senior Citizens Act, 2007) ರ ಪ್ರಕಾರ, 60 ವರ್ಷ ಅಥವಾ ಅದಕ್ಕಿಂತ ಹೆಚ್ಚು ವಯಸ್ಸಾದ ಭಾರತೀಯ ಪ್ರಜೆಯನ್ನು ಹಿರಿಯ ನಾಗರಿಕ ಎಂದು ಕರೆಯಲಾಗುತ್ತದೆ.



## ಖಗೋಳಶಾಸ್ತ್ರಜ್ಞರಿಂದ 'ಮೆಗಾ-ಎರ್ಥ್' (Mega-Earth) ಶೋಧ: ಭೂಮಿಗಿಂತ 23 ಪಟ್ಟು ಹೆಚ್ಚು ದ್ರವ್ಯರಾಶಿ ಹೊಂದಿರುವ ಬೃಹತ್ ಕಲ್ಲಿನ ಗ್ರಹ



➤ ಖಗೋಳಶಾಸ್ತ್ರಜ್ಞರು ನಮ್ಮ ಸೌರವ್ಯೂಹದ ಹೊರಗೆ (Exoplanet) ಕಲ್ಲಿನಿಂದಲೇ ಕೂಡಿದ ಬೃಹತ್ ಗಾತ್ರದ ಹೊಸ ಗ್ರಹವೊಂದನ್ನು ಪತ್ತೆಹಚ್ಚಿದ್ದಾರೆ. ಇದನ್ನು "GJ 523b" ಎಂದು ಹೆಸರಿಸಲಾಗಿದ್ದು, ವಿಜ್ಞಾನಿಗಳು ಇದನ್ನು 'ಮೆಗಾ-ಎರ್ಥ್' (Mega-Earth) ಎಂದು ಕರೆಯುತ್ತಿದ್ದಾರೆ. ಈ ಗ್ರಹವು ಭೂಮಿಗಿಂತ ಸುಮಾರು 23.5 ಪಟ್ಟು ಹೆಚ್ಚು ದ್ರವ್ಯರಾಶಿಯನ್ನು (Mass) ಹೊಂದಿದ್ದು, ಖಗೋಳ ವಿಜ್ಞಾನದ ಹಳೆಯ ಸಿದ್ಧಾಂತಗಳಿಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ.

**➤ GJ 523b ಗ್ರಹದ ವಿಶೇಷತೆಗಳು:**

ಬೃಹತ್ ಕಲ್ಲಿನ ಸಂಯೋಜನೆ:ಸಾಮಾನ್ಯವಾಗಿ ಭೂಮಿಗಿಂತ 10 ರಿಂದ 20 ಪಟ್ಟು ಹೆಚ್ಚು ದೊಡ್ಡದಾಗುವ ಗ್ರಹಗಳು ಅನಿಲದ ದೈತ್ಯ ಗ್ರಹಗಳಾಗಿ (Gas Giants - ಉದಾಹರಣೆಗೆ ಗುರು ಅಥವಾ ಶನಿ ಗ್ರಹ) ಮಾರ್ಪಡುತ್ತವೆ. ಆದರೆ GJ 523b ಗ್ರಹವು ನೆಪ್ಚೂನ್‌ಗೆ ಹತ್ತಿರವಾದ ಗಾತ್ರ ಹೊಂದಿದ್ದರೂ, ಇದು ಮುಖ್ಯವಾಗಿ ಅನಿಲಕ್ಕಿಂತ ಕಲ್ಲು ಮತ್ತು ಗಟ್ಟಿಯಾದ ಲೋಹೀಯ ತಿರುಳಿನಿಂದ (Dense Rocky Core) ಕೂಡಿದೆ.

ಭ್ರಮಣ ಅವಧಿ (Orbit):ಈ ಗ್ರಹವು ತನ್ನ ಮುಖ್ಯ ನಕ್ಷತ್ರವನ್ನು (Host Star) ಒಂದು ಬಾರಿ ಸುತ್ತುಹಾಕಲು ಕೇವಲ 17.75 ದಿನಗಳನ್ನು ತೆಗೆದುಕೊಳ್ಳುತ್ತದೆ.

ಅತಿಯಾದ ಸಾಂದ್ರತೆ (High Density):ಗ್ರಹದ ಶೇ. 60 ಕ್ಕಿಂತ ಹೆಚ್ಚು ಭಾಗವು ಬಂಡೆ ಮತ್ತು ಗಟ್ಟಿ ವಸ್ತುವಿನಿಂದ ಕೂಡಿದ್ದು, ಅನಿಲದ ವಾತಾವರಣವು ಅತ್ಯಂತ ತೆಳುವಾಗಿದೆ.

➤ ಖಗೋಳಶಾಸ್ತ್ರಜ್ಞರ ಸಾಂಪ್ರದಾಯಿಕ 'ಗ್ರಹ ರಚನಾ ಸಿದ್ಧಾಂತ'ಗಳ (Planetary Formation Theories) ಪ್ರಕಾರ, ಯಾವುದೇ ಕಲ್ಲಿನ ಗ್ರಹವು ಭೂಮಿಗಿಂತ 20 ಪಟ್ಟು ಹೆಚ್ಚು ದ್ರವ್ಯರಾಶಿ ಪಡೆದಾಗ, ಅದು ತನ್ನ ಗುರುತ್ವಾಕರ್ಷಣೆಯಿಂದ ಸುತ್ತಲಿನ ಬಾಹ್ಯಾಕಾಶದ ಅನಿಲಗಳನ್ನು ಆಕರ್ಷಿಸಿ 'ಅನಿಲ ಗ್ರಹ'ವಾಗಿ ರೂಪಾಂತರಗೊಳ್ಳಬೇಕು. ಆದರೆ GJ 523b ಅಷ್ಟು ದೊಡ್ಡದಾಗಿದ್ದರೂ ಅನಿಲ ಗ್ರಹವಾಗದೇ 'ಕಲ್ಲಿನ ಗ್ರಹ'ವಾಗಿಯೇ ಉಳಿದಿರುವುದು ವಿಜ್ಞಾನಿಗಳನ್ನು ಆಶ್ಚರ್ಯಚಕಿತಗೊಳಿಸಿದೆ.

ವಿಜ್ಞಾನಿಗಳು 2 ಸಂಭಾವ್ಯ ಕಾರಣಗಳನ್ನು ನೀಡಿದ್ದಾರೆ:

ವಾತಾವರಣದ ನಷ್ಟ (Atmospheric Stripping): ಗ್ರಹವು ತನ್ನ ನಕ್ಷತ್ರಕ್ಕೆ ಹತ್ತಿರವಿರುವುದರಿಂದ ನಕ್ಷತ್ರದ ತೀವ್ರ ಶಾಖ ಅಥವಾ ವಿಕಿರಣದಿಂದಾಗಿ ಇದರ ಅನಿಲ ವಾತಾವರಣವು ನಾಶವಾಗಿರಬಹುದು.

ದೈತ್ಯ ಗ್ರಹಗಳ ಡಿಕ್ಕಿ (Giant Impact): ಆರಂಭಿಕ ಹಂತದಲ್ಲಿ ಎರಡು ದೊಡ್ಡ ಕಲ್ಲಿನ ಗ್ರಹಗಳು ಒಂದಕ್ಕೊಂದು ಭೀಕರವಾಗಿ ಡಿಕ್ಕಿ ಹೊಡೆದು, ಅನಿಲವನ್ನು ಕಳೆದುಕೊಂಡು ಒಂದೇ ಬೃಹತ್ ಕಲ್ಲಿನ ಗ್ರಹವಾಗಿ ರೂಪುಗೊಂಡಿರಬಹುದು.

## ಭಾರತ ಮತ್ತು ಜಪಾನ್ ನಡುವೆ ಸಮುದ್ರ ಭದ್ರತಾ ಒಪ್ಪಂದ: ರಕ್ಷಣಾ ಸಹಕಾರಕ್ಕೆ ಹೊಸ ಬಲ!



➤ ಭಾರತ ಮತ್ತು ಜಪಾನ್ ದೇಶಗಳು ತಮ್ಮ ರಕ್ಷಣಾ ಮತ್ತು ಸಮುದ್ರ ಭದ್ರತಾ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ನವದೆಹಲಿಯಲ್ಲಿ ನಡೆದ ದ್ವಿಪಕ್ಷೀಯ ಮಾತುಕತೆಯ ವೇಳೆ ಸಮುದ್ರ ಭದ್ರತಾ ಸಹಕಾರ ಒಪ್ಪಂದಕ್ಕೆ (Memorandum of Arrangement - MoA) ಸಹಿ ಹಾಕಿವೆ.

➤ ಭಾರತದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಜಪಾನ್ ರಕ್ಷಣಾ ಸಚಿವ ಶಿಂಜಿರೊ ಕೊಯಿಜುಮಿ ಅವರ ಉಪಸ್ಥಿತಿಯಲ್ಲಿ ಈ ಒಪ್ಪಂದ ನಡೆಯಿತು. ಈ ಒಪ್ಪಂದವು ಭಾರತೀಯ ನೌಕಾಪಡೆ (Indian Navy) ಮತ್ತು ಜಪಾನ್‌ನ ಮಾರಿಟೈಮ್ ಸೆಲ್ಫ್-ಡಿಫೆನ್ಸ್ ಫೋರ್ಸ್ (JMSDF) ನಡುವಿನ ಕಾರ್ಯಾಚರಣಾ ಸಹಕಾರವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಲಿದೆ.

**➤ ಈ ಒಪ್ಪಂದದ ಪ್ರಮುಖ ಅಂಶಗಳು:**

ಮಾಹಿತಿ ವಿನಿಮಯ ಮತ್ತು ಭದ್ರತೆ:

ಮಾರಿಟೈಮ್ ಡೊಮೇನ್ ಅವೇರ್‌ನೆಸ್ (MDA): ಸಮುದ್ರ ಪ್ರದೇಶದಲ್ಲಿ ನಡೆಯುವ ಚಟುವಟಿಕೆಗಳ ಮೇಲ್ವಿಚಾರಣೆ ಮತ್ತು ಮಾಹಿತಿ ವಿನಿಮಯವನ್ನು ಹೆಚ್ಚಿಸುವುದು.

ಹುಡುಕಾಟ ಮತ್ತು ರಕ್ಷಣೆ (SAR): ತುರ್ತು ಸಂದರ್ಭಗಳಲ್ಲಿ ಜಂಟಿ ಹುಡುಕಾಟ ಮತ್ತು ರಕ್ಷಣಾ ಕಾರ್ಯಾಚರಣೆಗಳನ್ನು ನಡೆಸುವುದು.

ಮಾನವೀಯ ನೆರವು ಮತ್ತು ವಿಪತ್ತು ನಿರ್ವಹಣೆ (HADR): ನೈಸರ್ಗಿಕ ವಿಕೋಪಗಳ ಸಮಯದಲ್ಲಿ ಎರಡೂ ದೇಶಗಳ ನೌಕಾಪಡೆಗಳು ಒಟ್ಟಾಗಿ ಪರಿಹಾರ ಕಾರ್ಯ ಕೈಗೊಳ್ಳುವುದು.

ಲಾಜಿಸ್ಟಿಕ್ಸ್ ಮತ್ತು ಹಡಗು ದುರಸ್ತಿ:

ಎರಡೂ ದೇಶಗಳ ನೌಕಾಪಡೆಯ ಹಡಗುಗಳು ಪರಸ್ಪರ ಬಂದರುಗಳಿಗೆ ಭೇಟಿ ನೀಡುವುದು, ಇಂಧನ ಮತ್ತು ಲಾಜಿಸ್ಟಿಕ್ಸ್ ಬೆಂಬಲ ಪಡೆದುಕೊಳ್ಳುವುದು.

ಜಪಾನ್‌ನ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಭಾರತದ ಉತ್ಪಾದನಾ ಸಾಮರ್ಥ್ಯವನ್ನು ಬಳಸಿಕೊಂಡು ಹಡಗು ನಿರ್ಮಾಣ ಹಾಗೂ 'ಮೇಕ್ ಇನ್ ಇಂಡಿಯಾ' ಅಡಿಯಲ್ಲಿ ಹಡಗು ದುರಸ್ತಿ (Ship Repair Facilities) ಸೌಲಭ್ಯಗಳನ್ನು ಒದಗಿಸುವುದು.

ರಕ್ಷಣಾ ತಂತ್ರಜ್ಞಾನ ಮತ್ತು 'UNICORN':

ಹಡಗುಗಳಲ್ಲಿ ಬಳಸಲಾಗುವ UNICORN (Integrated Communications Antenna System) ತಂತ್ರಜ್ಞಾನದ ಜಂಟಿ ಅನುಷ್ಠಾನ.

ಭಾರತದ DRDO ಮತ್ತು ಜಪಾನ್‌ನ ATLA (Acquisition, Technology & Logistics Agency) ನಡುವೆ ಉನ್ನತ ರಕ್ಷಣಾ ತಂತ್ರಜ್ಞಾನಗಳ ಸಹಕಾರ.

ಸಂಯುಕ್ತ ಸಮರಾಭ್ಯಾಸಗಳು (Joint Military Exercises):

ಧರ್ಮ ಗಾರ್ಡಿಯನ್ (Dharma Guardian): ಶೇಖರಣಾ/ಭೂಸೇನೆ ಅಭ್ಯಾಸ.

ಜಿಮೆಕ್ಸ್ (JIMEX): ನೌಕಾಪಡೆ ಅಭ್ಯಾಸ.

ವೀರ್ ಗಾರ್ಡಿಯನ್ 26 (Veer Guardian 26): ಮುಂಬರುವ ವಾಯುಪಡೆ ಅಭ್ಯಾಸದಲ್ಲಿ ಮೊದಲ ಬಾರಿಗೆ ಜಪಾನ್‌ನ ಯುದ್ಧ ವಿಮಾನಗಳು ಭಾರತದಲ್ಲಿ ಪಾಲ್ಗೊಳ್ಳಲಿವೆ.

2+2 ಸಚಿವರ ಮಟ್ಟದ ಮಾತುಕತೆ:

ಟೋಕಿಯೋದಲ್ಲಿ ನಡೆಯಲಿರುವ 4ನೇ ಭಾರತ-ಜಪಾನ್ '2+2' (ವಿದೇಶಾಂಗ ಮತ್ತು ರಕ್ಷಣಾ ಸಚಿವರ) ಮಾತುಕತೆಗೆ ಸಿದ್ಧತೆ ನಡೆಸಲು ನಿರ್ಧರಿಸಲಾಗಿದೆ

## ಸೋಮಾಲಿಯಾ ಕರಾವಳಿಯಲ್ಲಿ ಶಸ್ತ್ರಾಸ್ತ್ರ ಹೊತ್ತಿದ್ದ ಹಡಗು ಹೈಜಾಕ್: 6 ಭಾರತೀಯರು ಅಪಹರಣ!



➤ ಆಫ್ರಿಕಾ ಖಂಡದ ಸೋಮಾಲಿಯಾ ಕರಾವಳಿ ಪ್ರದೇಶದಲ್ಲಿ ಕಡಲ್ಗಳ್ಳರ (Pirates) ಉಪಟಳ ಮತ್ತೆ ಹೆಚ್ಚಾಗಿದ್ದು, M/V LUTUF ಎಂಬ ಕ್ಯಾಮರೂನ್ ಧ್ವಜವನ್ನು ಹೊಂದಿದ್ದ ಸರಕು ಸಾಗಣೆ

ಹಡಗನ್ನು ಕಡಲ್ಗಳ್ಳರು ಅಪಹರಿಸಿದ್ದಾರೆ. ಈ ಹಡಗು ಸೋಮಾಲಿಯಾದ ರಾಜಧಾನಿ ಮೊಗದಿಶುದಲ್ಲಿರುವ ಟರ್ಕಿಶ್ ಮಿಲಿಟರಿ ತರಬೇತಿ ಕೇಂದ್ರಕ್ಕೆ ಸೇನಾ ಶಸ್ತ್ರಾಸ್ತ್ರಗಳು, ಸಂವಹನ ಸಾಮಗ್ರಿಗಳು ಮತ್ತು ಉಪಗ್ರಹ ಉಪಕರಣಗಳನ್ನು ಒಯ್ಯುತ್ತಿತ್ತು.

➤ **ಹಡಗಿನಲ್ಲಿದ್ದ ಸಿಬ್ಬಂದಿ ವಿವರ: ಹಡಗಿನಲ್ಲಿ ಒಟ್ಟು 10 ಜನರು ಪ್ರಯಾಣಿಸುತ್ತಿದ್ದರು:**

ಭಾರತೀಯರು: 6 ನಾವಿಕರು
ಟರ್ಕಿ ಪ್ರಜೆ: 1
ಜಾರ್ಜಿಯಾ ಪ್ರಜೆ: 1
ಸೆರ್ಬಿಯಾದ ಭದ್ರತಾ ಸಿಬ್ಬಂದಿ: 2

➤ **ದಾಳಿ ನಡೆದದ್ದು ಹೇಗೆ?**

ಸ್ಥಳ: ಪುಂಟ್‌ಲ್ಯಾಂಡ್‌ನ ಐಲ್ (Eyl) ಜಿಲ್ಲೆಯ ಮರ್ರಾಯಾ (Marraya) ಕರಾವಳಿಯಿಂದ ಸುಮಾರು 3.5 ಸಾಗರ ಮೈಲಿ (Nautical Miles) ದೂರದಲ್ಲಿ ಹಡಗನ್ನು ವಶಕ್ಕೆ ಪಡೆಯಲಾಯಿತು.

ದಾಳಿಕೋರರು: ಸುಮಾರು 8 ಜನರಿದ್ದ ಕಡಲ್ಗಳ್ಳರ ಗುಂಪು ಈ ಕೃತ್ಯ ಎಸಗಿದೆ. ಇವರು ಈ ಹಿಂದೆ ಅಪ್ರಿಲ್ 26 ರಂದು ನಡೆದಿದ್ದ 'M/V Sward' ಹಡಗು ಅಪಹರಣ ಪ್ರಕರಣದಲ್ಲೂ ಭಾಗಿಯಾಗಿದ್ದರು ಎಂದು ಶಂಕಿಸಲಾಗಿದೆ.

ಟರ್ಕಿ ಸೇನೆಯ ಮೇಲ್ವಿಚಾರಣೆ: ಹಡಗು ಅಪಹರಣಗೊಂಡ ನಂತರ ಟರ್ಕಿಯ ಹೆಲಿಕಾಪ್ಟರ್‌ಗಳು ಮತ್ತು ಡ್ರೋನ್‌ಗಳು ಆ ಪ್ರದೇಶದ ಮೇಲೆ ನಿಗಾ ವಹಿಸಿದ್ದು, ಎರಡು ಟರ್ಕಿಶ್ ಹಡಗುಗಳು ಆ ಭಾಗಕ್ಕೆ ಧಾವಿಸಿವೆ.

## ISRO ಮಾಜಿ ಅಧ್ಯಕ್ಷ ಎಸ್. ಸೋಮನಾಥ್ RBI ಕೇಂದ್ರೀಯ ಮಂಡಳಿಗೆ ನಿರ್ದೇಶಕರಾಗಿ ನೇಮಕ!



➤ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ISRO) ಮಾಜಿ ಅಧ್ಯಕ್ಷ ಹಾಗೂ ಖ್ಯಾತ ಬಾಹ್ಯಾಕಾಶ ವಿಜ್ಞಾನಿ ಎಸ್. ಸೋಮನಾಥ್ ಅವರನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ (RBI) ಕೇಂದ್ರೀಯ ಮಂಡಳಿಗೆ (Central Board) ಅರೆಕಾಲಿಕ, ಅಧಿಕೃತವಲ್ಲದ ನಿರ್ದೇಶಕರಾಗಿ (Part-time, Non-official Director) ಕೇಂದ್ರ ಸರ್ಕಾರ ನೇಮಕ ಮಾಡಿದೆ. ಆಗಸ್ಟ್ 20, 2026 ರಿಂದ ಜಾರಿಗೆ ಬರುವಂತೆ ನಾಲ್ಕು ವರ್ಷಗಳ ಅವಧಿಗೆ ಅವರನ್ನು ಈ ಹುದ್ದೆಗೆ ನೇಮಿಸಲಾಗಿದೆ.

ನೇಮಕಾತಿ: ಭಾರತ ಸರ್ಕಾರದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಕಾಯ್ದೆ ಪ್ರಕಾರ ಎಸ್. ಸೋಮನಾಥ್ ಅವರನ್ನು RBI ಕೇಂದ್ರೀಯ ಮಂಡಳಿಯ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ.

ಆನಂದ್ ಮಹೀಂದ್ರಾ ಮರುನೇಮಕ: ಪ್ರಸಿದ್ಧ ಉದ್ಯಮಿ ಹಾಗೂ ಮಹೀಂದ್ರಾ ಗ್ರೂಪ್‌ನ ಅಧ್ಯಕ್ಷ ಆನಂದ್ ಮಹೀಂದ್ರಾ ಅವರನ್ನು ಸಹ ನಾಲ್ಕು ವರ್ಷಗಳ ಅವಧಿಗೆ RBI ಕೇಂದ್ರೀಯ ಮಂಡಳಿಯ ಅರೆಕಾಲಿಕ ನಿರ್ದೇಶಕರನ್ನಾಗಿ ಕೇಂದ್ರ ಸರ್ಕಾರ ಮರುನೇಮಕಗೊಳಿಸಿದೆ.

ತಂತ್ರಜ್ಞಾನ ಮತ್ತು ಹಣಕಾಸು ರಂಗದ ಸಮ್ಮಿಲನ: ಫಿನ್‌ಟೆಕ್ (FinTech), ಡಿಜಿಟಲ್ ಪಾವತಿ ವ್ಯವಸ್ಥೆ, ಸೈಬರ್ ಭದ್ರತೆ ಮತ್ತು ಬಾಹ್ಯಾಕಾಶ ತಂತ್ರಜ್ಞಾನದ ಆಧಾರಿತ ಆರ್ಥಿಕ ಬೆಳವಣಿಗೆಗೆ ಶಕ್ತಿ ತುಂಬಲು ಸೋಮನಾಥ್ ಅವರ ಅನುಭವ ಪ್ರಮುಖ ಪಾತ್ರ ವಹಿಸಲಿದೆ.

➤ **ಎಸ್. ಸೋಮನಾಥ್ ಅವರ ಕಿರು ಪರಿಚಯ:**

ಹಿನ್ನೆಲೆ: ಖ್ಯಾತ ಏರೋಸ್ಪೇಸ್ ಎಂಜಿನಿಯರ್ ಆಗಿರುವ ಎಸ್. ಸೋಮನಾಥ್ ಅವರು ಜನವರಿ 2022 ರಿಂದ ಜನವರಿ 2025 ರವರೆಗೆ ಇಸ್ರೋ (ISRO) ಅಧ್ಯಕ್ಷರಾಗಿ ಹಾಗೂ ಬಾಹ್ಯಾಕಾಶ ಇಲಾಖೆಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ.

ಚಂದ್ರಯಾನ-3 ಸಾಹಸ: ಇವರ ಅಧಿಕಾರಾವಧಿಯಲ್ಲೇ ಭಾರತವು ಚಂದ್ರಯಾನ-3 ಯೋಜನೆಯನ್ನು ಯಶಸ್ವಿಯಾಗಿ ನೆರವೇರಿಸಿ, ಚಂದ್ರನ ದಕ್ಷಿಣ ಧ್ರುವದಲ್ಲಿ ನೌಕೆಯನ್ನು ಇಳಿಸಿದ ವಿಶ್ವದ ಮೊದಲ ದೇಶ ಎಂಬ ಐತಿಹಾಸಿಕ ಸಾಧನೆ ಮಾಡಿತು.

ಇತರ ಹುದ್ದೆ: ಇಸ್ರೋ ನಿವೃತ್ತಿಯ ನಂತರ, ಇವರು ಬೆಂಗಳೂರು ಸಮೀಪದ ಸಾಣೇಕಟ್ಟೆಯಲ್ಲಿರುವ ಚಾಣಕ್ಯ ವಿಶ್ವವಿದ್ಯಾಲಯದ ಕುಲಾಧಿಪತಿ (Chancellor) ಆಗಿ ಕೂಡ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

➤ RBI ಕೇಂದ್ರೀಯ ಮಂಡಳಿ: ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ (RBI) ಕೇಂದ್ರೀಯ ಮಂಡಳಿಯು ಬ್ಯಾಂಕ್‌ನ ಪ್ರಮುಖ ಆಡಳಿತಾತ್ಮಕ ಮತ್ತು ನೀತಿ ನಿರೂಪಣಾ ಮಂಡಳಿಯಾಗಿದೆ.

ರಚನೆ: ಇದರಲ್ಲಿ ಆರ್‌ಬಿಐ ಗವರ್ನರ್ (ಪ್ರಸ್ತುತ ಸಂಜಯ್ ಮಲ್ಹೋತ್ರಾ), ಡೆಪ್ಯುಟಿ ಗವರ್ನರ್‌ಗಳು, ಸರ್ಕಾರದ ಪ್ರತಿನಿಧಿಗಳು ಹಾಗೂ ಸರ್ಕಾರದಿಂದ ನಾಮನಿರ್ದೇಶನಗೊಂಡ ವಿವಿಧ ಕ್ಷೇತ್ರದ ತಜ್ಞರು ಇರುತ್ತಾರೆ.

ಕಾರ್ಯ: ದೇಶದ ಹಣಕಾಸು ಸ್ಥಿರತೆ, ಆಡಳಿತ, ಕರೆನ್ಸಿ ನಿರ್ವಹಣೆ ಹಾಗೂ ಬ್ಯಾಂಕಿಂಗ್ ನಿಯಂತ್ರಣಗಳ ಮೇಲ್ವಿಚಾರಣೆ ನಡೆಸುವುದು.

## 47ನೇ ಶಾರಳಾ ಪುರಸ್ಕಾರ: ಪ್ರಸಿದ್ಧ ಒಡಿಯಾ ಕವಿ ಡಾ. ಆಶುತೋಷ್ ಪರಿಡಾಗೆ ಗೌರವ



➤ ಒಡಿಶಾ ಸಾಹಿತ್ಯ ಕ್ಷೇತ್ರದ ಅತ್ಯುನ್ನತ ಮತ್ತು ಗೌರವಾನ್ವಿತ ಸಾಹಿತ್ಯಿಕ ಪ್ರಶಸ್ತಿಗಳಲ್ಲಿ ಒಂದಾದ 47ನೇ 'ಶಾರಳಾ ಪುರಸ್ಕಾರ' (Sarala Puraskar 2026) ಪ್ರಕಟಗೊಂಡಿದೆ. 2026ರ ಸಾಲಿನ ಈ ಪ್ರತಿಷ್ಠಿತ ಪ್ರಶಸ್ತಿಗೆ ಒಡಿಯಾ ಭಾಷೆಯ ಖ್ಯಾತ ಕವಿ, ಪ್ರಬಂಧಕ ಹಾಗೂ ಮಾಜಿ ವಿಜ್ಞಾನಿ ಡಾ. ಆಶುತೋಷ್ ಪರಿಡಾ (Dr. Ashutosh Parida) ಆಯ್ಕೆಯಾಗಿದ್ದಾರೆ.

ಆಯ್ಕೆಯಾದ ಕೃತಿ: 'ಬಿಶ್ವಾಸ್ ದೇ ಪೃಥ್ವಿ' (Bishwas De Pruthwi - 2024ರಲ್ಲಿ ಪ್ರಕಟವಾದ ಕಾವ್ಯ ಸಂಕಲನ)

ಪುರಸ್ಕಾರದ ಆವೃತ್ತಿ: 47ನೇ ಆವೃತ್ತಿ (47th Sarala Puraskar)

ಬಹುಮಾನ ಮೊತ್ತ: ₹7 ಲಕ್ಷ ನಗದು ಬಹುಮಾನ, ಪ್ರಶಸ್ತಿ ಪತ್ರ ಮತ್ತು ತಾಮ್ರದ ಫಲಕ

ಸಂಸ್ಥೆ: 'ಇಂಡಿಯನ್ ಮೆಟಲ್ಸ್ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್' (IMPaCT)

➤ **ಶಾರಳಾ ಪುರಸ್ಕಾರದ ವಿವರಗಳು:**

ಸ್ಥಾಪನೆ: ಈ ಪ್ರಶಸ್ತಿಯನ್ನು ಪ್ರಸಿದ್ಧ ಉದ್ಯಮಿಗಳಾದ ಡಾ. ಬನ್ಶಿಧರ್ ಪಂಡಾ ಮತ್ತು ಇಲಾ ಪಂಡಾ ಅವರು 1980ರಲ್ಲಿ IMPaCT (Indian Metals & Ferro Alloys Ltd ಸಂಸ್ಥೆಯ ಚಾರಿಟೇಬಲ್ ವಿಭಾಗ) ಸಂಸ್ಥೆಯ ಮೂಲಕ ಪ್ರಾರಂಭಿಸಿದರು.

ಉದ್ದೇಶ: ಒಡಿಯಾ ಸಾಹಿತ್ಯಕ್ಕೆ ನೀಡಿರುವ ಅತ್ಯುತ್ತಮ ಕೊಡುಗೆಗಳನ್ನು ಗುರುತಿಸಿ ಪ್ರತಿವರ್ಷ ಗೌರವಿಸಲಾಗುತ್ತದೆ.

ಹೆಸರಿನ ಹಿನ್ನೆಲೆ: ಒಡಿಶಾದ ಆದಿಕವಿ ಎಂದೇ ಪ್ರಸಿದ್ಧರಾಗಿರುವ 'ಶಾರಳಾ ದಾಸ' (Sarala Das) ಅವರ ಸ್ಮರಣಾರ್ಥ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

➤ ಡಾ. ಆಶುತೋಷ್ ಪರಿಡಾ: ಡಾ. ಆಶುತೋಷ್ ಪರಿಡಾ ಅವರು ಒಡಿಯಾ ಸಾಹಿತ್ಯದ ಹಿರಿಯ ಕವಿ ಮತ್ತು ಪ್ರಬಂಧಕಾರರಾಗಿದ್ದಾರೆ. ಅವರು ಭುವನೇಶ್ವರದ CSIR-IMMT (Institute of Minerals and Materials Technology) ಸಂಸ್ಥೆಯಲ್ಲಿ ವಿಜ್ಞಾನಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಇವರ ಪ್ರಮುಖ ಕಾವ್ಯ ಸಂಕಲನಗಳಲ್ಲಿ ಇಪ್ಸಿತ ಕ್ರೋಧ, ಅಪ್ರಸ್ತುತ ಮೃತ್ಯು,

KPSCVaani

ಅಂಗಾರ ಗಾರ, ಹಾಗೂ ಆಕ್ರಾಂತ ಅಕ್ಷರ ಸೇರಿವೆ. ಇವರಿಗೆ ಮುಂಚಿತವಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಒಡಿಶಾ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿವೆ.

➤ ಇಲಾ-ಬನ್ಸಿಧರ್ ಪಂಡಾ ಕಲಾ ಸಮ್ಮಾನ್ 2026: ಶಾರಳಾ ಪುರಸ್ಕಾರದ ಜೊತೆಗೆ ಕಲಾ ಕ್ಷೇತ್ರದ ಜೀವಮಾನದ ಸಾಧನೆಗಾಗಿ ನೀಡಲಾಗುವ 'ಇಲಾ-ಬನ್ಸಿಧರ್ ಪಂಡಾ ಕಲಾ ಸಮ್ಮಾನ್' (Ila-Bansidhar Panda Kala Samman 2026) ಪ್ರಶಸ್ತಿಯನ್ನು ಇಬ್ಬರು ಗಣ್ಯರಿಗೆ ಘೋಷಿಸಲಾಗಿದೆ:

ಗುರು ದುರ್ಗಾ ಚರಣ್ ರಣಬೀರ್ (Guru Durga Charan Ranbir): ಒಡಿಸ್ಸಿ ನೃತ್ಯ ಗುರು (ಪದ್ಮಶ್ರೀ ಪುರಸ್ಕೃತ).

ದಾಮೋದರ ಬೆಹೆರಾ (Damodar Behera): ಪ್ರಸಿದ್ಧ ಶಿಲ್ಪಿ ಹಾಗೂ ಕಲಾ ಶಿಕ್ಷಣತಜ್ಞ.

## ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ (2026-27): 'ಮುಖ್ಯಮಂತ್ರಿ' ಚಂದ್ರು ಅವರಿಗೆ ಜೀವಮಾನ ಸಾಧನೆ ಗೌರವ




➤ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಡಾ. ಕೆ.ವಿ. ನಾಗರಾಜ ಮೂರ್ತಿ ಅವರು 2026-27ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಹಿರಿಯ ನಟ ಡಾ. 'ಮುಖ್ಯಮಂತ್ರಿ' ಚಂದ್ರು ಅವರಿಗೆ ₹50,000 ನಗದು ಒಳಗೊಂಡ 'ಜೀವಮಾನ ಸಾಧನೆ ಗೌರವ' ಹಾಗೂ ಇತರ ಸಾಧಕರಿಗೆ 25 ವಾರ್ಷಿಕ (ತಲಾ ₹25,000) ಮತ್ತು 7 ದತ್ತಿನಿಧಿ (ತಲಾ ₹15,000) ಪುರಸ್ಕಾರಗಳನ್ನು ಘೋಷಿಸಿದ್ದಾರೆ.

**➤ ಜೀವಮಾನ ಸಾಧನೆ ಗೌರವ ಪ್ರಶಸ್ತಿ:** ಕನ್ನಡ ರಂಗಭೂಮಿ ಹಾಗೂ ಬೆಳ್ಳಿತೆರೆಯಲ್ಲಿ ತಮ್ಮ ವಿಶಿಷ್ಟ ಅಭಿನಯ, ಕಂಠಸಿರಿ ಮತ್ತು ವಿಭಿನ್ನ ಪಾತ್ರಗಳ ಮೂಲಕ ಮನೆಮಾತಾಗಿರುವ ಹಿರಿಯ ನಟ ಡಾ. ಮುಖ್ಯಮಂತ್ರಿ ಚಂದ್ರು ಅವರು 2026-27ನೇ ಸಾಲಿನ ಪ್ರತಿಷ್ಠಿತ 'ಜೀವಮಾನ ಸಾಧನೆ ಗೌರವ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ.

ವಿಶೇಷತೆ: ಪ್ರಸಿದ್ಧ 'ಮುಖ್ಯಮಂತ್ರಿ' ನಾಟಕದ ಮೂಲಕ ಜನಪ್ರಿಯರಾದ ಇವರು, ರಂಗಭೂಮಿ ಮತ್ತು ಚಿತ್ರರಂಗದಲ್ಲಿ 500ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಪೋಷಕ ಹಾಗೂ ಖಳನಟನಾಗಿ ಅಪಾರ ಕೊಡುಗೆ ನೀಡಿದ್ದಾರೆ.

**➤ ವಾರ್ಷಿಕ ಪ್ರಶಸ್ತಿ ಪುರಸ್ಕೃತರ ಪಟ್ಟಿ (25 ರಂಗಕರ್ಮಿಗಳು):**

ವಿಶ್ವೇಶ್ವರಿ ಬಸವಲಿಂಗಯ್ಯ ಹಿರೇಮಠ - ಧಾರವಾಡ ರಮೇಶ ತಿಪ್ಪಣ್ಣ ಚಿತ್ರಗಾರ - ಇಳಕಲ್, ಬಾಗಲಕೋಟೆ ಶಿವಾನಂದ ತಗಡೂರು - ಬೆಂಗಳೂರು ಆರ್. ರಾಮಕೃಷ್ಣ (ಚನ್ನಯ್ಯ) - ದೇವನಹಳ್ಳಿ, ಬೆಂಗಳೂರು ಗ್ರಾಮಾಂತರ ಅನುಸೂಯ ರೇವಣಸಿದ್ದಯ್ಯ ಹೊಸೂರುಮಠ - ಲಕ್ಕುಂಡಿ ಅಯ್ಯಣ್ಣ ಸ್ವಾಮಿ ಹಿರೇಮಠ - ಕಲಬುರಗಿ ಫಜೀಯಮ್ಮ ಹೆಚ್.ಎಸ್. - ಸಾಗರ, ಶಿವಮೊಗ್ಗ ಮಲ್ಲಪ್ಪ ಭರಮಪ್ಪ ಕುರಿ - ಕೊಪ್ಪಳ ಕೆ.ಪಿ. ಸ್ವಾಮಿ - ಮಂಡ್ಯ ಸುಶೀಲಾ ಹೆಗಡೆ ಮೂಡೇರು - ಸಿದ್ದಾಪುರ, ಉತ್ತರ ಕನ್ನಡ ರಾಜಕುಮಾರ್ ಎಸ್. - ಬೆಂಗಳೂರು ನಗರ ಡಾ. ಎಂ. ಗಣೇಶ್ ಬೇಗೂರು - ಸಾಗರ, ಶಿವಮೊಗ್ಗ ಪ್ರದೀಪ್ ಚಂದ್ರ ಕುತ್ಪಾಡಿ - ಉಡುಪಿ ಎನ್.ಟಿ. ಕೃಷ್ಣಪ್ಪ - ಬೆಂಗಳೂರು ನಗರ ಪುರುಷೋತ್ತಮ ಹಂದ್ಯಾಳ್ - ಬಳ್ಳಾರಿ ಡಾ. ಎಸ್.ವಿ. ಸುಷ್ಮಾ - ಬೆಂಗಳೂರು ನಗರ ನಂದಾ ಹಳೆಮನೆ - ಮೈಸೂರು ಶ್ರೀನಿವಾಸ್ - ರಾಮನಗರ ವೈ.ಎನ್. ಉಮಾ - ಯಲಹಂಕ, ಬೆಂಗಳೂರು ನಗರ ಗದಿಗೆಯ್ಯ ಬಿ. ಹಿರೇಮಠ - ಬೈಲಹೊಂಗಲ, ಬೆಳಗಾವಿ ಜಿ. ಭಾರತಿ - ಕೂಡ್ಲಿಗಿ, ವಿಜಯನಗರ ಬಿ. ಸಾವಿತ್ರಮ್ಮ - ದಾವಣಗೆರೆ ಎಂ.ಸಿ. ಶಿವರುದ್ರಪ್ಪ - ತುಮಕೂರು ವೇಣುಗೋಪಾಲ್ ಕೆ. - ಬೆಂಗಳೂರು ನಗರ ಎನ್.ಎಂ. ಲಕ್ಷ್ಮಯ್ಯ - ಮಾಲೂರು, ಕೋಲಾರ

**➤ ದತ್ತಿನಿಧಿ ಪುರಸ್ಕಾರಗಳು (7 ಸಾಧಕರು):**

ಎಚ್.ವಿ. ವೆಂಕಟಸುಬ್ಬಯ್ಯ ದತ್ತಿ ಪುರಸ್ಕಾರ: ಬಿ.ಜಿ. ಶ್ರೀಧರ್ (ಬೆಂಗಳೂರು ನಗರ) ಬಿ.ಆರ್. ಅರಿಶಿಣಗೋಡಿ ದತ್ತಿ ಪುರಸ್ಕಾರ: ಅಶ್ಫಾಕ್ ಹುಸೇನ್ ಹಾ. ಜಾಗೀರದಾರ್ (ವಿಜಯಪುರ) ಕೆ. ರಾಮಚಂದ್ರಯ್ಯ ದತ್ತಿ ಪುರಸ್ಕಾರ: ಡಾ. ಎಂ. ಚಂದ್ರಪ್ಪ (ಟಿ. ನರಸೀಪುರ, ಮೈಸೂರು) ಮಾಲತಿಶ್ರೀ ಮೈಸೂರು ದತ್ತಿ ಪುರಸ್ಕಾರ: ದಯಾನಂದ ಚ. ಬೆಳಗಿ (ಗದಗ) ನಟರತ್ನ ಚಿಂದೋಡಿ ವೀರಪ್ಪನವರ ದತ್ತಿ ಪುರಸ್ಕಾರ: ಗಂಗಾಧರ ರೆಡ್ಡಿ ಬಿ.ಆರ್. (ಕುಣಿಗಲ್, ತುಮಕೂರು) ಪದ್ಮಶ್ರೀ ಚಿಂದೋಡಿ ಲೀಲಾ ದತ್ತಿ ಪುರಸ್ಕಾರ: ವೈ.ಎನ್. ಶಿವಣ್ಣ (ತುಮಕೂರು) ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ ದತ್ತಿ ಪುರಸ್ಕಾರ: ಚಂದ್ರಮ್ಮ (ಸಾಣೇಹಳ್ಳಿ, ಚಿತ್ರದುರ್ಗ)

## 16ರ ಹರೆಯದಲ್ಲೇ 'ವಿಶ್ವದ ಅತ್ಯಂತ ಕಿರಿಯ ಸಿಎ': ಗಿನ್ನೆಸ್ ವಿಶ್ವದಾಖಲೆ ಬರೆದ ಭಾರತೀಯ ಮೂಲದ ಲಕ್ಷ್ಮಣನ್ ಮೇಯಪ್ಪನ್!



➤ ಸಾಧನೆಗೆ ವಯಸ್ಸಿನ ಮಿತಿಯಿಲ್ಲ ಎಂಬುದನ್ನು ಭಾರತೀಯ ಮೂಲದ ಯುವಕ ಲಕ್ಷ್ಮಣನ್ ಮೇಯಪ್ಪನ್ (Lakshmanan Meyyappan) ಮತ್ತೊಮ್ಮೆ ಜಗತ್ತಿಗೆ ಸಾಬೀತುಪಡಿಸಿದ್ದಾರೆ. ಕೇವಲ 16 ವರ್ಷ ಹಾಗೂ 141 ದಿನಗಳ ವಯಸ್ಸಿನಲ್ಲಿಯೇ ವೃತ್ತಿಪರ ಲೆಕ್ಕ ಪರಿಶೋಧಕ (Chartered Accountant - ACCA) ಕೋರ್ಸ್ ಪೂರ್ಣಗೊಳಿಸುವ ಮೂಲಕ "ವಿಶ್ವದ ಅತ್ಯಂತ ಕಿರಿಯ ಪುರುಷ ಚಾರ್ಟರ್ಡ್ ಅಕೌಂಟೆಂಟ್" ಎಂಬ ಹೆಗ್ಗಳಿಕೆಗೆ ಪಾತ್ರರಾಗಿ ಗಿನ್ನೆಸ್ ವಿಶ್ವದಾಖಲೆ (Guinness World Record) ಬರೆದಿದ್ದಾರೆ.

➤ ದುಬೈನಲ್ಲಿ ನೆಲೆಸಿರುವ ಲಕ್ಷ್ಮಣನ್ ಅವರ ಹಣಕಾಸು ಕ್ಷೇತ್ರದ ಪ್ರಯಾಣ ಆರಂಭವಾಗಿದ್ದು ಕೋವಿಡ್-19 ಲಾಕ್‌ಡೌನ್ ಅವಧಿಯಲ್ಲಿ. 10ನೇ ತರಗತಿ ಪರೀಕ್ಷೆ ಬರೆಯುವ ಸಮಯದಲ್ಲಿ, "ಪರೀಕ್ಷೆ ತೇರ್ಗಡೆಯಾಗುತ್ತೇನೋ ಇಲ್ಲವೋ" ಎಂಬ ಭಯ ಕಾಡುತ್ತಿತ್ತು ಎಂದು ಅವರು ನೆನಪಿಸಿಕೊಳ್ಳುತ್ತಾರೆ.

ಆದರೆ ಲಾಕ್‌ಡೌನ್ ಸಮಯದಲ್ಲಿ ಸಿಕ್ಕ ಬಿಡುವಿನ ವೇಳೆಯನ್ನು ಸದುಪಯೋಗಪಡಿಸಿಕೊಳ್ಳಲು ನಿರ್ಧರಿಸಿ, 15ನೇ ವಯಸ್ಸಿನಲ್ಲಿ ACCA (Association of Chartered Certified Accountants) ಕೋರ್ಸ್‌ಗೆ ತಯಾರಿ ಆರಂಭಿಸಿದರು. ಸ್ವತಃ ಚಾರ್ಟರ್ಡ್ ಅಕೌಂಟೆಂಟ್ ಆಗಿರುವ ಅವರ ತಾಯಿಯ ಮಾರ್ಗದರ್ಶನ ಹಾಗೂ ನಿರಂತರ ಅಭ್ಯಾಸದಿಂದಾಗಿ ಕೇವಲ ಒಂದೇ ವರ್ಷದಲ್ಲಿ ಈ ಕಠಿಣ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರು.

"ಸಾಧನೆಗೆ ವೇಗಕ್ಕಿಂತ ಕಲಿಯುವ ಆಸಕ್ತಿ ಮತ್ತು ಶಿಸ್ತು ಮುಖ್ಯ. 10ನೇ ತರಗತಿಯಲ್ಲಿ ಭಯಪಡುತ್ತಿದ್ದ ನಾನು ಇಂದು ACCA ಮತ್ತು CFA ಎರಡನ್ನೂ ಪೂರ್ಣಗೊಳಿಸಿರುವುದಕ್ಕೆ ಅನಂತ ಸಂತೋಷವಿದೆ. ಶ್ರಮ ಹಾಗೂ ಸತತ ಅಧ್ಯಯನವಿದ್ದರೆ ಯಾವುದೇ ಗುರಿಯನ್ನು ತಲುಪಬಹುದು."— ಲಕ್ಷ್ಮಣನ್ ಮೇಯಪ್ಪನ್

➤ ಕೇವಲ ಸಿಎ ಮಾತ್ರವಲ್ಲ, CFA ಚಾರ್ಟರ್ ಕೂಡ ಭೇದಿಸಿದ ಪ್ರತಿಭಾವಂತ: ಸಿಎ (ACCA) ಪೂರ್ಣಗೊಳಿಸಿದ ನಂತರವೂ ತಮ್ಮ ಶೈಕ್ಷಣಿಕ ಓದನ್ನು ನಿಲ್ಲಿಸದ ಲಕ್ಷ್ಮಣನ್, ಹಣಕಾಸು ಕ್ಷೇತ್ರದ ಮತ್ತೊಂದು ಅತ್ಯುನ್ನತ ಪದವಿಯಾದ CFA (Chartered Financial Analyst) ಚಾರ್ಟರ್ ಅನ್ನು ಸಹ ಪಡೆದುಕೊಂಡಿದ್ದಾರೆ. ಪ್ರಸ್ತುತ ಅವರು:

ದುಬೈನ ಪ್ರತಿಷ್ಠಿತ 'ಸೆಂಚುರಿ ಫೈನಾನ್ಸಿಯಲ್' (Century Financial) ಸಂಸ್ಥೆಯಲ್ಲಿ ಹಿರಿಯ ಸಂಶೋಧನಾ ವಿಶ್ಲೇಷಕರಾಗಿ (Senior Research Analyst) ಸೇವೆ ಸಲ್ಲಿಸುತ್ತಿದ್ದಾರೆ.

ಶಾರ್ಜಾದ ಅಮೆರಿಕನ್ ವಿಶ್ವವಿದ್ಯಾಲಯದಲ್ಲಿ (American University of Sharjah) ಹಣಕಾಸು ವಿಷಯದಲ್ಲಿ ಸ್ನಾತಕೋತ್ತರ ಪದವಿ (M.Sc in Finance) ಅಧ್ಯಯನ ಮಾಡುತ್ತಿದ್ದಾರೆ.

## ಭಾರತದ ಮೊದಲ ಬೃಹತ್ ಬಯೋ-ಪಾಲಿಮರ್ ಪ್ಲಾಂಟ್



➤ ಉತ್ತರ ಪ್ರದೇಶದ ಲಖಿಂಪುರ್ ಖೇರಿಯ ಗೋಲಾ ಗೋಕರ್ಣನಾಥ್‌ನಲ್ಲಿ ಬಲರಾಮ್‌ಪುರ್ ಚೀನಿ ಮಿಲ್ಸ್ ವತಿಯಿಂದ ₹3,080 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ, ಕಬ್ಬಿನಿಂದ ಪರಿಸರ ಸ್ನೇಹಿ 'ಪೋಲಿಲ್ಯಾಕ್ಟಿಕ್ ಆಸಿಡ್ (PLA)' ಉತ್ಪಾದಿಸುವ ಭಾರತದ ಮೊದಲ ಬೃಹತ್ ಬಯೋ-ಪಾಲಿಮರ್ ಪ್ಲಾಂಟ್ 2026ರ ಅಕ್ಟೋಬರ್‌ನಲ್ಲಿ ಲೋಕಾರ್ಪಣೆಗೊಳ್ಳಲಿದೆ.

➤ **ಬಯೋ-ಪಾಲಿಮರ್:** ಸಸ್ಯಗಳ ತ್ಯಾಜ್ಯ, ಜೋಳದ ಪಿಷ್ಟ ಅಥವಾ ಕಬ್ಬಿನಂತಹ ನವೀಕರಿಸಬಹುದಾದ ಜೈವಿಕ ಮೂಲಗಳಿಂದ (Renewable Biological Feedstock) ತಯಾರಿಸಲಾಗುವ ಪಾಲಿಮರ್‌ಗಳನ್ನು ಬಯೋ-ಪಾಲಿಮರ್‌ಗಳು ಎನ್ನಲಾಗುತ್ತದೆ. ಇವು ಸಾಂಪ್ರದಾಯಿಕ ಪೆಟ್ರೋಕೆಮಿಕಲ್ ಪ್ಲಾಸ್ಟಿಕ್‌ಗೆ ಉತ್ತಮ ಪರ್ಯಾಯವಾಗಿವೆ.

➤ **ಪೋಲಿಲ್ಯಾಕ್ಟಿಕ್ ಆಸಿಡ್ (PLA):**

ಕಬ್ಬು ಅಥವಾ ಜೋಳದ ಸಕ್ಕರೆಯನ್ನು ಹುದುಗಿಸುವಿಕೆಗೆ (Fermentation) ಒಳಪಡಿಸಿ 'ಲ್ಯಾಕ್ಟಿಕ್ ಆಸಿಡ್' ಉತ್ಪಾದಿಸಲಾಗುತ್ತದೆ. ನಂತರ ಅದನ್ನು Polylactic Acid (PLA) ಎಂಬ ಜೈವಿಕವಾಗಿ ವಿಘಟನೀಯ (Biodegradable) ಥರ್ಮೋಪ್ಲಾಸ್ಟಿಕ್ ಆಗಿ ಪರಿವರ್ತಿಸಲಾಗುತ್ತದೆ.

ಈ ಪ್ಲಾಂಟ್‌ನಲ್ಲಿ ಕಬ್ಬಿನಿಂದ ನೇರವಾಗಿ ಬಯೋ-ಪ್ಲಾಸ್ಟಿಕ್ ಉತ್ಪನ್ನಗಳನ್ನು ತಯಾರಿಸಲಾಗುತ್ತದೆ.

ವಿಶೇಷತೆ: ಇದರಿಂದ ತಯಾರಾಗುವ ಪ್ಲೇಟ್‌ಗಳು, ಕಪ್‌ಗಳು ಹಾಗೂ ಕ್ಯಾರಿ ಬ್ಯಾಗ್‌ಗಳು ಬಳಕೆಯ ನಂತರ ಪರಿಸರದಲ್ಲಿ 3 ರಿಂದ 6 ತಿಂಗಳ ಅವಧಿಯಲ್ಲಿ ನೈಸರ್ಗಿಕವಾಗಿ ಕರಗಿ ವಿಘಟನೆಯಾಗುತ್ತವೆ (Compostable).

➤ **ಪ್ರಮುಖ ತಾಂತ್ರಿಕ ಹಾಗೂ ಪರಿಸರ ವೈಶಿಷ್ಟ್ಯಗಳು:**

zero Liquid Discharge (ZLD) ತಂತ್ರಜ್ಞಾನ: ಈ ಕೈಗಾರಿಕಾ ಆವರಣದಲ್ಲಿ ಝೀರೋ ಲಿಕ್ವಿಡ್ ಡಿಸ್ಚಾರ್ಜ್ (ZLD) ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಇದರ ಪ್ರಕಾರ, ಕಾರ್ಖಾನೆಯಿಂದ ಯಾವುದೇ ದ್ರವ ತ್ಯಾಜ್ಯವು ಹೊರಗಿನ ಜಲಮೂಲಗಳಿಗೆ ಅಥವಾ ಪರಿಸರಕ್ಕೆ ಹರಿಯುವುದಿಲ್ಲ. ತ್ಯಾಜ್ಯನೀರನ್ನು ಸಂಪೂರ್ಣವಾಗಿ ಸಂಸ್ಕರಿಸಿ ಮರುಬಳಕೆ ಮಾಡಲಾಗುತ್ತದೆ.

ಕೃಷಿ ಆಧಾರಿತ ಶಕ್ತಿಯುತ ಆರ್ಥಿಕತೆ: ಉತ್ತರ ಪ್ರದೇಶವು ಭಾರತದಲ್ಲಿ ಅತಿ ಹೆಚ್ಚು ಕಬ್ಬು ಉತ್ಪಾದಿಸುವ ರಾಜ್ಯವಾಗಿದೆ. ಸಕ್ಕರೆ ಮತ್ತು ಎಥನಾಲ್ ಉತ್ಪಾದನೆಯ ಜೊತೆಗೆ ಕಬ್ಬಿನಿಂದ ಜೈವಿಕ ಪ್ಲಾಸ್ಟಿಕ್ ತಯಾರಿಸುವುದರಿಂದ ರೈತರ ಆದಾಯ ಹೆಚ್ಚುವುದಲ್ಲದೆ, ಕೃಷಿ ಆಧಾರಿತ ಬಯೋ-ಆರ್ಥಿಕತೆಗೆ (Bio-economy) ಬೆಂಬಲ ಸಿಗುತ್ತದೆ.

## ಭಾರತೀಯ ಪ್ರಾದೇಶಿಕ ಸೇನೆಯಿಂದ 'ಟೆರಿಯರ್ ಸೈಬರ್ ಕ್ವೆಸ್ಟ್ 2026' (TCQ 3.0) ಚಾಲನೆ



➤ ದೇಶದ ಡಿಜಿಟಲ್ ಭದ್ರತೆಯನ್ನು ಬಲಪಡಿಸುವ ಮತ್ತು ದೇಶೀಯ ಸೈಬರ್ ರಕ್ಷಣಾ ವ್ಯವಸ್ಥೆಯನ್ನು ಉತ್ತೇಜಿಸುವ ಉದ್ದೇಶದಿಂದ ಭಾರತೀಯ ಪ್ರಾದೇಶಿಕ ಸೇನೆಯು (Territorial Army) 'ಸೈಬರ್‌ಪೀಸ್' (CyberPeace) ಸಂಸ್ಥೆಯ ಸಹಯೋಗದೊಂದಿಗೆ 'ಟೆರಿಯರ್ ಸೈಬರ್ ಕ್ವೆಸ್ಟ್ 2026' (Terrier Cyber Quest 2026 - TCQ 3.0) ಎಂಬ ರಾಷ್ಟ್ರೀಯ ಮಟ್ಟದ ಸೈಬರ್ ಹ್ಯಾಕಥಾನ್ ಅನ್ನು ಆಯೋಜಿಸಿದೆ.

➤ **TCQ 3.0 ನ ಪ್ರಮುಖ ಮೂರು ವಿಭಾಗಗಳು:** ಈ ಸೈಬರ್ ಹ್ಯಾಕಥಾನ್‌ನಲ್ಲಿ ವಿದ್ಯಾರ್ಥಿಗಳು, ಸಂಶೋಧಕರು, ಸ್ಟಾರ್ಟ್‌ಅಪ್‌ಗಳು ಮತ್ತು ಡಿಜಿಟಲ್ ಕಂಟೆಂಟ್ ಕ್ರಿಯೇಟರ್‌ಗಳಿಗಾಗಿ 3 ಪ್ರಮುಖ ವಿಭಾಗಗಳನ್ನು ರೂಪಿಸಲಾಗಿದೆ:

**ಬಗ್ ಹಂಟಿಂಗ್ (Bug Hunting / Capture-the-Flag):** ಇದರಲ್ಲಿ ಆನ್‌ಲೈನ್ 'ಕ್ಯಾಪ್ಚರ್-ದಿ-ಫ್ಲ್ಯಾಗ್' (CTF) ಅರ್ಹತಾ ಸುತ್ತು ಮತ್ತು 36 ಗಂಟೆಗಳ ಲೈವ್ ಸ್ಯಾಂಡ್‌ಬಾಕ್ಸ್ ಫಿನಾಲೆ ಇರುತ್ತದೆ. ಸಂಭಾವ್ಯ ಸೈಬರ್ ದಾಳಿಗಳಿಂದ ಪ್ರಮುಖ ಮೂಲಸೌಕರ್ಯಗಳನ್ನು ರಕ್ಷಿಸಲು ಭದ್ರತಾ ಲೋಪಗಳನ್ನು (Vulnerabilities) ಗುರುತಿಸುವುದು ಇದರ ಉದ್ದೇಶವಾಗಿದೆ.

**ಎಐ ಕವಚ (AI Kavach):** ಕೃತಕ ಬುದ್ಧಿಮತ್ತೆ (AI) ಮತ್ತು ಮೆಷಿನ್ ಲರ್ನಿಂಗ್ (ML) ಆಧಾರಿತ ಸೈಬರ್ ರಕ್ಷಣಾ ಪರಿಹಾರಗಳನ್ನು ಅಭಿವೃದ್ಧಿಪಡಿಸುವುದು. ಸ್ವಯಂಚಾಲಿತ ಬೆದರಿಕೆ ಪತ್ತೆ ಮತ್ತು ಸೈಬರ್ ದಾಳಿಗಳ ಮುನ್ಸೂಚನೆ ನೀಡುವ ವ್ಯವಸ್ಥೆ ರೂಪಿಸುವುದು.

ರಾಷ್ಟ್ರೀಯ ಕ್ರಿಯೇಟರ್ಸ್ ಸವಾಲು (National Creators Challenge): ಡಿಜಿಟಲ್ ಜಗತ್ತಿನಲ್ಲಿ ಹೆಚ್ಚುತ್ತಿರುವ ಡೀಪ್‌ಫೇಕ್ (Deepfake), ಫಿಶಿಂಗ್ (Phishing) ಮತ್ತು ಸುಳ್ಳು ಮಾಹಿತಿಗಳ (Misinformation) ವಿರುದ್ಧ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಕಂಟೆಂಟ್ ಕ್ರಿಯೇಟರ್‌ಗಳಿಗೆ ವೇದಿಕೆ.

➤ **ಪ್ರಮುಖ ದಿನಾಂಕಗಳು:**

ಅರ್ಜಿ ಸಲ್ಲಿಕೆ ಪ್ರಾರಂಭ: 30 ಜುಲೈ 2026

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31 ಆಗಸ್ಟ್ 2026

ಆನ್‌ಲೈನ್ ಶಾರ್ಟ್‌ಲಿಸ್ಟಿಂಗ್ ಹಂತ: 1 ಸೆಪ್ಟೆಂಬರ್ - 10 ಸೆಪ್ಟೆಂಬರ್ 2026

ಗ್ರ್ಯಾಂಡ್ ಫಿನಾಲೆ (ನವದೆಹಲಿ): 6 ಅಕ್ಟೋಬರ್ - 8 ಅಕ್ಟೋಬರ್ 2026

ಸಮಾರೋಪ ಸಮಾರಂಭ: 9 ಅಕ್ಟೋಬರ್ 2026

# 22 Aug 2026

## ಲಡಾಖ್‌ನಲ್ಲಿ ಜಮ್ಮು ಮತ್ತು ಕಾಶ್ಮೀರ ಹೈಕೋರ್ಟ್‌ನ ನೂತನ ಪೀಠಕ್ಕೆ ಕೇಂದ್ರ ಸಚಿವ ಸಂಪುಟ ಅನುಮೋದನೆ



➤ ಕೇಂದ್ರ ಸಚಿವ ಸಂಪುಟವು ಲಡಾಖ್ ಕೇಂದ್ರಾಡಳಿತ ಪ್ರದೇಶದಲ್ಲಿ ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ ಉಚ್ಚ ನ್ಯಾಯಾಲಯದ (High Court of Jammu & Kashmir and

Ladakh) ಖಾಯಂ ಪೀಠವನ್ನು (Bench) ಸ್ಥಾಪಿಸಲು ಐತಿಹಾಸಿಕ ಅನುಮೋದನೆ ನೀಡಿದೆ.

**➤ ಪ್ರಮುಖ ಮುಖ್ಯಾಂಶಗಳು:**

ಕೇಂದ್ರದ ನಿರ್ಧಾರ: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ.

ಅಧಿಕೃತ ಪ್ರಕಟಣೆ: ಈ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಾಹಿತಿ ಹಂಚಿಕೊಂಡಿದ್ದು, "ಲಡಾಖ್‌ನ ದೂರದ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಸುಲಭವಾಗಿ ಮತ್ತು ಶೀಘ್ರವಾಗಿ ನ್ಯಾಯ ಸಿಗುವಂತೆ ಮಾಡಲು ಈ ಕ್ರಮ ಕೈಗೊಳ್ಳಲಾಗಿದೆ" ಎಂದು ತಿಳಿಸಿದ್ದಾರೆ.

3ನೇ ಪೀಠ (Third Bench): ಜಮ್ಮು ಮತ್ತು ಕಾಶ್ಮೀರ ಹೈಕೋರ್ಟ್‌ಗೆ ಲಡಾಖ್‌ನಲ್ಲಿ ಸ್ಥಾಪನೆಯಾಗಲಿರುವುದು ಮೂರನೇ ಪೀಠವಾಗಿದೆ.

**➤ ಈ ನಿರ್ಧಾರದ ಹಿನ್ನೆಲೆ ಮತ್ತು ಅಗತ್ಯತೆ:**

ಭೌಗೋಳಿಕ ಸವಾಲುಗಳು: ಲಡಾಖ್ ಪ್ರದೇಶವು ಹಿಮಾಲಯದ ದುರ್ಗಮ ಬೆಟ್ಟ-ಗುಡ್ಡಗಳು ಹಾಗೂ ಕಠಿಣ ಹವಾಮಾನದಿಂದ ಕೂಡಿದೆ.

**ಪ್ರಸ್ತುತ ವ್ಯವಸ್ಥೆ:** ಇಲ್ಲಿಯವರೆಗೆ ಲಡಾಖ್‌ನ ಕಕ್ಷಿದಾರರು (Litigants) ಹಾಗೂ ವಕೀಲರು ತಮ್ಮ ಹೈಕೋರ್ಟ್ ಪ್ರಕರಣಗಳ ವಿಚಾರಣೆಗೆ ಶ್ರೀನಗರ (Srinagar) ಅಥವಾ ಜಮ್ಮು (Jammu) ನಲ್ಲಿರುವ ಪ್ರಧಾನ ಪೀಠಗಳಿಗೆ (Principal Seats) ಬಹುದೂರ ಪ್ರಯಾಣಿಸಬೇಕಾಗಿತ್ತು.

ಸಮಯ ಮತ್ತು ವೆಚ್ಚದ ಕಡಿತ: ನೂತನ ಪೀಠದ ಸ್ಥಾಪನೆಯಿಂದ ಕಕ್ಷಿದಾರರ ಪ್ರಯಾಣದ ವೆಚ್ಚ, ಸಮಯ ಉಳಿತಾಯವಾಗಲಿದ್ದು, 'ನ್ಯಾಯದ ಹಕ್ಕು' (Access to Justice) ಸುಲಭವಾಗಿ ದೊರೆಯಲಿದೆ.

**➤ ಭಾರತೀಯ ಸಂವಿಧಾನ ಮತ್ತು ಹೈಕೋರ್ಟ್:**

ಸಂವಿಧಾನದ ಭಾಗ VI (Part VI): ಉಚ್ಚ ನ್ಯಾಯಾಲಯಗಳಿಗೆ ಸಂಬಂಧಿಸಿದೆ.

ವಿಧಿ 214 (Article 214): ಪ್ರತಿಯೊಂದು ರಾಜ್ಯಕ್ಕೂ ಒಂದು ಉಚ್ಚ ನ್ಯಾಯಾಲಯವಿರತಕ್ಕದ್ದು.

ವಿಧಿ 231 (Article 231): ಸಂಸತ್ತು ಕಾನೂನಿನ ಮೂಲಕ ಎರಡು ಅಥವಾ ಅದಕ್ಕಿಂತ ಹೆಚ್ಚು ರಾಜ್ಯಗಳಿಗೆ/ಕೇಂದ್ರಾಡಳಿತ ಪ್ರದೇಶಗಳಿಗೆ ಜಂಟಿ ಉಚ್ಚ ನ್ಯಾಯಾಲಯವನ್ನು (Common High Court) ಸ್ಥಾಪಿಸುವ ಅಧಿಕಾರ ಹೊಂದಿದೆ.

ವಿಧಿ 241 (Article 241): ಕೇಂದ್ರಾಡಳಿತ ಪ್ರದೇಶಗಳಿಗಾಗಿ ಉಚ್ಚ ನ್ಯಾಯಾಲಯಗಳನ್ನು ಸ್ಥಾಪಿಸುವ ಅಥವಾ ಅಸ್ತಿತ್ವದಲ್ಲಿರುವ ಉಚ್ಚ ನ್ಯಾಯಾಲಯದ ವ್ಯಾಪ್ತಿಗೆ ಒಳಪಡಿಸುವ ಸಂಸತ್ತಿನ ಅಧಿಕಾರ.

## ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು: ಕಿರಿಯ ನ್ಯಾಯಾಧೀಶರ ಪರೀಕ್ಷೆಗೆ ವಕೀಲರ ಅನುಭವದ ಅವಧಿ 1 ವರ್ಷಕ್ಕೆ ಕಡಿತ!



➤ ನ್ಯಾಯಾಂಗ ಸೇವಾ ಪರೀಕ್ಷೆಗಳಿಗೆ (Judicial Service Examinations) ತಯಾರಿ ನಡೆಸುತ್ತಿರುವ ಕಾನೂನು ಪದವೀಧರರಿಗೆ ಭಾರತದ ಸರ್ವೋಚ್ಚ ನ್ಯಾಯಾಲಯ (Supreme Court) ಸಿಹಿ ಸುದ್ದಿ ನೀಡಿದೆ. ಸಿವಿಲ್ ಜಡ್ಜ್ (ಜೂನಿಯರ್ ಡಿವಿಷನ್) ಪ್ರವೇಶ ಮಟ್ಟದ ಹುದ್ದೆಗಳ ಪರೀಕ್ಷೆಗೆ ಹಾಜರಾಗಲು ಇದ್ದ ಕಡ್ಡಾಯ 3 ವರ್ಷಗಳ ವಕೀಲ ವೃತ್ತಿ ಅನುಭವವನ್ನು (Law Practice Requirement) ಈಗ 1 ವರ್ಷಕ್ಕೆ ಕಡಿತಗೊಳಿಸಿ ಸುಪ್ರೀಂ ಕೋರ್ಟ್ ಚಾರಿತ್ರಿಕ ತೀರ್ಪು ನೀಡಿದೆ. ಈ ಮಹತ್ವದ ನಿರ್ಧಾರವು ಲಕ್ಷಾಂತರ ಕಾನೂನು ವಿದ್ಯಾರ್ಥಿಗಳಿಗೆ ಮತ್ತು ಕಿರಿಯ ವಕೀಲರಿಗೆ ಸಿವಿಲ್ ನ್ಯಾಯಾಧೀಶರಾಗುವ ಕನಸನ್ನು ಶೀಘ್ರವಾಗಿ ನನಸಾಗಿಸಿಕೊಳ್ಳಲು ಹಾದಿ ಸುಗಮಗೊಳಿಸಿದೆ.

**➤ ತೀರ್ಪಿನ ಪ್ರಮುಖ ಮುಖ್ಯಾಂಶಗಳು:**

ಅನುಭವ ಕಡಿತ: ಎಂಟ್ರಿ ಲೆವೆಲ್ ಸಿವಿಲ್ ಜಡ್ಜ್ ಹುದ್ದೆಗೆ ಅರ್ಜಿ ಸಲ್ಲಿಸಲು ಅಗತ್ಯವಿದ್ದ 3 ವರ್ಷಗಳ ಸಕ್ರಿಯ ವಕೀಲ ವೃತ್ತಿಯ ಅನುಭವವನ್ನು 1 ವರ್ಷಕ್ಕೆ ಇಳಿಸಲಾಗಿದೆ.

2:1 ಬಹುಮತದ ತೀರ್ಪು: ಭಾರತದ ಮುಖ್ಯ ನ್ಯಾಯಮೂರ್ತಿ (CJI) ಸೂರ್ಯ ಕಾಂತ್ ಹಾಗೂ ನ್ಯಾಯಮೂರ್ತಿ ಎ.ಜಿ. ಮಸಿಹ್ ಅವರನ್ನೊಳಗೊಂಡ ಪೀಠವು ಈ ಬಹುಮತದ ತೀರ್ಪು ನೀಡಿದೆ. ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರು ಭಿನ್ನ ಅಭಿಪ್ರಾಯ (Dissenting View) ವ್ಯಕ್ತಪಡಿಸಿದ್ದಾರೆ.

2 ವರ್ಷಗಳ ಕಡ್ಡಾಯ ತರಬೇತಿ: ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ರಾಜ್ಯದ 'ನ್ಯಾಯಾಂಗ ಅಕಾಡೆಮಿ'ಯಲ್ಲಿ (State Judicial Academy) 1 ವರ್ಷದ ತೀವ್ರ ತರಬೇತಿ ಹಾಗೂ ಜಿಲ್ಲಾ ನ್ಯಾಯಾಧೀಶರು ಮತ್ತು ಹೈಕೋರ್ಟ್ ನ್ಯಾಯಮೂರ್ತಿಗಳ ಅಡಿಯಲ್ಲಿ 1 ವರ್ಷದ ಕ್ಲರ್ಕ್‌ಶಿಪ್ (Law Clerkship) ಪೂರ್ಣಗೊಳಿಸಬೇಕಾಗುತ್ತದೆ.

ಮಾರ್ಚ್ 31, 2027 ರವರೆಗೆ ತಾತ್ಕಾಲಿಕ ವಿನಾಯಿತಿ (Transitional Relaxation): ಮೇ 20, 2025 ರಿಂದ ಮಾರ್ಚ್ 31, 2027 ರ ನಡುವೆ ನ್ಯಾಯಾಂಗ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಅಭ್ಯಾಸ ಪ್ರಮಾಣಪತ್ರ (Practice Certificate) ಸಲ್ಲಿಸುವುದರಿಂದ ವಿನಾಯಿತಿ ನೀಡಲಾಗಿದೆ.

ಏಪ್ರಿಲ್ 1, 2027 ರಿಂದ ಹೊಸ ನಿಯಮ ಜಾರಿ: ಏಪ್ರಿಲ್ 1, 2027 ರ ನಂತರ ಹೊರಬೀಳುವ ಅಧಿಸೂಚನೆಗಳಿಗೆ 1 ವರ್ಷದ ಸಕ್ರಿಯ ವಕೀಲ ವೃತ್ತಿಯ ಅನುಭವದ 'ದಾಖಲೆ ಪ್ರಮಾಣಪತ್ರ' (Certificate of Proof of Practice) ಕಡ್ಡಾಯವಾಗಿರುತ್ತದೆ.

**➤ ಹೊಸ ತರಬೇತಿ ಮಾದರಿ:**

ವರ್ಷ 1: ಸಂಬಂಧಪಟ್ಟ ರಾಜ್ಯ ನ್ಯಾಯಾಂಗ ಅಕಾಡೆಮಿಯಲ್ಲಿ (State Judicial Academy) ಸಿದ್ಧಾಂತ ಮತ್ತು ಪ್ರಾಯೋಗಿಕ ತರಬೇತಿ.

ವರ್ಷ 2 (ಮೊದಲ 6 ತಿಂಗಳು): ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ (District and Sessions Judge) ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಣೆ.

ವರ್ಷ 2 (ಉಳಿದ 6 ತಿಂಗಳು): ರಾಜ್ಯದ ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಗಳ ಬಳಿ 'ಲಾ ಕ್ಲರ್ಕ್‌ಶಿಪ್' (Law Clerkship).

## ಡಿಜಿಟಲ್ ಅರೆಸ್ಟ್ ಹಗರಣ ತಡೆಗೆ DoT ಹೊಸ ಅಸ್ತ್ರ: ಒಬ್ಬರಿಗೆ 9 SIM ಗರಿಷ್ಠ ಮಿತಿ – ನಿಯಮ ಉಲ್ಲಂಘಿಸಿದರೆ ಸಂಪರ್ಕ ಕಟ್!




➤ ದೇಶದಲ್ಲಿ ಹೆಚ್ಚುತ್ತಿರುವ 'ಡಿಜಿಟಲ್ ಅರೆಸ್ಟ್' (Digital Arrest) ಮತ್ತು ಸೈಬರ್ ವಂಚನೆ ಪ್ರಕರಣಗಳಿಗೆ ಕಡಿವಾಣ ಹಾಕಲು ಕೇಂದ್ರ ದೂರಸಂಪರ್ಕ ಇಲಾಖೆ (DoT - Department of Telecommunications) ಅತ್ಯಂತ ಮಹತ್ವದ ನಿರ್ಧಾರ ಕೈಗೊಂಡಿದೆ. ಒಬ್ಬ ವ್ಯಕ್ತಿಯ ಹೆಸರಿನಲ್ಲಿ ಹೊಂದಬಹುದಾದ ಗರಿಷ್ಠ SIM ಕಾರ್ಡ್‌ಗಳ ಮಿತಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು 'ಸಬ್‌ಸ್ಕ್ರೈಬರ್ ಫೋಟೋ ಪರಿಶೀಲನೆ' (Subscriber Photo Check) ತಂತ್ರಜ್ಞಾನವನ್ನು ಬಳಸಲು ಟೆಲಿಕಾಂ ಕಂಪನಿಗಳಿಗೆ (BSNL, Jio, Airtel, Vi) ಸೂಚನೆ ನೀಡಿದೆ.

**➤ ದೂರಸಂಪರ್ಕ ಇಲಾಖೆಯ (DoT) ಹೊಸ ಮಾರ್ಗಸೂಚಿಗಳು:**

ಗರಿಷ್ಠ SIM ಮಿತಿ: ಭಾರತದಲ್ಲಿ ಒಬ್ಬ ಸಬ್‌ಸ್ಕ್ರೈಬರ್ ತನ್ನ ಹೆಸರಿನಲ್ಲಿ ಗರಿಷ್ಠ 9 SIM ಕಾರ್ಡ್‌ಗಳನ್ನು (ಎಲ್ಲಾ ಟೆಲಿಕಾಂ ಕಂಪನಿಗಳು ಸೇರಿ) ಮಾತ್ರ ಹೊಂದಬಹುದು.

ವಿಶೇಷ ಪ್ರದೇಶಗಳಲ್ಲಿ ಮಿತಿ: ಜಮ್ಮು ಮತ್ತು ಕಾಶ್ಮೀರ, ಅಸ್ಸಾಂ ಹಾಗೂ ಈಶಾನ್ಯ ರಾಜ್ಯಗಳಲ್ಲಿ (North-East States) ಈ ಮಿತಿ 6 SIM ಕಾರ್ಡ್‌ಗಳಿಗೆ ಸೀಮಿತವಾಗಿದೆ.

ಡಿಜಿಟಲ್ ಇಂಟೆಲಿಜೆನ್ಸ್ ಪ್ಲಾಟ್‌ಫಾರ್ಮ್ (DIP): ಗರಿಷ್ಠ ಮಿತಿ ತಲುಪಿದ ಚಂದಾದಾರರ ಭಾವಚಿತ್ರವನ್ನು DoT ಯ 'ಡಿಜಿಟಲ್ ಇಂಟೆಲಿಜೆನ್ಸ್ ಪ್ಲಾಟ್‌ಫಾರ್ಮ್'ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ.

ನೈಜ ಸಮಯದ ಪರಿಶೀಲನೆ (Real-Time Checking): ಟೆಲಿಕಾಂ ಸಂಸ್ಥೆಗಳು ಪ್ರತಿದಿನ ಈ ಡೇಟಾವನ್ನು ಡೌನ್‌ಲೋಡ್ ಮಾಡಿಕೊಂಡು, ಹೊಸ SIM ಖರೀದಿಸಲು ಬರುವ ಗ್ರಾಹಕರ ಫೋಟೋವನ್ನು ಪರಿಶೀಲಿಸಬೇಕು.

ಅಮಾನತು ಮತ್ತು ರದ್ದತಿ: ನಿಯಮ ಮೀರಿದ ಹೆಚ್ಚುವರಿ SIM ಸಕ್ರಿಯಗೊಂಡರೆ ತಕ್ಷಣವೇ ಅಮಾನತುಗೊಳಿಸಲಾಗುವುದು (Suspended). ಅಂತಿಮವಾಗಿ ಇತ್ತೀಚೆಗೆ ಖರೀದಿಸಿದ (ನಂತರ ಪಡೆದ) SIM ಸಂಖ್ಯೆಯನ್ನು ಮೊದಲು ರದ್ದುಗೊಳಿಸಲಾಗುತ್ತದೆ.

➤ ಡಿಜಿಟಲ್ ಅರೆಸ್ಟ್ ಸೈಬರ್ ವಂಚನೆ: ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧಿಗಳು CBI, ED ಅಥವಾ ಪೋಲೀಸ್ ಅಧಿಕಾರಿಗಳಂತೆ ನಟಿಸಿ, ವೀಡಿಯೊ ಕಾಲ್ ಮೂಲಕ ಜನರನ್ನು ಹೆದರಿಸಿ 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ಲಕ್ಷಾಂತರ ರೂಪಾಯಿ ದೋಚುತ್ತಿದ್ದಾರೆ. ಸುಪ್ರೀಂ ಕೋರ್ಟ್ ನಡೆಸುತ್ತಿರುವ ವಿಚಾರಣೆ ಮತ್ತು I4C (Indian Cyber Crime Coordination Centre) ಸಲ್ಲಿಸಿದ ವರದಿಯ ಆಧಾರದ ಮೇಲೆ DoT ಈ ಕಟ್ಟುನಿಟ್ಟಿನ ಕ್ರಮಕೈಗೊಂಡಿದೆ. ನಕಲಿ ಮತ್ತು ಅಕ್ರಮ SIM ಕಾರ್ಡ್‌ಗಳ ಬಳಕೆಯನ್ನು ಸಂಪೂರ್ಣವಾಗಿ ತಡೆಯುವುದು ಈ ನಿಯಮದ ಮುಖ್ಯ ಉದ್ದೇಶವಾಗಿದೆ.

**➤ ಸಾರ್ವಜನಿಕರು ತಮ್ಮ ಹೆಸರಿನಲ್ಲಿರುವ SIM ಪರಿಶೀಲಿಸುವುದು ಹೇಗೆ?**

ಸಂಚಾರ್ ಸಾಥಿ (Sanchar Saathi) ವೆಬ್‌ಸೈಟ್‌ಗೆ ಭೇಟಿ ನೀಡಿ.

TAFCO (Telecom Analytics for Fraud Management and Consumer Protection) ವಿಭಾಗವನ್ನು ಆಯ್ಕೆಮಾಡಿ.

ನಿಮ್ಮ ಮೊಬೈಲ್ ಸಂಖ್ಯೆ ನಮೂದಿಸಿ OTP ಮೂಲಕ ಲಾಗಿನ್ ಆಗಿ.

ನಿಮ್ಮ ಹೆಸರಿನಲ್ಲಿರುವ ಎಲ್ಲಾ SIM ಗಳ ಪಟ್ಟಿ ಕಾಣಿಸುತ್ತದೆ. ನಿಮ್ಮದಲ್ಲದ ಸಂಖ್ಯೆಯನ್ನು ಅಲ್ಲಿಯೇ ರಿಪೋರ್ಟ್ (Flag) ಮಾಡಿ ಬ್ಲಾಕ್ ಮಾಡಬಹುದು.

## ಗ್ರಾಮೀಣ ಭಾರತಕ್ಕೆ ಸ್ಟಾರ್‌ಲಿಂಕ್: ಡಿಜಿಟಲ್ ಕ್ರಾಂತಿಗೆ ಎಲಾನ್ ಮಸ್ಕ್ ಮುನ್ನುಡಿ




➤ ಭಾರತದ ಗ್ರಾಮೀಣ ಹಾಗೂ ಸಂಪರ್ಕ ವಂಚಿತ ಮೂಲೆ ಮೂಲೆಗಳಿಗೆ ಅತಿವೇಗದ ಇಂಟರ್ನೆಟ್ ಸೇವೆ ಒದಗಿಸಲು 'ಸ್ಟಾರ್‌ಲಿಂಕ್' (Starlink) ಉಪಗ್ರಹ ತಂತ್ರಜ್ಞಾನ ನೆರವಾಗಲಿದೆ ಎಂದು ಸ್ಪೇಸ್‌ಎಕ್ಸ್ (SpaceX) ಸಂಸ್ಥಾಪಕ ಎಲಾನ್ ಮಸ್ಕ್ ಇತ್ತೀಚೆಗೆ ತಿಳಿಸಿದ್ದಾರೆ. ಭಾರತದಲ್ಲಿ ಇಂಟರ್ನೆಟ್ ಸಂಪರ್ಕದ ಕೊರತೆಯ ಕುರಿತು ಎಕ್ಸ್ (ಟ್ವಿಟರ್) ವೇದಿಕೆಯಲ್ಲಿ ನಡೆದ ಚರ್ಚೆಗೆ ಪ್ರತಿಕ್ರಿಯಿಸಿದ ಅವರು ಈ ಮಹತ್ವದ ಹೇಳಿಕೆ ನೀಡಿದ್ದಾರೆ.

➤ ಸ್ಟಾರ್‌ಲಿಂಕ್ ಉಪಗ್ರಹ ಇಂಟರ್ನೆಟ್: ಸ್ಟಾರ್‌ಲಿಂಕ್ ಎಂಬುದು ಎಲಾನ್ ಮಸ್ಕ್ ಒಡೆತನದ 'ಸ್ಪೇಸ್‌ಎಕ್ಸ್' (SpaceX) ಕಂಪನಿಯ ಒಂದು ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಇದು ಭೂಮಿಯ ಕೆಳ ಕಕ್ಷೆಯಲ್ಲಿರುವ (Low Earth Orbit - LEO) ಸಾವಿರಾರು ಸಣ್ಣ ಉಪಗ್ರಹಗಳ ಜಾಲವನ್ನು ಬಳಸಿಕೊಂಡು ವಿಶ್ವದಾದ್ಯಂತ ಅತಿವೇಗದ ಇಂಟರ್ನೆಟ್ ಸೇವೆಯನ್ನು ಒದಗಿಸುತ್ತದೆ.

➤ ಸಾಮಾನ್ಯ ಇಂಟರ್ನೆಟ್‌ಗೂ ಇದಕ್ಕೂ ಏನು ವ್ಯತ್ಯಾಸ?: ಸಾಂಪ್ರದಾಯಿಕ ಇಂಟರ್ನೆಟ್ ಸೇವೆಗೆ ಆಪ್ಟಿಕಲ್ ಫೈಬರ್ ಕೇಬಲ್‌ಗಳು ಅಥವಾ ಮೊಬೈಲ್ ಟವರ್‌ಗಳ ಅಗತ್ಯವಿರುತ್ತದೆ. ಆದರೆ, ಸ್ಟಾರ್‌ಲಿಂಕ್‌ಗೆ ಕೇವಲ ಒಂದು ಸಣ್ಣ ಡಿಶ್ ಆಂಟೆನಾ ಸಾಕು. ಇದು ನೇರವಾಗಿ ಬಾಹ್ಯಾಕಾಶದಲ್ಲಿರುವ ಉಪಗ್ರಹದಿಂದ ಸಿಗ್ನಲ್ ಪಡೆಯುತ್ತದೆ.

**➤ ಗ್ರಾಮೀಣ ಭಾರತಕ್ಕೆ ಸ್ಟಾರ್‌ಲಿಂಕ್ ಏಕೆ ಅತ್ಯಗತ್ಯ?**

ಡಿಜಿಟಲ್ ಕಂದಕ (Digital Divide) ನಿವಾರಣೆ: ನಗರ ಪ್ರದೇಶಗಳಿಗೆ ಹೋಲಿಸಿದರೆ ಭಾರತದ ಹಳ್ಳಿಗಳಲ್ಲಿ ಇಂಟರ್ನೆಟ್ ಬಳಕೆದಾರರ ಸಾಂದ್ರತೆ (Teledensity) ಮತ್ತು ವೇಗ ಸಾಕಷ್ಟು ಕಡಿಮೆಯಿದೆ.

ಭೌಗೋಳಿಕ ಸವಾಲುಗಳು: ಅರಣ್ಯ ಪ್ರದೇಶಗಳು, ಗುಡ್ಡಗಾಡುಗಳು, ಹಿಮಾಲಯದ ತಪ್ಪಲು ಮತ್ತು ದ್ವೀಪ ಪ್ರದೇಶಗಳಲ್ಲಿ ಮೊಬೈಲ್ ಟವರ್ ಅಥವಾ ಫೈಬರ್ ಕೇಬಲ್ ಅಳವಡಿಸುವುದು ಕಷ್ಟಸಾಧ್ಯ. ಇಂಥ ಪ್ರದೇಶಗಳಿಗೆ ಉಪಗ್ರಹ ಇಂಟರ್ನೆಟ್ ವರದಾನವಾಗಲಿದೆ.

4G/5G ಕೊರತೆ: ಇಂದಿಗೂ ಭಾರತದ ಸಾವಿರಾರು ಹಳ್ಳಿಗಳಿಗೆ ಸರಿಯಾದ 4ಜಿ (4G) ನೆಟ್‌ವರ್ಕ್ ಸಂಪರ್ಕವಿಲ್ಲ. ಇಂತಹ ಶ್ರೇಣಿಯಿಲ್ಲದ (Unserved & Underserved) ಪ್ರದೇಶಗಳಿಗೆ ಸ್ಟಾರ್‌ಲಿಂಕ್ ಸುಲಭವಾಗಿ ಇಂಟರ್ನೆಟ್ ಕಲ್ಪಿಸಬಲ್ಲದು.

**➤ ಭಾರತದಲ್ಲಿ ಸ್ಟಾರ್‌ಲಿಂಕ್ ಎದುರಿಸುತ್ತಿರುವ ಸವಾಲುಗಳು ಮತ್ತು ನಿಯಮಗಳು:**

ಭದ್ರತಾ ನಿಯಮಗಳು (Security Standards): ದೇಶದ ಡೇಟಾ ಭದ್ರತೆ ಮತ್ತು ಲೋಕಲೈಸೇಶನ್ (Data Localization) ನಿಯಮಗಳಿಗೆ ಸ್ಟಾರ್‌ಲಿಂಕ್ ಬದ್ಧವಾಗಿರಬೇಕಾಗುತ್ತದೆ.

ಹಿಂದಿನ ಹಿನ್ನಡೆ: ಈ ಹಿಂದೆ ಕೆಲವು ತಾಂತ್ರಿಕ ವೈಶಿಷ್ಟ್ಯಗಳು ಭಾರತದ ನಿಗದಿತ ನಿಯಮಗಳಿಗೆ ತಕ್ಕಂತೆ ಇರಲಿಲ್ಲವಾದ್ದರಿಂದ, ಸಂಬಂಧಪಟ್ಟ ಪ್ರಾಧಿಕಾರಗಳು ಸ್ಟಾರ್‌ಲಿಂಕ್‌ನ ಮೊದಲ ಅರ್ಜಿಯನ್ನು ತಿರಸ್ಕರಿಸಿದ್ದವು.

ಸ್ಪೆಕ್ಟ್ರಮ್ ಹಂಚಿಕೆ ವಿವಾದ (Spectrum Allocation): ಭಾರತದ ಟೆಲಿಕಾಂ ಕಂಪನಿಗಳಾದ ಜಿಯೋ (Jio) ಮತ್ತು ಏರ್‌ಟೆಲ್ (Airtel) ಉಪಗ್ರಹ ಸ್ಪೆಕ್ಟ್ರಮ್ ಅನ್ನು ಹರಾಜು (Auction) ಹಾಕಬೇಕು ಎಂದು ವಾದಿಸುತ್ತಿವೆ. ಆದರೆ ಸ್ಟಾರ್‌ಲಿಂಕ್ ಸೇರಿದಂತೆ ಜಾಗತಿಕ ಕಂಪನಿಗಳು, ಸ್ಪೆಕ್ಟ್ರಮ್ ಅನ್ನು ಆಡಳಿತಾತ್ಮಕವಾಗಿ ಹಂಚಿಕೆ (Administrative Allocation) ಮಾಡಬೇಕು ಎಂದು ಪಟ್ಟು ಹಿಡಿದಿವೆ. (ಇತ್ತೀಚೆಗೆ ಕೇಂದ್ರ ಸರ್ಕಾರ ಆಡಳಿತಾತ್ಮಕ ಹಂಚಿಕೆಯ ಪರ ಒಲವು ತೋರಿದೆ).

## ಏಸರ್ ಇಂಡಿಯಾ ಸಂಸ್ಥೆಯ ನೂತನ ಬ್ರ್ಯಾಂಡ್ ಅಂಬಾಸಿಡರ್ ಆಗಿ ಬಾಲಿವುಡ್ ನಟ ಅಕ್ಷಯ್ ಕುಮಾರ್ ನೇಮಕ




➤ ಜಾಗತಿಕ ಮಟ್ಟದ ಪ್ರಮುಖ ತಂತ್ರಜ್ಞಾನ ಹಾಗೂ ಎಲೆಕ್ಟ್ರಾನಿಕ್ಸ್ ದೈತ್ಯ ಸಂಸ್ಥೆಯಾದ ಏಸರ್ (Acer), ತನ್ನ ಸಮಗ್ರ 'ಹೌಸ್ ಆಫ್ ಏಸರ್' (House of Acer) ಪೋರ್ಟ್‌ಫೋಲಿಯೊಗೆ ಬಾಲಿವುಡ್ ಸುಪರ್‌ಸ್ಟಾರ್ ಅಕ್ಷಯ್ ಕುಮಾರ್ ಅವರನ್ನು ನೂತನ ಬ್ರ್ಯಾಂಡ್ ಅಂಬಾಸಿಡರ್ (Brand Ambassador) ಆಗಿ ನೇಮಕ ಮಾಡಿದೆ. ಸಂಸ್ಥೆಯು ಜಾಗತಿಕವಾಗಿ 50 ವರ್ಷಗಳನ್ನು ಹಾಗೂ ಭಾರತದಲ್ಲಿ 27 ವರ್ಷಗಳ ಯಶಸ್ವಿ ಸೇವೆಯನ್ನು ಪೂರೈಸುತ್ತಿರುವ ಈ ಮೈಲಿಗಲ್ಲಿನ ಸಂದರ್ಭದಲ್ಲಿ ಈ ಪ್ರಮುಖ ನಿರ್ಧಾರ ಕೈಗೊಳ್ಳಲಾಗಿದೆ.

➤ ಕಂಪನಿಯ ವಿಸ್ತರಣೆ ಮತ್ತು 'ಹೌಸ್ ಆಫ್ ಏಸರ್' ಯೋಜನೆ: ಏಸರ್ ಸಂಸ್ಥೆಯು ಕೇವಲ ಕಂಪ್ಯೂಟರ್ ಹಾಗೂ ಲ್ಯಾಪ್‌ಟಾಪ್‌ಗಳಿಗೆ ಮಾತ್ರ ಸೀಮಿತವಾಗದೆ, ತನ್ನ ಸೇವೆಯನ್ನು ಗೃಹಬಳಕೆಯ ವಿದ್ಯುನ್ಮಾನ ಉಪಕರಣಗಳ ಕ್ಷೇತ್ರಕ್ಕೂ ವಿಸ್ತರಿಸುತ್ತಿದೆ. 'ಏಸರ್ ಪ್ಯೂರ್' (Acerpure) ಮೂಲಕ ಸ್ಮಾರ್ಟ್ ಹೋಮ್

ತಂತ್ರಜ್ಞಾನವನ್ನು ಪ್ರತಿಯೊಬ್ಬ ಗ್ರಾಹಕನಿಗೆ ತಲುಪಿಸುವ ನಿಟ್ಟಿನಲ್ಲಿ 'ಹೌಸ್ ಆಫ್ ಏಸರ್' ಎಂಬ ಹೊಸ ಇಕೋಸಿಸ್ಟಮ್ ರೂಪಿಸಿದೆ.

➤ **ಅಕ್ಷಯ್ ಕುಮಾರ್ ಅವರ ಆಯ್ಕೆಗೆ ಕಾರಣ:** ಏಸರ್ ಇಂಡಿಯಾ ಸಂಸ್ಥೆಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಹರೀಶ್ ಕೊಹ್ಲಿ ಮಾತನಾಡಿ, "ಅಕ್ಷಯ್ ಕುಮಾರ್ ಅವರು ಸಮಯಕ್ಕೆ ತಕ್ಕಂತೆ ತಮ್ಮನ್ನು ತಾವು ಬದಲಾಯಿಸಿಕೊಳ್ಳುತ್ತಾ (Evolution), ಶಿಸ್ತು, ನಿಖರತೆ ಹಾಗೂ ಕ್ರಿಯಾಶೀಲತೆಗೆ ಹೆಸರಾಗಿದ್ದಾರೆ. ವಿಭಿನ್ನ ಪ್ರಕಾರದ ಸಿನಿಮಾಗಳ ಮೂಲಕ ಪ್ರತಿಯೊಂದು ತಲೆಮಾರಿನ ಪ್ರೇಕ್ಷಕರನ್ನು ತಲುಪಿರುವ ಅವರ ಗುಣಗಳು ಏಸರ್ ಸಂಸ್ಥೆಯ ಮೌಲ್ಯಗಳು ಮತ್ತು ಮನೋಭಾವಕ್ಕೆ ಸಂಪೂರ್ಣವಾಗಿ ಹೊಂದಿಕೆಯಾಗುತ್ತವೆ" ಎಂದು ತಿಳಿಸಿದ್ದಾರೆ.

➤ **ಅಕ್ಷಯ್ ಕುಮಾರ್ ಅವರ ಪ್ರತಿಕ್ರಿಯೆ:** ಈ ಸಹಯೋಗದ ಕುರಿತು ಮಾತನಾಡಿದ ಅಕ್ಷಯ್ ಕುಮಾರ್, "ತಂತ್ರಜ್ಞಾನವು ಮಾನವನ ದೈನಂದಿನ ಜೀವನವನ್ನು ಸರಳ ಹಾಗೂ ಸುಲಭಗೊಳಿಸಬೇಕು. ಏಸರ್ ಸಂಸ್ಥೆಯು ಕಾಲಕ್ಕೆ ತಕ್ಕಂತೆ ಗ್ರಾಹಕರ ಅಗತ್ಯಗಳನ್ನು ಅರ್ಥೈಸಿಕೊಂಡು ಬೆಳೆದಿದೆ. ಈ ಸಂಸ್ಥೆಯ ಭಾಗವಾಗಿರುವುದು ಸಂತಸ ತಂದಿದೆ" ಎಂದಿದ್ದಾರೆ.

## ಭಾರತ - ಎಡಿಬಿ (ADB) ಒಪ್ಪಂದ: ಚೆನ್ನೈ ನಗರದ ನೀರು ಮತ್ತು ನೈರ್ಮಲ್ಯ ಮೂಲಸೌಕರ್ಯ ಆಧುನೀಕರಣಕ್ಕೆ 230 ಮಿಲಿಯನ್ ಡಾಲರ್ ಸಾಲ!




➤ ಭಾರತ ಸರಕಾರ ಮತ್ತು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ (Asian Development Bank - ADB) 230 ಮಿಲಿಯನ್ ಅಮೆರಿಕನ್ ಡಾಲರ್ ಸಾಲದ ಒಪ್ಪಂದಕ್ಕೆ ಅಧಿಕೃತವಾಗಿ ಸಹಿ ಹಾಕಿವೆ. ತಮಿಳುನಾಡಿನ ಪ್ರಮುಖ ನಗರವಾದ ಚೆನ್ನೈನ ಕುಡಿಯುವ ನೀರು ಪೂರೈಕೆ ಹಾಗೂ ಒಳಚರಂಡಿ ನೈರ್ಮಲ್ಯ ವ್ಯವಸ್ಥೆಯನ್ನು ಹವಾಮಾನ ಬದಲಾವಣೆಗೆ ತಡೆದುಕೊಳ್ಳುವಂತೆ (Climate-Resilient) ಮೇಲ್ದರ್ಜೆಗೇರಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

**ಸಹಿ ಮಾಡಿದ ಸಂಸ್ಥೆಗಳು:** ಕೇಂದ್ರ ಹಣಕಾಸು ಸಚಿವಾಲಯದ ಆರ್ಥಿಕ ವ್ಯವಹಾರಗಳ ಇಲಾಖೆ (DEA) ಮತ್ತು ಏಷ್ಯನ್ ಡೆವಲಪ್ ಮೆಂಟ್ ಬ್ಯಾಂಕ್ (ADB).

**ಒಪ್ಪಂದಕ್ಕೆ ಸಹಿ ಹಾಕಿದವರು:** ಭಾರತ ಸರ್ಕಾರದ ಪರವಾಗಿ ಆರ್ಥಿಕ ವ್ಯವಹಾರಗಳ ಇಲಾಖೆಯ ಉಪ ಕಾರ್ಯದರ್ಶಿ ಸೌರಭ್ ಸಿಂಗ್ ಮತ್ತು ADB ಪರವಾಗಿ ಭಾರತದ ಕಂಟ್ರಿ ಡೈರೆಕ್ಟರ್ ಮಿಯೋ ಓಕಾ (Mio Oka).

➤ **ಯೋಜನೆಯಡಿ ನಡೆಯಲಿರುವ ಪ್ರಮುಖ ಅಭಿವೃದ್ಧಿ ಕಾರ್ಯಗಳು:**

ಪೈಪ್‌ಲೈನ್ ಜಾಲ ವಿಸ್ತರಣೆ: 170 ಕಿಲೋಮೀಟರ್‌ಗೂ ಅಧಿಕ ಉದ್ದದ ನೀರು ಸರಬರಾಜು ಮತ್ತು ಒಳಚರಂಡಿ (Sewerage) ಪೈಪ್‌ಲೈನ್‌ಗಳ ನಿರ್ಮಾಣ.

ಪಂಪಿಂಗ್ ಸ್ಟೇಷನ್‌ಗಳ ಮೇಲ್ದರ್ಜೆ: 7 ಪ್ರಮುಖ ನೀರು ಸರಬರಾಜು ಪಂಪಿಂಗ್ ಸ್ಟೇಷನ್‌ಗಳು ಹಾಗೂ 38 ಒಳಚರಂಡಿ ಪಂಪಿಂಗ್ ಸ್ಟೇಷನ್‌ಗಳನ್ನು ಆಧುನೀಕರಣಗೊಳಿಸುವುದು.

ರಿಂಗ್-ಮೈನ್ ಸಿಸ್ಟಮ್ (Ring-Main Solution): ಚೆನ್ನೈ ನಗರದಾದ್ಯಂತ ಸಮತೋಲಿತ ನೀರಿನ ಒತ್ತಡ (Balanced Water Pressure) ಕಾಯ್ದುಕೊಳ್ಳಲು ಮತ್ತು ಸಮಾನವಾಗಿ ನೀರು ಪೂರೈಸಲು ಕ್ಲೋಸ್ಡ್-ಲೂಪ್ 'ರಿಂಗ್-ಮೈನ್' ತಂತ್ರಜ್ಞಾನವನ್ನು ಅಳವಡಿಸಲಾಗುತ್ತಿದೆ. ಈ ತಂತ್ರಜ್ಞಾನವನ್ನು ಹೊಂದಲಿರುವ ಭಾರತದ ಮೊದಲ ನಗರ ಚೆನ್ನೈ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಡಿಜಿಟಲ್ ತಂತ್ರಜ್ಞಾನ ಮತ್ತು ಕಾರ್ಮಿಕರ ಸುರಕ್ಷತೆ: ಒಳಚರಂಡಿ ತಡೆಗಳನ್ನು ಕೃತಕ ಬುದ್ಧಿಮತ್ತೆ ಹಾಗೂ ರಿಯಲ್-ಟೈಮ್ ಮಾನಿಟರಿಂಗ್ ಮೂಲಕ ಪತ್ತೆಹಚ್ಚುವ ಡಿಜಿಟಲ್ ವ್ಯವಸ್ಥೆ ರೂಪಿಸಲಾಗುತ್ತದೆ. ಇದರಿಂದ ಅಪಾಯಕಾರಿ ಮ್ಯಾನ್ಯುವಲ್ ಸ್ಕ್ಯಾವೆಂಜಿಂಗ್ (ಕೈಯಿಂದ ಚರಂಡಿ ಶುಚಿಗೊಳಿಸುವುದು) ತಡೆಯಲು ಸಾಧ್ಯವಾಗುತ್ತದೆ.

➤ **ಭಾರತ ಸರ್ಕಾರದ ಪ್ರಮುಖ ಯೋಜನೆಗಳೊಂದಿಗೆ ಜೋಡಣೆ:**

ಅಮೃತ್ 2.0 (AMRUT 2.0 - Atal Mission for Rejuvenation and Urban Transformation)

ಅರ್ಬನ್ ಚಾಲೆಂಜ್ ಫಂಡ್ (Urban Challenge Fund)— ಇವುಗಳ ಗುರಿಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸಲಿದೆ.

## ಭಾರತಕ್ಕೆ ಪೋಲೆಂಡ್ ಬೆಂಬಲ: 'ಉಗ್ರವಾದ ಮಟ್ಟಹಾಕಲು ಭಾರತಕ್ಕೆ ಸಂಪೂರ್ಣ ಹಕ್ಕಿದೆ' – ಪೋಲೆಂಡ್ ರಾಯಭಾರಿ ಪಿಯೋಟರ್ ಆಂಟೋನಿ ಸ್ವಿತಾಲ್ಸ್ಕಿ



➤ ನವದೆಹಲಿ: ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ಭಾರತ ಕೈಗೊಳ್ಳುವ ಪ್ರತಿಯೊಂದು ಕ್ರಮಕ್ಕೂ ಪೋಲೆಂಡ್ ಸಂಪೂರ್ಣ ಬೆಂಬಲ ನೀಡಲಿದ್ದು, "ಭಯೋತ್ಪಾದನೆಯನ್ನು ಮಟ್ಟಹಾಕಲು ಭಾರತಕ್ಕೆ ಸಂಪೂರ್ಣ ಹಕ್ಕಿದೆ" ಎಂದು ಭಾರತದಲ್ಲಿನ ಪೋಲೆಂಡ್ ರಾಯಭಾರಿ ಪಿಯೋಟರ್ ಆಂಟೋನಿ ಸ್ವಿತಾಲ್ಸ್ಕಿ (Piotr Antoni Switalski) ಪ್ರತಿಪಾದಿಸಿದ್ದಾರೆ.

➤ ನವದೆಹಲಿಯ 'ಇಂಡಿಯಾ ಇಂಟಿಗ್ರೇಟೆಡ್ ಸ್ಟಡೀಸ್ ಕೇಂದ್ರ'ದಲ್ಲಿ ನಡೆದ ರಾಜತಾಂತ್ರಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪೋಲೆಂಡ್ ಕೂಡ ಉಗ್ರವಾದ ಮತ್ತು ಜಾಗತಿಕ ಅಸ್ಥಿರತೆಯ ಪರಿಣಾಮಗಳನ್ನು ಎದುರಿಸುತ್ತಿರುವ ದೇಶವಾಗಿದ್ದು, ಈ ಸಂದರ್ಭದಲ್ಲಿ ಭಾರತ ಮತ್ತು ಪೋಲೆಂಡ್ ಜಾಗತಿಕ ಶಾಂತಿ ಹಾಗೂ ಸ್ಥಿರತೆಗಾಗಿ ಒಟ್ಟಾಗಿ ಕೆಲಸ ಮಾಡಲಿವೆ ಎಂದು ತಿಳಿಸಿದರು.

➤ **ಪ್ರಧಾನಿ ಡೊನಾಲ್ಡ್ ಟಸ್ಕ್ ಭಾರತ ಭೇಟಿ:** ದ್ವಿಪಕ್ಷೀಯ ಬಾಂಧವ್ಯಕ್ಕೆ ಹೊಸ ಮೆರುಗು: ಪೋಲೆಂಡ್ ಪ್ರಧಾನಿ ಡೊನಾಲ್ಡ್ ಟಸ್ಕ್ (Donald Tusk) ಶೀಘ್ರದಲ್ಲೇ ಭಾರತಕ್ಕೆ ಅಧಿಕೃತ ಭೇಟಿ ನೀಡಲಿದ್ದಾರೆ. ಈ ಭೇಟಿಯು ಉಭಯ ದೇಶಗಳ ನಡುವಿನ ರಾಜತಾಂತ್ರಿಕ, ರಕ್ಷಣೆ ಮತ್ತು ಆರ್ಥಿಕ ಬಾಂಧವ್ಯವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಲಿದೆ ಎಂದು ರಾಯಭಾರಿ ಸ್ವಿತಾಲ್ಸ್ಕಿ ಮಾಹಿತಿ ನೀಡಿದ್ದಾರೆ.

**ಉದ್ಯಮ ಕ್ಷೇತ್ರಕ್ಕೆ ಹಸಿರು ನಿಶಾನೆ:** ಪ್ರಧಾನಿ ಟಸ್ಕ್ ಅವರ ಭೇಟಿಯು ಎರಡೂ ದೇಶಗಳ ಉದ್ಯಮಿಗಳು ಹಾಗೂ ರಕ್ಷಣಾ ಕ್ಷೇತ್ರಗಳಿಗೆ ನಿಕಟವಾಗಿ ಕೆಲಸ ಮಾಡಲು ಸ್ಪಷ್ಟ "ಹಸಿರು ನಿಶಾನೆ" (Green Light) ನೀಡಲಿದೆ.

ಐತಿಹಾಸಿಕ ಹಿನ್ನೆಲೆ: 2024 ರ ಆಗಸ್ಟ್‌ನಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಪೋಲೆಂಡ್‌ಗೆ ಭೇಟಿ ನೀಡುವ ಮೂಲಕ 45 ವರ್ಷಗಳ ನಂತರ ಭಾರತದ ಪ್ರಧಾನಿಯೊಬ್ಬರು ಪೋಲೆಂಡ್‌ಗೆ ನೀಡಿದ ಐತಿಹಾಸಿಕ ಭೇಟಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಈ ಸಂದರ್ಭದಲ್ಲಿ ಉಭಯ ದೇಶಗಳು 'ಆಯಕಟ್ಟಿನ ಪಾಲುದಾರಿಕೆ' (Strategic Partnership) ಹಾಗೂ 2024-2028ರ ಐದು ವರ್ಷಗಳ ಕ್ರಿಯಾ ಯೋಜನೆಗೆ (5-Year Action Plan) ಅಂಕಿತ ಹಾಕಿದ್ದವು.

➤ **ರಕ್ಷಣೆ, ವ್ಯಾಪಾರ ಮತ್ತು ಐರೋಪ್ಯ ಒಕ್ಕೂಟದ ಪ್ರವೇಶ ದ್ವಾರ:**

ರಕ್ಷಣಾ ಸಹಕಾರ: ಉಭಯ ದೇಶಗಳ ಸರ್ಕಾರಿ ಅಧಿಕಾರಿಗಳು ಮತ್ತು ರಕ್ಷಣಾ ಉತ್ಪಾದನಾ ಸಂಸ್ಥೆಗಳು ಪ್ರಮುಖ ಒಪ್ಪಂದಗಳ ಕುರಿತು ಮಾತುಕತೆ ನಡೆಸುತ್ತಿದ್ದು, ಶೀಘ್ರದಲ್ಲೇ ಪೋಲೆಂಡ್

ಸರ್ಕಾರದ ಉನ್ನತ ಮಟ್ಟದ ನಿಯೋಗ ರಕ್ಷಣಾ ಒಪ್ಪಂದಗಳಿಗಾಗಿ ನವದೆಹಲಿಗೆ ಆಗಮಿಸಲಿದೆ.
ಯುರೋಪ್ ಮಾರುಕಟ್ಟೆಗೆ ಹೆದ್ದಾರಿ: ಯುರೋಪಿಯನ್ ಯೂನಿಯನ್ (EU) ಮಾರುಕಟ್ಟೆಯನ್ನು ಪ್ರವೇಶಿಸಲು ಬಯಸುವ ಭಾರತೀಯ ಕಂಪನಿಗಳಿಗೆ ಪೋಲೆಂಡ್ ಅತ್ಯಂತ ಸುರಕ್ಷಿತ ಮತ್ತು ಸುಲಭ ಪ್ರವೇಶ ದ್ವಾರವಾಗಿದೆ.
ಮುಖ್ಯ ವಲಯಗಳು: ರಕ್ಷಣೆ, ಕೃಷಿ, ಇಂಧನ, ಸೈಬರ್ ಭದ್ರತೆ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಎರಡೂ ದೇಶಗಳು ಜಂಟಿಯಾಗಿ ಕಾರ್ಯನಿರ್ವಹಿಸುತ್ತಿವೆ.

**➤ ಐತಿಹಾಸಿಕ ಸಂಬಂಧ: ಜಾಮ್‌ನಗರ ಮತ್ತು ಕೊಲ್ಹಾಪುರ ನೆನಪುಗಳು:**
ದಿಗ್ಗಜ ಮಹಾರಾಜರ ಆಶ್ರಯ: ಎರಡನೇ ಮಹಾಯುದ್ಧದ ಸಮಯದಲ್ಲಿ ಪೋಲೆಂಡ್‌ನ ನೂರಾರು ಅನಾಥ ಮಕ್ಕಳಿಗೆ ಗುಜರಾತ್‌ನ ಜಾಮ್‌ನಗರದ ಮಹಾರಾಜ ದಿಗ್ವಿಜಯಸಿಂಹ ಜಡೇಜಾ (ಜಾಮ್ ಸಾಹೇಬ್) ಅವರು ತಮ್ಮ ಸಂಸ್ಥಾನದಲ್ಲಿ ಆಶ್ರಯ ನೀಡಿ ರಕ್ಷಿಸಿದ್ದರು.
ಕೊಲ್ಹಾಪುರ ಮ್ಯೂಸಿಯಂ: ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ (ವಲವಡೆ) ಪೋಲಿಷ್ ನಿರಾಶ್ರಿತರು ತಂಗಿದ್ದ ನೆನಪಿಗಾಗಿ ಪ್ರಸ್ತುತ ವಿಶೇಷ ಸಂಗ್ರಹಾಲಯವನ್ನು (Museum) ನಿರ್ಮಿಸಲಾಗುತ್ತಿದ್ದು, ಇದು ಎರಡೂ ದೇಶಗಳ ಬಾಂಧವ್ಯಕ್ಕೆ ಜೀವಂತ ಸಾಕ್ಷಿಯಾಗಿದೆ.

## ಕರ್ನಾಟಕದಲ್ಲಿ ಅನಲಾಗ್ ಪನ್ನೀರ್ ನಿಷೇಧ



➤ ಕರ್ನಾಟಕ ಸರ್ಕಾರವು ಸಾರ್ವಜನಿಕರ ಆರೋಗ್ಯ ಮತ್ತು ಗ್ರಾಹಕರ ಹಿತದೃಷ್ಟಿಯಿಂದ ಒಂದು ಅತ್ಯಂತ ಪ್ರಮುಖ ಹಾಗೂ ಕ್ರಾಂತಿಕಾರಿ ನಿರ್ಧಾರವನ್ನು ತೆಗೆದುಕೊಂಡಿದೆ. ರಾಜ್ಯಾದ್ಯಂತ 'ಅನಲಾಗ್ ಪನೀರ್' (Analogue Paneer / Non-Dairy Paneer) ಅನ್ನು "ಪನೀರ್" ಎಂಬ ಹೆಸರಿನಲ್ಲಿ ತಯಾರಿಸುವುದು, ಶೇಖರಿಸಿಡುವುದು, ವಿತರಿಸುವುದು ಮತ್ತು ಮಾರಾಟ ಮಾಡುವುದನ್ನು ಆಗಸ್ಟ 17, 2026 ರಿಂದ ಆಗಸ್ಟ 17, 2027 ರವರೆಗೆ (ಒಂದು ವರ್ಷದ ಅವಧಿಗೆ) ಸಂಪೂರ್ಣವಾಗಿ ನಿಷೇಧಿಸಿ ಆದೇಶ ಹೊರಡಿಸಿದೆ.

**➤ ಸರ್ಕಾರದ ಈ ನಿರ್ಧಾರಕ್ಕೆ ಕಾನೂನು ಮತ್ತು ತಾಂತ್ರಿಕ ಹಿನ್ನಲೆ:** ಕರ್ನಾಟಕ ಆಹಾರ ಸುರಕ್ಷತೆ ಮತ್ತು ಔಷಧ ನಿಯಂತ್ರಣ ಇಲಾಖೆಯು (Food Safety and Drug Administration) ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯಡಿ ಈ ಕಟ್ಟುನಿಟ್ಟಿನ ನಿಷೇಧವನ್ನು ಜಾರಿಗೆ ತಂದಿದೆ.
**ಉಲ್ಲೇಖಿತ ಕಾಯ್ದೆ ಮತ್ತು ವಿಭಾಗಗಳು:** ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಕಾಯ್ದೆ, 2006 (FSS Act, 2006) ರ ಸೆಕ್ಷನ್ 30(2)(a), 18 ಮತ್ತು 29 ಗಳ ಅಡಿಯಲ್ಲಿ ಈ ನಿಷೇಧಾಜ್ಞೆ ಹೊರಡಿಸಲಾಗಿದೆ.
**FSSAI ನಿಯಮಾವಳಿಗಳು:** Food Safety and Standards Regulations, 2011 ರ ಪ್ರಕಾರ, ಪನೀರ್ ಎಂಬುದು ಕೇವಲ ಹಾಲಿನಿಂದ ಮಾತ್ರ ತಯಾರಿಸಲ್ಪಡುವ ನಿಗದಿತ ಗುಣಮಟ್ಟದ (Standardised) ಡೈರಿ ಉತ್ಪನ್ನವಾಗಿದೆ.
ನಿಷೇಧದ ಉದ್ದೇಶ: ಹಾಲು ಅಥವಾ ಹಾಲಿನ ಕೊಬ್ಬನ್ನು (Milk Fat) ತೆಗೆದು, ಅದರ ಬದಲಿಗೆ ಸಸ್ಯಜನ್ಯ ಎಣ್ಣೆ (Vegetable Oil), ಸಸ್ಯಜನ್ಯ ಕೊಬ್ಬು ಅಥವಾ ಇತರ ಡೈರಿಯೇತರ ಪದಾರ್ಥಗಳನ್ನು ಬಳಸಿ ಪನೀರ್ ನಂತೆ ರೂಪಿಸುವ ಉತ್ಪನ್ನವೇ 'ಅನಲಾಗ್ ಪನೀರ್'. ಇದನ್ನು "ಪನೀರ್" ಎಂಬ ಹೆಸರಿನಲ್ಲಿ ಮಾರಾಟ ಮಾಡುವುದು ಗ್ರಾಹಕರಿಗೆ ಮಾಡುವ ವಂಚನೆಯಾಗಿದೆ.

**➤ ಅನಲಾಗ್ ಪನೀರ್ ಸೇವನೆಯಿಂದ ಆರೋಗ್ಯಕ್ಕಾಗುವ ಅಪಾಯಗಳು:**
ಹೃದ್ರೋಗಗಳ ಅಪಾಯ: ಇದರಲ್ಲಿರುವ ಟ್ರಾನ್ಸ್-ಫ್ಯಾಟ್ (Trans-fats) ಕೆಟ್ಟ ಕೊಲೆಸ್ಟ್ರಾಲ್ (LDL) ಪ್ರಮಾಣವನ್ನು ಹೆಚ್ಚಿಸಿ, ಹೃದಯಾಘಾತ ಮತ್ತು ರಕ್ತದೊತ್ತಡಕ್ಕೆ ಕಾರಣವಾಗುತ್ತದೆ.
ಪಚನಕ್ರಿಯೆ ತೊಂದರೆ: ಕೃತಕವಾಗಿ ಸೇರಿಸಲಾಗುವ ಸ್ಟಾರ್ಚ್ ಮತ್ತು ರಸಾಯನಿಕ ಬೈಂಡರ್‌ಗಳಿಂದಾಗಿ ಜೀರ್ಣಕ್ರಿಯೆಯಲ್ಲಿ ಏರುಪೇರಾಗಿ, ಹೊಟ್ಟೆ ಉಬ್ಬರ ಮತ್ತು ಅಜೀರ್ಣ ಉಂಟಾಗುತ್ತದೆ.
ಅಪೌಷ್ಟಿಕತೆ: ನೈಜ ಪನೀರ್‌ನಿಂದ ಸಿಗಬೇಕಾದ ಪ್ರೋಟೀನ್ ಮತ್ತು ಕ್ಯಾಲ್ಸಿಯಂ ಸಿಗದೆ, ಕೇವಲ ಅನಗತ್ಯ ಕ್ಯಾಲೊರಿಗಳು ದೇಹವನ್ನು ಸೇರುತ್ತವೆ.
**ಜೀವನಶೈಲಿ ಕಾಯಿಲೆಗಳು:** ದೀರ್ಘಕಾಲೀನ ಬಳಕೆಯಿಂದ ಸ್ಥೂಲಕಾಯ (Obesity) ಮತ್ತು ಮಧುಮೇಹ (Diabetes) ಬರುವ ಸಾಧ್ಯತೆ ಹೆಚ್ಚಿರುತ್ತದೆ.

**➤ ಮನೆಯಲ್ಲಿಯೇ ನಿಜವಾದ ಪನೀರ್ ಗುರುತಿಸುವುದು ಹೇಗೆ?**
ಅಯೋಡಿನ್ ಪರೀಕ್ಷೆ (Iodine Test): ಪನೀರ್ ತುಂಡನ್ನು ನೀರಿನಲ್ಲಿ ಕುದಿಸಿ ತಣ್ಣಗಾಗಿಸಿ, ನಂತರ ಕೆಲವು ಹನಿ ಅಯೋಡಿನ್ ದ್ರಾವಣವನ್ನು (Iodine Solution) ಹಾಕಿ. ಬಣ್ಣವು ನೀಲಿ ಬಣ್ಣಕ್ಕೆ ತಿರುಗಿದರೆ ಅದು ಅನಲಾಗ್ ಪನೀರ್ (ಸ್ಟಾರ್ಚ್ ಬೆರೆಸಲಾಗಿದೆ).
ಕಾವು/ಬಿಸಿ ಮಾಡುವ ಪರೀಕ್ಷೆ (Heat Test): ಪನೀರ್ ಅನ್ನು ಬಿಸಿ ಮಾಡಿದಾಗ ನೈಜ ಪನೀರ್ ಮೃದುವಾಗುತ್ತದೆ; ಆದರೆ ಅನಲಾಗ್ ಪನೀರ್ ಕರಗಿ ಹೆಚ್ಚಿನ ಎಣ್ಣೆಯನ್ನು ಹೊರಹಾಕುತ್ತದೆ.
ರಚನೆ ಮತ್ತು ಸ್ಪರ್ಶ (Texture Check): ನೈಜ ಪನೀರ್ ಬೆರಳುಗಳಿಂದ ಒತ್ತಿದಾಗ ಸುಲಭವಾಗಿ ಪುಡಿಯಾಗುತ್ತದೆ. ಅನಲಾಗ್ ಪನೀರ್ ರಬ್ಬರ್‌ನಂತೆ ಹಿಗ್ಗುತ್ತದೆ.

## DRDO ತಂತ್ರಜ್ಞಾನ ವರ್ಗಾವಣೆ ಒಪ್ಪಂದಗಳು 2026: 'ಆತ್ಮನಿರ್ಭರ ಭಾರತ'ಕ್ಕೆ ದೊಡ್ಡ ಬಲ!




➤ ಭಾರತದ ರಕ್ಷಣಾ ಕ್ಷೇತ್ರದಲ್ಲಿ ದೇಶೀಯ ತಯಾರಿಕೆಯನ್ನು (Indigenous Defence Manufacturing) ಉತ್ತೇಜಿಸುವ ನಿಟ್ಟಿನಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಪ್ರಮುಖ ಮೈಲಿಗಲ್ಲನ್ನು ಸಾಧಿಸಿದೆ. DRDO ಅಡಿಯಲ್ಲಿ ಕಾರ್ಯನಿರ್ವಹಿಸುವ ವಿಶಾಖಪಟ್ಟಣಂನ 'ನೇವಲ್ ಸೈನ್ಸ್ & ಟೆಕ್ನಾಲಜಿಕಲ್ ಲ್ಯಾಬೊರೇಟರಿ' (NSTL) ಎರಡು ಪ್ರಮುಖ 'ತಂತ್ರಜ್ಞಾನ ವರ್ಗಾವಣೆ ಲೈಸೆನ್ಸಿಂಗ್ ಒಪ್ಪಂದಗಳಿಗೆ' (LAToT - Licensing Agreements for Transfer of Technology) ಸಹಿ ಹಾಕಿದೆ.

**➤ ಪ್ರಮುಖ ಒಪ್ಪಂದಗಳ ವಿವರಗಳು:**
**ಸಬ್‌ಮರೀನ್ ಫೈರ್ಡ್ ಡಿಕಾಯ್ (SFD):** DRDO ಸಂಸ್ಥೆಯು 'ಸಬ್‌ಮರೀನ್ ಫೈರ್ಡ್ ಡಿಕಾಯ್' ತಂತ್ರಜ್ಞಾನವನ್ನು ಸಾರ್ವಜನಿಕ ವಲಯದ ಪ್ರಮುಖ ರಕ್ಷಣಾ ಸಂಸ್ಥೆಯಾದ ಭಾರತ್ ಡೈನಾಮಿಕ್ಸ್ ಲಿಮಿಟೆಡ್ (BDL) ಗೆ ವರ್ಗಾಯಿಸಿದೆ. ಈ ತಂತ್ರಜ್ಞಾನವನ್ನು ಜಲಾಂತರ್ಗಾಮಿ ನೌಕೆಗಳ ಸ್ವಯಂ ರಕ್ಷಣೆಗಾಗಿ ಹಾಗೂ ಶತ್ರುಗಳ ಟಾರ್ಪಿಡೊ ದಾಳಿಯಿಂದ ತಪ್ಪಿಸಿಕೊಳ್ಳಲು ಬಳಸಲಾಗುತ್ತದೆ.
**LM2500 ಗ್ಯಾಸ್ ಟರ್ಬೈನ್ ತಂತ್ರಜ್ಞಾನ:** DRDO ತನ್ನ 'LM2500 ಗ್ಯಾಸ್ ಟರ್ಬೈನ್' ತಂತ್ರಜ್ಞಾನದ ಫ್ಯಾಬ್ರಿಕೇಶನ್, ಇನ್‌ಸ್ಟಾಲೇಶನ್ ಮತ್ತು ಕಮಿಷನಿಂಗ್ ಹಕ್ಕುಗಳನ್ನು ಖಾಸಗಿ ಸಂಸ್ಥೆಯಾದ ವರ್ಟೆಕ್ಸ್ ಇಂಜಿನಿಯರಿಂಗ್ ಸಿಸ್ಟಮ್ಸ್‌ಗೆ ಹಸ್ತಾಂತರಿಸಿದೆ. ಈ ತಂತ್ರಜ್ಞಾನವನ್ನು ನೌಕಾಪಡೆಯ ಬೃಹತ್ ಯುದ್ಧನೌಕೆಗಳ ಇಂಜಿನ್ ಚಾಲನೆ (Naval Propulsion) ಮತ್ತು ಕೈಗಾರಿಕಾ ಅನ್ವಯಿಕೆಗಳಿಗಾಗಿ ಬಳಸಲಾಗುತ್ತದೆ.

➤ **LM2500 ಗ್ಯಾಸ್ ಟರ್ಬೈನ್ (LM2500 Gas Turbine):**
ಉತ್ಪಾದನಾ ಸಂಸ್ಥೆ: ಖಾಸಗಿ ವಲಯದ ವರ್ಟೆಕ್ಸ್ ಇಂಜಿನಿಯರಿಂಗ್ ಸಿಸ್ಟಮ್ಸ್ (Vertex Engineering Systems Pvt. Ltd.) ಸಂಸ್ಥೆಗೆ ಇದನ್ನು ಹಸ್ತಾಂತರಿಸಲಾಗಿದೆ.
ಕಾರ್ಯವೈಖರಿ: LM2500 ಗ್ಯಾಸ್ ಟರ್ಬೈನ್ ಅನ್ನು ಮುಖ್ಯವಾಗಿ ನೌಕಾಪಡೆಯ ಬೃಹತ್ ಯುದ್ಧನೌಕೆಗಳ ಇಂಜಿನ್‌ಗಳಿಗೆ (Propulsion Systems) ಬಳಸಲಾಗುತ್ತದೆ. ಭಾರತದಲ್ಲೇ ಇದರ ಫ್ಯಾಬ್ರಿಕೇಶನ್ ಮತ್ತು ಸ್ಥಾಪನೆಗೆ ಇದು ಹಾದಿಮಾಡಿಕೊಡುತ್ತದೆ.
ಜ್ಞಾನ ವಿನಿಮಯ: ಭಾರತದ ವಿವಿಧ ರಾಜ್ಯಗಳಿಂದ ಬಂದಿರುವ ಭಾಷಾತಜ್ಞರು, ಬುಡಕಟ್ಟು ಸಂಶೋಧಕರು, ನೃವಂಶಶಾಸ್ತ್ರಜ್ಞರು (Anthropologists) ಮತ್ತು ಸಾಂಸ್ಕೃತಿಕ ತಜ್ಞರು ಈ ವೇದಿಕೆಯಲ್ಲಿ ಒಂದಾಗಿದ್ದಾರೆ.

ಸಂಸ್ಕೃತಿ ಮತ್ತು ಕಲೆ: ಸ್ಥಳೀಯ ಹಾಗೂ ರಾಷ್ಟ್ರೀಯ ಮಟ್ಟದ ಬುಡಕಟ್ಟು ಕಲಾಪ್ರಕಾರಗಳು, ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿ ಮತ್ತು ಕರಕುಶಲ ವಸ್ತುಗಳ ಪ್ರದರ್ಶನಕ್ಕೆ ಆದ್ಯತೆ ನೀಡಲಾಗಿದೆ.

➢ **ಪರೀಕ್ಷೆಗೆ ಉಪಯುಕ್ತವಾದ ಹೆಚ್ಚುವರಿ ಮಾಹಿತಿ:**

ಸಂವಿಧಾನ ಮತ್ತು ಬುಡಕಟ್ಟು ಭಾಷೆಗಳು: ಭಾರತೀಯ ಸಂವಿಧಾನದ ಆರ್ಟಿಕಲ್ 350A ಪ್ರಕಾರ, ಪ್ರಾಥಮಿಕ ಶಿಕ್ಷಣ ಮಟ್ಟದಲ್ಲಿ ಮಾತೃಭಾಷೆಯಲ್ಲೇ ಬೋಧನೆ ಪಡೆಯುವ ಹಕ್ಕನ್ನು ನೀಡಲಾಗಿದೆ, ಇದು ಬುಡಕಟ್ಟು ಮಕ್ಕಳಿಗೂ ಅನ್ವಯಿಸುತ್ತದೆ.

ಕರ್ನಾಟಕದ ಪ್ರಮುಖ ಬುಡಕಟ್ಟುಗಳು: ಜೇನು ಕುರುಬ, ಕಾಡು ಕುರುಬ, ಸೋಲಿಗ, ಕೊರಗ (ವಿಶೇಷವಾಗಿ ಹಿಂದುಳಿದ ಬುಡಕಟ್ಟು ಗುಂಪುಗಳು - PVTGs), ಮತ್ತು ಯರವಾ.

ಟ್ರೈಬಲ್ ಫ್ರೀಡಂ ಫೈಟರ್ಸ್ ಮ್ಯೂಸಿಯಂ: ಕೇಂದ್ರ ಸರ್ಕಾರವು ದೇಶಾದ್ಯಂತ ಬುಡಕಟ್ಟು ಸ್ವಾತಂತ್ರ್ಯ ಹೋರಾಟಗಾರರ ನೆನಪಿಗಾಗಿ ಪ್ರತ್ಯೇಕ ಮ್ಯೂಸಿಯಂಗಳನ್ನು ನಿರ್ಮಿಸುತ್ತಿದೆ.

## ಡಿಜಿಟಲ್ ಕ್ರಾಂತಿಗೆ ದಶಕದ ಸಂಭ್ರಮ: 13,000 ಪಟ್ಟು ಜಿಗಿದ ಯುಪಿಐ ವಹಿವಾಟು!




➢ ಭಾರತದ ಹೆಮ್ಮೆಯ ಏಕೀಕೃತ ಪಾವತಿ ವ್ಯವಸ್ಥೆ (Unified Payments Interface - UPI) ಅಧಿಕೃತವಾಗಿ ತನ್ನ 10 ವರ್ಷಗಳ (ದಶಕದ) ಯಶಸ್ವಿ ಪಯಣವನ್ನು ಪೂರೈಸಿದೆ. 2016ರಲ್ಲಿ ಸರಳವಾಗಿ ಆರಂಭಗೊಂಡ ಯುಪಿಐ, ಇಂದು ವಿಶ್ವದಲ್ಲೇ ಅತಿ ಹೆಚ್ಚು ಡಿಜಿಟಲ್ ವಹಿವಾಟು ನಡೆಸುವ ಬೃಹತ್ ಜಾಲವಾಗಿ ಹೊರಹೊಮ್ಮಿದೆ.

➢ **ಪ್ರಧಾನಿ ನರೇಂದ್ರ ಮೋದಿ ಅವರ ಸಂದೇಶ:** "ಏಕೀಕೃತ ಪಾವತಿ ವ್ಯವಸ್ಥೆ (ಯುಪಿಐ) ಹತ್ತು ವರ್ಷಗಳನ್ನು ಪೂರೈಸಿದ್ದು, ಭಾರತದ ಡಿಜಿಟಲ್ ಪಾವತಿ ಕ್ರಾಂತಿಯ ಸಾಧನೆಯು ಪ್ರತಿಯೊಬ್ಬ ಭಾರತೀಯರಿಗೂ ಹೆಮ್ಮೆಯ ವಿಷಯವಾಗಿದೆ. ಯುಪಿಐ ವ್ಯವಸ್ಥೆಯು ಭಾರತದ ಡಿಜಿಟಲ್ ವಹಿವಾಟು ಇತಿಹಾಸದಲ್ಲಿ ಒಂದು ಮಹತ್ವದ ತಿರುವಾಗಿದೆ."

➢ ಯುಪಿಐ (Unified Payments Interface) ಎಂಬುದು ಭಾರತೀಯ ರಿಸರ್ವ್ ಬ್ಯಾಂಕ್ (RBI) ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯಲ್ಲಿ ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (NPCI) ಅಭಿವೃದ್ಧಿಪಡಿಸಿದ ತಕ್ಷಣದ ಪಾವತಿ ವ್ಯವಸ್ಥೆಯಾಗಿದೆ (IMPS ಮೂಲ ರಚನೆ).

ಆರಂಭ: ಪ್ರಾಯೋಗಿಕವಾಗಿ ಏಪ್ರಿಲ್ 2016 ರಲ್ಲಿ ಚಾಲನೆ ನೀಡಲಾಯಿತು ಮತ್ತು 2016-17ರಲ್ಲಿ ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಲಾಯಿತು.

ವೈಶಿಷ್ಟ್ಯ: ಬ್ಯಾಂಕ್ ಖಾತೆ ಸಂಖ್ಯೆ ಅಥವಾ IFSC ಅಗತ್ಯವಿಲ್ಲದೇ ಕೇವಲ VPA (Virtual Payment Address) ಅಥವಾ QR ಕೋಡ್ ಬಳಸಿ ತಕ್ಷಣದ ಹಣ ವರ್ಗಾವಣೆ.

➢ **ದಶಕದ ಯಶಸ್ವಿ ಪಯಣ:**

ಒಟ್ಟು ವಹಿವಾಟುಗಳ ಸಂಖ್ಯೆ: 2016-17 ರಲ್ಲಿ 1.79 ಕೋಟಿಯಿದ್ದ ವಹಿವಾಟುಗಳು 2025-26 ರ ವೇಳೆಗೆ 24,162 ಕೋಟಿಗೂ ಅಧಿಕವಾಗಿದ್ದು, 13,000 ಪಟ್ಟು ಏರಿಕೆಯಾಗಿದೆ.
ಒಟ್ಟು ವಹಿವಾಟಿನ ಮೌಲ್ಯ: 2016-17 ರ ₹ 0.07 ಲಕ್ಷ ಕೋಟಿಯಿಂದ 2025-26 ರಲ್ಲಿ ₹ 314 ಲಕ್ಷ ಕೋಟಿಗೆ ತಲುಪಿ, 4,000 ಪಟ್ಟು ಜಿಗಿತ ಕಂಡಿದೆ.
ಸಕ್ರಿಯ ಪಾಲುದಾರ ಬ್ಯಾಂಕ್‌ಗಳು: ಆರಂಭದಲ್ಲಿ 44 ಇದ್ದ ಸಕ್ರಿಯ ಬ್ಯಾಂಕ್‌ಗಳ ಸಂಖ್ಯೆ 703 ಕ್ಕೂ ಹೆಚ್ಚಾಗಿದ್ದು, 16 ಪಟ್ಟು ಬೆಳೆದಿದೆ.

**➤ 2026 ರಲ್ಲಿ ಬರೆದ ಹೊಸ ಸಾರ್ವಕಾಲಿಕ ದಾಖಲೆಗಳು:**
ಮೇ 2026: ಮಾಸಿಕ 2,320 ಕೋಟಿ ವಹಿವಾಟು.
ಜುಲೈ 2026: 2,366 ಕೋಟಿ ಮಾಸಿಕ ವಹಿವಾಟುಗಳು ಜರುಗುವ ಮೂಲಕ ಯುಪಿಐ ಇತಿಹಾಸದಲ್ಲೇ ಅತ್ಯಧಿಕ ಮಾಸಿಕ ವಹಿವಾಟು ದಾಖಲಾಗಿದೆ.
ಬಳಕೆಯ ಮಾದರಿ: ಯುಪಿಐ ಇಂದು P2P (Person to Person) ಹಾಗೂ P2M (Person to Merchant) ಪಾವತಿಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.

## 'ಕೇರಳ' ಈಗ ಅಧಿಕೃತವಾಗಿ 'ಕೇರಳಂ': ಕೇಂದ್ರ ಗೃಹ ಸಚಿವಾಲಯದ ಸೂಚನೆ!




➤ ದಕ್ಷಿಣ ಭಾರತದ ಕರಾವಳಿ ರಾಜ್ಯವಾದ 'ಕೇರಳ' ದ ಹೆಸರನ್ನು ಅಧಿಕೃತವಾಗಿ 'ಕೇರಳಂ' (Keralam) ಎಂದು ಮರುನಾಮಕರಣ ಮಾಡಿ ಕೇಂದ್ರ ಗೃಹ ಸಚಿವಾಲಯವು ಗೆಜೆಟ್ ಅಧಿಸೂಚನೆ (Gazette Notification) ಹೊರಡಿಸಿದೆ. ಆಗಸ್ಟ್ 25, 2026 ರಿಂದ ಜಾರಿಗೆ ಬರುವಂತೆ 'ದಿ ಕೇರಳ (ಆಲ್ಟರೇಷನ್ ಆಫ್ ನೇಮ್) ಆಕ್ಟ್, 2026' (The Kerala Alteration of Name Act, 2026) ರ ಅಡಿಯಲ್ಲಿ ಈ ಹೊಸ ಹೆಸರು ಅಧಿಕೃತವಾಗಿ ಅನುಷ್ಠಾನಕ್ಕೆ ಬಂದಿದೆ.

**➤ ಮರುನಾಮಕರಣದ ಸಂಪೂರ್ಣ ಹಿನ್ನೆಲೆ ಹಾಗೂ ಕಾಲಾನುಕ್ರಮ:**
ಜೂನ್ 2024: ಕೇರಳ ವಿಧಾನಸಭೆಯು ರಾಜ್ಯದ ಹೆಸರನ್ನು ಮಲಯಾಳಂ ಭಾಷೆಯ ಉಚ್ಚಾರಣೆಗೆ ತಕ್ಕಂತೆ 'ಕೇರಳಂ' ಎಂದು ಬದಲಾಯಿಸಲು ಕೋರಿ ಕೇಂದ್ರ ಸರ್ಕಾರಕ್ಕೆ ಸರ್ವಾನುಮತದ ನಿರ್ಣಯವನ್ನು ಕಳುಹಿಸಿತ್ತು.
ಫೆಬ್ರವರಿ 24, 2026: ಕೇಂದ್ರ ಸಂಪುಟವು ಈ ಪ್ರಸ್ತಾವನೆಗೆ ಅನುಮೋದನೆ ನೀಡಿತು.
ಆಗಸ್ಟ್ 11, 2026: ಲೋಕಸಭೆಯಲ್ಲಿ 'ಕೇರಳ (ಹೆಸರು ಬದಲಾವಣೆ) ಮಸೂದೆ, 2026' ಪ್ರವೇಶಗೊಂಡು ಅಂಗೀಕಾರವಾಯಿತು.
ಆಗಸ್ಟ್ 12, 2026: ರಾಜ್ಯಸಭೆಯಲ್ಲೂ ಈ ಮಸೂದೆ ಯಶಸ್ವಿಯಾಗಿ ಅಂಗೀಕಾರಗೊಂಡಿತು.
ಆಗಸ್ಟ್ 14, 2026: ಗೌರವಾನ್ವಿತ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಈ ಮಸೂದೆಗೆ ಒಪ್ಪಿಗೆ (Presidential Assent) ನೀಡಿದರು.
ಆಗಸ್ಟ್ 25, 2026: ಕೇಂದ್ರ ಗೃಹ ಸಚಿವಾಲಯವು ಅಧಿಕೃತ ಗೆಜೆಟ್ ಅಧಿಸೂಚನೆ ಹೊರಡಿಸುವುದರ ಮೂಲಕ 'ಕೇರಳಂ' ಹೆಸರು ಜಾರಿಗೆ ಬಂದಿತು.

➤ ಸಂವಿಧಾನದ 3 ನೇ ವಿಧಿ (Article 3): ಭಾರತ ಸಂವಿಧಾನದ 3 ನೇ ವಿಧಿಯು ಸಂಸತ್ತಿಗೆ ಹೊಸ ರಾಜ್ಯಗಳ ರಚನೆ, ಚಾಲ್ತಿಯಲ್ಲಿರುವ ರಾಜ್ಯಗಳ ಗಡಿ, ವಿಸ್ತೀರ್ಣ ಅಥವಾ ಹೆಸರುಗಳನ್ನು ಬದಲಾಯಿಸುವ (Alteration of Names) ಪರಿಪೂರ್ಣ ಅಧಿಕಾರವನ್ನು ನೀಡುತ್ತದೆ.
➤ ಸಂವಿಧಾನದ 1 ನೇ ಅನುಸೂಚಿ (First Schedule): ಈ ಕಾಯ್ದೆಯು ಜಾರಿಗೆ ಬಂದ ನಂತರ ಭಾರತೀಯ ಸಂವಿಧಾನದ 1 ನೇ ಅನುಸೂಚಿಯಲ್ಲಿರುವ ರಾಜ್ಯಗಳ ಪಟ್ಟಿಯಲ್ಲಿ 'ಕೇರಳ' ಎಂಬ ಹೆಸರಿನ ಬದಲಾಗಿ 'ಕೇರಳಂ' ಎಂದು ತಿದ್ದುಪಡಿ ಮಾಡಲಾಗುತ್ತದೆ.
➤ ಸಂವಿಧಾನ ತಿದ್ದುಪಡಿ (Article 368 ಅಗತ್ಯವಿದೆಯೇ?): 3 ನೇ ವಿಧಿಯಡಿ ಮಾಡುವ ರಾಜ್ಯಗಳ ಹೆಸರು ಅಥವಾ ಗಡಿ ಬದಲಾವಣೆಯನ್ನು Article 368 ರ ಅಡಿಯಲ್ಲಿ "ವಿಶೇಷ ಸಂವಿಧಾನ ತಿದ್ದುಪಡಿ" ಎಂದು ಪರಿಗಣಿಸಲಾಗುವುದಿಲ್ಲ. ಇದನ್ನು ಸಂಸತ್ತಿನಲ್ಲಿ ಸಾಧಾರಣ ಬಹುಮತದ (Simple Majority) ಮೂಲಕವೇ ಅಂಗೀಕರಿಸಬಹುದು.

## ಭಾರತದಲ್ಲಿ ನಿರುದ್ಯೋಗ ಮತ್ತು ಕೌಶಲ್ಯ ಕೊರತೆ: NITI Aayog ಪ್ರಕಟಿಸಿದ 8.7 ಕೋಟಿ 'NEET' ಯುವಕರ ವರದಿ




➤ ಭಾರತದ ನಿರುದ್ಯೋಗ ಮತ್ತು ಕೌಶಲ್ಯಾಭಿವೃದ್ಧಿಗೆ ಸಂಬಂಧಿಸಿದಂತೆ ನೀತಿ ಆಯೋಗವು (NITI Aayog) ಇತ್ತೀಚೆಗೆ 'Reimagining Skilling for Viksit Bharat@2047' ಎಂಬ ಮಹತ್ವದ ವರದಿಯನ್ನು ಬಿಡುಗಡೆ ಮಾಡಿದೆ.
➤NEET ಅಂದರೆ ವೈದ್ಯಕೀಯ ಪರೀಕ್ಷೆಯಲ್ಲ (NEET Entrance Exam). ಬದಲಿಗೆ: Not in Education, Employment, or Training (ಶಿಕ್ಷಣ, ಉದ್ಯೋಗ ಅಥವಾ ಕೌಶಲ್ಯ ತರಬೇತಿ – ಈ ಯಾವುದರಲ್ಲೂ ಇಲ್ಲದವರು). 15 ರಿಂದ 29 ವರ್ಷದೊಳಗಿನ ಯುವಜನರು ಈ ವರ್ಗಕ್ಕೆ ಸೇರುತ್ತಾರೆ. ರಾಷ್ಟ್ರೀಯ ಮಾದರಿ ಸಮೀಕ್ಷೆಯ (NSS 78th Round - 2021) ದತ್ತಾಂಶ ಆಧರಿಸಿ ನೀತಿ ಆಯೋಗವು ಈ ಅಂಕಿ-ಅಂಶವನ್ನು ಪ್ರಕಟಿಸಿದೆ.

**➤ ನೀತಿ ಆಯೋಗ ವರದಿಯ ಪ್ರಮುಖ ಮುಖ್ಯಾಂಶಗಳು:**
NEET ಯುವಕರ ಸಂಖ್ಯೆ: 8.7 ಕೋಟಿ (15-29 ವಯೋಮಾನ)
ವಿದ್ಯಾರ್ಹತೆಗೆ ತಕ್ಕ ಕೆಲಸ: ಕೇವಲ 8.25% ಪದವೀಧರರಿಗೆ ಮಾತ್ರ ಅವರ ವಿದ್ಯಾರ್ಹತೆಗೆ ಸೂಕ್ತವಾದ ಕೆಲಸ ಲಭ್ಯವಿದೆ.
2014-15 ರಿಂದ ತರಬೇತಿ ಪಡೆದವರು: 7.67 ಕೋಟಿಗೂ ಹೆಚ್ಚು ಜನರಿಗೆ ಕೌಶಲ್ಯ ತರಬೇತಿ ನೀಡಲಾಗಿದೆ.
ಆರ್ಥಿಕ ಹೊರೆ (Financial Barrier) : ಉನ್ನತ ಶಿಕ್ಷಣ ಹಾಗೂ ಕೋಚಿಂಗ್ ಮುಗಿಸಿದ ನಂತರ ಹೆಚ್ಚುವರಿ ಕೌಶಲ್ಯ ತರಬೇತಿಗಾಗಿ ಹಣ ವೆಚ್ಚ ಮಾಡಲು ಸಾಧ್ಯವಾಗದಿರುವುದು.

**➤ ಪ್ರಮುಖ ಸಮಸ್ಯೆಗಳು ಹಾಗೂ ಸವಾಲುಗಳು:**
ಶಿಕ್ಷಣ ಮತ್ತು ಉದ್ಯೋಗದ ನಡುವಿನ ಕಂದಕ: ಪದವಿ ಮುಗಿಸಿದ ನಂತರವೂ ಪ್ರಾಯೋಗಿಕ ಜ್ಞಾನ (Practical Skills) ಹಾಗೂ ಉದ್ಯಮಕ್ಕೆ ಅಗತ್ಯವಿರುವ ಕೌಶಲ್ಯದ ಕೊರತೆಯಿಂದಾಗಿ ಹೆಚ್ಚಿನ ಯುವಕರು ಕೆಲಸ ಪಡೆಯಲು ಸಾಧ್ಯವಾಗುತ್ತಿಲ್ಲ.
ಆರ್ಥಿಕ ಮುಗ್ಗಟ್ಟು: ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ಯುವಕರು ಶಿಕ್ಷಣ ಮುಗಿದ ತಕ್ಷಣ ಕಡಿಮೆ ವೇತನದ ಕೆಲಸಕ್ಕೆ ಸೇರಿಕೊಳ್ಳುತ್ತಾರೆ ಅಥವಾ ಯಾವುದೇ ಕೆಲಸ ಸಿಗದೆ 'NEET' ಗುಂಪಿಗೆ ಸೇರುತ್ತಾರೆ.
ಸ್ಕಿಲ್ಲಿಂಗ್ ಕೋರ್ಸ್‌ಗಳ ವೆಚ್ಚ: ಈಗಾಗಲೇ ಉನ್ನತ ಶಿಕ್ಷಣಕ್ಕೆ ಖರ್ಚು ಮಾಡಿರುವ ಅಭ್ಯರ್ಥಿಗಳು ಮತ್ತೆ ಹಣ ನೀಡಿ ಪ್ರತ್ಯೇಕ ಕೌಶಲ್ಯ ಕೋರ್ಸ್ ಮಾಡಲು ಹಿಂಜರಿಯುತ್ತಿದ್ದಾರೆ.

**➤ ನೀತಿ ಆಯೋಗದ ಪ್ರಮುಖ ಶಿಫಾರಸುಗಳು:**
Learn While You Earn (ಗಳಿಸುತ್ತಾ ಕಲಿಯಿರಿ): ಯುವಕರು ಉದ್ಯೋಗ ಮಾಡುತ್ತಲೇ ಕೌಶಲ್ಯ ಹೆಚ್ಚಿಸಿಕೊಳ್ಳಲು (Reskilling) ಅವಕಾಶ ನೀಡುವುದು.
ಸಬ್ಸಿಡಿ ಹಾಗೂ ಉಚಿತ ಕೌಶಲ್ಯ ತರಬೇತಿ: ಆರ್ಥಿಕವಾಗಿ ಹಿಂದುಳಿದ ವರ್ಗದ ಯುವಕರಿಗೆ ರಿಯಾಯಿತಿ ದರದಲ್ಲಿ ತರಬೇತಿ ನೀಡುವುದು.
ವಿಕಸಿತ ಭಾರತ 2047 (Viksit Bharat@2047): ಭಾರತವು 2047 ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು ಯುವಜನತೆಯಲ್ಲಿ ನಿರಂತರ ಕಲಿಕೆ ಮತ್ತು ಸ್ವಯಂ ಉದ್ಯೋಗ (Self-Employment) ಮಾರ್ಗಗಳನ್ನು ಉತ್ತೇಜಿಸುವುದು ಅಗತ್ಯ.

## ಭಾರತೀಯ ನೌಕಾಪಡೆಗೆ ಅತ್ಯಾಧುನಿಕ 'ನಿಪುಣ್' ನೌಕೆ ಸೇರ್ಪಡೆ: ಸಾಗರದಾಳದ ಕಾರ್ಯಾಚರಣೆಗೆ ಬಿಗ್ ಬೂಸ್ಟ್!



➤ ಭಾರತೀಯ ನೌಕಾಪಡೆಯ ಸಾಗರದಾಳದ ಶೋಧ, ರಕ್ಷಣೆ ಹಾಗೂ ತಾಂತ್ರಿಕ ಸಾಮರ್ಥ್ಯಕ್ಕೆ ಮತ್ತಷ್ಟು ಬಲ ತುಂಬಲು 'ನಿಪುಣ್' (INS Nipun) ಎಂಬ ಅತ್ಯಾಧುನಿಕ ಡೈವಿಂಗ್ ಸಪೋರ್ಟ್ ವೆಸೆಲ್ (DSV) ಸಜ್ಜಾಗಿದೆ. 2026ರ ಆಗಸ್ಟ್ 31ರಂದು ಮುಂಬೈನ ನೌಕಾನೆಲೆಯಲ್ಲಿ (Naval Dockyard) ನಡೆಯಲಿರುವ ವಿಶೇಷ ಸಮಾರಂಭದಲ್ಲಿ ಈ ನೌಕೆಯನ್ನು ಅಧಿಕೃತವಾಗಿ ಭಾರತೀಯ ನೌಕಾಪಡೆಗೆ ಸೇರ್ಪಡೆಗೊಳಿಸಲಾಗುತ್ತಿದೆ.

**➤ 'ನಿಪುಣ್' ನೌಕೆಯ ಹಿನ್ನೆಲೆ ಮತ್ತು ತಯಾರಿಕೆ:**

ತಯಾರಕ ಸಂಸ್ಥೆ: ಆಂಧ್ರಪ್ರದೇಶದ ವಿಶಾಖಪಟ್ಟಣಂನಲ್ಲಿರುವ ಸ್ವದೇಶಿ ನೌಕಾ ನಿರ್ಮಾಣ ಸಂಸ್ಥೆ ಹಿಂದೂಸ್ತಾನ್ ಶಿಪ್‌ಯಾರ್ಡ್ ಲಿಮಿಟೆಡ್ (HSL) ಈ ನೌಕೆಯನ್ನು ವಿನ್ಯಾಸಗೊಳಿಸಿ ನಿರ್ಮಿಸಿದೆ.

ಶೇಕಡಾವಾರು ಸ್ವದೇಶಿ ತಂತ್ರಜ್ಞಾನ: 'ಆತ್ಮನಿರ್ಭರ ಭಾರತ್' ಹಾಗೂ 'ಮೇಕ್ ಇನ್ ಇಂಡಿಯಾ' ಅಭಿಯಾನದಡಿ ಸುಮಾರು 75% ರಿಂದ 80% ಗಿಂತ ಹೆಚ್ಚು ಸ್ವದೇಶಿ ಉಪಕರಣಗಳನ್ನು ಬಳಸಿ ಇದನ್ನು ಸಿದ್ಧಪಡಿಸಲಾಗಿದೆ.

ಶ್ರೇಣಿ: ಇದು ನಿಸ್ತಾರ್ ಶ್ರೇಣಿಯ (Nistar-Class) ಎರಡನೇ ಡೈವಿಂಗ್ ಸಪೋರ್ಟ್ ನೌಕೆಯಾಗಿದೆ. ಈ ಶ್ರೇಣಿಯ ಮೊದಲ ನೌಕೆ 'ನಿಸ್ತಾರ್' (INS Nistar) ಅನ್ನು ಈಗಾಗಲೇ ನೌಕಾಪಡೆಗೆ ಸೇರ್ಪಡೆಗೊಳಿಸಲಾಗಿತ್ತು.

ಹಸ್ತಾಂತರ: ಅಗತ್ಯ ತಾಂತ್ರಿಕ ಹಾಗೂ ಕಾರ್ಯಾಚರಣೆಯ ಸುದೀರ್ಘ ಪರೀಕ್ಷಾರ್ಥ ಪ್ರಯೋಗಗಳ ಬಳಿಕ, 2026ರ ಜುಲೈ 30ರಂದು 'ನಿಪುಣ್' ನೌಕೆಯನ್ನು ನೌಕಾಪಡೆಗೆ ಹಸ್ತಾಂತರಿಸಲಾಗಿತ್ತು.

**➤ ನೌಕೆಯ ಪ್ರಮುಖ ವೈಶಿಷ್ಟ್ಯಗಳು ಮತ್ತು ಕಾರ್ಯ ಸಾಮರ್ಥ್ಯ:**

**ಪ್ರಮುಖ ಪಾತ್ರ:** ಸಾಗರದಾಳದ ಶೋಧನೆ, ಡೈವಿಂಗ್ ಬೆಂಬಲ, ಜಲಾಂತರ್ಗಾಮಿ ರಕ್ಷಣೆ

**ಮಾತೃ ನೌಕೆ (Mother Ship):** ಜಲಾಂತರ್ಗಾಮಿ ಅಪಘಾತದ ವೇಳೆ 'ಆಳ ಸಮುದ್ರ ರಕ್ಷಣಾ ಜಲಾಂತರ್ಗಾಮಿ'ಗೆ (DSRV) ಮಾತೃ ನೌಕೆಯಾಗಿ ಕಾರ್ಯನಿರ್ವಹಣೆ

ತಂತ್ರಜ್ಞಾನ: ಅತ್ಯಾಧುನಿಕ ಸ್ಯಾಚುರೇಶನ್ ಡೈವಿಂಗ್ ಸಿಸ್ಟಮ್, ರೋಬೋಟಿಕ್ ROV, ಪಥದರ್ಶಕ (Navigation) ವ್ಯವಸ್ಥೆ

ವೈದ್ಯಕೀಯ ಸೌಲಭ್ಯ: ಆಳ ಸಮುದ್ರದಲ್ಲಿ ಮುಳುಗುಗಾರರ (Divers) ಸುರಕ್ಷತೆಗೆ ಹೈಪರ್‌ಬಾರಿಕ್ ವೈದ್ಯಕೀಯ ಕೊಠಡಿ

**➤ ರಕ್ಷಣಾ ಸಚಿವರ ಹೇಳಿಕೆ:** "ಸ್ವದೇಶಿ ರಕ್ಷಣಾ ಉತ್ಪಾದನಾ ವಲಯವನ್ನು ಬಲಪಡಿಸಲು ಮತ್ತು ಎಂಎಸ್‌ಎಂಇ ಸಂಸ್ಥೆಗಳಿಗೆ ಹೊಸ ಅವಕಾಶ ಸೃಷ್ಟಿಸಲು ಇದು ಮಹತ್ವದ ಮೈಲಿಗಲ್ಲು" ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದಾರೆ.

## 2047ರ ವೇಳೆಗೆ 30 ಟ್ರಿಲಿಯನ್ ಡಾಲರ್ ಆರ್ಥಿಕತೆಯತ್ತ ಭಾರತ - ಪೀಯೂಷ್ ಗೋಯಲ್



➤ ಜಪಾನ್‌ನ ಟೋಕಿಯೊದಲ್ಲಿ ಆಯೋಜಿಸಲಾಗಿದ್ದ ಪ್ರಮುಖ ಹಣಕಾಸು ಮತ್ತು ಹೂಡಿಕೆ ಸಂಸ್ಥೆಗಳ ನಾಯಕರ ಸಭೆಯಲ್ಲಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರಾದ ಪೀಯೂಷ್ ಗೋಯಲ್ ಅವರು ಮಾತನಾಡಿದರು. ಪ್ರಸ್ತುತ ಜಾಗತಿಕ ಮಟ್ಟದಲ್ಲಿ ಅನೇಕ ಆರ್ಥಿಕ ಅನಿಶ್ಚಿತತೆಗಳು ಮುಂದುವರಿದಿದ್ದರೂ, ಭಾರತದ ಬಲವಾದ ಆರ್ಥಿಕ ಅಡಿಪಾಯದಿಂದಾಗಿ ದೇಶವು ಶೇ. 7.7ರಷ್ಟು ದೃಢ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿದೆ ಎಂದು ಅವರು ಉಲ್ಲೇಖಿಸಿದರು. ಭಾರತದ ಸುಭದ್ರ ಬ್ಯಾಂಕಿಂಗ್ ಕ್ಷೇತ್ರ, ಕಡಿಮೆ ಪ್ರಮಾಣದ ಎನ್‌ಪಿಎ (NPA - Non-Performing Assets) ಮತ್ತು ಬೆಳೆಯುತ್ತಿರುವ ಮಧ್ಯಮ ವರ್ಗದ ಆದಾಯ ಸಾಮರ್ಥ್ಯವು ದೇಶದ ಪ್ರಗತಿಗೆ ಮುಖ್ಯ ಕಾರಣಗಳಾಗಿವೆ.

**➤ ಜಪಾನ್ ನಾಯಕರೊಂದಿಗೆ ವಿಸ್ತೃತ ಚರ್ಚೆ:** ಈ ಪ್ರಮುಖ ಸಭೆಯಲ್ಲಿ ಭಾರತದಲ್ಲಿ ದೀರ್ಘಕಾಲೀನ ಬಂಡವಾಳ ಹರಿವನ್ನು (Long-term Capital Flow) ಹೆಚ್ಚಿಸುವುದು ಹಾಗೂ ಭಾರತದ ಅಭಿವೃದ್ಧಿ ಪಯಣದಲ್ಲಿ ಜಪಾನ್‌ನ ಭಾಗವಹಿಸುವಿಕೆಯನ್ನು ಮತ್ತಷ್ಟು ವಿಸ್ತರಿಸುವ ಬಗ್ಗೆ ಆಳವಾದ ಚರ್ಚೆ ನಡೆಯಿತು.

**➤ ಸಭೆಯಲ್ಲಿ ಪಾಲ್ಗೊಂಡ ಪ್ರಮುಖ ಸಂಸ್ಥೆಗಳು:**

ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಜಪಾನ್ (DBJ)

ಮಿಯುಹೋ (Mizuho)

ಮೋರ್ಗಾನ್ ಸ್ಟ್ಯಾನ್ಲಿ (Morgan Stanley)

ನೊಮುರಾ (Nomura)

ನಿಪ್ಪಾನ್ ಲೈಫ್ (Nippon Life)

MUFG (Mitsubishi UFJ Financial Group)

**➤ ಜಪಾನಿ ಹೂಡಿಕೆದಾರರಿಗೆ ಪ್ರಮುಖ ಕ್ಷೇತ್ರಗಳು:** ಸಚಿವರು ಭಾರತದಲ್ಲಿ ಜಪಾನ್ ಹೂಡಿಕೆದಾರರಿಗೆ ಅವಕಾಶವಿರುವ ಪ್ರಮುಖ ಮತ್ತು ಮುಂಚೂಣಿ ಕ್ಷೇತ್ರಗಳನ್ನು ಪಟ್ಟಿ ಮಾಡಿದ್ದಾರೆ:

ಸೆಮಿಕಂಡಕ್ಟರ್ ಮತ್ತು ಎಐ (Semiconductors & AI): 'ಇಂಡಿಯಾ ಸೆಮಿಕಂಡಕ್ಟರ್ ಮಿಷನ್' ಅಡಿಯಲ್ಲಿ ಬೃಹತ್ ಅವಕಾಶಗಳು.

ನವೀಕರಿಸಬಹುದಾದ ಇಂಧನ & ಹಸಿರು ಜಲಜನಕ (Renewable Energy & Green Hydrogen): ಪರಿಸರ ಸ್ನೇಹಿ ಇಂಧನ ವಲಯದಲ್ಲಿ ಜಪಾನ್‌ನ ತಂತ್ರಜ್ಞಾನ ಮತ್ತು ಬಂಡವಾಳ ಹೂಡಿಕೆ.

ಡೇಟಾ ಕೇಂದ್ರಗಳು ಮತ್ತು ಡಿಜಿಟಲ್ ಮೂಲಸೌಕರ್ಯ (Data Centres & Digital Infrastructure): ದೇಶದ ಬಲವಾದ ವಿದ್ಯುತ್ ಗ್ರಿಡ್ ವ್ಯವಸ್ಥೆಯು ಡೇಟಾ ಸೆಂಟರ್‌ಗಳಿಗೆ ಪೂರಕವಾಗಿದೆ.

ಸುಧಾರಿತ ಉತ್ಪಾದನೆ (Advanced Manufacturing): 'ಮೇಕ್ ಇನ್ ಇಂಡಿಯಾ' ಕಲ್ಪನೆಗೆ ಬಲ ತುಂಬುವ ನಿಟ್ಟಿನಲ್ಲಿ.

GIFT City (ಗುಜರಾತ್ ಇಂಟರ್ನ್ಯಾಷನಲ್ ಫೈನಾನ್ಸ್ ಟೆಕ್-ಸಿಟಿ): ಅಂತಾರಾಷ್ಟ್ರೀಯ ಬಂಡವಾಳ ಹರಿವಿಗೆ ಗೇಟ್‌ವೇ ಆಗಿ GIFT City ಬಳಕೆಯ ಸಾಧ್ಯತೆಗಳು.

## ಜಾಗತಿಕ ಉತ್ಪಾದನಾ ಕೇಂದ್ರವಾಗಿ ಭಾರತ: ಸರಕಾರಿ ಯೋಜನೆಗಳು ಹಾಗೂ ಜಾಗತಿಕ ವರದಿಗಳ ವಿಶ್ಲೇಷಣೆ




➤ ಭಾರತವು ಜಗತ್ತಿನ ಮುಂಚೂಣಿ ಉತ್ಪಾದನಾ ಕೇಂದ್ರವಾಗಿ (Global Manufacturing Hub) ಹೊರಹೊಮ್ಮುತ್ತಿರುವ ಕುರಿತು ಇತ್ತೀಚೆಗೆ ಮೇಕಿಂಗ್ ಆಫ್ ಎ ಗ್ಲೋಬಲ್ ಮ್ಯಾನುಫ್ಯಾಕ್ಚರಿಂಗ್ ಹಬ್ ವಿಷಯದಲ್ಲಿ ಜಾಗತಿಕ ಮಟ್ಟದಲ್ಲಿ ವ್ಯಾಪಕ ಚರ್ಚೆಗಳು ನಡೆಯುತ್ತಿವೆ.

➤ ಮೊರಕ್ಕೊ ಮೂಲದ ಪ್ರಸಿದ್ಧ 'ಅಸಾಹೀಫಾ' (Assahifa) ವಾರಪತ್ರಿಕೆಯು ತನ್ನ ವರದಿಯಲ್ಲಿ:

"ಭಾರತ ಸರಕಾರದ ಮಹತ್ವಾಕಾಂಕ್ಷೆಯ ಯೋಜನೆಗಳು, ಸಾಗರೋತ್ತರ ಹೂಡಿಕೆ ಹಾಗೂ ರಚನಾತ್ಮಕ ಸುಧಾರಣೆಗಳಿಂದಾಗಿ ಭಾರತೀಯ ಉತ್ಪಾದನಾ ವಲಯವು ಅದ್ಭುತ ಬೆಳವಣಿಗೆ ಸಾಧಿಸುತ್ತಿದ್ದು, ಮುಂಬರುವ ದಿನಗಳಲ್ಲಿ ಪ್ರಮುಖ ಜಾಗತಿಕ ಉತ್ಪಾದನಾ ತಾಣವಾಗುವ ಎಲ್ಲ ಲಕ್ಷಣಗಳಿವೆ" ಎಂದು ಪ್ರಶಂಸಿಸಿದೆ.

➤ ಇದರೊಂದಿಗೆ, ಭಾರತದ ನೀತಿ ಆಯೋಗ (NITI Aayog) ಮತ್ತು CRISIL Intelligence ಜಂಟಿಯಾಗಿ ಇತ್ತೀಚೆಗೆ ಬಿಡುಗಡೆ ಮಾಡಿದ "Key Sectors to Position India as a Global Manufacturing Hub" ವರದಿಯು ಭಾರತವನ್ನು ವಿಕ್ಸಿತ್ ಭಾರತ @2047 (Viksit Bharat @2047) ಕಲ್ಪನೆಯತ್ತ ಕೊಂಡೊಯ್ಯಲು ಉತ್ಪಾದನಾ ವಲಯವೇ ಪ್ರಮುಖ ಚಾಲಕ ಶಕ್ತಿ ಎಂಬುದನ್ನು ಎತ್ತಿಹಿಡಿದಿದೆ.

➤ ಭಾರತವನ್ನು ಜಾಗತಿಕ ಕೇಂದ್ರವನ್ನಾಗಿ ಮಾಡುತ್ತಿರುವ ಪ್ರಮುಖ ಸುಧಾರಣೆಗಳು:

ಮೇಕಿಂಗ್ ಇನ್ ಇಂಡಿಯಾ (Make in India): 2014 ರಲ್ಲಿ ಪ್ರಾರಂಭಗೊಂಡ ಈ ಯೋಜನೆಯು ಭಾರತವನ್ನು ಅಂತಾರಾಷ್ಟ್ರೀಯ ಕಂಪನಿಗಳ ನೆಚ್ಚಿನ ಹೂಡಿಕೆ ತಾಣವನ್ನಾಗಿ ಮಾರ್ಪಡಿಸಿದೆ.

ಉತ್ಪಾದನೆ ಆಧರಿತ ಉತ್ತೇಜನ (PLI ) ಯೋಜನೆ: ದೇಶೀಯ ಉತ್ಪಾದನೆಗೆ ವೇಗ ನೀಡಲು ಹಾಗೂ ರಫ್ತು ಹೆಚ್ಚಿಸಲು ೧೪ಕ್ಕೂ ಹೆಚ್ಚು ಪ್ರಮುಖ ಕ್ಷೇತ್ರಗಳಲ್ಲಿ ಸಾವಿರಾರು ಕೋಟಿ ರೂ.ಗಳ ಆರ್ಥಿಕ ಪ್ರೋತ್ಸಾಹಧನ ನೀಡಲಾಗುತ್ತಿದೆ.

ಪಿಎಂ ಗತಿ ಶಕ್ತಿ : ಮೂಲಸೌಕರ್ಯ ಮತ್ತು ಸಾರಿಗೆ ವ್ಯವಸ್ಥೆಯ ಏಕೀಕರಣಕ್ಕಾಗಿ ಜಾರಿಗೆ ಬಂದ ಯೋಜನೆ.

ರಾಷ್ಟ್ರೀಯ ಲಾಜಿಸ್ಟಿಕ್ಸ್ ನೀತಿ: ಸರಕು ಸಾಗಣೆ ವೆಚ್ಚವನ್ನು (Logistics cost) ಕಡಿಮೆ ಮಾಡಿ ಜಾಗತಿಕ ರಫ್ತು ಕ್ಷೇತ್ರದಲ್ಲಿ ಭಾರತದ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದು.

ಜಿಎಸ್‌ಟಿ ಮತ್ತು ಡಿಜಿಟಲ್ ಆಡಳಿತ: ಸರಕು ಮತ್ತು ಸೇವಾ ತೆರಿಗೆ (GST) ವ್ಯವಸ್ಥೆಯು ದೇಶಾದ್ಯಂತ 'ಒಂದೇ ತೆರಿಗೆ-ಒಂದೇ ಮಾರುಕಟ್ಟೆ' ಕಲ್ಪನೆಯನ್ನು ತಂದಿದ್ದರೆ, ಡಿಜಿಟಲ್ ವ್ಯವಸ್ಥೆ ಹಾಗೂ ಕಾರ್ಮಿಕ ಕಾನೂನುಗಳ ತರ್ಕಬದ್ಧತೆಯು ('Ease of Doing Business') ಜಾಗತಿಕ ಕಂಪನಿಗಳಿಗೆ ಸುಲಭ ಉದ್ಯಮ ವಾತಾವರಣ ಸೃಷ್ಟಿಸಿದೆ.

**➤ ನೀತಿ ಆಯೋಗ ಗುರುತಿಸಿರುವ 12 ಪ್ರಮುಖ ಆದ್ಯತೆಯ ಕ್ಷೇತ್ರಗಳು:**

ಟೆಲಿಕಾಂ ಉಪಕರಣಗಳು (Telecom Equipment), ಸೌರ ಪಿವಿ (Solar PV), ಔಷಧ ವಲಯ (Pharmaceuticals), ರಾಸಾಯನಿಕಗಳು (Chemicals), ಆಟೋಮೊಬೈಲ್ಸ್ (Automobiles), ರಕ್ಷಣೆ ಮತ್ತು ಡ್ರೋನ್‌ಗಳು (Defence & Drones),ಉಕ್ಕು (Steel), ಬಂಡವಾಳ ಸರಕುಗಳು (Capital Goods), ಜವಳಿ (Textiles), ಆಹಾರ ಸಂಸ್ಕರಣೆ (Food Processing), ಚರ್ಮ ಮತ್ತು ಪಾದರಕ್ಷೆಗಳು (Leather & Footwear)

## 27 Aug 2026

## ಆಗಸ್ಟ್-27: ವಿಶ್ವ ಸರೋವರ ದಿನ 2026




➤ ಪ್ರತಿ ವರ್ಷ ಆಗಸ್ಟ್ 27 ರಂದು ವಿಶ್ವದಾದ್ಯಂತ 'ವಿಶ್ವ ಸರೋವರ ದಿನ' (World Lake Day) ವನ್ನು ಆಚರಿಸಲಾಗುತ್ತದೆ. ಸಿಹಿ ನೀರಿನ ಮೂಲಗಳಾದ ಸರೋವರಗಳ ರಕ್ಷಣೆ, ಜೈವಿಕ ವೈವಿಧ್ಯತೆಯ ಸಂರಕ್ಷಣೆ ಮತ್ತು ಹವಾಮಾನ ವೈಪರೀತ್ಯ ತಡೆಯುವಲ್ಲಿ ಸರೋವರಗಳ ಪಾತ್ರದ ಕುರಿತು ಜಾಗೃತಿ ಮೂಡಿಸಲು ಈ ದಿನವನ್ನು ಮೀಸಲಿಡಲಾಗಿದೆ.

https://www.youtube.com/watch?v=Int6sM_VcL4ಆಗಸ್ಟ್ 27, 1984: ಜಪಾನ್‌ನ ಶಿಗಾ ಪ್ರಾಂತ್ಯದಲ್ಲಿ (Shiga Prefecture) ಜಪಾನ್‌ನ ಅತಿ ದೊಡ್ಡ ಸಿಹಿ ನೀರಿನ ಸರೋವರವಾದ 'ಬೀವಾ ಸರೋವರ' (Lake Biwa) ದ ಸಮೀಪ ಮೊದಲ ವಿಶ್ವ ಸರೋವರ ಸಮ್ಮೇಳನ ನಡೆಯಿತು.

ಡಿಸೆಂಬರ್ 2024: ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು (UNGA) ಆಗಸ್ಟ್ 27 ಅನ್ನು 'ವಿಶ್ವ ಸರೋವರ ದಿನ' ಎಂದು ಅಧಿಕೃತವಾಗಿ ಘೋಷಿಸಿತು.

ಆಗಸ್ಟ್ 27, 2025: ಜಾಗತಿಕವಾಗಿ ಪ್ರಥಮ ಬಾರಿಗೆ ವಿಶ್ವ ಸರೋವರ ದಿನವನ್ನು ಆಚರಿಸಲಾಯಿತು.

**➤ ಸರೋವರಗಳ ಪ್ರಾಮುಖ್ಯತೆ:**

ಸಿಹಿ ನೀರಿನ ಮೂಲ: ಮಾನವನ ಕುಡಿಯುವ ನೀರು, ಕೃಷಿ ಮತ್ತು ಕೈಗಾರಿಕಾ ಅಗತ್ಯಗಳಿಗೆ ಸರೋವರಗಳು ಪ್ರಮುಖ ಜೀವಜಲವಾಗಿವೆ.

ಜೈವಿಕ ವೈವಿಧ್ಯತೆ (Biodiversity): ಅನೇಕ ಜಾತಿಯ ಮೀನುಗಳು, ಜಲಚರಗಳು, ಸಸ್ಯಗಳು ಹಾಗೂ ವಲಸೆ ಹಕ್ಕಿಗಳಿಗೆ ಇದು ನೈಸರ್ಗಿಕ ಆವಾಸಸ್ಥಾನವಾಗಿದೆ.

ಹವಾಮಾನ ನಿಯಂತ್ರಣ (Climate Regulation): ಇಂಗಾಲವನ್ನು (Carbon) ಹೀರಿಕೊಳ್ಳುವ ಮೂಲಕ ಮತ್ತು ಸ್ಥಳೀಯ ಹವಾಮಾನವನ್ನು ಸಮತೋಲನದಲ್ಲಿಡುವಲ್ಲಿ ಸರೋವರಗಳು ನೆರವಾಗುತ್ತವೆ.

ಪ್ರವಾಹ ತಡೆ: ಹೆಚ್ಚುವರಿ ಮಳೆನೀರನ್ನು ಹಿಡಿದಿಟ್ಟುಕೊಂಡು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪ್ರವಾಹವಾಗದಂತೆ ತಡೆಯುತ್ತವೆ.

**➤ ವಿಶ್ವದ ಪ್ರಮುಖ ಸರೋವರಗಳು:**

ಕ್ಯಾಸ್ಪಿಯನ್ ಸಮುದ್ರ (Caspian Sea): ವಿಸ್ತೀರ್ಣದಲ್ಲಿ ವಿಶ್ವದ ಅತ್ಯಂತ ದೊಡ್ಡ ಆವೃತ (Landlocked) ಜಲರಾಶಿ/ಸರೋವರ.

ಬೈಕಲ್ ಸರೋವರ (Lake Baikal - ರಷ್ಯಾ): ವಿಶ್ವದ ಅತ್ಯಂತ ಆಳವಾದ (1,642 ಮೀ) ಹಾಗೂ ಹಳೆಯ ಸಿಹಿ ನೀರಿನ ಸರೋವರ.

ಸುಪೀರಿಯರ್ ಸರೋವರ (Lake Superior - ಕೆನಡಾ/USA): ಮೇಲ್ಮೈ ವಿಸ್ತೀರ್ಣದಲ್ಲಿ ವಿಶ್ವದ ಅತಿ ದೊಡ್ಡ ಸಿಹಿ ನೀರಿನ ಸರೋವರ.

ವಿಕ್ಟೋರಿಯಾ ಸರೋವರ (Lake Victoria - ಆಫ್ರಿಕಾ): ಆಫ್ರಿಕಾ ಖಂಡದ ಅತಿ ದೊಡ್ಡ ಸರೋವರ (ಟಾಂಜಾನಿಯಾ, ಉಗಾಂಡಾ, ಕೀನ್ಯಾ ಗಡಿಗಳಲ್ಲಿದೆ).

ಟಿಟಿಕಾಕಾ ಸರೋವರ (Lake Titicaca - ಪೆರು/ಬೊಲಿವಿಯಾ): ವಿಶ್ವದಲ್ಲೇ ಅತ್ಯಂತ ಎತ್ತರದಲ್ಲಿರುವ ವಾಣಿಜ್ಯಕವಾಗಿ ದೋಣಿ ಸಂಚಾರ ಯೋಗ್ಯ ಸರೋವರ (3,812 ಮೀ ಎತ್ತರ).

ಮೃತ ಸಮುದ್ರ (Dead Sea - ಜೋರ್ಡಾನ್/ಇಸ್ರೇಲ್): ಭೂಮಿಯ ಮೇಲಿನ ಅತ್ಯಂತ ತಳಮಟ್ಟದ ಹಾಗೂ ಅತಿ ಹೆಚ್ಚು ಲವಣಾಂಶ (Salinity) ಹೊಂದಿರುವ ಸರೋವರ.

## ದೆಹಲಿ ಹೋಂ ಗಾರ್ಡ್ಸ್ ಮಹಾನಿರ್ದೇಶಕರಾಗಿ ಸತೀಶ್ ಗೋಲ್ಚಾ ನೇಮಕ



➤ ಆಗಸ್ಟ್ 26, 2026 ರಂದು ಹೊರಡಿಸಲಾದ ಅಧಿಕೃತ ಆದೇಶದಂತೆ, ದೆಹಲಿ ಪೊಲೀಸ್ ಮಾಜಿ ಕಮಿಷನರ್ ಹಾಗೂ ಹಿರಿಯ ಐಪಿಎಸ್ (IPS) ಅಧಿಕಾರಿ ಸತೀಶ್ ಗೋಲ್ಚಾ ಅವರನ್ನು ದೆಹಲಿ ಹೋಂ ಗಾರ್ಡ್ಸ್ ನಿರ್ದೇಶನಾಲಯದ ನೂತನ ಮಹಾನಿರ್ದೇಶಕರನ್ನಾಗಿ (Director General - DG) ನೇಮಕ ಮಾಡಲಾಗಿದೆ.

ಅಧಿಕಾರಿ ಹೆಸರು: ಸತೀಶ್ ಗೋಲ್ಚಾ (Satish Golcha), IPS

ಕ್ಯಾಡರ್ & ಬ್ಯಾಚ್: 1992ರ AGMUT (ಅರುಣಾಚಲ ಪ್ರದೇಶ-ಗೋವಾ-ಮಿಜೋರಾಂ ಮತ್ತು ಕೇಂದ್ರಾಡಳಿತ ಪ್ರದೇಶಗಳು) ಬ್ಯಾಚ್.

**ಹೊಸ ಹುದ್ದೆ:** ದೆಹಲಿ ಹೋಂ ಗಾರ್ಡ್ಸ್ ಮಹಾನಿರ್ದೇಶಕರು (Director General of Delhi Home Guards).
ಅಧಿಕಾರ ಸ್ವೀಕಾರ ದಿನಾಂಕ: ಅಕ್ಟೋಬರ್ 1, 2026.
ತಾತ್ಕಾಲಿಕ ಹುದ್ದೆ: ಸೆಪ್ಟೆಂಬರ್ 30, 2026 ರವರೆಗೆ ಹೋಂ ಗಾರ್ಡ್ಸ್ ನಿರ್ದೇಶನಾಲಯದ ವಿಶೇಷ ಕರ್ತವ್ಯಾಧಿಕಾರಿ (OSD - Officer on Special Duty) ಆಗಿ ಕಾರ್ಯನಿರ್ವಹಿಸುವರು.
ನಿವೃತ್ತಿ ಹೊಂದುತ್ತಿರುವ ಅಧಿಕಾರಿ: ಹಾಲಿ ಮಹಾನಿರ್ದೇಶಕರಾದ ವೀರೇಂದರ್ ಸಿಂಗ್ (Virender Singh, 1991 ಬ್ಯಾಚ್ IPS) ಅವರು ಸೆಪ್ಟೆಂಬರ್ 30, 2026 ರಂದು ನಿವೃತ್ತರಾಗಲಿದ್ದಾರೆ.

➤ ದೆಹಲಿ ಸರ್ಕಾರದ ಗೃಹ ಇಲಾಖೆ ಹೊರಡಿಸಿರುವ ಅಧಿಕೃತ ಆದೇಶದಂತೆ, ಹಾಲಿ ಮಹಾನಿರ್ದೇಶಕರಾದ ವೀರೇಂದರ್ ಸಿಂಗ್ ಅವರ ನಿವೃತ್ತಿಯ ನಂತರ ಈ ಹುದ್ದೆಯನ್ನು ಸತೀಶ್ ಗೋಲ್ಚಾ ವಹಿಸಿಕೊಳ್ಳಲಿದ್ದಾರೆ. ವರ್ಗಾವಣೆ ಪ್ರಕ್ರಿಯೆಯು ಸುಸೂತ್ರವಾಗಿ ನಡೆಯಲು, ಅಕ್ಟೋಬರ್ 1 ರವರೆಗೆ ಅವರನ್ನು OSD ಹುದ್ದೆಯಲ್ಲಿ ನಿಯೋಜಿಸಲಾಗಿದೆ. ಈ ಮಧ್ಯಂತರ ಅವಧಿಯಲ್ಲಿ ಅವರ ವೇತನ ಮತ್ತು ಸೇವಾ ಸೌಲಭ್ಯಗಳನ್ನು ದೆಹಲಿ ಪೊಲೀಸ್ ವಿಭಾಗದ ಮೂಲಕವೇ ನಿರ್ವಹಿಸಲಾಗುತ್ತದೆ.

➤ **ಸತೀಶ್ ಗೋಲ್ಚಾ ಅವರ ಸೇವಾ ಅನುಭವ:**
ದೆಹಲಿ ಪೊಲೀಸ್ ಕಮಿಷನರ್: 2025ರ ಆಗಸ್ಟ್‌ನಿಂದ 2026ರ ಜುಲೈವರೆಗೆ ದೆಹಲಿ ನಗರದ ಪೊಲೀಸ್ ಕಮಿಷನರ್ ಆಗಿ ಸೇವೆ ಸಲ್ಲಿಸಿದ್ದಾರೆ.
ತಿಹಾರ್ ಜೈಲು ಮಹಾನಿರ್ದೇಶಕರು: ದೆಹಲಿಯ ಪ್ರಸಿದ್ಧ ತಿಹಾರ್ ಕಾರಾಗೃಹಗಳ ಮಹಾನಿರ್ದೇಶಕರಾಗಿ (DG - Tihar Prisons) ಪ್ರಮುಖ ಸುಧಾರಣೆಗಳನ್ನು ತಂದಿದ್ದರು.
ಕಾನೂನು ಮತ್ತು ಸುವ್ಯವಸ್ಥೆ: 2020ರ ಈಶಾನ್ಯ ದೆಹಲಿ ಗಲಭೆಗಳ ಸಂದರ್ಭದಲ್ಲಿ ದೆಹಲಿ ಪೋಲಿಸರ ವಿಶೇಷ ಕಮಿಷನರ್ (ಸಾಗಾಣಿಕೆ/ಕಾನೂನು ಮತ್ತು ಸುವ್ಯವಸ್ಥೆ) ಆಗಿ ಪ್ರಮುಖ ಪಾತ್ರ ವಹಿಸಿದ್ದರು.

## ಭಾರತದ ಅಕ್ಕಿ ರಫ್ತು: 26 ಪ್ರಮುಖ ಮಾರುಕಟ್ಟೆಗಳಲ್ಲಿ ಭರ್ಜರಿ ಏರಿಕೆ — ‘BIRC 2026’ ಮೂಲಕ ಜಾಗತಿಕ ವಿಸ್ತರಣೆಗೆ ಹೆಜ್ಜೆ




➤ ಜಾಗತಿಕ ಮಟ್ಟದಲ್ಲಿ ಉದ್ಭವಿಸಿದ ಹಲವು ಆರ್ಥಿಕ ಸವಾಲುಗಳು, ಪೂರೈಕೆ ವೆಚ್ಚಗಳ ಏರಿಕೆ ಹಾಗೂ ವಿವಿಧ ದೇಶಗಳ ಆಮದು ನೀತಿಗಳ ನಡುವೆಯೂ ಭಾರತದ ಅಕ್ಕಿ ರಫ್ತು ವಲಯವು ಗಮನಾರ್ಹ ಸಾಧನೆ ಮಾಡಿದೆ. ಭಾರತೀಯ ಅಕ್ಕಿ ರಫ್ತುದಾರರ ಒಕ್ಕೂಟ (Indian Rice Exporters Federation - IREF) ನೀಡಿರುವ ಇತ್ತೀಚಿನ ವರದಿಯ ಪ್ರಕಾರ, ಭಾರತದ 26 ಆದ್ಯತೆಯ ಜಾಗತಿಕ ಮಾರುಕಟ್ಟೆಗಳಿಗೆ ಅಕ್ಕಿ ರಫ್ತು ಪ್ರಮಾಣದಲ್ಲಿ ಶೇಕಡಾ 5.6 ಹಾಗೂ ಮೌಲ್ಯದಲ್ಲಿ ಶೇಕಡಾ 1.1 ರಷ್ಟು ಪ್ರಗತಿ ಕಂಡುಬಂದಿದೆ.

➤ **ಪ್ರಮುಖ ಅಂಕಿ-ಅಂಶಗಳು:** ನವೆಂಬರ್ 2025 ರಿಂದ ಮಾರ್ಚ್ 2026 ರವರೆಗಿನ ಐದು ತಿಂಗಳ ಅವಧಿಯಲ್ಲಿ ಸಾಧಿಸಿದ ಪ್ರಮುಖ ಅಂಕಿ-ಅಂಶಗಳು ಈ ಕೆಳಗಿನಂತಿವೆ:
ಒಟ್ಟು ರಫ್ತು ಮೌಲ್ಯ: ₹23,476 ಕೋಟಿ (ಕಳೆದ 3 ವರ್ಷಗಳ ಸರಾಸರಿಗಿಂತ ಹೆಚ್ಚು).
ಒಟ್ಟು ರಫ್ತು ಪ್ರಮಾಣ: 4.79 ಮಿಲಿಯನ್ ಟನ್‌ಗಳು.
ಅತಿ ಹೆಚ್ಚು ಪ್ರಗತಿ ಕಂಡ ದೇಶ: ಯುನೈಟೆಡ್ ಅರಬ್ ಎಮಿರೇಟ್ಸ್ (UAE) ದೇಶಕ್ಕೆ ಅಕ್ಕಿ ರಫ್ತು ಮೌಲ್ಯದಲ್ಲಿ 65% ಹಾಗೂ ಪ್ರಮಾಣದಲ್ಲಿ 64% ಜಿಗಿತ ಕಂಡುಬಂದಿದೆ (₹3,859.04 ಕೋಟಿ ತಲುಪಿದೆ).
ಯುರೋಪಿಯನ್ ಮಾರುಕಟ್ಟೆಗಳು:
ಬೆಲ್ಜಿಯಂ: ಮೌಲ್ಯದಲ್ಲಿ 53.8% ಏರಿಕೆ
ಜರ್ಮನಿ: ಮೌಲ್ಯದಲ್ಲಿ 33.5% ಏರಿಕೆ
ಫ್ರಾನ್ಸ್: 31.3% ಏರಿಕೆ
ಯುನೈಟೆಡ್ ಕಿಂಗ್‌ಡಮ್ (UK): 26.9% ಏರಿಕೆ
ಇತರ ಪ್ರಮುಖ ದೇಶಗಳು: ದಕ್ಷಿಣ ಆಫ್ರಿಕಾ (ಮೌಲ್ಯದಲ್ಲಿ 26%), ಮೆಕ್ಸಿಕೋ (ಪ್ರಮಾಣದಲ್ಲಿ 50.9%), ಕೀನ್ಯಾ, ಕೆನಡಾ ಮತ್ತು ಸೆನೆಗಲ್ ದೇಶಗಳು.

➤ **ಪಾಕಶಾಲಾ ಆಧಾರಿತ ರಫ್ತು ತಂತ್ರಜ್ಞಾನ:** ಭಾರತವು ಸಾಂಪ್ರದಾಯಿಕವಾಗಿ ಅಕ್ಕಿಯ ‘ಪ್ರಮಾಣ’ (Volume) ಮತ್ತು ‘ಬೆಲೆ’ ಆಧಾರದ ಮೇಲೆ ಸ್ಪರ್ಧಿಸುತ್ತಿತ್ತು. ಆದರೆ ಈಗ ಕೇಂದ್ರ ಸರ್ಕಾರ ಹಾಗೂ APEDA, ವಿವಿಧ ದೇಶಗಳ ಸ್ಥಳೀಯ ಖಾದ್ಯಗಳು ಹಾಗೂ ಅಡುಗೆ ಸಂಸ್ಕೃತಿಗೆ ತಕ್ಕಂತೆ ಭಾರತದ ವೈವಿಧ್ಯಮಯ ಅಕ್ಕಿ ತಳಿಗಳನ್ನು ಪೂರೈಸುವ ‘ಖಾದ್ಯ/ಪಾಕಶಾಲಾ ಆಧಾರಿತ ತಂತ್ರ’ (Cuisine-Led Approach) ಅನುಸರಿಸುತ್ತಿವೆ.
ಅಂತರರಾಷ್ಟ್ರೀಯ ಪಾಕಪದ್ಧತಿಗೆ ಸೂಕ್ತವಾಗುವಂತೆ ಅಕ್ಕಿಯ ಸುವಾಸನೆ (Aroma), ವಿನ್ಯಾಸ (Texture), ಪಿಷ್ಟದ ಪ್ರಮಾಣ (Starch content), ಮತ್ತು ಧಾನ್ಯದ ಉದ್ದವನ್ನು ಆಧರಿಸಿ ತಳಿಗಳನ್ನು ವರ್ಗೀಕರಿಸಿ ಪ್ರಚಾರ ಮಾಡಲಾಗುತ್ತಿದೆ.

➤ **ಭರತ್ ಇಂಟರ್ನ್ಯಾಷನಲ್ ರೈಸ್ ಕಾನ್ಫರೆನ್ಸ್ (BIRC 2026):** ಭಾರತೀಯ ಅಕ್ಕಿ ವೈವಿಧ್ಯತೆಯನ್ನು ಜಾಗತಿಕ ವೇದಿಕೆಯಲ್ಲಿ ಪ್ರದರ್ಶಿಸಲು BIRC 2026 ಅನ್ನು ಆಯೋಜಿಸಲಾಗುತ್ತಿದೆ.
ದಿನಾಂಕ: ಅಕ್ಟೋಬರ್ 23 ರಿಂದ 25, 2026
ಸ್ಥಳ: ಭರತ್ ಮಂಟಪ (Bharat Mandapam), ನವದೆಹಲಿ
ವಿಶೇಷತೆ: 'ITC ಹೋಟೇಲ್ಸ್' ಸಹಯೋಗದೊಂದಿಗೆ 24 ಜಾಗತಿಕ ಅಕ್ಕಿ ಖಾದ್ಯಗಳು ಹಾಗೂ 10 ಪ್ರಾದೇಶಿಕ ಬಿರಿಯಾನಿಗಳ ‘ಗ್ಲೋಬಲ್ ರೈಸ್ ಫೆಸ್ಟಿವಲ್’ ಆಯೋಜನೆಯಾಗಲಿದೆ. ಇದರಲ್ಲಿ ಮಾಸ್ಟರ್ ಚೆಫ್ ಸ್ಪರ್ಧೆ ಮತ್ತು ಪ್ರಸಿದ್ಧ ಆಹಾರ ವಿಮರ್ಶಕರ ಕಾರ್ಯಕ್ರಮಗಳು ಇರಲಿವೆ

## ಭಾರತ-ಸೀಶೆಲ್ಸ್ ದ್ವಿಪಕ್ಷೀಯ ಒಪ್ಪಂದ: 'ನೀಲಿ ಆರ್ಥಿಕತೆ' ಮತ್ತು ಸಮುದ್ರ ಸಂಪನ್ಮೂಲ ವೃದ್ಧಿಗೆ ಹೊಸ ದಾರಿ



➤ ಹಿಂದೂ ಮಹಾಸಾಗರ ಪ್ರದೇಶದಲ್ಲಿ (Indian Ocean Region) ಸುಸ್ಥಿರ ಸಮುದ್ರ ಸಂಪನ್ಮೂಲ ನಿರ್ವಹಣೆ, ಜಲಕೃಷಿ, ವೈಜ್ಞಾನಿಕ ಸಂಶೋಧನೆ ಹಾಗೂ ಆಧುನಿಕ ತಂತ್ರಜ್ಞಾನ ವಲಯಗಳಲ್ಲಿ ಪರಸ್ಪರ ಸಹಕಾರವನ್ನು ಬಲಪಡಿಸಲು ಭಾರತ ಮತ್ತು ಸೀಶೆಲ್ಸ್ (India & Seychelles) ದೇಶಗಳು ಮಹತ್ವದ ದ್ವಿಪಕ್ಷೀಯ ಒಪ್ಪಂದಕ್ಕೆ ಬಂದಿವೆ.

➤ ನವದೆಹಲಿಯಲ್ಲಿ ಭಾರತ ಸರ್ಕಾರದ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹಾಲಿನ ಉತ್ಪಾದನೆ ಸಚಿವಾಲಯದ (Ministry of Fisheries, Animal Husbandry and Dairying) ಅಡಿಯಲ್ಲಿರುವ ಮೀನುಗಾರಿಕೆ ಇಲಾಖೆಯು ಸೀಶೆಲ್ಸ್ ಸರ್ಕಾರದೊಂದಿಗೆ ಈ ಉನ್ನತ ಮಟ್ಟದ ಸಭೆಯನ್ನು ಆಯೋಜಿಸಿತ್ತು.
ಸೀಶೆಲ್ಸ್ ನಿಯೋಗದ ನೇತೃತ್ವ: ಮೀನುಗಾರಿಕೆ, ಕೃಷಿ ಮತ್ತು ನೀಲಿ ಆರ್ಥಿಕತೆ ಸಚಿವರಾದ ವಲ್ಲೇಸ್ ಕಾಸ್ಗ್ರೊ (Wallace Cosgrow).
**ಭಾರತೀಯ ನಿಯೋಗದ ನೇತೃತ್ವ:** ಕೇಂದ್ರ ಮೀನುಗಾರಿಕೆ ಇಲಾಖೆಯ ಕಾರ್ಯದರ್ಶಿ ಡಾ. ಅಭಿಲಕ್ಷ ಲಿಖಿ (Dr. Abhilaksh Likhi).

➤ **ಒಪ್ಪಂದದ ಮುಖ್ಯ ಉದ್ದೇಶಗಳು ಮತ್ತು ಸಹಕಾರ ಕ್ಷೇತ್ರಗಳು:** ಉಭಯ ದೇಶಗಳ ನಡುವಿನ ಈ ಒಪ್ಪಂದವು ಪ್ರಮುಖವಾಗಿ ಹಿಂದೂ ಮಹಾಸಾಗರದಲ್ಲಿ ತಾಂತ್ರಿಕ ಮತ್ತು ವೈಜ್ಞಾನಿಕ ಸಾಮರ್ಥ್ಯವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ:

**ಸುಸ್ಥಿರ ಮೀನುಗಾರಿಕೆ (Sustainable Fisheries):** ಅತಿಯಾದ ಮೀನುಗಾರಿಕೆಯನ್ನು ತಡೆದು, ಸಮುದ್ರ ಜೀವಿಗಳ ಉಳಿವಿಗಾಗಿ ಪರಿಸರಸ್ನೇಹಿ ಮೀನುಗಾರಿಕೆ ವಿಧಾನಗಳನ್ನು ಅಳವಡಿಸಿಕೊಳ್ಳುವುದು.
**ಜಲಕೃಷಿ ಮತ್ತು ತಂತ್ರಜ್ಞಾನ (Aquaculture & Tech):** ಜಲಕೃಷಿ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ (AI) ಆಧಾರಿತ ಸಮುದ್ರ ಸಂಪನ್ಮೂಲ ಸಮೀಕ್ಷೆ ಹಾಗೂ ಕರಾವಳಿ ನಿರ್ವಹಣೆಯಲ್ಲಿ ಜಂಟಿ ಸಂಶೋಧನೆ.
**ನೀಲಿ ಆರ್ಥಿಕತೆಗೆ (Blue Economy) ಉತ್ತೇಜನ:** ಸಮುದ್ರ ಸಂಪನ್ಮೂಲಗಳನ್ನು ಪರಿಸರಕ್ಕೆ ಹಾನಿಯಾಗದಂತೆ ಬಳಸಿ ಆರ್ಥಿಕ ಪ್ರಗತಿ ಸಾಧಿಸುವುದು.
**ಸಾಮರ್ಥ್ಯ ವೃದ್ಧಿ (Capacity Building):** ಎರಡೂ ದೇಶಗಳ ನಡುವೆ ತಜ್ಞರು, ಸಂಶೋಧಕರು ಮತ್ತು ಮೀನುಗಾರರ ತರಬೇತಿ ಹಾಗೂ ತಾಂತ್ರಿಕ ವಿನಿಮಯ.

## ಭಾರತ - ವಿಯೆಟ್ನಾಂ ಜಂಟಿ ಕರಾಳ ಅಭ್ಯಾಸ: 'ಸಹಯೋಗ್-ಹೊಪ್‌ಟ್ಯಾಕ್'



➤ ಭಾರತೀಯ ಕರಾವಳಿ ಕಾವಲು ಪಡೆ (ICG) ಮತ್ತು ವಿಯೆಟ್ನಾಂ ಕರಾವಳಿ ಕಾವಲು ಪಡೆ (VCG) ನಡುವೆ ದ್ವಿಪಕ್ಷೀಯ ಕಡಲ ಭದ್ರತಾ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ 'ಸಹಯೋಗ್-ಹೊಪ್‌ಟ್ಯಾಕ್ 2026' (Sahyog HOP TAC) ಜಂಟಿ ಕಸರತ್ತು ಚೆನ್ನೈ ಕರಾವಳಿಯಲ್ಲಿ ಆರಂಭವಾಗಿದೆ.
ವಿಯೆಟ್ನಾಂ ಹಡಗು: ವಿಯೆಟ್ನಾಂ ಕರಾವಳಿ ಕಾವಲು ಪಡೆಯ CSB 8002 ಹಡಗು ಮತ್ತು 6 ಸದಸ್ಯರ ನಿಯೋಗ ಭಾಗವಹಿಸಿದೆ.
7ನೇ ಉನ್ನತ ಮಟ್ಟದ ಸಭೆ (7th High-Level Meeting): ಜಂಟಿ ಅಭ್ಯಾಸಕ್ಕೂ ಮುನ್ನ ಚೆನ್ನೈನಲ್ಲಿ ಉಭಯ ಪಡೆಗಳ 7ನೇ ಉನ್ನತ ಮಟ್ಟದ ಸಭೆ ನಡೆಯಿತು.
ಸಹ-ಅಧ್ಯಕ್ಷತೆ: ಭಾರತೀಯ ಕರಾವಳಿ ಕಾವಲು ಪಡೆಯ ಮಹಾನಿರ್ದೇಶಕ ಪರಮೇಶ್ ಶಿವಮಣಿ ಮತ್ತು ವಿಯೆಟ್ನಾಂ ಕರಾವಳಿ ಕಾವಲು ಪಡೆಯ ಉಪ ಕಮಾಂಡೆಂಟ್ ಮೇಜರ್ ಜನರಲ್ ಲುವೊಂಗ್ ದಿನ್ ಹುಂಗ್.
➤ **ಸಮರಾಭ್ಯಾಸದ ಮುಖ್ಯ ಉದ್ದೇಶಗಳು:**
ಕಾರ್ಯಾಚರಣೆಯ ಸಮನ್ವಯತೆ (Operational Interoperability): ಎರಡೂ ಕರಾವಳಿ ಕಾವಲು ಪಡೆಗಳ ಸಿಬ್ಬಂದಿಗೆ ತುರ್ತು ಪರಿಸ್ಥಿತಿಯಲ್ಲಿ ಒಟ್ಟಾಗಿ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ವೃದ್ಧಿಸುವುದು.
ಸಮುದ್ರ ಮಾಲಿನ್ಯ ತಡೆ (Marine Pollution Response): ಸಮುದ್ರದಲ್ಲಿ ಸಂಭವಿಸುವ ತೈಲ ಸೋರಿಕೆ ಮತ್ತು ಮಾಲಿನ್ಯ ನಿಯಂತ್ರಣಕ್ಕೆ ಜಂಟಿ ತಂತ್ರಜ್ಞಾನ ವಿನಿಮಯ.
ಕಡಲ ಕಾನೂನು ಜಾರಿ (Maritime Law Enforcement): ಕಡಲ್ಗಳ್ಳತನ (Piracy) ತಡೆ, ಅಕ್ರಮ ರವಾನೆ ತಡೆ ಮತ್ತು ಕಡಲ ಗಡಿ ರಕ್ಷಣೆ.
ಹುಡುಕಾಟ ಮತ್ತು ರಕ್ಷಣೆ (Search and Rescue - SAR): ಆಳ ಸಮುದ್ರದಲ್ಲಿ ಅಪಾಯಕ್ಕೆ ಸಿಲುಕಿದ ಹಡಗುಗಳು ಮತ್ತು ಮೀನುಗಾರರನ್ನು ರಕ್ಷಿಸುವ ಕೌಶಲ್ಯ ಹಂಚಿಕೆ.






## ನೇಪಾಳ ಭೀಕರ ಪ್ರವಾಹ: ಕೈಲಾಸ ಮಾನಸಸರೋವರ ಯಾತ್ರಿಕರು ಸೇರಿ 100ಕ್ಕೂ ಹೆಚ್ಚು ಸಾವು, 133ಕ್ಕೂ ಹೆಚ್ಚು ಭಾರತೀಯರು ನಾಪತ್ತೆ



➤ ಟಿಬೆಟ್ ಹಾಗೂ ನೇಪಾಳದ ಗಡಿಭಾಗದಲ್ಲಿರುವ ರುಸುವಾ ಜಿಲ್ಲೆಯಲ್ಲಿ ಸಂಭವಿಸಿದ ದಿಢೀರ್ ಪ್ರವಾಹ ಹಾಗೂ ಭೂಕುಸಿತದಿಂದಾಗಿ ದೊಡ್ಡ ಮಟ್ಟದ ದುರಂತ ಸಂಭವಿಸಿದೆ. ಹಿಮಾಲಯದ ತಪ್ಪಲಿನ ಪ್ರದೇಶಗಳಲ್ಲಿ ಸಂಭವಿಸಿದ ಈ ಜಲಪ್ರಳಯದಲ್ಲಿ 160ಕ್ಕೂ ಹೆಚ್ಚು ಜನರು ಪ್ರಾಣ ಕಳೆದುಕೊಂಡಿದ್ದು, 800ಕ್ಕೂ ಹೆಚ್ಚು ಮಂದಿ ಕಣ್ಮರೆಯಾಗಿದ್ದಾರೆ. ನಾಪತ್ತೆಯಾದವರಲ್ಲಿ ಕೈಲಾಸ ಮಾನಸಸರೋವರ ಯಾತ್ರೆಗೆ ತೆರಳಿದ್ದ 133 ಭಾರತೀಯರು ಮತ್ತು 37 ಅನಿವಾಸಿ ಭಾರತೀಯರು (NRI) ಸೇರಿದ್ದಾರೆ.
➤ **ದುರಂತಕ್ಕೆ ಹಿಮಪಾತ ಹಾಗೂ ಭೂಕಂಪವೇ ಕಾರಣ:** ನೇಪಾಳದ ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ಪ್ಲಾನೆಟ್ ಲ್ಯಾಬ್ಸ್‌ನ ಉಪಗ್ರಹ ಚಿತ್ರಣದ ವಿಶ್ಲೇಷಣೆಯ ಪ್ರಕಾರ, ಟಿಬೆಟ್ ಗಡಿಯ ಲೆಂಡೆ ಖೋಲಾ ನದಿ ಪಾತ್ರದಲ್ಲಿ ಸಂಭವಿಸಿದ ಪ್ರಬಲ ಹಿಮಪಾತ ಹಾಗೂ ಭೂಕಂಪದಿಂದ ದೊಡ್ಡ ಪ್ರಮಾಣದ ಹಿಮಬಂಡೆಗಳು ನದಿಗೆ ಕುಸಿದುಬಿದ್ದಿವೆ. ಇದರಿಂದಾಗಿ ಬುಧವಾರ ಬೆಳಿಗ್ಗೆ 9 ಗಂಟೆ ಸುಮಾರಿಗೆ ಭೋಟೆ ಕೋಶಿ ಹಾಗೂ ತ್ರಿಶೂಲಿ ನದಿಗಳಲ್ಲಿ ದಿಢೀರ್ 30 ಅಡಿಗೂ ಎತ್ತರದ ರಾಡಿ ಮಿಶ್ರಿತ ನೀರು ಹರಿದುಬಂದು ಈ ಅನಾಹುತ ಸೃಷ್ಟಿಯಾಗಿದೆ.
➤ **ಪ್ರಮುಖ ಜಿಲ್ಲೆಗಳಲ್ಲಿ ಆಹಾಕಾರ, ಗ್ರಾಮಗಳೇ ಭಸ್ಮ:** ನೇಪಾಳದ ರುಸುವಾ, ನುವಾಕೋಟ್, ಧಾಡಿಂಗ್, ಚಿತ್ವಾನ್, ಗೂರ್ಖಾ, ತನಹುನ್ ಮತ್ತು ನವಲ್ಪರಾಸಿ (ಪೂರ್ವ) ಜಿಲ್ಲೆಗಳಲ್ಲಿ ಭೋಟೆ ಕೋಶಿ ಹಾಗೂ ತ್ರಿಶೂಲಿ ನದಿ ಪ್ರವಾಹ ಅಪಾರ ಹಾನಿ ಉಂಟುಮಾಡಿದೆ. ನದಿಯ ರಭಸಕ್ಕೆ ಸೇತುವೆಗಳು, ಹೈಡ್ರೋ ಪವರ್ ಪ್ರಾಜೆಕ್ಟ್‌ಗಳು, ರಸ್ತೆಗಳು ಹಾಗೂ ಗಡಿ ಭಾಗದ ಹಲವು

ಹಿಮಾಲಯನ್ ಹಳ್ಳಿಗಳು ಸಂಪೂರ್ಣವಾಗಿ ಕೊಚ್ಚಿಕೊಂಡು ಹೋಗಿವೆ.

➤ **ತುರ್ತು ಹೆಲ್ಪ್‌ಲೈನ್ ಸಂಖ್ಯೆಗಳು ಪ್ರಕಟ:** ಘಟನೆಯ ಗಂಭೀರತೆಯನ್ನು ಪರಿಗಣಿಸಿ, ಕಠ್ಮಂಡುವಿನಲ್ಲಿರುವ ಭಾರತೀಯ ರಾಯಭಾರ ಕಚೇರಿ ಹಾಗೂ ಕೇಂದ್ರ ವಿದೇಶಾಂಗ ಸಚಿವಾಲಯವು ಪ್ರವಾಹ ಪೀಡಿತ ಯಾತ್ರಿಕರ ಕುಟುಂಬಸ್ಥರ ನೆರವಿಗಾಗಿ ತುರ್ತು ಹೆಲ್ಪ್‌ಲೈನ್ ಸಂಖ್ಯೆಗಳನ್ನು ತೆರೆದಿದೆ.

ಭಾರತೀಯ ರಾಯಭಾರ ಕಚೇರಿ ಸಹಾಯವಾಣಿ: +977 985 131 6807 / +977 970 910 7500

ನೇಪಾಳ ಟೂರಿಸ್ಟ್ ಹೆಲ್ಪ್‌ಲೈನ್: 1234 / 1144

➤ ನೇಪಾಳಿ ಸೇನೆ, ಸಶಸ್ತ್ರ ಪೊಲೀಸ್ ಪಡೆ ಹಾಗೂ ಡ್ರೋನ್, ಹೆಲಿಕಾಪ್ಟರ್‌ಗಳ ಸಹಾಯದಿಂದ ಬೃಹತ್ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ. ಭಾರತೀಯ ವಿದೇಶಾಂಗ ಸಚಿವಾಲಯವೂ ನೇಪಾಳ ಸರ್ಕಾರದೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಪರಿಹಾರ ಸಾಮಗ್ರಿಗಳನ್ನು ರವಾನಿಸಿದೆ.

## HAL & Safran ಒಪ್ಪಂದ: ಭಾರತದ ಮೊದಲ ಸ್ವದೇಶಿ 'ಅರಾವಳಿ' ಹೆಲಿಕಾಪ್ಟರ್ ಎಂಜಿನ್ ಅಭಿವೃದ್ಧಿ



➤ ಹೊಸ ತಲೆಮಾರಿನ ಬಹೂಪಯೋಗಿ ಹೆಲಿಕಾಪ್ಟರ್‌ಗಳಿಗಾಗಿ ನೂತನ 'ಅರಾವಳಿ' (Aravalli) ಎಂಜಿನ್ ಅಭಿವೃದ್ಧಿ ಮತ್ತು ತಯಾರಿಕೆಗಾಗಿ ಭಾರತದ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (HAL) ಮತ್ತು ಫ್ರಾನ್ಸ್‌ನ ಸಫ್ರಾನ್ ಹೆಲಿಕಾಪ್ಟರ್ ಎಂಜಿನ್ಸ್ (Safran Helicopter Engines) ನಡುವೆ ಪ್ರಮುಖ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಈ ಎಂಜಿನ್ ಅನ್ನು ಎಚ್‌ಎಎಲ್ ಮತ್ತು ಸಫ್ರಾನ್ ಸಹಭಾಗಿತ್ವದ 50:50 ಜಂಟಿ ಉದ್ಯಮ 'ಸಫಲ್' (SAFHAL Helicopter Engines Pvt. Ltd.) ಕಂಪನಿಯು ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಲಿದೆ.

➤ **'ಅರಾವಳಿ' ಎಂಜಿನ್‌ನ ಪ್ರಮುಖ ತಾಂತ್ರಿಕ ವಿವರಗಳು:**

ಎಂಜಿನ್ ಹೆಸರು: ಅರಾವಳಿ (ವಿಶ್ವದ ಅತ್ಯಂತ ಹಳೆಯ ಪರ್ವತಶ್ರೇಣಿಯಾದ 'ಅರಾವಳಿ' ಯ ಹೆಸರನ್ನು ಇಡಲಾಗಿದೆ).

ಶಕ್ತಿ ಸಾಮರ್ಥ್ಯ: 3,500 ಎಎಚ್‌ಪಿ ಯಿಂದ (Shaft Horsepower - shp) 4,000 ಎಎಚ್‌ಪಿಯಷ್ಟು ಹೆಚ್ಚು ಸಾಮರ್ಥ್ಯದ ಶಕ್ತಿ ಉತ್ಪಾದಿಸುವ ಸಾಮರ್ಥ್ಯ.

ಬಳಕೆಯಾಗುವ ನೌಕೆಗಳು: ಎಚ್‌ಎಎಲ್ ಅಭಿವೃದ್ಧಿಪಡಿಸುತ್ತಿರುವ 13 ಟನ್ ವರ್ಗದ ಭಾರತೀಯ ಬಹೂಪಯೋಗಿ ಹೆಲಿಕಾಪ್ಟರ್ (IMRH - Indian Multi-Role Helicopter) ಹಾಗೂ ಇದರ ನೌಕಾ ಕಾರ್ಯಾಚರಣೆಯ ಡೆಕ್-ಬೇಸ್ಡ್ ಬಹೂಪಯೋಗಿ ಹೆಲಿಕಾಪ್ಟರ್ (DBMRH) ಗಳಲ್ಲಿ ಬಳಸಲಾಗುತ್ತದೆ.

ಉತ್ಪಾದನಾ ಘಟಕ: ಕರ್ನಾಟಕದ ತುಮಕೂರು ಜಿಲ್ಲೆಯಲ್ಲಿರುವ 'ಸಫಲ್' (SAFHAL) ನೂತನ ಉತ್ಪಾದನಾ ಘಟಕದಲ್ಲಿ ಈ ಎಂಜಿನ್ ತಯಾರಾಗಲಿದೆ.

ಪೂರ್ಣಗೊಳ್ಳುವ ಗುರಿ: ಎಂಜಿನ್‌ನ ವಿನ್ಯಾಸ ಹಾಗೂ ಅಭಿವೃದ್ಧಿ ಪ್ರಕ್ರಿಯೆಯು 2032-33 ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

➤ **ಒಪ್ಪಂದದ ಮುಖ್ಯ ಉದ್ದೇಶ ಹಾಗೂ ಪ್ರಮುಖಾಂಶಗಳು:**

ಲೈಸೆನ್ಸ್ ಉತ್ಪಾದನೆಯಿಂದ ಸ್ವದೇಶಿ ವಿನ್ಯಾಸದತ್ತ ಹೆಜ್ಜೆ: ಇದುವರೆಗೆ ಭಾರತವು ವಿದೇಶಿ ತಂತ್ರಜ್ಞಾನದ ಎಂಜಿನ್‌ಗಳನ್ನು ಲೈಸೆನ್ಸ್ ಪಡೆದು ಉತ್ಪಾದಿಸುತ್ತಿತ್ತು. ಆದರೆ ಈ ಒಪ್ಪಂದದ ಮೂಲಕ ಎಂಜಿನ್‌ನ ಸಂಪೂರ್ಣ ವಿನ್ಯಾಸ (Design), ಅಭಿವೃದ್ಧಿ (Development), ಪರೀಕ್ಷೆ ಹಾಗೂ ತಯಾರಿಕೆಯಲ್ಲಿ ಭಾರತೀಯ ಎಂಜಿನಿಯರ್‌ಗಳು ನೇರವಾಗಿ ಭಾಗವಹಿಸಲಿದ್ದಾರೆ.

ಪ್ರಮುಖ ತಂತ್ರಜ್ಞಾನಗಳ ವರ್ಗಾವಣೆ:ಹೈಪ್ರೆಷರ್ ಕಂಪ್ರೆಸರ್, ಪವರ್ ಟರ್ಬೈನ್, ಫ್ಯುಯೆಲ್ ಹಾಗೂ ಆಯಿಲ್ ಸಿಸ್ಟಮ್, ಆಕ್ಸೆಸರಿ ಗೇರ್‌ಬಾಕ್ಸ್‌ನಂತಹ ಪ್ರಮುಖ ಜೆಟ್/ಟರ್ಬೈನ್ ತಂತ್ರಜ್ಞಾನಗಳ ಕಲಿಕೆಗೆ ಈ ಯೋಜನೆಯು ಹೆಚ್‌ಎಎಲ್‌ಗೆ ನೆರವಾಗಲಿದೆ.

ರಕ್ಷಣಾ ಪಡೆಗಳ ಆಧುನೀಕರಣ: ಭಾರತೀಯ ಸೇನೆಯಲ್ಲಿ ದಶಕಗಳಿಂದ ಸೇವೆಯಲ್ಲಿರುವ ರಷ್ಯಾ ಮೂಲದ Mi-17 ಹೆಲಿಕಾಪ್ಟರ್‌ಗಳ ಜಾಗದಲ್ಲಿ ಭವಿಷ್ಯದಲ್ಲಿ ಸ್ವದೇಶಿ IMRH ಹೆಲಿಕಾಪ್ಟರ್‌ಗಳನ್ನು ನಿಯೋಜಿಸಲು ಇದು ಸಹಕಾರಿಯಾಗಲಿದೆ.

ನಾಗರಿಕ ವಿಮಾನಯಾನ ಮತ್ತು ಇತರೆ ಬಳಕೆ: ಈ 'ಅರಾವಳಿ' ಎಂಜಿನ್ ಕೇವಲ ಸೇನಾ ಕಾರ್ಯಾಚರಣೆಗೆ ಸೀಮಿತವಾಗಿರದೆ, ಭವಿಷ್ಯದಲ್ಲಿ ನಾಗರಿಕ ಬಳಕೆ (Civil Aviation), ಆಫ್‌ಶೋರ್ ಸಾರಿಗೆ ಹಾಗೂ ಗಣ್ಯರ (VVIP) ಪ್ರಯಾಣದ ಹೆಲಿಕಾಪ್ಟರ್‌ಗಳಿಗೂ ಬಳಸಲು ಅವಕಾಶವಿರಲಿದೆ.

## ಭಾರತೀಯ ರೈಲ್ವೆಯ ಬೃಹತ್ ಯೋಜನೆ – 11,000 ಕಿಮೀ ಮಾರ್ಗ ನಾಲ್ಕು ಪಥ (Quadruple Capacity) ವಿಸ್ತರಣೆ!



➤ ಭಾರತೀಯ ರೈಲ್ವೇ ಇಲಾಖೆಯು ದೇಶದ ಅತಿ ಪ್ರಮುಖ ಹಾಗೂ ಅತಿ ಹೆಚ್ಚು ಸಂಚಾರ ದಟ್ಟಣೆ ಹೊಂದಿರುವ 7 ಹೈ-ಡೆನ್ಸಿಟಿ ಕಾರಿಡಾರ್‌ಗಳಲ್ಲಿ (HDN) ರೈಲು ಮಾರ್ಗಗಳ ಸಾಮರ್ಥ್ಯವನ್ನು ನಾಲ್ಕು ಪಥಗಳಿಗೆ (Quadruple Tracks / Quadrupling) ಹೆಚ್ಚಿಸಲು ಬೃಹತ್ ಯೋಜನೆಯನ್ನು ರೂಪಿಸಿದೆ.

ಒಟ್ಟು ಮಾರ್ಗದ ಉದ್ದ: ಸುಮಾರು 11,000 ಕಿಲೋಮೀಟರ್.

ಸಂಚಾರ ದಟ್ಟಣೆ (Traffic Share): ಈ 11,000 ಕಿಮೀ ಮಾರ್ಗವು ಭಾರತೀಯ ರೈಲ್ವೆ ಜಾಲದ ಒಟ್ಟು ಉದ್ದದ ಶೇ. 16 ರಷ್ಟು ಮಾತ್ರ ಹೊಂದಿದ್ದರೂ, ದೇಶದ ಶೇ. 41 ರಷ್ಟು ಸರಕು ಮತ್ತು ಪ್ರಯಾಣಿಕರ ಸಂಚಾರವನ್ನು ಹೊತ್ತೊಯ್ಯುತ್ತದೆ.

ಗುರಿ: ರೈಲು ಹಳಿಗಳ ದಟ್ಟಣೆಯನ್ನು (Congestion) ಕಡಿಮೆ ಮಾಡುವುದು, ಪ್ರಯಾಣಿಕರ ಹಾಗೂ ಸರಕು ಸಾಗಣೆ (Freight) ರೈಲುಗಳಿಗೆ ಪ್ರತ್ಯೇಕ ಪಥ ಕಲ್ಪಿಸುವುದು ಮತ್ತು ಲಾಗಿಸ್ಟಿಕ್ಸ್ ವೆಚ್ಚವನ್ನು ತಗ್ಗಿಸುವುದು.

➤ **ಆಯ್ಕೆಯಾಗಿರುವ 7 ಪ್ರಮುಖ ಹೈ-ಡೆನ್ಸಿಟಿ ಮಾರ್ಗಗಳು:**

ದೆಹಲಿ – ಹೌರಾ (Delhi - Howrah): ಸುಮಾರು 1,400 ಕಿಮೀ

ಹೌರಾ – ಚೆನ್ನೈ (Howrah - Chennai)

ಚೆನ್ನೈ – ಮುಂಬೈ (Chennai - Mumbai)

ಮುಂಬೈ – ದೆಹಲಿ (Mumbai - Delhi): ಸುಮಾರು 1,500 ಕಿಮೀ

ದೆಹಲಿ – ಚೆನ್ನೈ (Delhi - Chennai)

ಮುಂಬೈ – ಹೌರಾ (Mumbai - Howrah)

ದೆಹಲಿ – ಗುವಾಹಾಟಿ (Delhi - Guwahati)

➤ **ಯೋಜನೆಯ ಮುಖ್ಯ:**

ಸರಕು ಮತ್ತು ಪ್ರಯಾಣಿಕರ ರೈಲುಗಳ ಪ್ರತ್ಯೇಕತೆ: ಹಾಲಿ ಇರುವ ಎರಡು ಪಥಗಳಲ್ಲಿ ಸರಕು ಹಾಗೂ ಪ್ರಯಾಣಿಕರ ರೈಲುಗಳು ಒಟ್ಟಿಗೆ ಚಲಿಸುವುದರಿಂದ ವಿಳಂಬವಾಗುತ್ತಿತ್ತು. ನಾಲ್ಕು ಪಥಗಳಾಗುವುದರಿಂದ ವೇಗ ಹಾಗೂ ಸಮಯ ಪರಿಪಾಲನೆ ಹೆಚ್ಚುತ್ತದೆ.

ಆರ್ಥಿಕತೆ ಮತ್ತು ಲಾಗಿಸ್ಟಿಕ್ಸ್ ವೆಚ್ಚ ಇಳಿಕೆ:

ರಸ್ತೆ ಸಾರಿಗೆ ವೆಚ್ಚ: ಪ್ರತಿ ಟನ್-ಕಿಮೀಗೆ ಸುಮಾರು ₹3.6

ರೈಲ್ವೆ ಸಾರಿಗೆ ವೆಚ್ಚ: ಪ್ರತಿ ಟನ್-ಕಿಮೀಗೆ ಸುಮಾರು ₹1.6

ಸರಕು ಸಾಗಣೆಯನ್ನು ರಸ್ತೆಯಿಂದ ರೈಲ್ವೆಗೆ ವರ್ಗಾಯಿಸುವುದರಿಂದ ದೇಶದ ಒಟ್ಟಾರೆ ಲಾಗಿಸ್ಟಿಕ್ಸ್ ವೆಚ್ಚ ಭಾರಿ ಪ್ರಮಾಣದಲ್ಲಿ ಕಡಿಮೆಯಾಗುತ್ತದೆ.

ಪರಿಸರಸ್ನೇಹಿ (Green Transportation): ರಸ್ತೆ ಸಾರಿಗೆಗೆ ಹೋಲಿಸಿದರೆ ರೈಲ್ವೆ ಸಾರಿಗೆಯು ಶೇ. 90 ರಷ್ಟು ಕಡಿಮೆ ಮಾಲಿನ್ಯ ಉಂಟುಮಾಡುತ್ತದೆ.

## ಭಾರತದ 45 ವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲು ಅಭಾವ



➤ ಮಳೆಗಾಲದ ಪೂರೈಕೆ ಅಡಚಣೆಗಳು ಮತ್ತು ತೀವ್ರ ಶಾಖದ ಅಲೆಯಿಂದಾಗಿ ದೇಶಾದ್ಯಂತ 45 ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ (Thermal Power Plants) ಕಲ್ಲಿದ್ದಲು ಸಂಗ್ರಹವು ಗಂಭೀರ ಮಟ್ಟಕ್ಕೆ (Critical Coal Stocks) ಕುಸಿದಿದೆ. ಕೇಂದ್ರ ವಿದ್ಯುತ್ ಪ್ರಾಧಿಕಾರದ (CEA) ವರದಿಯ ಪ್ರಕಾರ, ಈ ಸ್ಥಾವರಗಳಲ್ಲಿ ನಿಯಮಾನುಸಾರ ಇರಬೇಕಾದ ಕಲ್ಲಿದ್ದಲು ಸಂಗ್ರಹಕ್ಕಿಂತ ಶೇ. 25 ಕ್ಕಿಂತ ಕಡಿಮೆ ಅಥವಾ 3 ದಿನಗಳಿಗಿಂತ ಕಡಿಮೆ ಅವಧಿಗೆ ಮಾತ್ರ ಸಾಕಾಗುವಷ್ಟು ಇಂಧನ ಲಭ್ಯವಿದೆ.

**➤ ಕಲ್ಲಿದ್ದಲು ಅಭಾವಕ್ಕೆ ಪ್ರಮುಖ ಕಾರಣಗಳು:**

ಮಳೆಗಾಲದ ಅಡಚಣೆ (Monsoon Disruption): ಒಡಿಶಾ, ಜಾರ್ಖಂಡ್ ಮತ್ತು ಛತ್ತೀಸ್‌ಗಢದಂತಹ ಪ್ರಮುಖ ಕಲ್ಲಿದ್ದಲು ಗಣಿ ಪ್ರದೇಶಗಳಲ್ಲಿ ಭಾರಿ ಮಳೆಯಿಂದಾಗಿ ಗಣಿಗಾರಿಕೆ ಮತ್ತು ಸಾಗಣೆ ಮಂದಗತಿಯಲ್ಲಿದೆ.

ರೈಲ್ವೆ ರೇಕ್‌ಗಳ (Railway Rakes) ಕೊರತೆ: ದಿನನಿತ್ಯ ಬೇಕಾಗುವ 5 ರಿಂದ 6 ರೈಲ್ವೆ ರೇಕ್ ಕಲ್ಲಿದ್ದಲು ಪೂರೈಕೆಯಲ್ಲಿ ಸ್ಥಾವರಗಳಿಗೆ ಅರ್ಧದಷ್ಟು ಮಾತ್ರ ಲಭ್ಯವಾಗುತ್ತಿದೆ.

ಹೆಚ್ಚಿದ ವಿದ್ಯುತ್ ಬೇಡಿಕೆ: ತಾಪಮಾನ ಏರಿಕೆಯ ಪರಿಣಾಮವಾಗಿ ದೇಶದಲ್ಲಿ ಹವಾನಿಯಂತ್ರಣ (AC) ಮತ್ತು ವಿದ್ಯುತ್ ಉಪಕರಣಗಳ ಬಳಕೆ ಹೆಚ್ಚಾಗಿದ್ದು, ರಾತ್ರಿ ವೇಳೆಯ ವಿದ್ಯುತ್ ಬಳಕೆ ಏರಿಕೆಯಾಗಿದೆ.

ಒಟ್ಟು ಸಂಗ್ರಹದಲ್ಲಾದ ಕುಸಿತ: ಬಿಗ್‌ಮಿಂಟ್ (BigMint) ವರದಿಯ ಪ್ರಕಾರ, ಉಷ್ಣ ವಿದ್ಯುತ್ ಸ್ಥಾವರಗಳಲ್ಲಿನ ಒಟ್ಟು ಕಲ್ಲಿದ್ದಲು ದಾಸ್ತಾನು ಜುಲೈ ಅಂತ್ಯಕ್ಕೆ ಹೋಲಿಸಿದರೆ ಶೇ. 19 ರಷ್ಟು ಕುಸಿದು 30.95 ಮಿಲಿಯನ್ ಟನ್‌ಗಳಿಗೆ ತಲುಪಿದೆ.

## IWG ವರ್ಕ್ ಫ್ರಮ್ ಎನಿವೇರ್ ಇಂಡೆಕ್ಸ್ 2026: ಜಾಗತಿಕ ಪಟ್ಟಿಯಲ್ಲಿ ಸ್ಥಾನ ಪಡೆದ ಭಾರತದ ಏಕೈಕ ನಗರ 'ಮುಂಬೈ'



➤ ಭಾರತದ ಆರ್ಥಿಕ ರಾಜಧಾನಿ ಮುಂಬೈ ಇಂಟರ್ನ್ಯಾಷನಲ್ ವರ್ಕ್‌ಪ್ಲೇಸ್ ಗ್ರೂಪ್ (IWG) ಬಿಡುಗಡೆ ಮಾಡಿರುವ 'ವರ್ಕ್ ಫ್ರಮ್ ಎನಿವೇರ್ ಇಂಡೆಕ್ಸ್ 2026' (Work From Anywhere Index 2026) ಜಾಗತಿಕ ಪಟ್ಟಿಯಲ್ಲಿ ಸ್ಥಾನ ಪಡೆಯುವ ಮೂಲಕ ಹೊಸ ಮೈಲಿಗಲ್ಲು ಸಾಧಿಸಿದೆ. ಈ ಪಟ್ಟಿಯಲ್ಲಿ ಸ್ಥಾನ ಪಡೆದ ಭಾರತದ ಏಕೈಕ ನಗರ ಎಂಬ ಹೆಗ್ಗಳಿಕೆಗೆ ಮುಂಬೈ ಪಾತ್ರವಾಗಿದೆ.

**ವರದಿ ಬಿಡುಗಡೆ ಮಾಡಿದ ಸಂಸ್ಥೆ:** ಇಂಟರ್ನ್ಯಾಷನಲ್ ವರ್ಕ್ ಪ್ಲೇಸ್ ಗ್ರೂಪ್ (International Workplace Group - IWG).

ಆವೃತ್ತಿ: 4ನೇ ಆವೃತ್ತಿ (2026).

ಮುಂಬೈನ ಸ್ಥಾನ: ಜಾಗತಿಕವಾಗಿ 50ನೇ ರ್‍ಯಾಂಕ್.

ಗಳಿಸಿದ ಅಂಕಗಳು: 100ರಲ್ಲಿ 77 ಅಂಕಗಳು.

ವಿಶೇಷತೆ: ಈ ಜಾಗತಿಕ ಸೂಚ್ಯಂಕದಲ್ಲಿ ಸ್ಥಾನ ಪಡೆದ ಭಾರತದ ಏಕೈಕ ನಗರ ಮುಂಬೈ. ಇದು ಲಂಡನ್ ಮತ್ತು ಮಿಯಾಮಿ ಮುಂತಾದ ಪ್ರಮುಖ ನಗರಗಳಿಗಿಂತ ಉತ್ತಮ ಸಾಧನೆ ಮಾಡಿದೆ.

**➤ ಜಾಗತಿಕ ಟಾಪ್ 5 ನಗರಗಳು:**

1. ಬ್ಯಾಂಕಾಕ್ (Bangkok): ಥೈಲ್ಯಾಂಡ್:106.5 ಅಂಕಗಳು
2. ಟೋಕಿಯೋ (Tokyo): ಜಪಾನ್: 96.5 ಅಂಕಗಳು
3. ಬಾರ್ಸಿಲೋನಾ (Barcelona): ಸ್ಪೇನ್: 95.5 ಅಂಕಗಳು
4. ಪೋರ್ಟೊ (Porto): ಪೋರ್ಚುಗಲ್ -
5. ವ್ಯಾಂಕೂವರ್ (Vancouver): ಕೆನಡಾ

➤ IWG ಸಂಸ್ಥೆಯು ದೂರಸ್ಥ ಕೆಲಸ ಮತ್ತು ಪ್ರವಾಸೋದ್ಯಮವನ್ನು ಸಂಯೋಜಿಸುವ ನಗರಗಳನ್ನು ಹವಾಮಾನ, ಬ್ರಾಡ್‌ಬ್ಯಾಂಡ್ ಸಂಪರ್ಕ ಮತ್ತು ವೇಗ, ವಸತಿ ವೆಚ್ಚ ಹಾಗೂ ಲಭ್ಯತೆ, ಮತ್ತು ಸಾರಿಗೆ ವೆಚ್ಚದ ಆಧಾರದ ಮೇಲೆ ಮೌಲ್ಯಮಾಪನ ಮಾಡುತ್ತದೆ. ಇದಲ್ಲದೆ, ಆಹಾರ ಮತ್ತು ಸಂಸ್ಕೃತಿ, ಫ್ಲೆಕ್ಸಿಬಲ್ ವರ್ಕ್‌ಸ್ಪೇಸ್‌ಗಳ ಲಭ್ಯತೆ, ಹ್ಯಾಪಿನೆಸ್ ಇಂಡೆಕ್ಸ್ ಹಾಗೂ ಸ್ಥಳೀಯ ಚಟುವಟಿಕೆಗಳು ಮುಂತಾದ ಒಟ್ಟು 8 ಪ್ರಮುಖ ಮಾನದಂಡಗಳನ್ನು ಆಧರಿಸಿ ಮುಂಬೈ ನಗರಕ್ಕೆ ಈ ಸೂಚ್ಯಂಕದಲ್ಲಿ 77 ಅಂಕಗಳನ್ನು ನೀಡಿ ಗೌರವಿಸಲಾಗಿದೆ.

# 28 Aug 2026

## 17 ವರ್ಷದ ಅಪೂರ್ವ ಕಾಂಬ್ಳೆ FIDE ರೇಟೆಡ್ ರ್‍ಯಾಪಿಡ್ ಚೆಸ್ ಟೂರ್ನಿ ಚಾಂಪಿಯನ್



➤ ಬೆಂಗಳೂರಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪ್ರತಿಷ್ಠಿತ FIDE-ರೇಟೆಡ್ ರ್‍ಯಾಪಿಡ್ ಚೆಸ್ ಟೂರ್ನಿಯಲ್ಲಿ 17 ವರ್ಷದ ಯುವ ಆಟಗಾರ ಅಪೂರ್ವ ಕಾಂಬ್ಳೆ (Apoorv Kamble) ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ವಿಜೇತರು: 17 ವರ್ಷದ ಅಪೂರ್ವ ಕಾಂಬ್ಳೆ (9 ಸುತ್ತುಗಳಲ್ಲಿ 8.5 ಅಂಕಗಳು).

ಎರಡನೇ ಸ್ಥಾನ: ಸಮ್ಮೇದ್ ಜಯಕುಮಾರ್ ಶೆಟ್ಟೆ (Sammed Jaykumar Shete).

ಮೂರನೇ ಸ್ಥಾನ: ವೈದ್ಯನಾಥನ್ ಕಣ್ಣನ್ (Vaidyanathan Kannan).

ಸ್ಥಳ: ಕೋರಮಂಗಲ ಒಳಾಂಗಣ ಕ್ರೀಡಾಂಗಣ, ಬೆಂಗಳೂರು.

ಒಟ್ಟು ನಗದು ಬಹುಮಾನ: ₹4 ಲಕ್ಷ.

ಆಯೋಜಕರು: ಗ್ಲೋಬಲ್ ಚೆಸ್ ಲೀಗ್ (GCL), ಸರ್ಕಲ್ ಚೆಸ್ (Circle Chess) ಸಹಯೋಗದೊಂದಿಗೆ 'ಗೋಲ್ಡನ್ ಔರಾ ಟ್ರಸ್ಟ್' (Golden Aura Trust) ಆಯೋಜಿಸಿತ್ತು.

ಟೂರ್ನಿಯ ಮಾದರಿ: ಸ್ವಿಟ್ಜರ್ಲೆಂಡ್ ಮಾದರಿಯ (Swiss Format) 9 ಸುತ್ತುಗಳ ಪಂದ್ಯಾವಳಿ (10 ನಿಮಿಷ + 5 ಸೆಕೆಂಡುಗಳ ಇನ್ಕ್ರಿಮೆಂಟ್).

**➤ ಟೂರ್ನಿಯ ವಿಶೇಷತೆ ಮತ್ತು ಪ್ರಮುಖ ವಿವರಗಳು:**

ಕೊನೆ ಕ್ಷಣದ ನೋಂದಣಿ ಹಾಗೂ ಸಾಧನೆ:ಅಪೂರ್ವ ಕಾಂಬ್ಳೆ ಅವರು ಮುಂಬೈನಲ್ಲಿ ನಡೆದ ಏಷ್ಯನ್ ಜೂನಿಯರ್ ಚಾಂಪಿಯನ್‌ಶಿಪ್‌ನಿಂದ ಹಿಂತಿರುಗಿದ ನಂತರ ಕೊನೆಯ ಕ್ಷಣದಲ್ಲಿ ಈ ಟೂರ್ನಿಗೆ ನೋಂದಾಯಿಸಿಕೊಂಡಿದ್ದರು. ಟೂರ್ನಿಯ ಉನ್ನತ ಶ್ರೇಯಾಂಕದ (Top Seed) ಆಟಗಾರ ವಿಶಾಖ್ ಎನ್ಆರ್ ಮತ್ತು ಸಮೀರ್ ಶೆಟ್ಟಿ ವಿರುದ್ಧ ಜಯಗಳಿಸುವ ಮೂಲಕ 8.5 ಅಂಕಗಳೊಂದಿಗೆ ಅಗ್ರಸ್ಥಾನ ಪಡೆದರು.

ವಿಶ್ವ ದರ್ಜೆಯ ತರಬೇತುದಾರರ ಭಾಗಿ:ಪ್ರಸ್ತುತ ವಿಶ್ವ ಚೆಸ್ ಚಾಂಪಿಯನ್ ಡಿ. ಗುಕೇಶ್ (D. Gukesh) ಅವರ ಮಾಜಿ ತರಬೇತುದಾರರಾದ ಗ್ರಾಂಡ್ ಮಾಸ್ಟರ್ ವಿಷ್ಣು ಪ್ರಸನ್ನ ಕೂಡ ಈ ಕೂಟದಲ್ಲಿ ಭಾಗವಹಿಸಿದ್ದರು.

ರೋಡ್ ಟು GCL (Road to GCL) ಅಭಿಯಾನ:ಈ ಟೂರ್ನಿಯನ್ನು 'Road to GCL' ಕಾರ್ಯಕ್ರಮದ ಭಾಗವಾಗಿ ಆಯೋಜಿಸಲಾಗಿತ್ತು. ಕನಿಷ್ಠ ಮಟ್ಟದಿಂದ (Grassroots level) ಚೆಸ್ ಆಟಗಾರರನ್ನು ಜಾಗತಿಕ ಮಟ್ಟದ ಗ್ಲೋಬಲ್ ಚೆಸ್ ಲೀಗ್‌ನೊಂದಿಗೆ ಜೋಡಿಸುವುದು ಇದರ ಮುಖ್ಯ ಉದ್ದೇಶವಾಗಿದೆ.
ಬೆಂಗಳೂರಿನಲ್ಲಿ ಗ್ಲೋಬಲ್ ಚೆಸ್ ಲೀಗ್ ಸೀಸನ್ 4:ಸೆಪ್ಟೆಂಬರ್ 5 ರಿಂದ 13, 2026 ರವರೆಗೆ ಬೆಂಗಳೂರಿನಲ್ಲಿ 'ಟೆಕ್ ಮಹೀಂದ್ರಾ ಗ್ಲೋಬಲ್ ಚೆಸ್ ಲೀಗ್ ಸೀಸನ್ 4' (Global Chess League Season 4) ನಡೆಯಲಿದೆ. ಇದರಲ್ಲಿ ವಿಶ್ವದ ನಂ.1 ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್, ವಿಶ್ವನಾಥನ್ ಆನಂದ್, ಅರ್ಜುನ್ ಎರಿಗೈಸಿ, ಇಯಾನ್ ನೆಪೊಮ್ನಿಯಾಚಿ ಮುಂತಾದ ದಿಗ್ಗಜ ಆಟಗಾರರು ಭಾಗವಹಿಸಲಿದ್ದಾರೆ.

## ನಬಾರ್ಡ್ (NABARD) ಮತ್ತು 'ನಾಬ್‌ಫಿಡ್' (NaBFID) ನಡುವೆ ಐತಿಹಾಸಿಕ ಒಪ್ಪಂದ: ಗ್ರಾಮೀಣ ಅಭಿವೃದ್ಧಿಗೆ ಬಿಗ್ ಬೂಸ್ಟ್!




➤ ಭಾರತದ ಗ್ರಾಮೀಣ ಮೂಲಸೌಕರ್ಯ, ಕೃಷಿ ಮೌಲ್ಯ ಸರಪಳಿ ಹಾಗೂ ಗ್ರಾಮೀಣ ಸಂಪರ್ಕವನ್ನು ಬಲಪಡಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (NABARD) ಮತ್ತು ರಾಷ್ಟ್ರೀಯ ಮೂಲಸೌಕರ್ಯ ಮತ್ತು ಅಭಿವೃದ್ಧಿ ಹಣಕಾಸು ಬ್ಯಾಂಕ್ (NaBFID) ನಡುವೆ ಪ್ರಮುಖ ತಿಳುವಳಿಕಾ ಒಪ್ಪಂದ (MoU) ಸಹಿಯಾಗಿದೆ. ವಿಕ್ಸಿತ್ ಭಾರತ್ (Viksit Bharat) ಪರಿಕಲ್ಪನೆಗೆ ಪೂರಕವಾಗಿ, ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವಿನ ಅಂತರವನ್ನು ಕಡಿಮೆ ಮಾಡಲು ಈ ಸಂಸ್ಥೆಗಳು ಜಂಟಿಯಾಗಿ ಕಾರ್ಯನಿರ್ವಹಿಸಲಿವೆ.
ಒಪ್ಪಂದದ ದಿನಾಂಕ: 26 ಆಗಸ್ಟ್ 2026 (ಮುಂಬೈ).
ಒಪ್ಪಂದಕ್ಕೆ ಸಹಿ ಮಾಡಿದವರು: ನಬಾರ್ಡ್ ಅಧ್ಯಕ್ಷರಾದ ಶಾಜಿ ಕೆ.ವಿ. (Shaji Krishnan V) ಮತ್ತು ನಾಬ್‌ಫಿಡ್ ವ್ಯವಸ್ಥಾಪಕ ನಿರ್ದೇಶಕರಾದ ರಾಜಕಿರಣ್ ರೈ ಜಿ. (Rajkiran Rai G).
ಮುಖ್ಯ ಉದ್ದೇಶ: ಗ್ರಾಮೀಣ ಮೂಲಸೌಕರ್ಯ ಯೋಜನೆಗಳಿಗೆ ಹಾಗೂ ಕೃಷಿ ಆಧಾರಿತ ಉದ್ದಿಮೆಗಳಿಗೆ ದೀರ್ಘಕಾಲೀನ ಹಾಗೂ ರಿಯಾಯಿತಿ ದರದ ಸಾಲ ಸೌಲಭ್ಯ ಒದಗಿಸುವುದು.

**➤ ಯಾವ್ಯಾವ ಕ್ಷೇತ್ರಗಳಿಗೆ ಧನಸಹಾಯ?**

ನೀರಾವರಿ ಮತ್ತು ಕುಡಿಯುವ ನೀರು: ಗ್ರಾಮೀಣ ಜಲಸಂಪನ್ಮೂಲ ನಿರ್ವಹಣೆ ಹಾಗೂ ನೈರ್ಮಲ್ಯ ಯೋಜನೆಗಳು.
ಶೀತಲ ಗೋದಾಮು ಹಾಗೂ ಸಂಗ್ರಹಣೆ (Cold Chain & Warehousing): ಕೃಷಿ ಉತ್ಪನ್ನಗಳು ಹಾಳಾಗದಂತೆ ತಡೆಯಲು ಕೋಲ್ಡ್ ಸ್ಟೋರೇಜ್ ಮತ್ತು ಟರ್ಮಿನಲ್ ಮಾರುಕಟ್ಟೆಗಳ ಸ್ಥಾಪನೆ.
ಸಂಪರ್ಕ ವ್ಯವಸ್ಥೆ: ಗ್ರಾಮೀಣ ರಸ್ತೆಗಳು ಮತ್ತು ಸೇತುವೆಗಳ ನಿರ್ಮಾಣ.
ಹಸಿರು ಇಂಧನ (Green Energy): ಸಿಬಿಜಿ (Compressed Biogas - CBG) ಯೋಜನೆಗಳ ಪ್ರೋತ್ಸಾಹ.
ಆಹಾರ ಸಂಸ್ಕರಣೆ: ರೈತರ ಆದಾಯ ಹೆಚ್ಚಿಸಲು ಆಹಾರ ಸಂಸ್ಕರಣಾ ಘಟಕಗಳಿಗೆ ಆರ್ಥಿಕ ನೆರವು

**➤ ಈ ಒಪ್ಪಂದದ ಕಾರ್ಯಾಚರಣೆಯ ಸ್ವರೂಪ:**

ಜಂಟಿ ಸಾಲ ವ್ಯವಸ್ಥೆ (Joint Financing): ದೊಡ್ಡ ಪ್ರಮಾಣದ ಮೂಲಸೌಕರ್ಯ ಯೋಜನೆಗಳಿಗೆ ಎರಡೂ ಸಂಸ್ಥೆಗಳು ಜಂಟಿಯಾಗಿ ಸಾಲ ಸಿಂಡಿಕೇಶನ್ (Debt Syndication) ನೀಡಲಿವೆ.
ಯೋಜನೆಗಳ ಪರಿಶೀಲನೆ: ವಾಣಿಜ್ಯಿಕವಾಗಿ ಲಾಭದಾಯಕ ಹಾಗೂ ತಾಂತ್ರಿಕವಾಗಿ ಸಮರ್ಥವಾಗಿರುವ ಯೋಜನೆಗಳನ್ನು ಗುರುತಿಸಿ ಜಂಟಿ ಉಸ್ತುವಾರಿ (Joint Monitoring) ವಹಿಸುವುದು.
ತಂತ್ರಜ್ಞಾನ ಮತ್ತು ಜ್ಞಾನ ವಿನಿಮಯ: ಎರಡೂ ಸಂಸ್ಥೆಗಳು ಆವಿಷ್ಕಾರಕಾರಿ ಹಣಕಾಸು ಪರಿಹಾರಗಳನ್ನು ರೂಪಿಸಲು ಜ್ಞಾನ ವಿನಿಮಯ ಮಾಡಿಕೊಳ್ಳಲಿವೆ.

## ನೇಪಾಳ ಪ್ರವಾಹ: ಭಾರತದಿಂದ 47.5 ಟನ್ ಪರಿಹಾರ ಸಾಮಗ್ರಿ ಪೂರೈಕೆ



➤ ನೇಪಾಳದಲ್ಲಿ ಸಂಭವಿಸಿದ ಭೀಕರ ಪ್ರವಾಹ ಮತ್ತು ಸರಣಿ ಭೂಕುಸಿತದಿಂದ ಸಂಕಷ್ಟಕ್ಕೆ ಸಿಲುಕಿರುವ ಸಂತ್ರಸ್ತರಿಗಾಗಿ ಭಾರತ ಸರ್ಕಾರವು ತುರ್ತು ಮಾನವೀಯ ನೆರವು ಮತ್ತು ವಿಪತ್ತು ಪರಿಹಾರ (HADR - Humanitarian Assistance and Disaster Relief) ಕಾರ್ಯದಡಿ ಒಟ್ಟು 47.5 ಟನ್‌ಗೂ ಹೆಚ್ಚು ಪರಿಹಾರ ಸಾಮಗ್ರಿಗಳನ್ನು ರವಾನಿಸಿದೆ.
ನೆರವಿನ ಪ್ರಮಾಣ: ಮೊದಲ ಹಂತದಲ್ಲಿ 10 ಟನ್ ಹಾಗೂ ಎರಡನೇ ಹಂತದಲ್ಲಿ 37.5 ಟನ್ ಸಾಮಗ್ರಿ ರವಾನಿಸಲಾಗಿದೆ.
ವಿಮಾನದ ಬಳಕೆ: ಭಾರತೀಯ ವಾಯುಪಡೆಯ C-130J ಸೂಪರ್ ಹರ್ಕ್ಯುಲಸ್ (C-130J Super Hercules) ಮಿಲಿಟರಿ ಸಾರಿಗೆ ವಿಮಾನವನ್ನು ಬಳಸಲಾಗಿದೆ.
ಪರಿಹಾರ ಸಾಮಗ್ರಿಗಳು: ತಾತ್ಕಾಲಿಕ ಟೆಂಟ್‌ಗಳು, ಕಂಬಳಿಗಳು (Blankets), ನೈರ್ಮಲ್ಯ ಕಿಟ್‌ಗಳು (Hygiene Kits), ಸೋಲಾರ್ ಲ್ಯಾಂಪ್‌ಗಳು, ಔಷಧಗಳು ಮತ್ತು ಸಿದ್ಧ ಆಹಾರ ಪ್ಯಾಕೇಟ್‌ಗಳು.
ನಾಯಕತ್ವದ ಸಂಪರ್ಕ: ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನೇಪಾಳದ ಪ್ರಧಾನಿ ಬಲೇಂದ್ರ ಶಾ ಅವರೊಂದಿಗೆ ಮಾತುಕತೆ ನಡೆಸಿ, ಅಗತ್ಯವಿರುವ ಎಲ್ಲಾ ರಾಜತಾಂತ್ರಿಕ ಹಾಗೂ ಮಾನವೀಯ ಸಹಾಯದ ಭರವಸೆ ನೀಡಿದ್ದಾರೆ.

**➤ ಸ್ಪರ್ಧಾತ್ಮಕ ಅಭ್ಯರ್ಥಿಗಳಿಗೆ ಉಪಯುಕ್ತ ಮಾಹಿತಿ:**

ಮಿಲಿಟರಿ ಕಾರ್ಯಾಚರಣೆ ತಂತ್ರಜ್ಞಾನ: C-130J Super Hercules (IAF)
ವಿಪತ್ತು ನಿರ್ವಹಣಾ ಪಡೆ: ಭಾರತದ ಗಡಿ ಪ್ರದೇಶಗಳಲ್ಲಿ NDRF ಹೈ ಅಲರ್ಟ್‌ನಲ್ಲಿದೆ (ಉತ್ತರ ಪ್ರದೇಶ & ಬಿಹಾರ ಗಡಿ)
ರಾಜತಾಂತ್ರಿಕ ಪರಿಕಲ್ಪನೆ: ಭಾರತದ 'ನೆರೆಹೊರೆಗೆ ಮೊದಲ ಆದ್ಯತೆ' (Neighbourhood First Policy)

## DRDOದಿಂದ ಲಡಾಖ್‌ನಲ್ಲಿ ಸೇನಾ ಕಾಂಬ್ಯಾಟ್ ಪ್ಯಾರಾಚೂಟ್ ಸಿಸ್ಟಮ್ (MCPS) ಯಶಸ್ವಿ ಪರೀಕ್ಷೆ: 22,000 ಅಡಿ ಎತ್ತರದಲ್ಲಿ ಸಾಹಸ!



➤ DRDOದ Aerial Delivery Research and Development Establishment (ADRDE)ತಂಡವು ವಿಶ್ವದ ಅತ್ಯಂತ ಎತ್ತರದ ಡ್ರಾಪ್ ಝೋನ್‌ಗಳಲ್ಲಿ ಒಂದಾದ ಲಡಾಖ್‌ನ ನ್ಯೋಮಾ-ಮುಧ್ ನಲ್ಲಿ -15°C ತಾಪಮಾನದ ತೀವ್ರ ಚಳಿಯ ವಾತಾವರಣದಲ್ಲಿ, ಸಮುದ್ರ ಮಟ್ಟದಿಂದ 22,000 ಅಡಿ ಎತ್ತರದಿಂದ ಹಾರಿ 20,000 ಅಡಿಯಲ್ಲಿ ಪ್ಯಾರಾಚೂಟ್ ಬಿಡುಗಡೆ ಮಾಡಿ 13,700 ಅಡಿ ಎತ್ತರದ ನಿಗದಿತ ಸ್ಥಳದಲ್ಲಿ ಸುರಕ್ಷಿತವಾಗಿ ಲ್ಯಾಂಡ್ ಆಗುವ ಮೂಲಕ MCPS ಪರೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿತು.

➤ **ಪ್ರಮುಖ ಪರೀಕ್ಷಕರ ತಂಡ:** DRDOದ ಪ್ರಮುಖ ಸಂಸ್ಥೆಯಾದ ಆಗ್ರಾದ ADRDE (Aerial Delivery Research and Development Establishment) ತಂಡದ ಸದಸ್ಯರು ಈ ಜಂಪ್ ನಡೆಸಿದರು:
ವಿಂಗ್ ಕಮಾಂಡರ್ ರಾಹುಲ್ ಝಾ (ಮುಖ್ಯ ಟೆಸ್ಟ್ ಜಂಪರ್)
ಮಾಸ್ಟರ್ ವಾರಂಟ್ ಆಫೀಸರ್ R.J. ಸಿಂಗ್
ಮಾಸ್ಟರ್ ವಾರಂಟ್ ಆಫೀಸರ್ ವಿವೇಕ್ ತಿವಾರಿ

➤ **ಮಿಲಿಟರಿ ಕಾಂಬ್ಯಾಟ್ ಪ್ಯಾರಾಚೂಟ್ ಸಿಸ್ಟಮ್ (MCPS) ವಿಶೇಷತೆಗಳು:**
ಬೆಂಗಳೂರು ಹಾಗೂ ಆಗ್ರಾ ಸಂಸ್ಥೆಗಳ ಜಂಟಿ ಕೊಡುಗೆ: ಈ ವ್ಯವಸ್ಥೆಯನ್ನು DRDOದ ಆಗ್ರಾದ ADRDE ಮತ್ತು ಬೆಂಗಳೂರಿನ DEBEL (Defence Bioengineering and Electromedical Laboratory) ಜಂಟಿಯಾಗಿ ಅಭಿವೃದ್ಧಿಪಡಿಸಿವೆ.
NavIC ತಂತ್ರಜ್ಞಾನದ ಬೆಂಬಲ: ಭಾರತದ ಸ್ವದೇಶಿ ಸ್ಯಾಟಲೈಟ್ ನ್ಯಾವಿಗೇಷನ್ ವ್ಯವಸ್ಥೆಯಾದ NavIC (Navigation with Indian Constellation) ನೊಂದಿಗೆ ಇದು ಕಾರ್ಯನಿರ್ವಹಿಸುತ್ತದೆ. ಇದರಿಂದ ವಿದೇಶಿ GPS ಮೇಲಿನ ಅವಲಂಬನೆ ಕಡಿಮೆಯಾಗಲಿದ್ದು, ಯುದ್ಧದ ಸಮಯದಲ್ಲಿ ಶತ್ರುಗಳ ನ್ಯಾವಿಗೇಷನ್ ಅಡಚಣೆಯನ್ನು (Interference) ತಡೆಯಬಹುದು.
ಸುಧಾರಿತ ಸಾಧನಗಳು: ಸೈನಿಕರ ಸುರಕ್ಷತೆಗಾಗಿ ಸ್ವದೇಶಿ ಪ್ಯಾರಾ ಕಂಪ್ಯೂಟರ್, ವಿಶೇಷ ಆಮ್ಲಜನಕ ಪೂರೈಕೆ ವ್ಯವಸ್ಥೆ (Oxygen System) ಮತ್ತು ತೀವ್ರ ಚಳಿಯನ್ನು ತಡೆಯುವ 'ಸ್ಪೆಷಲ್ ಜಂಪ್ ಸೂಟ್'ಗಳನ್ನು ಅಳವಡಿಸಲಾಗಿದೆ

## ಬಿಹಾರ ಸರ್ಕಾರದಿಂದ 'ವಿದ್ಯಾ ಸಾಥಿ' (Vidya Saathi) ಆ್ಯಪ್ ಚಾಲನೆ



➤ ಶಿಕ್ಷಣ ಕ್ಷೇತ್ರದಲ್ಲಿ ಡಿಜಿಟಲ್ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ಬಿಹಾರ ಸರ್ಕಾರವು 'ವಿದ್ಯಾ ಸಾಥಿ' (Bihar Vidya Saathi) ಎಂಬ ವಿನೂತನ 24-ಗಂಟೆಗಳ ಆನ್‌ಲೈನ್ ಕಲಿಕಾ ಆ್ಯಪ್ ಅನ್ನು ಅಧಿಕೃತವಾಗಿ ಬಿಡುಗಡೆ ಮಾಡಿದೆ. ರಾಜ್ಯದ 700 ಸರಸ್ವತಿ ವಿದ್ಯಾ ನಿಕೇತನ ಮಾದರಿ ಶಾಲೆಗಳ (Saraswati Vidya Niketan Model Schools) ಸುಮಾರು 3 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಮತ್ತು ಸಮಾಲೋಚನೆ ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

➤ **'ವಿದ್ಯಾ ಸಾಥಿ' ಆ್ಯಪ್‌ನ ಪ್ರಮುಖ ವೈಶಿಷ್ಟ್ಯಗಳು:**
24x7 ನೇರ ಶಿಕ್ಷಕರ ಬೆಂಬಲ:ಸುಮಾರು 75,000 ಶಿಕ್ಷಕರು ಈ ಪ್ಲಾಟ್‌ಫಾರ್ಮ್‌ನಲ್ಲಿ ಲಭ್ಯವಿದ್ದು, ವಿದ್ಯಾರ್ಥಿಗಳು ತಮ್ಮ ಕಲಿಕೆಗೆ ಅಗತ್ಯವಿರುವ ಶಿಕ್ಷಕರನ್ನು ಆಯ್ಕೆ ಮಾಡಿಕೊಂಡು ದಿನದ 24 ಗಂಟೆಯೂ (24x7) ತಮ್ಮ ಸಂಶಯಗಳನ್ನು ಪರಿಹರಿಸಿಕೊಳ್ಳಬಹುದು.
AI ಆಧಾರಿತ ಕಲಿಕೆ (Artificial Intelligence Tools):ಕಠಿಣ ವಿಷಯಗಳ ಕಾನ್ಸೆಪ್ಟ್ (Conceptual Learning) ಅರ್ಥೈಸಿಕೊಳ್ಳಲು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ತಂತ್ರಜ್ಞಾನ ಆಧಾರಿತ ಟೂಲ್‌ಗಳನ್ನು ಹಾಗೂ ಅಪರಿಮಿತ ಅಭ್ಯಾಸ (Unlimited Practice) ಸಾಮಗ್ರಿಗಳನ್ನು ನೀಡಲಾಗಿದೆ.
ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ:ಶಾಲಾ ಪಠ್ಯಕ್ರಮದ ಹೊರತಾಗಿ JEE (ಎಂಜಿನಿಯರಿಂಗ್) ಮತ್ತು NEET (ಮೆಡಿಕಲ್) ನಂತಹ ರಾಷ್ಟ್ರೀಯ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಉಚಿತವಾಗಿ ಸಿದ್ಧತೆ ನಡೆಸಲು ಡಿಜಿಟಲ್ ಸ್ಟಡಿ ಮೆಟೀರಿಯಲ್ ಒದಗಿಸಲಾಗಿದೆ.
**ತರಗತಿವಾರು ವಿಷಯ ಸಂಪನ್ಮೂಲ:**
9 ಮತ್ತು 10 ನೇ ತರಗತಿ: ಎಲ್ಲಾ ವಿಷಯಗಳು.
11 ಮತ್ತು 12 ನೇ ತರಗತಿ: ಸದ್ಯಕ್ಕೆ ವಿಜ್ಞಾನ (Science Stream) ವಿಭಾಗದ ವಿಷಯಗಳಿಗೆ ಆದ್ಯತೆ ನೀಡಲಾಗಿದೆ.

## 2027ರ ಏಷ್ಯನ್ ಪ್ಯಾರಾಲಿಂಪಿಕ್ ಸಮಿತಿ (APC) ಸಮ್ಮೇಳನ – ಉಜ್ಬೇಕಿಸ್ತಾನಕ್ಕೆ ಆತಿಥ್ಯದ ಗೌರವ!



➤ ಏಷ್ಯಾದ ಅತ್ಯಂತ ಪ್ರತಿಷ್ಠಿತ ಕ್ರೀಡಾ ಸಂಘಟನೆಗಳಲ್ಲಿ ಒಂದಾದಏಷ್ಯನ್ ಪ್ಯಾರಾಲಿಂಪಿಕ್ ಸಮಿತಿ (Asian Paralympic Committee - APC)ತನ್ನ ಮುಂಬರುವ 2027ರ ಮಹತ್ವದ ಸಮಾವೇಶದ ಆತಿಥ್ಯದ ಹಕ್ಕನ್ನು ಉಜ್ಬೇಕಿಸ್ತಾನ ದೇಶಕ್ಕೆ ನೀಡಿದೆ. ಏಷ್ಯಾದ ಕ್ರೀಡಾ ವಲಯದಲ್ಲಿ ಸೆಂಟ್ರಲ್ ಏಷ್ಯಾದ (ಮಧ್ಯ ಏಷ್ಯಾ) ದೇಶವೊಂದು ಈ ಸಮ್ಮೇಳನವನ್ನು ಆಯೋಜಿಸುತ್ತಿರುವುದು ಇದೇ ಮೊದಲ ಬಾರಿಯಾಗಿದೆ.

➤ **ಕ್ರೀಡಾಕೂಟದ ಪ್ರಮುಖ ಮುಖ್ಯಾಂಶಗಳು (Key Highlights)**
- ಆಯೋಜಕ ನಗರ:ತಾಷ್ಕೆಂಟ್ (ಉಜ್ಬೇಕಿಸ್ತಾನದ ರಾಜಧಾನಿ).
- ಸಮಾವೇಶದ ಸಮಯ:2027ರ ನವೆಂಬರ್ ಅಥವಾ ಡಿಸೆಂಬರ್ ತಿಂಗಳು.

**- ಆಯೋಜನೆಯ ಪ್ರಮುಖ ಭಾಗಗಳು:**
1. ಏಷ್ಯನ್ ಪ್ಯಾರಾಲಿಂಪಿಕ್ ಸಮಿತಿ ಕಾನ್ಫರೆನ್ಸ್ (APC Conference)
2. ಏಷ್ಯನ್ ಅವಾರ್ಡ್ಸ್ (Asian Awards)
3. ಜನರಲ್ ಅಸೆಂಬ್ಲಿ (General Assembly)

- ಭಾಗವಹಿಸುವ ದೇಶಗಳು: ಏಷ್ಯಾದ 45 ರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿಗಳ (NPCs) ಪ್ರತಿನಿಧಿಗಳು, ಕ್ರೀಡಾಪಟುಗಳು ಮತ್ತು ಅಂತಾರಾಷ್ಟ್ರೀಯ ಪ್ಯಾರಾ ಕ್ರೀಡಾ ಸಂಸ್ಥೆಗಳ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.

➤ ಕಠಿಣ ಸ್ಪರ್ಧೆ ಮತ್ತು ಬಿಡ್ಡಿಂಗ್ ಪ್ರಕ್ರಿಯೆ:ಈ ಪ್ರತಿಷ್ಠಿತ ಕಾರ್ಯಕ್ರಮದ ಆತಿಥ್ಯ ಪಡೆಯಲು ಏಷ್ಯಾದ ಐದು ರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿಗಳ (NPCs) ನಡುವೆ ತೀವ್ರ ಪೈಪೋಟಿ ನಡೆದಿತ್ತು. ಅಂತಿಮವಾಗಿ ನಡೆದ ಸ್ಪರ್ಧಾತ್ಮಕ ಬಿಡ್ಡಿಂಗ್‌ನಲ್ಲಿ ಉಜ್ಬೇಕಿಸ್ತಾನದ ರಾಜಧಾನಿ ತಾಷ್ಕೆಂಟ್, APC ಕಾರ್ಯಕಾರಿ ಮಂಡಳಿಯ ಸದಸ್ಯರು ಹಾಗೂ ವಿವಿಧ ಸಮಿತಿಗಳ ಅಧ್ಯಕ್ಷರಿಂದ ಬಹುಮತದ ಬೆಂಬಲ ಪಡೆದು ಆತಿಥ್ಯದ ಹಕ್ಕನ್ನು ತನ್ನದಾಗಿಸಿಕೊಂಡಿತು.

➤ **ಸಮ್ಮೇಳನದ ಮುಖ್ಯ ಉದ್ದೇಶವೇನು?**
- ಪ್ಯಾರಾ ಕ್ರೀಡೆಗಳ ಅಭಿವೃದ್ಧಿ: ಏಷ್ಯಾದ್ಯಂತ ವಿಕಲಚೇತನ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು ಹೊಸ ಯೋಜನೆಗಳು ಮತ್ತು ಕಾರ್ಯತಂತ್ರಗಳ ಕುರಿತು ಚರ್ಚೆ.
- ಜ್ಞಾನ ವಿನಿಮಯ ಮತ್ತು ಕಾರ್ಯಾಗಾರ: ಕ್ರೀಡಾ ತರಬೇತಿ, ಮೂಲಸೌಕರ್ಯ ಹಾಗೂ ಕ್ರೀಡಾಪಟುಗಳ ಕಲ್ಯಾಣಕ್ಕಾಗಿ ವಿಶೇಷ ಕಾರ್ಯಾಚರಣೆ ರೂಪಿಸುವುದು.
- ಏಷ್ಯನ್ ಅವಾರ್ಡ್ಸ್ ಸೌರಭ: ಪ್ಯಾರಾಲಿಂಪಿಕ್ ಚಳವಳಿಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಕ್ರೀಡಾಪಟುಗಳು ಮತ್ತು ಸಂಸ್ಥೆಗಳಿಗೆ ಈ ವೇದಿಕೆಯಲ್ಲಿ ಗೌರವ ಸಲ್ಲಿಸಲಾಗುತ್ತದೆ.

## ಭಾರತ - ಚೀನಾ ಗಡಿ ವಿವಾದ: ಚೀನಾದಲ್ಲಿ ನಡೆದ 25ನೇ ಸುತ್ತಿನ ಮಾತುಕತೆಯಲ್ಲಿ 8 ಪ್ರಮುಖ ನಿರ್ಣಯಗಳು



➤ ಭಾರತ ಮತ್ತು ಚೀನಾ ದೇಶಗಳ ನಡುವಿನ ಗಡಿ ವಿವಾದವನ್ನು ಶಮನಗೊಳಿಸಲು ಹಾಗೂ ಗಡಿಯಲ್ಲಿ ಶಾಂತಿ ಸ್ಥಾಪಿಸಲು ರಾಜತಾಂತ್ರಿಕ ಮಟ್ಟದಲ್ಲಿ ಮತ್ತೊಂದು ಪ್ರಮುಖ ಮೈಲಿಗಲ್ಲು ತಲುಪಲಾಗಿದೆ. ಚೀನಾದ ರಾಜಧಾನಿ ಬೀಜಿಂಗ್‌ನಲ್ಲಿ ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ (NSA)ಅಜಿತ್ ದೋವಲ್ಮತ್ತು ಚೀನಾದ ವಿದೇಶಾಂಗ ಸಚಿವವಾಂಗ್ ಯಿಅವರ ನಡುವೆ ನಡೆದ 25ನೇ ಸುತ್ತಿನ ವಿಶೇಷ ಪ್ರತಿನಿಧಿಗಳ (Special Representatives - SR) ಮಟ್ಟದ ಮಾತುಕತೆ ಯಶಸ್ವಿಯಾಗಿ ಪೂರ್ಣಗೊಂಡಿದೆ.

➤ ಮುಂದಿನ ತಿಂಗಳು ನಡೆಯಲಿರುವ ಬ್ರಿಕ್ಸ್ (BRICS) ಶೃಂಗಸಭೆಯಲ್ಲಿ ಭಾಗವಹಿಸಲು ಚೀನಾ ಅಧ್ಯಕ್ಷ ಶಿ ಜಿನ್‌ಪಿಂಗ್ ಅವರು ಭಾರತಕ್ಕೆ ಭೇಟಿ ನೀಡುವ ಹಿನ್ನೆಲೆಯಲ್ಲಿ ಈ ಸಭೆಯು ತೀವ್ರ ಕುತೂಹಲ ಕೆರಳಿಸಿತ್ತು. ಈ ಸಭೆಯಲ್ಲಿ ಗಡಿ ನಿರ್ವಹಣೆ ಹಾಗೂ ವಿವಾದ ಪರಿಹಾರಕ್ಕಾಗಿ8 ನಿರ್ಣಯಗಳ (8-Point Consensus)ಐತಿಹಾಸಿಕ ಒಪ್ಪಂದಕ್ಕೆ ಉಭಯ ದೇಶಗಳು ಸಹಿ ಹಾಕಿವೆ.

**➤ ಸಭೆಯ ಪ್ರಮುಖ 8 ನಿರ್ಣಯಗಳು (8-Point Consensus):**

**1. ಗಡಿ ಗಡಿರೇಖೆ ನಿರ್ಧಾರ (Boundary Delimitation):**2005ರ 'ರಾಜಕೀಯ ನಿಯತಾಂಕಗಳು ಮತ್ತು ಮಾರ್ಗದರ್ಶಿ ತತ್ವಗಳ' ಒಪ್ಪಂದದ ಆಧಾರದ ಮೇಲೆ, ಗಡಿ ಸಮಸ್ಯೆಯನ್ನು ನ್ಯಾಯಯುತ ಮತ್ತು ಪರಸ್ಪರ ಸಮ್ಮತಿಸುವ ರೀತಿಯಲ್ಲಿ ಬಗೆಹರಿಸಲು 'ಅರ್ಲಿ ಅಂಡ್ ಸಬ್ಸ್ಟಾನ್ಶಿಯಲ್ ಹಾರ್ವೆಸ್ಟ್' (Early and Substantial Harvest) ತತ್ವದಡಿ ಗಡಿ ಗುರುತಿಸುವಿಕೆ ಪ್ರಕ್ರಿಯೆಯನ್ನು ವೇಗಗೊಳಿಸಲು ನಿರ್ಧರಿಸಲಾಗಿದೆ.

**2. ಸೇನಾ ಸಂಪರ್ಕಕ್ಕೆ ಹೊಸ ವ್ಯವಸ್ಥೆ:**ಗಡಿ ಭಾಗದಲ್ಲಿ ಉದ್ವಿಗ್ನತೆ ಶಮನಗೊಳಿಸಲು ಮತ್ತು ಸೇನಾ ಕಮಾಂಡರ್ ಮಟ್ಟದ ಮಾತುಕತೆಗಳಿಗಾಗಿ ಹೆಚ್ಚುವರಿಯಾಗಿ ಎರಡು ಹೊಸ ಮಿಲಿಟರಿ ಸಭೆಯ ಸ್ಥಳಗಳನ್ನು (Meeting Points) ಗುರುತಿಸಲು ಒಪ್ಪಿಕೊಳ್ಳಲಾಗಿದೆ.

**3. ಹೊಸ ಮಿಲಿಟರಿ ಹಾಟ್‌ಲೈನ್‌ಗಳು (Hotlines):**ಪೂರ್ವ (ಅರುಣಾಚಲ ಪ್ರದೇಶ) ಮತ್ತು ಮಧ್ಯ ವಲಯಗಳಲ್ಲಿ (ಉತ್ತರಾಖಂಡ್ ಮತ್ತು ಹಿಮಾಚಲ ಪ್ರದೇಶ) ಉಭಯ ದೇಶಗಳ ಸೇನಾ ಪಡೆಗಳ ನಡುವೆ ತಕ್ಷಣದ ಸಂಪರ್ಕಕ್ಕಾಗಿ ಎರಡು ಹೊಸ ಮಿಲಿಟರಿ ಹಾಟ್‌ಲೈನ್ ಲಿಂಕ್‌ಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ.

**4. ತಕ್ಷಣದ ಸಮಸ್ಯೆಗೆ ಸ್ಪಂದನೆ:**ವಾಸ್ತವ ನಿಯಂತ್ರಣ ರೇಖೆಯ (LAC) ಉದ್ದಕ್ಕೂ ಯಾವುದೇ ತಪ್ಪು ತಿಳುವಳಿಕೆ ಅಥವಾ ತುರ್ತು ಪರಿಸ್ಥಿತಿ ಎದುರಾದಲ್ಲಿ, ಮಿಲಿಟರಿ ಮತ್ತು ರಾಜತಾಂತ್ರಿಕ (WMCC) ಚಾನೆಲ್‌ಗಳ ಮೂಲಕ ತಕ್ಷಣವೇ ಪರಿಹರಿಸಲು ಒಪ್ಪಿಗೆ ಸೂಚಿಸಲಾಗಿದೆ.

**5. ನದಿ ನೀರಿನ ದತ್ತಾಂಶ ಮತ್ತು ಸಭೆ:**ಗಡಿಯಾಚೆಗಿನ ನದಿಗಳ (ಮುಖ್ಯವಾಗಿ ಬ್ರಹ್ಮಪುತ್ರ) ನಿರ್ವಹಣೆ, ಪ್ರವಾಹ ಮುನ್ನೆಚ್ಚರಿಕೆ ಹಾಗೂ ಜಲವಿಜ್ಞಾನದ (Hydrological Data) ಮಾಹಿತಿ ವಿನಿಮಯಕ್ಕಾಗಿ ಮುಂದಿನ ತಿಂಗಳು (ಸೆಪ್ಟೆಂಬರ್) ತಜ್ಞರ ಮಟ್ಟದ ಸಭೆಯನ್ನು ನಡೆಸಲು ತೀರ್ಮಾನಿಸಲಾಗಿದೆ.

**6. ಕೈಲಾಸ ಮಾನಸಸರೋವರ ಯಾತ್ರೆ:**ಟಿಬೆಟ್ ಸ್ವಾಯತ್ತ ಪ್ರದೇಶದಲ್ಲಿ ನಡೆಯುವ ಭಾರತೀಯರ ಪವಿತ್ರ ಕೈಲಾಸ ಮಾನಸಸರೋವರ ಯಾತ್ರೆಯ ತಂಡಗಳ ಸಂಖ್ಯೆಯನ್ನು ಹೆಚ್ಚಿಸಲು ಚೀನಾ ಸಮ್ಮತಿಸಿದ್ದು, ಈ ಕ್ರಮವನ್ನು ಭಾರತ ಪ್ರಶಂಸಿಸಿದೆ.

**7. ಗಡಿ ವ್ಯಾಪಾರಕ್ಕೆ ಮರುಚಾಲನೆ:**ಗಡಿ ಪ್ರದೇಶಗಳಲ್ಲಿ ಶಾಂತಿ ಕಾಪಾಡುವ ದೃಷ್ಟಿಯಿಂದ ಮುಚ್ಚಲ್ಪಟ್ಟಿದ್ದ ಮೂರು ಗಡಿ ವ್ಯಾಪಾರ ಕೇಂದ್ರಗಳನ್ನು (Border Trade Markets) ಮರುಆರಂಭಿಸಲು ಹಾಗೂ ಗಡಿ ವ್ಯಾಪಾರವನ್ನು ಉತ್ತೇಜಿಸಲು ಉಭಯ ದೇಶಗಳು ಸಮ್ಮತಿಸಿವೆ.

**8. 2027ರಲ್ಲಿ 26ನೇ ಸುತ್ತಿನ ಮಾತುಕತೆ:**ಉಭಯ ದೇಶಗಳ ಮುಖಂಡರ ಮಾರ್ಗದರ್ಶನದಲ್ಲಿ ಗಡಿಯಲ್ಲಿ ಶಾಂತಿ ಕಾಪಾಡಲು ಬದ್ಧತೆ ವ್ಯಕ್ತಪಡಿಸಲಾಗಿದ್ದು, 26ನೇ ಸುತ್ತಿನ ವಿಶೇಷ ಪ್ರತಿನಿಧಿಗಳ (SR) ಮಾತುಕತೆಯನ್ನು 2027ರಲ್ಲಿ ಭಾರತದಲ್ಲಿ ನಡೆಸಲು ನಿರ್ಧರಿಸಲಾಗಿದೆ.

## ಭಾರತ vs ಶ್ರೀಲಂಕಾ ಡ್ರಾ: ಫಾಲೋ-ಆನ್ ನಿರ್ಧಾರವನ್ನು ಸಮರ್ಥಿಸಿಕೊಂಡ ಶುಬ್ ಮನ್ ಗಿಲ್ – 'ಇಂದು ಟೆಸ್ಟ್ ಕ್ರಿಕೆಟ್ ಗೆದ್ದಿದೆ'



➤ ಶ್ರೀಲಂಕಾ ವಿರುದ್ಧದ ಎರಡನೇ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡಕ್ಕೆ ಗೆಲುವು ಕೈತಪ್ಪಿದರೂ, ಭಾರತ ತಂಡದ ನಾಯಕ ಶುಬ್ ಮನ್ ಗಿಲ್ ತಮ್ಮ 'ಫಾಲೋ-ಆನ್' ಹೇರುವ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದಾರೆ. ಕೊಲಂಬೊದ ಸಿಂಹಳೀಸ್ ಸ್ಪೋರ್ಟ್ಸ್ ಕ್ಲಬ್ (SSC) ಮೈದಾನದಲ್ಲಿ ನಡೆದ ರೋಚಕ ಪಂದ್ಯವು ಡ್ರಾನಲ್ಲಿ ಅಂತ್ಯಗೊಂಡ ಬಳಿಕ ಮಾತನಾಡಿದ ಅವರು, "ಇಂದು ಟೆಸ್ಟ್ ಕ್ರಿಕೆಟ್ ನಿಜವಾದ ಜಯ ಸಾಧಿಸಿದೆ" ಎಂದು ಹೇಳಿದ್ದಾರೆ. ಮೊದಲ ಟೆಸ್ಟ್‌ನಲ್ಲಿ ಭರ್ಜರಿ ಗೆಲುವು ಸಾಧಿಸಿದ್ದ ಭಾರತ, ಎರಡು ಪಂದ್ಯಗಳ ಟೆಸ್ಟ್ ಸರಣಿಯನ್ನು 1-0 ಅಂತರದಲ್ಲಿ ತನ್ನದಾಗಿಸಿಕೊಂಡಿದೆ.

**➤ ಫಾಲೋ-ಆನ್ ನಿರ್ಧಾರ ಸರಿಯಿತ್ತೇ?** ಗಿಲ್ ನೀಡಿದ ಸ್ಪಷ್ಟನೆ:ಭಾರತ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ 503/9 ರನ್‌ಗಳ ಬೃಹತ್ ಮೊತ್ತ ಪೇರಿಸಿತ್ತು. ಅದಕ್ಕುತ್ತರವಾಗಿ ಶ್ರೀಲಂಕಾವನ್ನು 290 ರನ್‌ಗಳಿಗೆ ಆಲೌಟ್ ಮಾಡಿ, 213 ರನ್‌ಗಳ ಬೃಹತ್ ಮುನ್ನಡೆ ಪಡೆಯಿತು. ಮಳೆ ಬರುವ ಮುನ್ಸೂಚನೆ ಇದ್ದಿದ್ದರಿಂದ ಪಂದ್ಯದ ಫಲಿತಾಂಶ ಬೇಗ ಪಡೆಯಲು ಗಿಲ್ ಆತಿಥೇಯರಿಗೆ ಫಾಲೋ-ಆನ್ ನೀಡಿದರು.

ಫಾಲೋ-ಆನ್ ನೀಡಿದ ನಿರ್ಧಾರ ತಲೆಕೆಳಗಾಯಿತೇ ಎಂಬ ಪ್ರಶ್ನೆಗೆ ಉತ್ತರಿಸಿದ ಗಿಲ್:"ನಾವು ಸುಮಾರು 250 ಓವರ್‌ಗಳಿಗೂ ಹೆಚ್ಚು ಕಾಲ ಫೀಲ್ಡಿಂಗ್ ಮಾಡಿದೆವು. ಮಳೆಯಾಗುವ ಸಾಧ್ಯತೆ ಇದ್ದಿದ್ದರಿಂದ ಆ ಕ್ಷಣದಲ್ಲಿ ಲಭ್ಯವಿದ್ದ ಅತ್ಯುತ್ತಮ ನಿರ್ಧಾರವನ್ನೇ ತೆಗೆದುಕೊಂಡೆವು. ಒಂದು ವೇಳೆ ಫಾಲೋ-ಆನ್ ನೀಡದೆ, ನಂತರ ಮಳೆ ಬಂದಿದ್ದರೆ 'ಏಕೆ ಫಾಲೋ-ಆನ್ ನೀಡಲಿಲ್ಲ?' ಎಂದು ಪ್ರಶ್ನಿಸಲಾಗುತ್ತಿತ್ತು. ಈ ನಿರ್ಧಾರದ ಬಗ್ಗೆ ನನಗೆ ಯಾವುದೇ ವಿಷಾದವಿಲ್ಲ."

**➤ ಸೋನಲ್ ದಿನುಷಾ ಸಾಹಸ:** ಭಾರತದ ಗೆಲುವಿಗೆ ತಡೆಗೋಡೆ: ಶ್ರೀಲಂಕಾ ತಂಡದ ಯುವ ಬ್ಯಾಟರ್ ಸೋನಲ್ ದಿನುಷಾ ಎರಡನೇ ಇನ್ನಿಂಗ್ಸ್‌ನಲ್ಲಿ ಅಜೇಯ 133 ರನ್ ಸಿಡಿಸಿ (ಮೊದಲ ಇನ್ನಿಂಗ್ಸ್‌ನಲ್ಲೂ 103 ರನ್) ಭಾರತದ ಸರಣಿ ಕ್ಲೀನ್‌ಸ್ವೀಪ್ ಕನಸನ್ನು ಭಗ್ನಗೊಳಿಸಿದರು.

ಮೊದಲ ಇನ್ನಿಂಗ್ಸ್: ಶ್ರೀಲಂಕಾ 290/10 (ದಿನುಷಾ 103)
ಭಾರತ ಮೊದಲ ಇನ್ನಿಂಗ್ಸ್: 503/9 ಡಿಕ್ಲೇರ್ಡ್
ಎರಡನೇ ಇನ್ನಿಂಗ್ಸ್: ಶ್ರೀಲಂಕಾ 429/9 (ದಿನುಷಾ 133*, ನುವಾಂಥ 46)

ಶ್ರೀಲಂಕಾ ತರಬೇತುದಾರ ಗ್ಯಾರಿ ಕರ್ಸ್ಟನ್, ದಿನುಷಾ ಅವರ ಈ ಇನ್ನಿಂಗ್ಸ್ ಅನ್ನು "ಶ್ರೀಲಂಕಾ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲೇ ಅತ್ಯಂತ ಶ್ರೇಷ್ಠ ಪಂದ್ಯ ರಕ್ಷಕ ಬ್ಯಾಟಿಂಗ್" ಎಂದು ಬಣ್ಣಿಸಿದ್ದಾರೆ.

**➤ ಪಂದ್ಯದ ಪ್ರಮುಖ ಮುಖ್ಯಾಂಶಗಳು:**

ಪಂದ್ಯದ ಫಲಿತಾಂಶ: ಡ್ರಾ (ಭಾರತಕ್ಕೆ 1-0 ಸರಣಿ ಗೆಲುವು)

ಪ್ರಮುಖ ಆಟಗಾರ: ಸೋನಲ್ ದಿನುಷಾ (ಪಂದ್ಯದಲ್ಲಿ ಎರಡು ಶತಕ)
ಭಾರತದ ಪ್ರಮುಖ ಬೌಲರ್‌ಗಳು: ಮಾನವ್ ಸುತಾರ್ (3/121), ರವೀಂದ್ರ ಜಡೇಜಾ (3/94)
WTC ಪಾಯಿಂಟ್‌ಗಳು: ಡ್ರಾನಿಂದಾಗಿ ಪ್ರಮುಖ ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಅಂಕಗಳು ಹಂಚಿಕೆಯಾದವು.

## ಭಾರತ - ಬ್ರಿಟನ್ ರಕ್ಷಣಾ ಒಪ್ಪಂದ: ನೌಕಾಪಡೆಗೆ 'ಎಲೆಕ್ಟ್ರಿಕ್ ಪ್ರೊಪಲ್ಷನ್ ಸಿಸ್ಟಮ್' ತಂತ್ರಜ್ಞಾನ



➤ ಭಾರತ ಮತ್ತು ಯುನೈಟೆಡ್ ಕಿಂಗ್‌ಡಮ್ (UK) ದೇಶಗಳು ತಮ್ಮ ರಕ್ಷಣಾ ಸಹಯೋಗವನ್ನು ಮತ್ತಷ್ಟು ಬಲಪಡಿಸಲು ಶೀಘ್ರದಲ್ಲೇ ಒಂದು ಮಹತ್ವದಅಂತರ್-ಸರಕಾರಿ ಒಪ್ಪಂದಕ್ಕೆ (Inter-Governmental Agreement - IGA)ಸಹಿ ಹಾಕಲಿವೆ. ಈ ಒಪ್ಪಂದದ ಮುಖ್ಯ ಉದ್ದೇಶವೆಂದರೆ ಭಾರತೀಯ ನೌಕಾಪಡೆಯ (Indian Navy) ಭವಿಷ್ಯದ ಬೃಹತ್ ಯುದ್ಧನೌಕೆಗಳಿಗಾಗಿ'ಇಂಟಿಗ್ರೇಟೆಡ್ ಫುಲ್ ಎಲೆಕ್ಟ್ರಿಕ್ ಪ್ರೊಪಲ್ಷನ್' (Integrated Full Electric Propulsion - IFEP)ತಂತ್ರಜ್ಞಾನವನ್ನು ಜಂಟಿಯಾಗಿ ವಿನ್ಯಾಸಗೊಳಿಸುವುದು ಮತ್ತು ಅಭಿವೃದ್ಧಿಪಡಿಸುವುದಾಗಿದೆ.
➤ GE ವರ್ನೋವಾ & BHEL ಸಹಯೋಗ ಮತ್ತು ಲ್ಯಾಂಡ್-ಬೇಸ್ಡ್ ಟೆಸ್ಟಿಂಗ್ ಫೆಸಿಲಿಟಿ: ಈ ಯೋಜನೆಗಾಗಿ ಯುಕೆ ಮೂಲದ 'ಜಿಇ ವರ್ನೋವಾ' (GE Vernova) ಹಾಗೂ ಭಾರತ ಸರ್ಕಾರದ ಸಾರ್ವಜನಿಕ ವಲಯದ ಉದ್ಯಮ 'ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್' (BHEL) ಸಂಸ್ಥೆಗಳು ಕೈಜೋಡಿಸಿವೆ.
- ಮೊದಲ ಭೂ-ಆಧಾರಿತ ಪರೀಕ್ಷಾ ಸೌಲಭ್ಯ (Land-Based Test Facility): ಈ ಒಪ್ಪಂದದ ಭಾಗವಾಗಿ ಭಾರತದ ಮೊದಲ ನೌಕಾ ಭೂ-ಆಧಾರಿತ ವಿದ್ಯುತ್ ಪ್ರೊಪಲ್ಷನ್ ಪರೀಕ್ಷಾ ಕೇಂದ್ರವನ್ನು ಸ್ಥಾಪಿಸಲಾಗುವುದು.
- ಪರೀಕ್ಷೆಯ ಪ್ರಾಮುಖ್ಯತೆ: ಎಲೆಕ್ಟ್ರಿಕ್ ಪ್ರೊಪಲ್ಷನ್ ವ್ಯವಸ್ಥೆಯನ್ನು ಯುದ್ಧನೌಕೆಗಳಲ್ಲಿ ಅಳವಡಿಸುವ ಮೊದಲು ಅದನ್ನು ಭೂಮಿಯ ಮೇಲಿನ ಈ ಪರೀಕ್ಷಾ ಕೇಂದ್ರದಲ್ಲೇ ಸಂಪೂರ್ಣವಾಗಿ ಪರೀಕ್ಷಿಸಿ ಧೃಡೀಕರಿಸಲಾಗುತ್ತದೆ.
➤ ಎಲೆಕ್ಟ್ರಿಕ್ ಪ್ರೊಪಲ್ಷನ್ ವ್ಯವಸ್ಥೆಯ ಮುಖ್ಯ ಪ್ರಯೋಜನಗಳು:ಸದ್ಯ ಭಾರತೀಯ ನೌಕಾಪಡೆಯ ಯುದ್ಧನೌಕೆಗಳು ಡೀಸೆಲ್ ಎಂಜಿನ್‌ಗಳು, ಗ್ಯಾಸ್ ಟರ್ಬೈನ್‌ಗಳು ಅಥವಾ ಸ್ಟೀಮ್ ಟರ್ಬೈನ್‌ಗಳ ಮೂಲಕ ಚಲಿಸುತ್ತವೆ. ಆದರೆ ಹೊಸ 'ಫುಲ್ ಎಲೆಕ್ಟ್ರಿಕ್ ಪ್ರೊಪಲ್ಷನ್' ವ್ಯವಸ್ಥೆಯು ಕ್ರಾಂತಿಕಾರಿ ಬದಲಾವಣೆ ತರಲಿದೆ:
- 6000 ಟನ್‌ಗಿಂತ ಹೆಚ್ಚು ತೂಕದ ನೌಕೆಗಳಿಗೆ ಬಲ:ಈ ವಿದ್ಯುತ್ ತಂತ್ರಜ್ಞಾನವನ್ನು 6,000 ಟನ್‌ಗಳಿಗಿಂತ ಅಧಿಕ ತೂಕದ ಬೃಹತ್ ಯುದ್ಧನೌಕೆಗಳಿಗೆ (ವಿಶೇಷವಾಗಿ 4 ಲ್ಯಾಂಡಿಂಗ್ ಪ್ಲಾಟ್‌ಫಾರ್ಮ್ ಡಾಕ್ಸ್ - LPD) ಬಳಸಲಾಗುತ್ತದೆ.
- ಶಕ್ತಿ ನಿರ್ವಹಣೆ (Power Management): ನೌಕೆಯಲ್ಲಿ ಉತ್ಪತ್ತಿಯಾಗುವ ವಿದ್ಯುತ್ ಶಕ್ತಿಯನ್ನು ಅಗತ್ಯಕ್ಕೆ ತಕ್ಕಂತೆ ಪ್ರೊಪಲ್ಷನ್ ಮತ್ತು ಇತರ ಇಲೆಕ್ಟ್ರಾನಿಕ್ ವ್ಯವಸ್ಥೆಗಳಿಗೆ ಹಂಚಿಕೆ ಮಾಡಬಹುದು.
- ಆಧುನಿಕ ಸೆನ್ಸಾರ್ ಹಾಗೂ ರಾಡಾರ್‌ಗಳು: ಈ ಸಿಸ್ಟಮ್‌ನಿಂದಾಗಿ ಯುದ್ಧನೌಕೆಗಳಲ್ಲಿ ಹೆಚ್ಚಿನ ಶಕ್ತಿ ಬಯಸುವ ಅತ್ಯಾಧುನಿಕ ರಾಡಾರ್‌ಗಳು, ಲೇಸರ್ ಅಸ್ತ್ರಗಳು ಹಾಗೂ ಎಲೆಕ್ಟ್ರಾನಿಕ್ ವಾರ್‌ಫೇರ್ ಸಿಸ್ಟಮ್‌ಗಳನ್ನು ಅಳವಡಿಸಲು ಸಾಧ್ಯವಾಗುತ್ತದೆ.
- ನಿಶ್ಯಬ್ದ ಸಂಚಾರ (Stealth Capability): ಸಾಂಪ್ರದಾಯಿಕ ಇಂಧನ ಎಂಜಿನ್‌ಗಳಿಗಿಂತ ಎಲೆಕ್ಟ್ರಿಕ್ ಸಿಸ್ಟಮ್‌ಗಳು ಕಡಿಮೆ ಶಬ್ದ ಮಾಡುವುದರಿಂದ ಸಬ್‌ಮರೀನ್‌ಗಳಿಂದ (ಸಲಕರಣೆಗಳಿಂದ) ನೌಕೆಯನ್ನು ಅಡಗಿಸಿಡಲು ಸಹಾಯವಾಗುತ್ತದೆ.
➤ ಎಲ್.ಎಮ್.ಎಮ್ (Lightweight Multirole Missile - LMM) ಕ್ಷಿಪಣಿ ಒಪ್ಪಂದ:ವಿದ್ಯುತ್ ಪ್ರೊಪಲ್ಷನ್ ಒಪ್ಪಂದದ ಜೊತೆಗೆ, ಭಾರತೀಯ ಸೇನೆಗಾಗಿ (Indian Army) ಬ್ರಿಟಿಷ್ ಮೂಲದ 'ಲೈಟ್‌ವೇಟ್ ಮಲ್ಟಿರೋಲ್ ಮಿಸೈಲ್ಸ್' (Martlet LMM) ಕ್ಷಿಪಣಿಗಳ ಖರೀದಿಗೆ ಸಂಬಂಧಿಸಿದಂತೆ ಎರಡನೇ ರಕ್ಷಣಾ ಒಪ್ಪಂದಕ್ಕೂ ಶೀಘ್ರದಲ್ಲೇ ಅಂಕಿತ ಬೀಳಲಿದೆ. ಈ ಲಘು ಕ್ಷಿಪಣಿಗಳು ಹೆಲಿಕಾಪ್ಟರ್‌ಗಳು, ಡ್ರೋನ್‌ಗಳು ಹಾಗೂ ನೆಲದ ಮೇಲಿನ ಪಡೆಗಳಿಗೆ ಶತ್ರು ನೌಕೆ ಹಾಗೂ ಡ್ರೋನ್ ಬೆದರಿಕೆಗಳನ್ನು ನಿಗ್ರಹಿಸಲು ಸಹಾಯ ಮಾಡುತ್ತವೆ.

## ಮಹಿಳಾ ಹಾಕಿ ವಿಶ್ವಕಪ್ 2026: ಸಲೀಮಾ ಟೆಟೆ ಪಡೆಗೆ historic 5ನೇ ಸ್ಥಾನ – 52 ವರ್ಷಗಳಲ್ಲಿ ಅತ್ಯುತ್ತಮ ಸಾಧನೆ!



➤ ಮಹಿಳಾ ಎಫ್‌ಐಹೆಚ್ ಹಾಕಿ ವಿಶ್ವಕಪ್ 2026ರಲ್ಲಿ (FIH Women's Hockey World Cup 2026) ಸಲೀಮಾ ಟೆಟೆ ನೇತೃತ್ವದ ಭಾರತೀಯ ಮಹಿಳಾ ಹಾಕಿ ತಂಡವು ವಿಶ್ವ ಶ್ರೇಯಾಂಕದಲ್ಲಿ 5ನೇ ಸ್ಥಾನದಲ್ಲಿದ್ದ ಪ್ರಬಲ ಜರ್ಮನಿ ತಂಡವನ್ನು 3-1 ಅಂತರದಿಂದ ಮಣಿಸಿ 5ನೇ ಸ್ಥಾನ ಪಡೆದುಕೊಂಡಿದೆ. ಇದು ಕಳೆದ 52 ವರ್ಷಗಳಲ್ಲಿ ಭಾರತೀಯ ಮಹಿಳಾ ಹಾಕಿ ತಂಡದ ಅತ್ಯುತ್ತಮ ವಿಶ್ವಕಪ್ ಸಾಧನೆಯಾಗಿದೆ.

**➤ 52 ವರ್ಷಗಳ ನಂತರ ಐತಿಹಾಸಿಕ ಮೈಲಿಗಲ್ಲು:**
1974ರ ಚೊಚ್ಚಲ ಆವೃತ್ತಿಯ ಸಾಧನೆ: 1974ರಲ್ಲಿ ನಡೆದ ಚೊಚ್ಚಲ ಆವೃತ್ತಿಯ ವಿಶ್ವಕಪ್‌ನಲ್ಲಿ ಅಜಿಂದರ್ ಕೌರ್ ನೇತೃತ್ವದ ಭಾರತ ತಂಡವು 4ನೇ ಸ್ಥಾನ ಗಳಿಸಿತ್ತು.
ಎರಡನೇ ಅತ್ಯುತ್ತಮ ಪ್ರದರ್ಶನ: 1974ರ ನಂತರ ವಿಶ್ವಕಪ್ ಇತಿಹಾಸದಲ್ಲೇ ಭಾರತ ಮಹಿಳಾ ತಂಡ ಸಾಧಿಸಿದ ಅತ್ಯುತ್ತಮ ಶ್ರೇಯಾಂಕ ಇದಾಗಿದ್ದು, 5ನೇ ಸ್ಥಾನ ಗಳಿಸಿ ಹೊಸ ಇತಿಹಾಸ ಬರೆದಿದೆ.
ಯುವ ತಂಡದ ಕಮಾಲ್: ಪ್ರಸ್ತುತ ತಂಡದ 11 ಮಂದಿ ಆಟಗಾರ್ತಿಯರಿಗೆ ಇದೇ ಮೊದಲ ವಿಶ್ವಕಪ್ ಅನುಭವವಾಗಿದ್ದರೂ, ಅವರು ತೋರಿದ ಶಿಸ್ತುಬದ್ಧ ಆಟ ಕ್ರೀಡಾಲೋಕದ ಗಮನ ಸೆಳೆದಿದೆ.
**➤ ಜರ್ಮನಿ ವಿರುದ್ಧ ಮಿಂಚಿದ ನವನೀತ್ ಕೌರ್:** 27-08-2026ನೆದರ್‌ಲ್ಯಾಂಡ್ಸ್‌ನ ವ್ಯಾಗನರ್ ಹಾಕಿ ಕ್ರೀಡಾಂಗಣದಲ್ಲಿ ನಡೆದ 5-6ನೇ ಸ್ಥಾನದ ವರ್ಗೀಕರಣ ಪಂದ್ಯದ ಪ್ರಮುಖ ಕ್ಷಣಗಳು:
ಮೊದಲಾರ್ಧ (Goalless First Half): ಪಂದ್ಯದ ಮೊದಲಾರ್ಧದಲ್ಲಿ ಎರಡೂ ತಂಡಗಳು ಸಮಬಲದ ಹೋರಾಟ ನಡೆಸಿದವು (0-0 scoreline).
43ನೇ ನಿಮಿಷ: ನೇಹಾ ಗೋಯಲ್ ನೀಡಿದ ಪಾಸ್ ಬಳಸಿ ಇಶಿಕಾ ಚೌಧರಿ ಗಳಿಸಿದ ರಿವರ್ಸ್ ಹಿಟ್ ಗೋಲಿನಿಂದ ಭಾರತ 1-0 ಮುನ್ನಡೆ ಪಡೆಯಿತು.
44ನೇ ನಿಮಿಷ: ಪೆನಾಲ್ಟಿ ಕಾರ್ನರ್ ಅವಕಾಶವನ್ನು ಬಳಸಿಕೊಂಡ ಸ್ಟ್ರೈಕರ್ ನವನೀತ್ ಕೌರ್ ಭಾರತಕ್ಕೆ 2-0 ಮುನ್ನಡೆ ತಂದುಕೊಟ್ಟರು.
47ನೇ ನಿಮಿಷ: ನಾಯಕಿ ಸಲೀಮಾ ಟೆಟೆ ನೀಡಿದ ಅದ್ಭುತ ಪಾಸ್ ಮೂಲಕ ನವನೀತ್ ಕೌರ್ ಜರ್ಮನ್ ರಕ್ಷಣಾ ಪಡೆಯನ್ನು ಭೇದಿಸಿ ತಮ್ಮ ಎರಡನೇ (ವೈಯಕ್ತಿಕ) ಗೋಲು ಬಾರಿಸಿದರು.
ಅಂತಿಮ ಫಲಿತಾಂಶ: ಜರ್ಮನಿಯ ಲಿನ್ ಕ್ರಿಂಗ್ಸ್ 59ನೇ ನಿಮಿಷದಲ್ಲಿ ಒಂದು ಸಾಂತ್ವನದ ಗೋಲು ಬಾರಿಸಿದರಾದರೂ, ಭಾರತ 3-1 ಅಂತರದ ಭರ್ಜರಿ ಜಯ ಸಾಧಿಸಿತು.




## 29 Aug 2026

### ರಾಷ್ಟ್ರೀಯ ಕ್ರೀಡಾ ದಿನಾಚರಣೆ 2026




➤ ಭಾರತದಲ್ಲಿ ಪ್ರತಿವರ್ಷ ಆಗಸ್ಟ್ 29 ರಂದು ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು (National Sports Day) ಆಚರಿಸಲಾಗುತ್ತದೆ. ಭಾರತೀಯ ಹಾಕಿ ದಂತಕಥೆ ಮೇಜರ್ ಧ್ಯಾನ್ ಚಂದ್ (Major Dhyan Chand) ಅವರ ಜನ್ಮದಿನದ ಸವಿನೆನಪಿಗಾಗಿ ಈ ದಿನವನ್ನು ದೇಶಾದ್ಯಂತ ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. 2026 ರ ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು ಕೇಂದ್ರ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯವು ಆಗಸ್ಟ್ 28 ರಿಂದ ಆಗಸ್ಟ್ 30 ರವರೆಗೆ 3 ದಿನಗಳ ಕಾಲ ದೇಶಾದ್ಯಂತ ಅಭಿಯಾನವಾಗಿ ಆಚರಿಸುತ್ತಿದೆ.

➤ **2026ರ ರಾಷ್ಟ್ರೀಯ ಕ್ರೀಡಾ ದಿನಾಚರಣೆಯ ಥೀಮ್ (Theme):** "Tribute, Play, and Move" (ಶ್ರದ್ಧಾಂಜಲಿ, ಆಟ ಮತ್ತು ಚಲನೆ)

➤ **ಪ್ರಮುಖ ಕಾರ್ಯಕ್ರಮಗಳು:** ಇಂಫಾಲದ BRIC-IBSD ಸಂಸ್ಥೆ ಸೇರಿದಂತೆ ದೇಶಾದ್ಯಂತ ಕ್ರೀಡಾ ಪ್ರಾಧಿಕಾರಗಳು (SAI) ವಿವಿಧ ಸ್ಪರ್ಧೆಗಳು, 'ಫಿಟ್ ಇಂಡಿಯಾ ಪ್ಲೆಡ್ಜ್' (Fit India Pledge) ಹಾಗೂ ಆಗಸ್ಟ್ 30 ರಂದು "Sundays on Cycle" ಬೈಸಿಕಲ್ ರ‍್ಯಾಲಿ ಮೂಲಕ ಕಾರ್ಯಕ್ರಮವನ್ನು ಪೂರ್ಣಗೊಳಿಸುತ್ತಿವೆ.

➤ **ಮೇಜರ್ ಧ್ಯಾನ್ ಚಂದ್: ಹಾಕಿಯ ಮಾಂತ್ರಿಕ:** ಮೇಜರ್ ಧ್ಯಾನ್ ಚಂದ್ ಅವರು 1905 ರ ಆಗಸ್ಟ್ 29 ರಂದು ಜನಿಸಿದರು. ಭಾರತೀಯ ಹಾಕಿಯನ್ನು ವಿಶ್ವಮಟ್ಟದಲ್ಲಿ ಉನ್ನತ ಎತ್ತರಕ್ಕೆ ಕೊಂಡೊಯ್ದ ಕೀರ್ತಿ ಇವರಿಗೆ ಸಲ್ಲುತ್ತದೆ.

1.ಒಲಿಂಪಿಕ್ಸ್ ಬಂಗಾರದ ಬೇಟೆ: ಭಾರತ ತಂಡವು 1928 (ಆಮ್ಸ್ಟರ್‌ಡ್ಯಾಮ್), 1932 (ಲಾಸ್ ಏಂಜಲೀಸ್), ಮತ್ತು 1936 (ಬರ್ಲಿನ್) ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆಲ್ಲುವಲ್ಲಿ ಧ್ಯಾನ್ ಚಂದ್ ಪ್ರಮುಖ ಪಾತ್ರ ವಹಿಸಿದ್ದರು.

2.ಬರ್ಲಿನ್ ಒಲಿಂಪಿಕ್ಸ್ 1936: ಧ್ಯಾನ್ ಚಂದ್ ಅವರ ನಾಯಕತ್ವದಲ್ಲಿ ಭಾರತ ತಂಡವು ಫೈನಲ್‌ನಲ್ಲಿ ಜರ್ಮನಿಯನ್ನು 8-1 ಅಂತರದಿಂದ ಸೋಲಿಸಿ ಬಂಗಾರವನ್ನು ಮುಡಿಗೇರಿಸಿಕೊಂಡಿತು.

3.ಸಾಧನೆ: 1926 ರಿಂದ 1948 ರವರೆಗಿನ ತಮ್ಮ ವೃತ್ತಿಜೀವನದಲ್ಲಿ ಅವರು 1,000 ಕ್ಕೂ ಹೆಚ್ಚು ಗೋಲುಗಳನ್ನು ಬಾರಿಸಿದ್ದಾರೆ.

4.ಸಾಮಾಜಿಕ ಗೌರವ: ಭಾರತ ಸರ್ಕಾರವು 1956 ರಲ್ಲಿ ಇವರಿಗೆ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿತು.

➤ **'ಫಿಟ್ ಇಂಡಿಯಾ' ಚಳವಳಿ (Fit India Movement):** ಕ್ರೀಡಾ ದಿನಾಚರಣೆಯು ಕೇವಲ ಕ್ರೀಡಾ ಸಾಧನೆಗಳ ಆಚರಣೆಗೆ ಸೀಮಿತವಾಗಿರದೆ, ಸಾರ್ವಜನಿಕರ ಆರೋಗ್ಯದ ಚಳವಳಿಯಾಗಿ ಮಾರ್ಪಟ್ಟಿದೆ.

ಆರಂಭ: 2019 ರ ಆಗಸ್ಟ್ 29 ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನವದೆಹಲಿಯಲ್ಲಿ Fit India Movement ಗೆ ಚಾಲನೆ ನೀಡಿದರು.

ಉದ್ದೇಶ: ದೈನಂದಿನ ಜೀವನದಲ್ಲಿ ಕಾಯಿಕ ಶ್ರಮ ಹಾಗೂ ವ್ಯಾಯಾಮವನ್ನು ಅಳವಡಿಸಿಕೊಂಡು ಪ್ರತಿಯೊಬ್ಬ ಭಾರತೀಯನೂ ಆರೋಗ್ಯವಾಗಿರುವಂತೆ ಪ್ರೇರೇಪಿಸುವುದು.

### ಲಡಾಖ್‌ನಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅನುಮೋದನೆ



➤ ಲಡಾಖ್ ಕೇಂದ್ರಾಡಳಿತ ಪ್ರದೇಶದ ಜನರಿಗೆ ಸಂವಿಧಾನಾತ್ಮಕ ಹಾಗೂ ನ್ಯಾಯಾಂಗ ವ್ಯವಸ್ಥೆಯನ್ನು ಇನ್ನಷ್ಟು ಹತ್ತಿರವಾಗಿಸುವ ಉದ್ದೇಶದಿಂದ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಲಡಾಖ್ ನಲ್ಲಿ ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್ ಜಂಟಿ ಹೈಕೋರ್ಟ್‌ನ ಪ್ರತ್ಯೇಕ ಪೀಠ (Bench) ಸ್ಥಾಪಿಸಲು ಐತಿಹಾಸಿಕ ವಿನಿಯಮಕ್ಕೆ (Regulation) ಅನುಮೋದನೆ ನೀಡಿದ್ದಾರೆ. ಈ ನಿರ್ಧಾರವು ಸುದೀರ್ಘ ಕಾಲದಿಂದ ಲಡಾಖ್ ಭಾಗದ ಜನರು ಎದುರಿಸುತ್ತಿದ್ದ ಭೌಗೋಳಿಕ ಮತ್ತು ನ್ಯಾಯಾಂಗ ಸವಾಲುಗಳಿಗೆ ಶಾಶ್ವತ ಪರಿಹಾರ ಕಲ್ಪಿಸಲಿದೆ.

- ನಿಯಮದ ಹೆಸರು: "ದಿ ಯೂನಿಯನ್ ಟೆರಿಟರಿ ಆಫ್ ಲಡಾಖ್ (ಸಿಟ್ಟಿಂಗ್ ಆಫ್ ಬೆಂಚ್ ಆಫ್ ದಿ ಹೈಕೋರ್ಟ್ ಆಫ್ ಜಮ್ಮು ಅಂಡ್ ಕಾಶ್ಮೀರ ಅಂಡ್ ಲಡಾಖ್ ಇನ್ ಲಡಾಖ್) ರೆಗ್ಯುಲೇಷನ್, 2026".
- ಕೇಂದ್ರ ಸಂಪುಟ ಅನುಮೋದನೆ: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯ ಕೇಂದ್ರ ಸಚಿವ ಸಂಪುಟವು ಆಗಸ್ಟ್ 20, 2026 ರಂದು ಈ ಪ್ರಸ್ತಾಪಕ್ಕೆ ಅನುಮೋದನೆ ನೀಡಿತ್ತು.
- ರಾಷ್ಟ್ರಪತಿಗಳ ಅಂಕಿತ: ಆಗಸ್ಟ್ 27, 2026 ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನಿಯಮಕ್ಕೆ ಅಂಕಿತ ಹಾಕಿದ್ದು, ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವಾಲಯ ಇದನ್ನು ಭಾರತದ ಅಧಿಕೃತ ಗೆಜೆಟ್‌ನಲ್ಲಿ (Gazette of India Extraordinary) ಪ್ರಕಟಿಸಿದೆ.
- ತ್ವರಿತ ಜಾರಿ: ಕೇಂದ್ರ ಸರ್ಕಾರಿ ನಿರ್ಧಾರ ಕೈಗೊಂಡ ಕೇವಲ 7 ದಿನಗಳ ಒಳಗಾಗಿ ರಾಷ್ಟ್ರಪತಿಗಳು ಈ ಆದೇಶ ಹೊರಡಿಸಿದ್ದು, ಲಡಾಖ್‌ನ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಹರ್ಷ ವ್ಯಕ್ತಪಡಿಸಿದ್ದಾರೆ.

➤ **ಸಂವಿಧಾನಾತ್ಮಕ ಮತ್ತು ಶಾಸನಬದ್ಧ ಹಿನ್ನೆಲೆ:**

- ಸಂವಿಧಾನದ ವಿಧಿ 240 (Article 240): ಭಾರತದ ಸಂವಿಧಾನದ 240 ನೇ ವಿಧಿಯು ಕೆಲವು ಕೇಂದ್ರಾಡಳಿತ ಪ್ರದೇಶಗಳಲ್ಲಿ (UTs) ಶಾಂತಿ, ಪ್ರಗತಿ ಮತ್ತು ಉತ್ತಮ ಆಡಳಿತಕ್ಕಾಗಿ ನಿಯಮಗಳನ್ನು (Regulations) ರೂಪಿಸಲು ರಾಷ್ಟ್ರಪತಿಗಳಿಗೆ ವಿಶೇಷ ಅಧಿಕಾರ ನೀಡುತ್ತದೆ.
- ಜಮ್ಮು ಮತ್ತು ಕಾಶ್ಮೀರ ಪುನಾರಚನಾ ಕಾಯ್ದೆ, 2019 (Section 58(2)): ಈ ಕಾಯ್ದೆಯ ಸೆಕ್ಷನ್ 58(2) ರ ಅಡಿಯಲ್ಲಿ ಜಮ್ಮು ಮತ್ತು

ಕಾಶ್ಮೀರ ಹಾಗೂ ಲಡಾಖ್ ಕೇಂದ್ರಾಡಳಿತ ಪ್ರದೇಶಗಳಿಗೆ ಜಂಟಿ ಉಚ್ಚ ನ್ಯಾಯಾಲಯದ (Common High Court) ಕಾರ್ಯಾಚರಣೆ ಹಾಗೂ ಪೀಠಗಳ ಸ್ಥಾಪನೆಗೆ ಕಾನೂನಾತ್ಮಕ ಅವಕಾಶ ಕಲ್ಪಿಸಲಾಗಿದೆ.

- ನ್ಯಾಯಮೂರ್ತಿಗಳ ಅಧಿಕಾರ: ಲಡಾಖ್‌ನ ಲೆಫ್ಟಿನೆಂಟ್ ಗವರ್ನರ್ ಅವರ ಅನುಮೋದನೆಯೊಂದಿಗೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು (Chief Justice) ನಿಗದಿಪಡಿಸುವ ಸ್ಥಳದಲ್ಲಿ ನ್ಯಾಯಮೂರ್ತಿಗಳು/ವಿಭಾಗೀಯ ಪೀಠಗಳು (Division Benches) ವಿಚಾರಣೆ ನಡೆಸಲಿವೆ.

➤ ನ್ಯಾಯಾಂಗ ತಲುಪುವಿಕೆ (Access to Justice): ಲಡಾಖ್‌ನ ಕಠಿಣ ಭೌಗೋಳಿಕ ವಾತಾವರಣ, ಹಿಮಪಾತ ಮತ್ತು ದುರ್ಗಮ ದಾರಿಗಳಿಂದಾಗಿ ಸ್ಥಳೀಯ ಜನರು, ವಕೀಲರು ಹಾಗೂ ಅರ್ಜಿದಾರರು ಶ್ರೀನಗರ ಅಥವಾ ಜಮ್ಮು ಹೈಕೋರ್ಟ್‌ಗೆ ಅಲೆಯುವುದು ಕಷ್ಟಕರವಾಗಿತ್ತು. ಈಗ ಅವರ ತವರು ಪ್ರದೇಶದಲ್ಲೇ ಹೈಕೋರ್ಟ್ ಪೀಠ ಲಭ್ಯವಾಗಲಿದೆ.

## ಅಮೆರಿಕದಿಂದ ಭಾರತಕ್ಕೆ 'ಜಾವೆಲಿನ್' ಕ್ಷಿಪಣಿ ಖರೀದಿ: ಭಾರತ-ಯುಎಸ್ ರಕ್ಷಣಾ ಒಪ್ಪಂದದ ಸಂಪೂರ್ಣ ವಿವರ



➤ ಭಾರತೀಯ ಸೇನೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ, ಅಮೆರಿಕದ ಪ್ರಸಿದ್ಧ 'ಜಾವೆಲಿನ್' (Javelin) ಟ್ಯಾಂಕ್ ನಿರೋಧಕ ಕ್ಷಿಪಣಿ ವ್ಯವಸ್ಥೆಯನ್ನು (Anti-Tank Guided Missile System) ಖರೀದಿಸಲು ಭಾರತ ಒಪ್ಪಂದ (Letter of Offer and Acceptance - LOA) ಮಾಡಿಕೊಂಡಿದೆ. ಈ ಕುರಿತು ಮಾಹಿತಿ ನೀಡಿರುವ ಭಾರತದಲ್ಲಿರುವ ಅಮೆರಿಕದ ರಾಯಭಾರಿ ಸೆರ್ಗಿಯೋ ಗೋರ್ (Sergio Gor), "ಈ ಖರೀದಿ ಒಪ್ಪಂದವು ಮುಂಬರುವ ದಿನಗಳಲ್ಲಿ ಭಾರತ ಮತ್ತು ಅಮೆರಿಕ ಜಂಟಿಯಾಗಿ ಕ್ಷಿಪಣಿಗಳ ಉತ್ಪಾದನೆಯಲ್ಲಿ (Co-production) ತೊಡಗಿಸಿಕೊಳ್ಳಲು ಹಾದಿ ಸುಗಮಗೊಳಿಸಲಿದೆ" ಎಂದು 'X' (ಟ್ವಿಟರ್) ನಲ್ಲಿ ಹಂಚಿಕೊಂಡಿದ್ದಾರೆ.

**➤ 'ಜಾವೆಲಿನ್' ಕ್ಷಿಪಣಿಯ ಪ್ರಮುಖ ವೈಶಿಷ್ಟ್ಯಗಳು:**

- 'ಫೈರ್ ಆಂಡ್ ಫಾರ್ಗೆಟ್' ತಂತ್ರಜ್ಞಾನ (Fire and Forget Technology): ಒಮ್ಮೆ ಗುರಿಯನ್ನು (Target) ನಿಗದಿಪಡಿಸಿ ಕ್ಷಿಪಣಿಯನ್ನು ಉಡಾಯಿಸಿದ ನಂತರ, ಯೋಧನು ತಕ್ಷಣವೇ ಸುರಕ್ಷಿತ ಸ್ಥಳಕ್ಕೆ ತೆರಳಬಹುದು. ಹಳೆಯ ಕ್ಷಿಪಣಿಗಳಂತೆ ಇದನ್ನು ಕೊನೆಯವರೆಗೂ ನಿಯಂತ್ರಿಸುವ ಅಗತ್ಯವಿರುವುದಿಲ್ಲ; ಇದು ಸ್ವಯಂಚಾಲಿತವಾಗಿ ಗುರಿಯನ್ನು ತಲುಪಿ ಧ್ವಂಸಗೊಳಿಸುತ್ತದೆ.
- ಟಾಪ್-ಅಟ್ಯಾಕ್ ಮೋಡ್ (Top-Attack Mode): ಯುದ್ಧ ಟ್ಯಾಂಕ್‌ಗಳ ಮೇಲ್ಭಾಗದಲ್ಲಿ ರಕ್ಷಾ ಕವಚ (Armour) ಅತ್ಯಂತ ಹಗುರವಾಗಿ ಮತ್ತು ದುರ್ಬಲವಾಗಿರುತ್ತದೆ. ಜಾವೆಲಿನ್ ಕ್ಷಿಪಣಿಯು ಮೇಲಕ್ಕೆ ಹಾರಿ, ಟ್ಯಾಂಕ್‌ನ ಮೇಲ್ಭಾಗದಿಂದ ದಾಳಿ ಮಾಡಿ (Dive and Strike) ಸಂಪೂರ್ಣ ಧ್ವಂಸಗೊಳಿಸುವ ಸಾಮರ್ಥ್ಯ ಹೊಂದಿದೆ.
- ಇನ್ಫ್ರಾರೆಡ್ ಸೀಕರ್ (Imaging Infrared Seeker): ಹಗಲು ಹಾಗೂ ರಾತ್ರಿ ವೇಳೆಯಲ್ಲಿಯೂ ಉಷ್ಣ ಸಂಕೇತಗಳನ್ನು (Thermal Signatures) ಆಧರಿಸಿ ವೈರಿಗಳ ಟ್ಯಾಂಕ್‌ಗಳನ್ನು ನಿಖರವಾಗಿ ಗುರುತಿಸಬಲ್ಲದು.
- ಸುಲಭವಾಗಿ ಹೊತ್ತೊಯ್ಯಬಹುದು (Man-Portable): ಒಬ್ಬನೇ ಸೈನಿಕನು ಇದನ್ನು ಹೆಗಲ ಮೇಲೆ ಇಟ್ಟುಕೊಂಡು (Shoulder-fired) ಸುಲಭವಾಗಿ ಕಾರ್ಯಾಚರಣೆ ನಡೆಸಬಹುದು. ಬಂಕರ್‌ಗಳು ಮತ್ತು ಕಟ್ಟಡಗಳ ಒಳಗಿನಿಂದಲೂ ಸುರಕ್ಷಿತವಾಗಿ ಉಡಾಯಿಸುವ 'ಸಾಫ್ಟ್ ಲಾಂಚ್' (Soft-launch) ತಂತ್ರಜ್ಞಾನ ಇದರಲ್ಲಿದೆ.
- ತಯಾರಕರು: ಇದನ್ನು ಅಮೆರಿಕದ ಪ್ರಸಿದ್ಧ ರಕ್ಷಣಾ ಸಂಸ್ಥೆಗಳಾದ ಲಾಕ್‌ಹೀಡ್ ಮಾರ್ಟಿನ್ (Lockheed Martin) ಮತ್ತು ಆರ್‌ಟಿಎಕ್ಸ್ (RTX - Raytheon) ಜಂಟಿಯಾಗಿ ಅಭಿವೃದ್ಧಿಪಡಿಸಿವೆ.

**➤ ಭಾರತ-ಅಮೆರಿಕ ರಕ್ಷಣಾ ಬಾಂಧವ್ಯ ಮತ್ತು ಜಂಟಿ ಉತ್ಪಾದನೆ (Co-production):**

- ದಾಖಲೆಯ ಮಟ್ಟಕ್ಕೆ ಮುಟ್ಟಿದ ಸಹಕಾರ: ನವೆಂಬರ್ 2025 ರಲ್ಲೇ ಅಮೆರಿಕದ ವಿದೇಶಾಂಗ ಇಲಾಖೆಯು ಭಾರತಕ್ಕೆ ಉಭಯ ದೇಶಗಳ ರಕ್ಷಣಾ ಸಾಮರ್ಥ್ಯ ಹೆಚ್ಚಿಸಲು ಒಪ್ಪಿಗೆ ನೀಡಿತ್ತು.
- ಮೇಕಿಂಗ್ ಇನ್ ಇಂಡಿಯಾ : ಭಾರತದ ಸಾರ್ವಜನಿಕ ವಲಯದ ಭಾರತ್ ಡೈನಾಮಿಕ್ಸ್ ಲಿಮಿಟೆಡ್ (BDL) ಮತ್ತು 'ಜಾವೆಲಿನ್ ಜಾಯಿಂಟ್ ವೆಂಚರ್' ಸಂಸ್ಥೆಗಳು ಭಾರತದಲ್ಲೇ ಈ ಕ್ಷಿಪಣಿ ವ್ಯವಸ್ಥೆಯ ಜಂಟಿ ಉತ್ಪಾದನೆ ಮಾಡುವ ಕುರಿತು ಮಾತುಕತೆ ನಡೆಸಿವೆ.
- ತಂತ್ರಜ್ಞಾನ ವಿಸ್ತರಣೆ: ಭಾರತ ಮತ್ತು ಅಮೆರಿಕದ ಬಾಂಧವ್ಯವು ಕೇವಲ ಸೇನಾ ಕ್ಷೇತ್ರಕ್ಕೆ ಸೀಮಿತವಾಗಿರದೆ ಪರಮಾಣು ಇಂಧನ, ಕೃತಕ ಬುದ್ಧಿಮತ್ತೆ (AI) ಹಾಗೂ ಸಿವಿಲ್ ತಂತ್ರಜ್ಞಾನಗಳ ಕ್ಷೇತ್ರಕ್ಕೂ ವಿಸ್ತರಿಸುತ್ತಿದೆ.

## ಗ್ರ್ಯಾಂಡ್ ಚೆಸ್ ಟೂರ್ ಗೆದ್ದ ಮೊದಲ ಭಾರತೀಯ: ಇತಿಹಾಸ ಸೃಷ್ಟಿಸಿದ ಯುವ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ!



➤ ಭಾರತದ ಯುವ ಚೆಸ್ ಸಂವೇದನೆ, ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ (R. Praggnanandhaa) ಅವರು ಜಾಗತಿಕ ಚೆಸ್ ಅಖಾಡದಲ್ಲಿ ಮತ್ತೊಮ್ಮೆ ಭಾರತದ ತ್ರಿವರ್ಣ ಧ್ವಜವನ್ನು ಎತ್ತಿ ಹಿಡಿದಿದ್ದಾರೆ. ಆಗಸ್ಟ್ 27, 2026 ರಂದು (ಸ್ಥಳೀಯ ಸಮಯ / ಭಾರತೀಯ ಕಾಲಮಾನ ಆಗಸ್ಟ್ 28, 2026) ಅಮೆರಿಕದ ಸೇಂಟ್ ಲೂಯಿಸ್‌ನಲ್ಲಿ ಮುಕ್ತಾಯಗೊಂಡ ಪ್ರತಿಷ್ಠಿತ 'ಗ್ರ್ಯಾಂಡ್ ಚೆಸ್ ಟೂರ್' (Grand Chess Tour 2026) ಫೈನಲ್‌ನಲ್ಲಿ ವಿಶ್ವದ ದಿಗ್ಗಜ ಆಟಗಾರ, ಅಮೆರಿಕದ ಫ್ಯಾಬಿಯಾನೊ ಕರುವಾನಾ (Fabiano Caruana) ವಿರುದ್ಧ ಭರ್ಜರಿ ಜಯ ಸಾಧಿಸುವ ಮೂಲಕ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

➤ ಈ ಮೂಲಕ ಈ ಪ್ರತಿಷ್ಠಿತ 'ಗ್ರ್ಯಾಂಡ್ ಚೆಸ್ ಟೂರ್' ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡ ಮೊಟ್ಟಮೊದಲ ಭಾರತೀಯ ಎಂಬ ಐತಿಹಾಸಿಕ ಹೆಗ್ಗಳಿಕೆಗೆ ಪ್ರಜ್ಞಾನಂದ ಪಾತ್ರರಾಗಿದ್ದಾರೆ.

- ಪಂದ್ಯ ನಡೆದ ದಿನಾಂಕ: ಆಗಸ್ಟ್ 22 ರಿಂದ 27, 2026 (ಫೈನಲ್ ಪಂದ್ಯ ಮುಕ್ತಾಯ: ಆಗಸ್ಟ್ 27, 2026).
- ಐತಿಹಾಸಿಕ ಪ್ರಶಸ್ತಿ: ಗ್ರ್ಯಾಂಡ್ ಚೆಸ್ ಟೂರ್ ಗೆದ್ದ ಮೊದಲ ಭಾರತೀಯ ಚೆಸ್ ಆಟಗಾರ.
- ದೊಡ್ಡ ಮೊತ್ತದ ಬಹುಮಾನ: ಚಾಂಪಿಯನ್ ಪಟ್ಟದೊಂದಿಗೆ ಪ್ರಜ್ಞಾನಂದ ಅವರಿಗೆ 2,00,000 ಅಮೆರಿಕನ್ ಡಾಲರ್ (ಸುಮಾರು ₹1.66 ಕೋಟಿ ರೂಪಾಯಿ) ನಗದು ಬಹುಮಾನ ಲಭಿಸಿದೆ.
- ಅಂತಿಮ ಸ್ಕೋರ್: ಫ್ಯಾಬಿಯಾನೊ ಕರುವಾನಾ ವಿರುದ್ಧ 15 - 13 ಅಂಕಗಳ ಅಂತರದ ರೋಚಕ ಜಯ.
- ನಡೆದ ಸ್ಥಳ: ಸೇಂಟ್ ಲೂಯಿಸ್ ಚೆಸ್ ಕ್ಲಬ್, ಅಮೆರಿಕ (St. Louis, USA).

**➤ ಹಿನ್ನಡೆಯಿಂದ ರೋಚಕ ಜಯದತ್ತ:** ಫೈನಲ್ ಪಂದ್ಯದ ಆರಂಭದಲ್ಲಿ ಪ್ರಜ್ಞಾನಂದ ಅವರಿಗೆ ಸುಲಭದ ಹಾದಿಯಿರಲಿಲ್ಲ. ಆಗಸ್ಟ್ 25 ರಂದು ನಡೆದ ಮೊದಲ ಕ್ಲಾಸಿಕಲ್ ಪಂದ್ಯದಲ್ಲಿ ಸೋಲನ್ನು ಅನುಭವಿಸಿದ್ದ ಪ್ರಜ್ಞಾನಂದ, ಆಗಸ್ಟ್ 26 ರ ಎರಡನೇ ಪಂದ್ಯವನ್ನು ಡ್ರಾ ಮಾಡಿಕೊಂಡು 6 ಅಂಕಗಳ ಹಿನ್ನಡೆಯಲ್ಲಿದ್ದರು. ಆದರೆ, ಅಂತಿಮ ದಿನವಾದ ಆಗಸ್ಟ್ 27 ರಂದು ಧೃತಿಗೆಡದೆ ಅದ್ಭುತ ಕಂಬ್ಯಾಕ್ (Comeback) ಮಾಡಿದರು:

**1. ರ್ಯಾಪಿಡ್ (Rapid) ವಿಭಾಗ:** ರ್ಯಾಪಿಡ್ ವಿಭಾಗದ ಎರಡೂ ಪಂದ್ಯಗಳಲ್ಲಿ ಅತ್ಯುತ್ತಮ ರಣತಂತ್ರದೊಂದಿಗೆ ಆಡಿ, ಕರುವಾನಾ ಅವರನ್ನು ಮಣಿಸಿ ಮುನ್ನಡೆ ಸಾಧಿಸಿದರು.
**2. ಬ್ಲಿಟ್ಜ್ (Blitz) ವಿಭಾಗ:** ತೀವ್ರ ಕುತೂಹಲ ಕೆರಳಿಸಿದ್ದ ಬ್ಲಿಟ್ಜ್ ಪಂದ್ಯಗಳಲ್ಲಿಯೂ ಸಮಬಲದ ಹೋರಾಟ ನೀಡಿ, ಅಂತಿಮವಾಗಿ 15-13 ಅಂಕಗಳಿಂದ ಗೆಲುವಿನ ನಗೆ ಬೀರಿದರು.

## ಪ್ರಧಾನಿ ಮೋದಿ ಮಧ್ಯ ಏಷ್ಯಾ ಪ್ರವಾಸ: ಎಸ್‌ಸಿಒ ಶೃಂಗಸಭೆಯಲ್ಲಿ ಪುಟಿನ್ ಜೊತೆ ದ್ವಿಪಕ್ಷೀಯ ಮಾತುಕತೆ!



➤ ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು August 29, 2026 ರಿಂದ September 1, 2026 ರವರೆಗೆ ಮಧ್ಯ ಏಷ್ಯಾದ ಪ್ರಮುಖ ದೇಶಗಳಾದ ಉಜ್ಬೇಕಿಸ್ತಾನ್ ಹಾಗೂ ಕಿರ್ಗಿಸ್ತಾನ್ ಪ್ರವಾಸ ಕೈಗೊಂಡಿದ್ದಾರೆ.
**1. ಪ್ರವಾಸದ ವೇಳಾಪಟ್ಟಿ ಮತ್ತು ಪ್ರಮುಖ ಹಂತಗಳು:** ಪ್ರಧಾನಿ ಮೋದಿಯವರ ಈ ಮಧ್ಯ ಏಷ್ಯಾ ಪ್ರವಾಸವು ಎರಡು ಪ್ರಮುಖ ಹಂತಗಳಲ್ಲಿ ನಡೆಯಲಿದೆ:
- ಮೊದಲ ಹಂತ (ಉಜ್ಬೇಕಿಸ್ತಾನ್ ಭೇಟಿ): ಉಜ್ಬೇಕಿಸ್ತಾನ್ ಅಧ್ಯಕ್ಷ ಶಾವ್ಕತ್ ಮಿರ್ಜಿಯೋಯೆವ್ (Shavkat Mirziyoyev) ಅವರ ಆಹ್ವಾನದ ಮೇರೆಗೆ ಪ್ರಧಾನಿ ಮೋದಿ ಅವರು ತಾಷ್ಕೆಂಟ್‌ಗೆ ಅಧಿಕೃತ ದ್ವಿಪಕ್ಷೀಯ ಭೇಟಿ ನೀಡಲಿದ್ದಾರೆ. ಈ ವೇಳೆ ದ್ವಿಪಕ್ಷೀಯ ವ್ಯಾಪಾರ, ರಕ್ಷಣೆ, ಇಂಧನ, ಡಿಜಿಟಲ್ ಸಂಪರ್ಕ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿನ ಸಹಕಾರದ ಕುರಿತು ಚರ್ಚೆ ನಡೆಯಲಿದೆ.
- ಎರಡನೇ ಹಂತ (ಕಿರ್ಗಿಸ್ತಾನ್ ಭೇಟಿ): ಉಜ್ಬೇಕಿಸ್ತಾನ್ ಭೇಟಿಯ ನಂತರ ಕಿರ್ಗಿಸ್ತಾನ್ ಅಧ್ಯಕ್ಷ ಸಾದಿರ್ ಜಾಪರೋವ್ (Sadyr Zhaparov) ಅವರ ಆಹ್ವಾನದಂತೆ ಬಿಸ್ಕೆಕ್‌ಗೆ ತೆರಳಲಿದ್ದು, ಅಲ್ಲಿ ನಡೆಯಲಿರುವ 26ನೇ ಶಾಂಘೈ ಸಹಕಾರ ಸಂಸ್ಥೆ (SCO) ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ.
**2. ಮೋದಿ-ಪುಟಿನ್ ದ್ವಿಪಕ್ಷೀಯ ಮಾತುಕತೆ:** ಈ ಪ್ರವಾಸದ ಪ್ರಮುಖ ವಿದೇಶಾಂಗ ರಾಜತಾಂತ್ರಿಕ ಬೆಳವಣಿಗೆಯೆಂದರೆ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರೊಂದಿಗೆ ಪ್ರಧಾನಿ ಮೋದಿ ನಡೆಸಲಿರುವ ದ್ವಿಪಕ್ಷೀಯ ಮಾತುಕತೆ.
- ಬಿಸ್ಕೆಕ್‌ನಲ್ಲಿ ಎಸ್‌ಸಿಒ ಶೃಂಗಸಭೆಯ ಜೊತೆಗೆ ಉಭಯ ನಾಯಕರು ವಿಶೇಷ ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ ಎಂದು ರಷ್ಯಾದ ಕ್ರೆಮ್ಲಿನ್ ಹಾಗೂ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ಸಿಬಿ ಜಾರ್ಜ್ ದೃಢಪಡಿಸಿದ್ದಾರೆ.
- ಈ ಭೇಟಿಯಲ್ಲಿ ಭಾರತ-ರಷ್ಯಾ ನಡುವಿನ ಕಾರ್ಯತಂತ್ರದ ಪಾಲುದಾರಿಕೆ, ರಕ್ಷಣಾ ಕ್ಷೇತ್ರ ಹಾಗೂ ಜಾಗತಿಕ ಭದ್ರತಾ ವಿಚಾರಗಳ ಕುರಿತು ಚರ್ಚೆಯಾಗಲಿದೆ.
- ಬ್ರಿಕ್ಸ್ ಶೃಂಗಸಭೆಗೆ ಮುನ್ನುಡಿ: ಮುಂದಿನ ತಿಂಗಳು ದೆಹಲಿಯಲ್ಲಿ ನಡೆಯಲಿರುವ ಬ್ರಿಕ್ಸ್ (BRICS) ಶೃಂಗಸಭೆಗೆ ಅಧ್ಯಕ್ಷ ಪುಟಿನ್ ಭಾರತಕ್ಕೆ ಆಗಮಿಸುವ ಮುನ್ನವೇ ಈ ಮಾತುಕತೆ ನಡೆಯುತ್ತಿರುವುದು ವಿಶೇಷ ಆಸಕ್ತಿ ಮೂಡಿಸಿದೆ.

## FIH ವಿಶ್ವಕಪ್‌ನಲ್ಲಿ ಐತಿಹಾಸಿಕ ಸಾಧನೆ: ಭಾರತ ಮಹಿಳಾ ಹಾಕಿ ತಂಡಕ್ಕೆ ₹50 ಲಕ್ಷ ನಗದು ಬಹುಮಾನ ಘೋಷಿಸಿದ ಹಾಕಿ ಇಂಡಿಯಾ




➤ ಎಫ್‌ಐಎಚ್ (FIH) ಮಹಿಳಾ ಹಾಕಿ ವಿಶ್ವಕಪ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿ, ಐತಿಹಾಸಿಕ ಐದನೇ ಸ್ಥಾನ ಗಳಿಸಿದ ಭಾರತ ಮಹಿಳಾ ಹಾಕಿ ತಂಡಕ್ಕೆ ಹಾಕಿ ಇಂಡಿಯಾ (Hockey India) ಬೃಹತ್ ₹50 ಲಕ್ಷ ನಗದು ಬಹುಮಾನ ಘೋಷಿಸಿದೆ. ನೆದರ್ ಲ್ಯಾಂಡ್ಸ್‌ನ ಅಮ್‌ಸ್ಟೆಲ್ವೀನ್‌ನಲ್ಲಿ ನಡೆದ ಐದನೇ ಸ್ಥಾನಕ್ಕಾಗಿನ ಜಿದ್ದಾಜಿದ್ದಿನ ಪಂದ್ಯದಲ್ಲಿ, ಸಲೀಮಾ ಟೆಟೆ ನಾಯಕತ್ವದ ಭಾರತ ತಂಡವು ವಿಶ್ವದ 5ನೇ ಕ್ರಮಾಂಕದ ಬಲಿಷ್ಠ ಜರ್ಮನಿ ತಂಡವನ್ನು 3-1 ಗೋಲುಗಳ ಅಂತರದಿಂದ ಪರಾಭವಗೊಳಿಸಿ ಈ ಐತಿಹಾಸಿಕ ಸಾಧನೆ ಮಾಡಿದೆ.
➤ ಬಹುಮಾನದ ಹಣದ ಹಂಚಿಕೆ ವಿವರ: ಹಾಕಿ ಇಂಡಿಯಾ ಘೋಷಿಸಿರುವ ₹50 ಲಕ್ಷ ನಗದು ಬಹುಮಾನವನ್ನು ತಂಡದ ಆಟಗಾರ್ತಿಯರು ಹಾಗೂ ಸಪೋರ್ಟ್ ಸ್ಟಾಫ್ ನಡುವೆ ಹಂಚಲಾಗುತ್ತದೆ:
- ಪ್ರತಿಯೊಬ್ಬ ಆಟಗಾರ್ತಿಗೆ: ₹2 ಲಕ್ಷ
- ಸಪೋರ್ಟ್ ಸ್ಟಾಫ್ ಸಿಬ್ಬಂದಿಗೆ: ತಲಾ ₹1 ಲಕ್ಷ
➤ **'ಇದು ಕಠಿಣ ಪರಿಶ್ರಮಕ್ಕೆ ಸಿಕ್ಕ ಫಲ'**: ಹಾಕಿ ಇಂಡಿಯಾ ಅಧ್ಯಕ್ಷ ದಿಲೀಪ್ ಟಿರ್ಕಿ
"ಭಾರತ ಮಹಿಳಾ ಹಾಕಿಗೆ ಇದು ನಿಜಕ್ಕೂ ಐತಿಹಾಸಿಕ ಕ್ಷಣ. 52 ವರ್ಷಗಳ ನಂತರ ವಿಶ್ವಕಪ್‌ನಲ್ಲಿ 5ನೇ ಸ್ಥಾನ ಗಳಿಸುವುದು ಸಾಮಾನ್ಯ ವಿಷಯವಲ್ಲ. ಇದು ಟೂರ್ನಿಯುದ್ದಕ್ಕೂ ನಮ್ಮ ಆಟಗಾರ್ತಿಯರು ಪ್ರದರ್ಶಿಸಿದ ಕಠಿಣ ಪರಿಶ್ರಮ, ಸ್ಥಿರತೆ ಮತ್ತು ಹೋರಾಟದ ಮನೋಭಾವಕ್ಕೆ ಸಾಕ್ಷಿಯಾಗಿದೆ. ನಮ್ಮ ಮೆಚ್ಚುಗೆಯ ಸಂಕೇತವಾಗಿ ಈ ₹50 ಲಕ್ಷ ಬಹುಮಾನವನ್ನು ಘೋಷಿಸಿದ್ದು, ಇದು ಮುಂಬರುವ ಏಷ್ಯನ್ ಗೇಮ್ಸ್‌ಗೆ ತಂಡಕ್ಕೆ ಮತ್ತಷ್ಟು ಸ್ಫೂರ್ತಿ ನೀಡಲಿದೆ" ಎಂದು ಹೇಳಿದರು.

## ಜಿಯೋ ಐಪಿಒಗೆ ಸೆಬಿ ಅನುಮೋದನೆ: ₹37,700 ಕೋಟಿ ಸಂಗ್ರಹಕ್ಕೆ ಸಿದ್ಧತೆ – ದೇಶದ ಅತಿದೊಡ್ಡ ಐಪಿಒ



➤ ದೇಶದ ದೂರಸಂಪರ್ಕ ಹಾಗೂ ಡಿಜಿಟಲ್ ರಂಗದಲ್ಲಿ ಪ್ರಮುಖ ದೈತ್ಯ ಕಂಪನಿಯಾಗಿ ಬೆಳೆದಿರುವ ಜಿಯೊ ಪ್ಲಾಟ್‌ಫಾರ್ಮ್ಸ್ (Jio Platforms) ತನ್ನ ಬಹುನಿರೀಕ್ಷಿತ ಆರಂಭಿಕ ಸಾರ್ವಜನಿಕ ಷೇರು ಮಾರಾಟ (IPO - Initial Public Offering) ಪ್ರಕ್ರಿಯೆಗೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯಿಂದ (SEBI - Securities and Exchange Board of India) ಅಂತಿಮ ಅನುಮೋದನೆ ಪಡೆದುಕೊಂಡಿದೆ.
➤ ಕಂಪನಿಯು ಈ ಐಪಿಒ ಮೂಲಕ ಸುಮಾರು ₹37,700 ಕೋಟಿ (ಅಂದಾಜು 4 ಬಿಲಿಯನ್ ಡಾಲರ್) ಬಂಡವಾಳ ಸಂಗ್ರಹಿಸಲು ಯೋಜನೆ ರೂಪಿಸಿದ್ದು, ಇದು ಭಾರತದ ಶೇರು ಮಾರುಕಟ್ಟೆ ಇತಿಹಾಸದಲ್ಲೇ ಅತಿ ದೊಡ್ಡ ಐಪಿಒ (India's Biggest IPO) ಎನಿಸಿಕೊಳ್ಳಲಿದೆ.

➤ ಜಿಯೊ ಐಪಿಒ ವಿವರಣೆ ಮತ್ತು ಬಂಡವಾಳ ಬಳಕೆಯ ಯೋಜನೆ: ಜಿಯೊ ಪ್ಲಾಟ್‌ಫಾರ್ಮ್ಸ್ ಸಲ್ಲಿಸಿದ್ದ ಕರಡು ದಾಖಲೆಗಳಿಗೆ (DRHP ) ಸೆಬಿ ಒಪ್ಪಿಗೆ ಸೂಚಿಸಿದ್ದು, ಇದರಿಂದಾಗಿ ಕಂಪನಿಯು ಶೀಘ್ರದಲ್ಲೇ ಷೇರು ಬೆಲೆ ಪಟ್ಟಿ (Price Band) ಹಾಗೂ ಸಾರ್ವಜನಿಕ ಚಂದಾದಾರಿಕೆ ದಿನಾಂಕಗಳನ್ನು ಘೋಷಿಸಲಿದೆ.

**1. ಸಾಲ ಮರುಪಾವತಿ:** ಐಪಿಒ ಮೂಲಕ ಸಂಗ್ರಹವಾಗುವ ಒಟ್ಟು ಮೊತ್ತದಲ್ಲಿ ಸುಮಾರು ₹27,500 ಕೋಟಿಯನ್ನು ರಿಲಯನ್ಸ್ ಜಿಯೊ ಇನ್ಫೋಕಾಮ್‌ನ ಚಾಲ್ತಿಯಲ್ಲಿರುವ ಸಾಲಗಳನ್ನು ತೀರಿಸಲು (Debt Prepayment) ಬಳಸಲಾಗುತ್ತದೆ.

**2. ಹೊಸ ಷೇರು ವಿತರಣೆ:** ಈ ಐಪಿಒ ಸಂಪೂರ್ಣವಾಗಿ ಹೊಸ ಷೇರುಗಳ (Fresh Issue) ವಿತರಣೆಯಾಗಿದೆ. ಪ್ರಸ್ತುತ ಇರುವ ಯಾವುದೇ ಹೂಡಿಕೆದಾರರು ತಮ್ಮ ಷೇರುಗಳನ್ನು ಮಾರಾಟ ಮಾಡುತ್ತಿಲ್ಲ (No Offer For Sale).

➤ ಜಿಯೊದಲ್ಲಿ ಪ್ರಮುಖ ಹೂಡಿಕೆದಾರರು ಹಾಗೂ ಷೇರು ಪಾಲುದಾರಿಕೆ: ರಿಲಯನ್ಸ್ ಗ್ರೂಪ್ ಜಿಯೊ ಪ್ಲಾಟ್‌ಫಾರ್ಮ್ಸ್‌ನಲ್ಲಿ ಸಿಂಹಪಾಲು ಹೊಂದಿದ್ದು, ಜಾಗತಿಕ ದೈತ್ಯ ತಂತ್ರಜ್ಞಾನ ಕಂಪನಿಗಳು ಸಹ ಇದರಲ್ಲಿ ಹೂಡಿಕೆ ಮಾಡಿವೆ.

- ರಿಲಯನ್ಸ್ ಇಂಡಸ್ಟ್ರೀಸ್ (RIL): 66.43%: ಮಾತೃ ಸಂಸ್ಥೆ (Parent Company)
- ಮೆಟಾ (Meta): 9.98%: 2020ರಲ್ಲಿ ₹43,574 ಕೋಟಿ ಹೂಡಿಕೆ
- ಗೂಗಲ್ (Google International): 7.73% : 2020ರಲ್ಲಿ ₹33,737 ಕೋಟಿ ಹೂಡಿಕೆ
- ಇತರ ಜಾಗತಿಕ ಹೂಡಿಕೆದಾರರು: 15.86% : PIF, KKR, Vista Equity Partners, Mubadala, Gen Atlantic

➤ ಜಿಯೊ ಬೆಳೆದು ಬಂದ ಹಾದಿ ಹಾಗೂ ಮೈಲಿಗಲ್ಲುಗಳು

- ಚಂದಾದಾರರ ಸಂಖ್ಯೆ: 2026ರ ಮೊದಲಾರ್ಧದ ವೇಳೆಗೆ ರಿಲಯನ್ಸ್ ಜಿಯೊ 52.4 ಕೋಟಿಗೂ (524.4 Million) ಹೆಚ್ಚು ಸಕ್ರಿಯ ಚಂದಾದಾರರನ್ನು ಹೊಂದಿದ್ದು, ಚೀನಾ ಮೊಬೈಲ್ ನಂತರ ಒಂದೇ ದೇಶದಲ್ಲಿ ಅತಿ ಹೆಚ್ಚು ಗ್ರಾಹಕರನ್ನು ಹೊಂದಿರುವ ವಿಶ್ವದ ಎರಡನೇ ಅತಿದೊಡ್ಡ ಟೆಲಿಕಾಂ ಸಂಸ್ಥೆಯಾಗಿದೆ.
- ಆರ್ಥಿಕ ಸಾಧನೆ (FY26): ಕಂಪನಿಯು 2025-26ರ ಹಣಕಾಸು ವರ್ಷದಲ್ಲಿ ₹1,46,885 ಕೋಟಿ ಆದಾಯ ಗಳಿಸಿದ್ದು, ನಿವ್ವಳ ಲಾಭ ₹30,000 ಕೋಟಿ ಗಡಿ ದಾಟಿದೆ.
- ಉಪಗ್ರಹ ತಂತ್ರಜ್ಞಾನ (Satellite Telecom): ಇತ್ತೀಚೆಗೆ ಭಾರತೀಯ ಬಾಹ್ಯಾಕಾಶ ನಿಯಂತ್ರಕ ಸಂಸ್ಥೆ (IN-SPACe) ನಿಂದ ಜಿಯೊ 1,600 LEO (Low Earth Orbit) ಉಪಗ್ರಹಗಳನ್ನು ಉಡಾಯಿಸಲು ತಾಂತ್ರಿಕ ಅನುಮೋದನೆ ಪಡೆದುಕೊಂಡಿದೆ.

## ಮೆಟಾ ಸಂಸ್ಥೆಗೆ $17.1 ಬಿಲಿಯನ್ ದಂಡ ಹಾಗೂ ಹದಿಹರೆಯದವರ ಸಾಮಾಜಿಕ ಜಾಲತಾಣ ಬಳಕೆಗೆ ಕಟ್ಟುನಿಟ್ಟಿನ ನಿಯಮಗಳು




➤ ಅಮೆರಿಕದಲ್ಲಿ ಹದಿಹರೆಯದ ಯುವಜನರು ಮತ್ತು ಮಕ್ಕಳು ಸಾಮಾಜಿಕ ಜಾಲತಾಣಗಳಿಗೆ (Social Media Addiction) ದಾಸರಾಗುವಂತೆ ಉದ್ದೇಶಪೂರ್ವಕವಾಗಿ ಆ್ಯಪ್‌ಗಳನ್ನು ವಿನ್ಯಾಸಗೊಳಿಸಲಾಗಿದೆ ಎಂದು ಆರೋಪಿಸಿ ದಾಖಲಾಗಿದ್ದ ಬಹುರಾಷ್ಟ್ರೀಯ ಮೊಕದ್ದಮೆಯನ್ನು ಬಗೆಹರಿಸಲು ತಂತ್ರಜ್ಞಾನ ದೈತ್ಯ ಸಂಸ್ಥೆ 'ಮೆಟಾ' (Meta - ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಮ್‌ನ ಮಾತೃ ಸಂಸ್ಥೆ) ಅಮೆರಿಕದ 47 ರಾಜ್ಯಗಳೊಂದಿಗೆ 17.1 ಬಿಲಿಯನ್ ಯುಎಸ್ ಡಾಲರ್ ($17.1 Billion / ಅಂದಾಜು ₹1.4 ಲಕ್ಷ ಕೋಟಿ ರೂಪಾಯಿ) ಪಾವತಿಸಲು ಸಮ್ಮತಿಸಿದೆ.

➤ ಈ ಕಾನೂನಾತ್ಮಕ ಒಪ್ಪಂದದ ಭಾಗವಾಗಿ, 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಯುವಜನರು ಸಾಮಾಜಿಕ ಜಾಲತಾಣಗಳನ್ನು ಬಳಸುವ ವಿಧಾನದ ಮೇಲೆ ಅಮೆರಿಕದಲ್ಲಿ ಕಟ್ಟುನಿಟ್ಟಿನ ಹೊಸ ನಿಯಮಗಳನ್ನು ಜಾರಿಗೆ ತರಲಾಗುತ್ತಿದೆ.

➤ ಹೊಸ ನಿಯಮಗಳು ಮತ್ತು ಪ್ರಮುಖ ಬದಲಾವಣೆಗಳು (Key Safeguards & Features)

**1. ದಿನಂಪ್ರತಿ 2 ಗಂಟೆಗಳ ಕಾಲಾವಕಾಶ :** 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಳಕೆದಾರರಿಗೆ (Teens) ಇನ್‌ಸ್ಟಾಗ್ರಾಮ್ ಮತ್ತು ಫೇಸ್‌ಬುಕ್ ಬಳಸಲು ದಿನಕ್ಕೆ ಗರಿಷ್ಠ 2 ಗಂಟೆಗಳ ಕಾಲಾವಕಾಶ (Hard Cap) ಮಾತ್ರ ಇರಲಿದೆ. ಮತ್ತು ಪೋಷಕರು (Verified Parents) ಅನುಮತಿ ನೀಡಿದರೆ ಮಾತ್ರ ಈ ಮಿತಿಯನ್ನು ಬದಲಾಯಿಸಲು ಸಾಧ್ಯ.

**2. ರಾತ್ರಿ ವೇಳೆ ಆ್ಯಪ್ ನಿರ್ಬಂಧ :** ಮಧ್ಯರಾತ್ರಿ 12 ಗಂಟೆಯಿಂದ ಬೆಳಗಿನ ಜಾವ 6 ಗಂಟೆಯವರೆಗೆ ಹದಿಹರೆಯದವರಿಗೆ ಆ್ಯಪ್‌ನ ಪ್ರಮುಖ ವೈಶಿಷ್ಟ್ಯಗಳನ್ನು ಲಾಕ್ ಮಾಡಲಾಗುತ್ತದೆ. ರಾತ್ರಿ 10 ರಿಂದ ಬೆಳಿಗ್ಗೆ 7 ರವರೆಗೆ ಮತ್ತು ಶಾಲೆಯ ವೇಳೆಯಲ್ಲಿ (ಬೆಳಿಗ್ಗೆ 8 ರಿಂದ ಮಧ್ಯಾಹ್ನ 3 ರವರೆಗೆ) ಪುಶ್ ನೋಟಿಫಿಕೇಶನ್‌ಗಳನ್ನು (Push Notifications) ಮ್ಯೂಟ್ ಮಾಡಲಾಗುತ್ತದೆ.

**3. 'ಲೈಕ್ಸ್' ಮರೆಮಾಚುವಿಕೆ ಮತ್ತು ಆಲ್ಗರಿದಮ್ ನಿಯಂತ್ರಣ :** ಯುವ ಬಳಕೆದಾರರ ಪೋಸ್ಟ್‌ಗಳಿಗೆ ಬರುವ 'ಲೈಕ್ಸ್' (Likes) ಹಾಗೂ ರಿಯಾಕ್ಷನ್‌ಗಳ ಸಂಖ್ಯೆಯನ್ನು ಡೀಫಾಲ್ಟ್ ಆಗಿ ಮರೆಮಾಡಲಾಗುತ್ತದೆ. ಯುವಕರನ್ನು ತೀವ್ರವಾಗಿ ಅಡಿಕ್ಟ್ ಮಾಡುವ ಕೃತಕ ಬುದ್ಧಿಮತ್ತೆ ಆಲ್ಗರಿದಮ್ ಬದಲಿಗೆ ಸಾಮಾನ್ಯ (Non-personalised) ಫೀಡ್ ಆಯ್ಕೆಯನ್ನು ನೀಡಲಾಗುತ್ತದೆ. ಮತ್ತು ಸೌಂದರ್ಯ ವರ್ಧಕ ಶಸ್ತ್ರಚಿಕಿತ್ಸೆ (Cosmetic Surgery) ಸಂಬಂಧಿತ ಫಿಲ್ಟರ್‌ಗಳನ್ನು ಹದಿಹರೆಯದವರಿಗೆ ನಿಷೇಧಿಸಲಾಗಿದೆ.

**4. ದಂಡದ ಸ್ವರೂಪ:** ಮೆಟಾ ಸಂಸ್ಥೆಯು ಆರಂಭಿಕವಾಗಿ $12.7 ಬಿಲಿಯನ್ ಪಾವತಿಸಲಿದೆ. ಪ್ರತಿಸ್ಪರ್ಧಿ ಸಂಸ್ಥೆಗಳಾದ ಟಿಕ್‌ಟಾಕ್ (TikTok) ಮತ್ತು ಯೂಟ್ಯೂಬ್ (YouTube) ಕೂಡ ಇದೇ ರೀತಿಯ ಭದ್ರತಾ ಕ್ರಮಗಳನ್ನು ಅಳವಡಿಸಿಕೊಂಡು ಕೊಡುಗೆ ನೀಡಿದರೆ ಒಟ್ಟು ದಂಡದ ಮೊತ್ತ $17.1 ಬಿಲಿಯನ್‌ಗೆ ಏರಿಕೆಯಾಗಲಿದೆ. ಈ ಮೊತ್ತವನ್ನು ಮುಂದಿನ 10 ವರ್ಷಗಳಲ್ಲಿ ಅಮೆರಿಕದ ರಾಜ್ಯಗಳಲ್ಲಿ ಮಕ್ಕಳ ಮಾನಸಿಕ ಆರೋಗ್ಯ ಕಾರ್ಯಕ್ರಮಗಳಿಗಾಗಿ ಬಳಸಲಾಗುವುದು.

**5. ಸ್ವತಂತ್ರ ತನಿಖಾಧಿಕಾರಿ:** ಮೆಟಾ ಈ ನಿಯಮಗಳನ್ನು ಸರಿಯಾಗಿ ಅನುಷ್ಠಾನಗೊಳಿಸುತ್ತಿದೆಯೇ ಎಂದು ಪರೀಕ್ಷಿಸಲು ಮುಂದಿನ 5 ವರ್ಷಗಳ ಕಾಲ ಸ್ವತಂತ್ರ ಆಡಿಟರ್ ಒಬ್ಬರನ್ನು ನೇಮಿಸಲಾಗುತ್ತದೆ.

## 18ನೇ ಬ್ರಿಕ್ಸ್ (BRICS) ಶೃಂಗಸಭೆ 2026: ಭಾರತದ ಆತಿಥ್ಯ

BRICS INDIA 2026

➤ ಸೆಪ್ಟೆಂಬರ್ 12 ಮತ್ತು 13, 2026ರಂದು ನವದೆಹಲಿಯ ಪ್ರಗತಿ ಮೈದಾನದಲ್ಲಿರುವ 'ಭಾರತ ಮಂಟಪಂ' (Bharat Mandapam) ಸಭಾಂಗಣದಲ್ಲಿ 18ನೇ ಬ್ರಿಕ್ಸ್ (BRICS) ಶೃಂಗಸಭೆ ನಡೆಯಲಿದೆ. 2026ರ ಜನವರಿ 1ರಿಂದ ಭಾರತವು ಬ್ರಿಕ್ಸ್ ಒಕ್ಕೂಟದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದು, ಅದರ ಭಾಗವಾಗಿ ಈ ಜಾಗತಿಕ ಸಮ್ಮೇಳನವನ್ನು ಆಯೋಜಿಸುತ್ತಿದೆ. ಈ ಸಭೆಯಲ್ಲಿ ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಮುಖ್ಯಸ್ಥರು, ಪಾಲುದಾರ ದೇಶಗಳ ನಾಯಕರು ಹಾಗೂ ವಿಶೇಷ ಆಹ್ವಾನಿತ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

➤ **2026ರ ಬ್ರಿಕ್ಸ್ ಧ್ಯೇಯವಾಕ್ಯ (Theme): "ಸ್ಥಿರತೆ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆಯ ನಿರ್ಮಾಣ"**

**(Building for Resilience, Innovation, Cooperation and Sustainability)**
ಪ್ರಧಾನಮಂತ್ರಿ ನರೇಂದ್ರ ಮೋದಿಯವರ "ಮಾನವೀಯತೆ ಮೊದಲಿಗೆ" (Humanity First) ಎಂಬ ದೃಷ್ಟಿಕೋನವನ್ನು ಆಧರಿಸಿ, ಜಾಗತಿಕ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವುದು ಈ ಶೃಂಗಸಭೆಯ ಪ್ರಮುಖ ಉದ್ದೇಶವಾಗಿದೆ.

➤ **ಶೃಂಗಸಭೆಯ ಪ್ರಮುಖ ಮೂರು ಸ್ತಂಭಗಳು:** ಭಾರತವು ತನ್ನ ಅಧ್ಯಕ್ಷತೆಯಲ್ಲಿ ಮೂರು ಪ್ರಮುಖ ಕ್ಷೇತ್ರಗಳಿಗೆ ಹೆಚ್ಚಿನ ಒತ್ತು ನೀಡಿದೆ:

**1. ರಾಜಕೀಯ ಮತ್ತು ಭದ್ರತೆ (Political and Security):** ಜಾಗತಿಕ ಶಾಂತಿ, ಭಯೋತ್ಪಾದನೆ ತಡೆ ಮತ್ತು ಪ್ರಾದೇಶಿಕ ಭದ್ರತೆ.

**2. ಆರ್ಥಿಕ ಮತ್ತು ಹಣಕಾಸು (Economic and Financial):** ಡಿಜಿಟಲ್ ವ್ಯಾಪಾರ, ನಾವೀನ್ಯತೆ, ಹಣಕಾಸು ತಂತ್ರಜ್ಞಾನ (FinTech) ಮತ್ತು ಆರ್ಥಿಕ ಸಹಕಾರ.

**3. ಸಾಂಸ್ಕೃತಿಕ ಮತ್ತು ಸಾರ್ವಜನಿಕ ಬಾಂಧವ್ಯ (Cultural and People-to-People Exchanges):** ಪ್ರವಾಸೋದ್ಯಮ, ಶಿಕ್ಷಣ, ಮತ್ತು ಸಾಂಸ್ಕೃತಿಕ ವಿನಿಮಯ.

**ವಿಶೇಷ ಮಾಹಿತಿ:** ಈ ಶೃಂಗಸಭೆಯ ಪೂರ್ವಭಾವಿಯಾಗಿ ಭಾರತದ 25ಕ್ಕೂ ಹೆಚ್ಚು ನಗರಗಳಲ್ಲಿ 350ಕ್ಕೂ ಹೆಚ್ಚು ಉನ್ನತ ಮಟ್ಟದ ಸಭೆಗಳು ಹಾಗೂ ಸಚಿವರ ಮಟ್ಟದ ಚರ್ಚೆಗಳು ಯಶಸ್ವಿಯಾಗಿ ನಡೆದಿವೆ.

➤ **ಬ್ರಿಕ್ಸ್ ಒಕ್ಕೂಟ ಮತ್ತು ಭಾರತದ ಪಾತ್ರ**

- ಸ್ಥಾಪಕ ಸದಸ್ಯ: ಭಾರತವು ಬ್ರಿಕ್ಸ್ ಒಕ್ಕೂಟದ ಸ್ಥಾಪಕ ಸದಸ್ಯ ರಾಷ್ಟ್ರಗಳಲ್ಲಿ ಒಂದಾಗಿದೆ.
- ಭಾರತದ ಅಧ್ಯಕ್ಷತೆಯ ಇತಿಹಾಸ: ಭಾರತವು ಈ ಹಿಂದೆ 2012, 2016 ಮತ್ತು 2021ರಲ್ಲಿ ಬ್ರಿಕ್ಸ್ ಅಧ್ಯಕ್ಷತೆ ವಹಿಸಿ ಶೃಂಗಸಭೆಗಳನ್ನು ಯಶಸ್ವಿಯಾಗಿ ಆಯೋಜಿಸಿತ್ತು. 2026ರಲ್ಲಿ ಭಾರತ ವಹಿಸುತ್ತಿರುವ ಅಧ್ಯಕ್ಷತೆಯು 4ನೇ ಬಾರಿಯಾಗಿದೆ.
- 20 ವರ್ಷಗಳ ಮೈಲಿಗಲ್ಲು: ಬ್ರಿಕ್ಸ್ ಒಕ್ಕೂಟ ಸ್ಥಾಪನೆಯಾಗಿ 20 ವರ್ಷಗಳು ಪೂರ್ಣಗೊಳ್ಳುತ್ತಿರುವ ಸಂದರ್ಭದಲ್ಲಿ (2006-2026) ಈ ಶೃಂಗಸಭೆ ನಡೆಯುತ್ತಿರುವುದು ಅತ್ಯಂತ ಮಹತ್ವ ಪಡೆದುಕೊಂಡಿದೆ.

➤ ಬ್ರಿಕ್ಸ್ (BRICS): ಬ್ರಿಕ್ಸ್ ಎನ್ನುವುದು ವಿಶ್ವದ ಉದಯೋನ್ಮುಖ ಪ್ರಮುಖ ಆರ್ಥಿಕತೆ ಹೊಂದಿರುವ ದೇಶಗಳ ಒಕ್ಕೂಟವಾಗಿದೆ.
ಆರಂಭಿಕ ಸದಸ್ಯರು: ಬ್ರೆಜಿಲ್, ರಷ್ಯಾ, ಭಾರತ, ಚೀನಾ, ದಕ್ಷಿಣ ಆಫ್ರಿಕಾ (BRICS).
ವಿಸ್ತೃತ ಬ್ರಿಕ್ಸ್ (BRICS Expansion): ಇತ್ತೀಚಿನ ವರ್ಷಗಳಲ್ಲಿ ಈ ಒಕ್ಕೂಟವು ವಿಸ್ತರಣೆಗೊಂಡಿದ್ದು, ಈಗ ಈಜಿಪ್ಟ್, ಇಥಿಯೋಪಿಯಾ, ಇರಾನ್, ಯುನೈಟೆಡ್ ಅರಬ್ ಎಮಿರಾಟ್ಸ್ (UAE) ಮತ್ತು ಇಂಡೋನೇಷ್ಯಾ ಸೇರಿದಂತೆ ಪ್ರಮುಖ ದೇಶಗಳು ಇದರ ಪೂರ್ಣ ಪ್ರಮಾಣದ ಸದಸ್ಯ ರಾಷ್ಟ್ರಗಳಾಗಿವೆ.

## ತಮಿಳುನಾಡು ಸರ್ಕಾರದಿಂದ ಹೊಸೂರು ಅರಣ್ಯ ವಿಭಾಗದ 3 ಆನೆ ಕಾರಿಡಾರ್‌ಗಳ ಅಧಿಕೃತ ಅಧಿಸೂಚನೆ: ಕರ್ನಾಟಕ-ತಮಿಳುನಾಡು ಗಡಿಯಲ್ಲಿ ವನ್ಯಜೀವಿ ಸಂರಕ್ಷಣೆಗೆ ಹೊಸ ಬಲ



➤ ತಮಿಳುನಾಡು ಸರ್ಕಾರವು ಹೊಸೂರು ಅರಣ್ಯ ವಿಭಾಗದ ಕಾವೇರಿ ಉತ್ತರ ವನ್ಯಜೀವಿ ಅಭಯಾರಣ್ಯ (Cauvery North Wildlife Sanctuary) ಮತ್ತು ಅದಕ್ಕೆ ಹೊಂದಿಕೊಂಡಿರುವ ರಕ್ಷಿತ ಅರಣ್ಯ ಪ್ರದೇಶಗಳಲ್ಲಿ ಒಟ್ಟು 10,300 ಹೆಕ್ಟೇರ್‌ಗೂ ಹೆಚ್ಚು ವಿಸ್ತೀರ್ಣವನ್ನು ಒಳಗೊಂಡ ಮೂರು ಪ್ರಮುಖ ಆನೆ ಕಾರಿಡಾರ್ (Elephant Corridors) ಗಳನ್ನು ಅಧಿಕೃತವಾಗಿ ಅಧಿಸೂಚಿಸಿದೆ (Notify). ಈ ನಿರ್ಧಾರವು ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ನಡುವೆ ಆನೆಗಳ ಸುರಕ್ಷಿತ ಸಂಚಾರಕ್ಕೆ ಮತ್ತು ಮಾನವ-ಆನೆ ಸಂಘರ್ಷವನ್ನು ತಡೆಯಲು ಅತ್ಯಂತ ಮಹತ್ವದ ಹೆಜ್ಜೆಯಾಗಿದೆ.

➤ ಪ್ರಮುಖ ವಿವರಗಳು ಹಾಗೂ ಅಧಿಸೂಚಿಸಲಾದ 3 ಆನೆ ಕಾರಿಡಾರ್‌ಗಳು: ತಮಿಳುನಾಡು ಸರ್ಕಾರದ ಪರಿಸರ, ಹವಾಮಾನ ಬದಲಾವಣೆ ಮತ್ತು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕಕರ್ಲ ಉಷಾ (Kakarla Usha) ಅವರು ಈ ಕುರಿತು ಅಧಿಕೃತ ಅಧಿಸೂಚನೆಯನ್ನು ಹೊರಡಿಸಿದ್ದಾರೆ.

**1. ಜವಳಗಿರಿ – ಪಣೈ – ಅಂಚೆಟ್ಟಿ ಕಾರಿಡಾರ್ (Jawalagiri–Panai–Anchetty Corridor):**
ವಿಸ್ತೀರ್ಣ: 6,881.47 ಹೆಕ್ಟೇರ್
ಉದ್ದ: 20.90 ಕಿ.ಮೀ
ವಿಶೇಷತೆ: ಇದು ಅಧಿಸೂಚಿಸಲಾದ ಮೂರು ಕಾರಿಡಾರ್‌ಗಳಲ್ಲಿ ಅತ್ಯಂತ ಉದ್ದವಾದ ಮತ್ತು ದೊಡ್ಡದಾದ ಕಾರಿಡಾರ್ ಆಗಿದೆ.

2. ಜವಳಗಿರಿ – ಉಳಿಬಂಡೆ – ತಗ್ಗಟ್ಟಿ ಕಾರಿಡಾರ್ (Jawalagiri–Ulibanda–Thaggatti Corridor):
ವಿಸ್ತೀರ್ಣ: 3,241.53 ಹೆಕ್ಟೇರ್
ಉದ್ದ: 18.50 ಕಿ.ಮೀ

3. ಬಿಲ್ಲಿಕಲ್ – ಜವಳಗಿರಿ ಕಾರಿಡಾರ್ (Billikkal–Jawalagiri Corridor):
ವಿಸ್ತೀರ್ಣ: ಸುಮಾರು 196 ಹೆಕ್ಟೇರ್
ಉದ್ದ: 2.20 ಕಿ.ಮೀ

➤ **ಈ ಅಧಿಸೂಚನೆಯ ಉದ್ದೇಶ ಮತ್ತು ಪ್ರಾಮುಖ್ಯತೆ**

- ಮದ್ರಾಸ್ ಹೈಕೋರ್ಟ್ ನಿರ್ದೇಶನ: ಮದ್ರಾಸ್ ಹೈಕೋರ್ಟ್ ನೀಡಿದ ತಡೆ ನಿರ್ದೇಶನಗಳು ಮತ್ತು ಆನೆ ಕಾರಿಡಾರ್‌ಗಳನ್ನು ಗುರುತಿಸಿ ಸಂರಕ್ಷಿಸಲು ರಚಿಸಲಾದ ತಜ್ಞರ ಸಮಿತಿಗಳ ಶಿಫಾರಸುಗಳ ಆಧಾರದ ಮೇಲೆ ಈ ಹೆಜ್ಜೆ ಇಡಲಾಗಿದೆ.
- ಆನೆಗಳ ಋತುಮಾನದ ವಲಸೆ: ಆನೆಗಳು ಯಾವುದೇ ಒಂದು ರಾಜ್ಯ ಅಥವಾ ನಿರ್ದಿಷ್ಟ ಅರಣ್ಯ ಗಡಿಗೆ ಸೀಮಿತವಾಗಿರುವುದಿಲ್ಲ. ಮಳೆಗಾಲದ ಬದಲಾವಣೆ, ಆಹಾರ ಮತ್ತು ನೀರಿನ ಹುಡುಕಾಟದಲ್ಲಿ ಆನೆಗಳು ಕರ್ನಾಟಕ (ಬನ್ನೇರುಘಟ್ಟ, ಕಾವೇರಿ ಅಭಯಾರಣ್ಯ ಪ್ರದೇಶಗಳು) ಮತ್ತು ತಮಿಳುನಾಡಿನ ಗಡಿ ಭಾಗಗಳ ನಡುವೆ ನಿಯಮಿತವಾಗಿ ಸಂಚರಿಸುತ್ತವೆ.
- ಜಮೀನಿನ ಕಾನೂನು ಸ್ಥಿತಿಯಲ್ಲಿ ಬದಲಾವಣೆಯಿಲ್ಲ: ಈ ಎಲ್ಲಾ 3 ಕಾರಿಡಾರ್‌ಗಳು ಈಗಾಗಲೇ ರಕ್ಷಿತ ಅರಣ್ಯ (Reserve Forests) ಅಥವಾ ಅಭಯಾರಣ್ಯ ಪ್ರದೇಶಗಳ ವ್ಯಾಪ್ತಿಯಲ್ಲಿರುವುದರಿಂದ, ಈ ಅಧಿಸೂಚನೆಯಿಂದ ಭೂಮಿಯ ಕಾನೂನು ಸ್ಥಿತಿ ಬದಲಾಗುವುದಿಲ್ಲ ಅಥವಾ ಸ್ಥಳೀಯ ಸಾರ್ವಜನಿಕರ ಮೇಲೆ ಹೊಸ ನಿರ್ಬಂಧಗಳು ಹೇರಲ್ಪಡುವುದಿಲ್ಲ. ಆದರೆ ಅರಣ್ಯ ಸಂರಕ್ಷಣೆಗೆ ಹೆಚ್ಚಿನ ಕಾನೂನು ಬಲ ಸಿಗಲಿದೆ.

## 31 Aug 2026

## ಭಾರತದ ವಿದೇಶಿ ವಿನಿಮಯ ಸಂಗ್ರಹ $729.3 ಬಿಲಿಯನ್‌ಗೆ! ಸಾರ್ವಕಾಲಿಕ ದಾಖಲೆ ಬರೆದ ಆರ್‌ಬಿಐ (RBI)



➤ ಭಾರತದ ಆರ್ಥಿಕ ಕ್ಷೇತ್ರದಲ್ಲಿ ಹೊಸ ಸಂಚಲನ ಸೃಷ್ಟಿಯಾಗಿದೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (RBI) ಬಿಡುಗಡೆ ಮಾಡಿರುವ ಇತ್ತೀಚಿನ ವರದಿಯ ಪ್ರಕಾರ, ದೇಶದ ವಿದೇಶಿ ವಿನಿಮಯ ಸಂಗ್ರಹ (Foreign Exchange Reserves) 729.3

ಬಿಲಿಯನ್ ಅಮೆರಿಕನ್ ಡಾಲರ್ (ಸುಮಾರು $729.328 ಬಿಲಿಯನ್) ತಲುಪುವ ಮೂಲಕ ಸಾರ್ವಕಾಲಿಕ ದಾಖಲೆ ಬರೆದಿದೆ. ಆಗಸ್ಟ್ 21ಕ್ಕೆ ಕೊನೆಗೊಂಡ ವಾರದಲ್ಲಿ ಒಂದೇ ವಾರದಲ್ಲಿ ಬರೋಬ್ಬರಿ $12.4 ಬಿಲಿಯನ್ ಡಾಲರ್ ಹೆಚ್ಚಳ ಕಂಡುಬಂದಿದ್ದು, ಭಾರತೀಯ ಆರ್ಥಿಕತೆಗೆ ಇದು ಬೃಹತ್ ಬಲ ತಂದಿದೆ.

**➤ ವಿದೇಶಿ ವಿನಿಮಯ ಸಂಗ್ರಹದಲ್ಲಿ ಏನೇನೆಲ್ಲಾ ಸೇರಿದೆ?**

**ಭಾರತದ ಒಟ್ಟು $729.3 ಬಿಲಿಯನ್ ವಿನಿಮಯ ಸಂಗ್ರಹವನ್ನು ಮುಖ್ಯವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ:**

1. ವಿದೇಶಿ ಕರೆನ್ಸಿ ಆಸ್ತಿ (FCA): ಭಾರತದ ಒಟ್ಟು ವಿದೇಶಿ ಕರೆನ್ಸಿ ಆಸ್ತಿಯು $591.333 ಬಿಲಿಯನ್‌ಗೆ ತಲುಪಿದ್ದು, ಇತ್ತೀಚಿನ ವಾರದಲ್ಲಿ $9.48 ಬಿಲಿಯನ್‌ನಷ್ಟು ಹೆಚ್ಚಳ ಕಂಡಿದೆ.
2. ಚಿನ್ನದ ಸಂಗ್ರಹ (Gold Reserves): ದೇಶದ ಚಿನ್ನದ ಸಂಗ್ರಹದ ಒಟ್ಟು ಮೌಲ್ಯವು $114.218 ಬಿಲಿಯನ್‌ಗೆ ಏರಿಕೆಯಾಗಿದ್ದು, ಇದರಲ್ಲಿ $2.80 ಬಿಲಿಯನ್‌ನಷ್ಟು ಹೆಚ್ಚಳವಾಗಿದೆ.
3. ವಿಶೇಷ ಹಿಂಪಡೆಯುವಿಕೆ ಹಕ್ಕುಗಳು (SDRs): ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿನ (IMF) ಭಾರತದ ವಿಶೇಷ ಹಿಂಪಡೆಯುವಿಕೆ ಹಕ್ಕುಗಳ ಮೌಲ್ಯವು $18.892 ಬಿಲಿಯನ್ ತಲುಪಿದ್ದು, $112 ಮಿಲಿಯನ್‌ನಷ್ಟು ಏರಿಕೆ ದಾಖಲಿಸಿದೆ.
4. IMF ನಲ್ಲಿ ಭಾರತದ ರಿಸರ್ವ್ ಸ್ಥಾನ: IMF ನಲ್ಲಿರುವ ಭಾರತದ ರಿಸರ್ವ್ ಸ್ಥಾನದ ಮೌಲ್ಯವು $4.925 ಬಿಲಿಯನ್ ತಲುಪಿದ್ದು, $26 ಮಿಲಿಯನ್‌ನಷ್ಟು ಹೆಚ್ಚಳವಾಗಿದೆ.

**➤ ಈ ಬೃಹತ್ ಏರಿಕೆಗೆ ಕಾರಣಗಳು:**

- ಆರ್‌ಬಿಐನ ವಿಶೇಷ ಸ್ವ್ಯಾಪ್ ಸೌಲಭ್ಯ (USD-INR Swap Facility): ವಿದೇಶಿ ಕರೆನ್ಸಿ ಹರಿವನ್ನು ಉತ್ತೇಜಿಸಲು ಆರ್‌ಬಿಐ ಜೂನ್‌ನಲ್ಲಿ ಪ್ರಾರಂಭಿಸಿದ ಈ ಸೌಲಭ್ಯದ ಮೂಲಕ ಬ್ಯಾಂಕಿಂಗ್ ವ್ಯವಸ್ಥೆಗೆ ಗಣನೀಯ ಪ್ರಮಾಣದಲ್ಲಿ ಡಾಲರ್ ಹರಿವು ಬಂದಿದೆ (ಮುಖ್ಯವಾಗಿ FCNR(B) ಠೇವಣಿಗಳ ಮೂಲಕ).
- ಚಿನ್ನದ ಮೌಲ್ಯವರ್ಧನೆ (Revaluation Gain): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಶೇಕಡಾ 5.18 ರಷ್ಟು ಏರಿಕೆಯಾಗಿದ್ದು ($4,603/ounce), ಭಾರತ ಹೊಸದಾಗಿ ಚಿನ್ನ ಖರೀದಿಸದಿದ್ದರೂ ಆಸ್ತಿಯ ಮೌಲ್ಯ ಹೆಚ್ಚಾಗಿದೆ.
- ಕರೆನ್ಸಿ ಮರುಮೌಲ್ಯಮಾಪನ: ಯುರೋ, ಯೆನ್ ಮತ್ತು ಪೌಂಡ್‌ನಂತಹ ಡಾಲರೇತರ ಕರೆನ್ಸಿಗಳ ಮೌಲ್ಯದಲ್ಲಿನ ಬದಲಾವಣೆಯೂ ವಿದೇಶಿ ಕರೆನ್ಸಿ ಆಸ್ತಿ (FCA) ಏರಿಕೆಗೆ ಸಹಕರಿಸಿದೆ.

## ಸ್ವಂತ ಆದಾಯ ಪಾಲಿನಲ್ಲಿ ದೆಹಲಿಗೆ ದೇಶದಲ್ಲೇ ಪ್ರಥಮ ಸ್ಥಾನ; 4ನೇ ಸ್ಥಾನದಲ್ಲಿ ಕರ್ನಾಟಕ: ಆರ್‌ಬಿಐ ವರದಿ (FY25)



➤ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (RBI) ದತ್ತಾಂಶ ಆಧರಿಸಿ 'ಬಿಸಿನೆಸ್ ಸ್ಟ್ಯಾಂಡರ್ಡ್' ತಯಾರಿಸಿರುವ 'ಇಂಡಿಯಾ ಸ್ಟೇಟ್ ಫಿಸ್ಕಲ್ ಹೆಲ್ತ್ ಟ್ರ್ಯಾಕರ್' (India State Fiscal Health Tracker) ವರದಿಯ ಪ್ರಕಾರ, 2024-25ರ ಆಯವ್ಯಯ ಅಂದಾಜಿನಲ್ಲಿ (FY25 Budget Estimates) ಸ್ವಂತ ಆದಾಯದ ಪಾಲಿನಲ್ಲಿ (Own Revenue Share) ದೆಹಲಿ ದೇಶದಲ್ಲೇ ಮೊದಲ ಸ್ಥಾನದಲ್ಲಿದ್ದರೆ, ಕರ್ನಾಟಕ ನಾಲ್ಕನೇ ಸ್ಥಾನ ಪಡೆದುಕೊಂಡಿದೆ.

- ಆರ್‌ಬಿಐ ಆಧಾರಿತ ದತ್ತಾಂಶ: ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (RBI) ಬಿಡುಗಡೆ ಮಾಡಿದ 'ಸ್ಟೇಟ್ಸ್ ಬ್ಯಾಂಕ್ ಆಫ್ ಸ್ಟ್ಯಾಟಿಸ್ಟಿಕ್ಸ್ ಆನ್ ಇಂಡಿಯನ್ ಸ್ಟೇಟ್ಸ್' ಆಧಾರದ ಮೇಲೆ ಈ ಶ್ರೇಯಾಂಕ ಸಿದ್ಧಪಡಿಸಲಾಗಿದೆ.
- ದೆಹಲಿಗೆ ಅಗ್ರಸ್ಥಾನ: ದೆಹಲಿಯು ತನ್ನ ಒಟ್ಟು ಕಂದಾಯ ಸ್ವೀಕೃತಿಗಳಲ್ಲಿ 93.2% ಸ್ವಂತ ಆದಾಯ ಹೊಂದುವ ಮೂಲಕ ಅತ್ಯಂತ ಕನಿಷ್ಠ ಕೇಂದ್ರ ಅವಲಂಬನೆ ಹೊಂದಿದೆ.
- ಕರ್ನಾಟಕಕ್ಕೆ 4ನೇ ಸ್ಥಾನ: ದಕ್ಷಿಣ ಭಾರತದ ಪ್ರಮುಖ ರಾಜ್ಯವಾದ ಕರ್ನಾಟಕವು 77.3% ಪಾಲಿನೊಂದಿಗೆ 4ನೇ ಸ್ಥಾನ ಪಡೆದುಕೊಂಡಿದೆ.
- ಕೊನೆಯ ಸ್ಥಾನದಲ್ಲಿದ್ದ ರಾಜ್ಯ: ಈ ಪಟ್ಟಿಯಲ್ಲಿ ಮಣಿಪುರ (10.0%) ಅತ್ಯಂತ ಕೆಳಮಟ್ಟದಲ್ಲಿದೆ.

**➤ ಸ್ವಂತ ಆದಾಯ (Own Revenue):** ಒಂದು ರಾಜ್ಯ ಸರ್ಕಾರವು ತನಗೆ ಬರುವ ಒಟ್ಟು ಆದಾಯದಲ್ಲಿ (Total Revenue Receipts) ಎಷ್ಟು ಭಾಗವನ್ನು ತನ್ನದೇ ಮೂಲಗಳಿಂದ ಸಂಗ್ರಹಿಸುತ್ತದೆ ಎಂಬುದನ್ನು ಇದು ಸೂಚಿಸುತ್ತದೆ.

- ಸ್ವಂತ ತೆರಿಗೆ ಆದಾಯ (Own Tax Revenue): ರಾಜ್ಯವೇ ವಿಧಿಸಿ ವಸೂಲಿ ಮಾಡುವ ತೆರಿಗೆಗಳು (ಉದಾ: ಜಿಎಸ್‌ಟಿ ಭಾಗ, ಮೌಲ್ಯವರ್ಧಿತ ತೆರಿಗೆ/VAT, ಅಬಕಾರಿ ಸುಂಕ, ಮುದ್ರಾಂಕ ಮತ್ತು ನೋಂದಣಿ ಶುಲ್ಕ, ವಾಹನ ತೆರಿಗೆ).
- ಸ್ವಂತ ತೆರಿಗೆಯೇತರ ಆದಾಯ (Own Non-Tax Revenue): ಸೇವಾ ಶುಲ್ಕಗಳು, ರಾಯಲ್ಟಿ, ಲಾಭಾಂಶಗಳು, ದಂಡ ಇತ್ಯಾದಿ.

**➤ ಟಾಪ್-5 ಅತ್ಯಧಿಕ ಸ್ವಂತ ಆದಾಯ ಹೊಂದಿರುವ ರಾಜ್ಯಗಳು:**

1. ದೆಹಲಿ (Delhi): 93.2%
2. ಹರಿಯಾಣ (Haryana): 80.4%
3. ತೆಲಂಗಾಣ (Telangana): 78.4%
4. ಕರ್ನಾಟಕ (Karnataka): 77.3%
5. ತಮಿಳುನಾಡು (Tamil Nadu): 75.5%

## ಭಾರತದ ಮೊದಲ 'ಸ್ಪೋರ್ಟ್ಸ್ ಜಿನೋಮಿಕ್ಸ್ ಕಾರ್ಯಕ್ರಮ'ಕ್ಕೆ ಚಾಲನೆ ನೀಡಿದ ಗುಜರಾತ್!



➤ ಕ್ರೀಡಾ ಕ್ಷೇತ್ರಕ್ಕೆ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಸಂಯೋಜಿಸುವ ನಿಟ್ಟಿನಲ್ಲಿ ಭಾರತದ ಕ್ರೀಡಾ ಇತಿಹಾಸದಲ್ಲೇ ಮಹತ್ವದ ಮೈಲಿಗಲ್ಲೊಂದು ಸ್ಥಾಪನೆಯಾಗಿದೆ. ಗುಜರಾತ್ ಸರ್ಕಾರವು ದೇಶದಲ್ಲೇ ಮೊದಲ ಬಾರಿಗೆ ರಾಜ್ಯ ಮಟ್ಟದ 'ಸ್ಪೋರ್ಟ್ಸ್ ಜಿನೋಮಿಕ್ಸ್ ಪ್ರೋಗ್ರಾಂ' (Sports Genomics Programme) ಅನ್ನು ಅಧಿಕೃತವಾಗಿ ಪ್ರಾರಂಭಿಸಿದೆ.

➤ ಕ್ರೀಡಾಪಟುಗಳ ಕೌಶಲ್ಯ ಗುರುತಿಸುವಿಕೆ, ಗಾಯ ತಡೆಗಟ್ಟುವಿಕೆ ಮತ್ತು ಅವರಿಗೆ ಸೂಕ್ತವಾದ ತರಬೇತಿ ನೀಡಲು ಆನುವಂಶಿಕ ತಂತ್ರಜ್ಞಾನ (Genomics) ಬಳಸಿಕೊಳ್ಳುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

**➤ 'ಸ್ಪೋರ್ಟ್ಸ್ ಜಿನೋಮಿಕ್ಸ್ ಕಾರ್ಯಕ್ರಮ' ?**

ಈ ಯೋಜನೆಯು ಕ್ರೀಡಾಪಟುಗಳ ಜೀನ್‌ಗಳು (Genetics), ಶರೀರಶಾಸ್ತ್ರ (Physiology), ಕ್ರೀಡಾ ವಿಜ್ಞಾನ ಮತ್ತು ಪೋಷಕಾಂಶಗಳ ಅಗತ್ಯತೆಗಳನ್ನು ಅಧ್ಯಯನ ಮಾಡುತ್ತದೆ.

- ವೈಜ್ಞಾನಿಕ ತರಬೇತಿ: ಪ್ರತಿಯೊಬ್ಬ ಕ್ರೀಡಾಪಟುವಿನ ದೇಹದ ಆನುವಂಶಿಕ ಗುಣಲಕ್ಷಣಗಳನ್ನು (ಸಹನಶೀಲತೆ, ಸ್ನಾಯುಗಳ ಶಕ್ತಿ, ಜೀರ್ಣಕ್ರಿಯೆಯ ವೇಗ, ಮತ್ತು ಗಾಯಗೊಳ್ಳುವ ಸಾಧ್ಯತೆ) ಆಧರಿಸಿ ಅವರಿಗೆ ಸೂಕ್ತ ತರಬೇತಿ ಹಾಗೂ ಆಹಾರ ಕ್ರಮವನ್ನು ರೂಪಿಸಲಾಗುತ್ತದೆ.
- ಸಾಫ್ಟ್‌ವೇರ್ ಮತ್ತು ಡೇಟಾಬೇಸ್: ಈ ಯೋಜನೆಯಡಿಯಲ್ಲಿ "ಗುಜರಾತ್ ಅಥ್ಲೀಟ್ ಜಿನೋಮ್ ಡೇಟಾಬೇಸ್" (G-AGD) ಅನ್ನು ಸೃಷ್ಟಿಸಲಾಗುತ್ತದೆ. ಇದು ಭವಿಷ್ಯದಲ್ಲಿ ಕ್ರೀಡಾಪಟುಗಳ

ಆನುವಂಶಿಕ ಮಾಹಿತಿಯ ಪ್ರಮುಖ ಶೇಖರಣೆಯಾಗಿ ಕಾರ್ಯನಿರ್ವಹಿಸಲಿದೆ.
- ಸಂಸ್ಥೆಯ ಪಾತ್ರ: ಈ ಬೃಹತ್ ಕಾರ್ಯಕ್ರಮವನ್ನು ಗುಜರಾತ್ ಬಯೋಟೆಕ್ನಾಲಜಿ ರಿಸರ್ಚ್ ಸೆಂಟರ್ (GBRC) ಉಸ್ತುವಾರಿ ವಹಿಸಿಕೊಂಡು ಅನುಷ್ಠಾನಗೊಳಿಸುತ್ತಿದೆ.

➤ **ಕಾರ್ಯಕ್ರಮದ ಪ್ರಮುಖ ಗುರಿಗಳು:**
- 5 ವರ್ಷಗಳಲ್ಲಿ 10,000 ಅಥ್ಲೀಟ್‌ಗಳ ಮಾದರಿ ಶೇಖರಣೆ: ಪ್ರತಿ ವರ್ಷ ಸುಮಾರು 2,000 ಕ್ರೀಡಾಪಟುಗಳ ಜೀನ್ ಮಾದರಿಗಳನ್ನು (DNA Samples) ಸಂಗ್ರಹಿಸಿ ವಿಶ್ಲೇಷಿಸಲಾಗುತ್ತದೆ.
- ವಯೋಮಿತಿ: 14 ವರ್ಷದೊಳಗಿನವರು, 14 ರಿಂದ 18 ವರ್ಷದೊಳಗಿನವರು ಹಾಗೂ 18 ವರ್ಷ ಮೇಲ್ಪಟ್ಟ ಕ್ರೀಡಾಪಟುಗಳನ್ನು ಈ ಯೋಜನೆಗೆ ಒಳಪಡಿಸಲಾಗುತ್ತದೆ.
- ಮೊದಲ ಹಂತದ ಆಯ್ಕೆ: ಈಗಾಗಲೇ ಗುಜರಾತ್ ರಾಜ್ಯ ಟೆನ್ನಿಸ್ ಅಸೋಸಿಯೇಷನ್‌ನ ಆಟಗಾರರ ಮಾದರಿಗಳನ್ನು ಸಂಗ್ರಹಿಸಲಾಗಿದ್ದು, ಮುಂದಿನ ಹಂತಗಳಲ್ಲಿ ಬಿಲ್ಲುಗಾರಿಕೆ (Archery), ಫೆನ್ಸಿಂಗ್, ಜೂಡೋ, ಶೂಟಿಂಗ್, ಅಥ್ಲೆಟಿಕ್ಸ್ ಹಾಗೂ ಈಜುಗಾರರನ್ನು ಸೇರಿಸಿಕೊಳ್ಳಲಾಗುತ್ತದೆ.
- 2030 ಕಾಮನ್‌ವೆಲ್ತ್ ಗೇಮ್ಸ್ ಸಿದ್ಧತೆ: 2030ರ ಕಾಮನ್‌ವೆಲ್ತ್ ಕ್ರೀಡಾಕೂಟವನ್ನು ಗಮನದಲ್ಲಿಟ್ಟುಕೊಂಡು ಗುಜರಾತ್ ತನ್ನ ಕ್ರೀಡಾ ಮೂಲಸೌಕರ್ಯ ಹಾಗೂ ಕ್ರೀಡಾಪಟುಗಳ ಸಾಮರ್ಥ್ಯವನ್ನು ಹೆಚ್ಚಿಸಲು ಈ ಹೆಜ್ಜೆ ಇಟ್ಟಿದೆ.

## FIH World Cup 2026: ಬೆಲ್ಜಿಯಂ ವಿರುದ್ಧ ಶೂಟೌಟ್ ಸೋಲು; 8ನೇ ಸ್ಥಾನದೊಂದಿಗೆ ವಾಪಸಾದ ಭಾರತೀಯ ಪುರುಷರ ಹಾಕಿ ತಂಡ



➤ ಬೆಲ್ಜಿಯಂನ ವಾವ್ರೆ (Wavre) ಯಲ್ಲಿ ನಡೆದ FIH ಹಾಕಿ ವಿಶ್ವಕಪ್ 2026 (FIH Hockey World Cup 2026) ಪಂದ್ಯಾವಳಿಯ ಶ್ರೇಯಾಂಕ ಪಂದ್ಯದಲ್ಲಿ ಭಾರತೀಯ ಪುರುಷರ ಹಾಕಿ ತಂಡವು ಆತಿಥೇಯ ಬೆಲ್ಜಿಯಂ ವಿರುದ್ಧ ಶೂಟೌಟ್‌ನಲ್ಲಿ ರೋಮಾಂಚಕ ಸೋಲು ಕಂಡು, ಪಂದ್ಯಾವಳಿಯಲ್ಲಿ 8ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ.
ನಿಯಮಿತ ಸಮಯದ ಸ್ಕೋರ್: ಭಾರತ 3 - 3 ಬೆಲ್ಜಿಯಂ
ಪೆನಾಲ್ಟಿ ಶೂಟೌಟ್ ಫಲಿತಾಂಶ: ಬೆಲ್ಜಿಯಂ 4 - 3 ಅಂತರದಲ್ಲಿ ಜಯಗಳಿಸಿತು.

➤ **ಭಾರತದ ಪ್ರದರ್ಶನ:**
- ಪಂದ್ಯದ ಆರಂಭದ 6ನೇ ನಿಮಿಷದಲ್ಲೇ ಭಾರತದ ಅಭಿಷೇಕ್ (Abhishek) ಮೊದಲ ಗೋಲು ಬಾರಿಸಿ ತಂಡಕ್ಕೆ ಶುಭಾರಂಭ ನೀಡಿದರು.
- ಬೆಲ್ಜಿಯಂನ ರೋಮನ್ ಡುವೇಕೋಟ್ ಮತ್ತು ಹ್ಯೂಗೋ ಲ್ಯಾಬೌಚರ್ ಸತತ ಗೋಲುಗಳ ಮೂಲಕ ತಿರುಗೇಟು ನೀಡಿದರು.
- ಭಾರತದ ನಾಯಕ ಹರ್ಮನ್‌ಪ್ರೀತ್ ಸಿಂಗ್ (Harmanpreet Singh) 31ನೇ ನಿಮಿಷದಲ್ಲಿ ಅದ್ಭುತ ಗೋಲು ಬಾರಿಸಿ ಸ್ಕೋರ್ ಸಮಬಲಗೊಳಿಸಿದರು.
- ಪಂದ್ಯದ ಕೊನೆಯ ಹಂತದಲ್ಲಿ (4ನೇ ಕ್ವಾರ್ಟರ್) ಬೆಲ್ಜಿಯಂನ ನಿಕೋಲಸ್ ಡೆ ಕರ್ಪೆಲ್ ಗೋಲು ಬಾರಿಸಿ ಮುನ್ನಡೆ ಸಾಧಿಸಿದರೂ, ಪಂದ್ಯ ಮುಕ್ತಾಯಕ್ಕೆ ಕೆಲವೇ ಕ್ಷಣಗಳಿರುವಾಗ ಹರ್ಮನ್‌ಪ್ರೀತ್ ಸಿಂಗ್ ಮತ್ತೊಂದು ಗೋಲು ಬಾರಿಸಿ ಸ್ಕೋರ್ ಅನ್ನು 3-3 ರೊಂದಿಗೆ ಸಮಗೊಳಿಸಿ ಪಂದ್ಯವನ್ನು ಶೂಟೌಟ್‌ಗೆ ಕೊಂಡೊಯ್ದರು.

➤ ಪೆನಾಲ್ಟಿ ಶೂಟೌಟ್ (Shootout): ಶೂಟೌಟ್‌ನಲ್ಲಿ ಭಾರತದ ಪರ ಶಿಲಾನಂದ್ ಲಾಕ್ರಾ, ದಿಲ್‌ಪ್ರೀತ್ ಸಿಂಗ್ ಮತ್ತು ಅಭಿಷೇಕ್ ಗೋಲು ಗಳಿಸಿದರಾದರೂ, ಬೆಲ್ಜಿಯಂ 4-3 ಅಂತರದಿಂದ ಗೆದ್ದು 7ನೇ ಸ್ಥಾನ ಪಡೆಯಿತು.

## ಪ್ರಧಾನಿ ಮೋದಿಗೆ ಉಜ್ಬೇಕಿಸ್ತಾನ್‌ನ ಅತ್ಯುನ್ನತ 'ಒಲಿ ದರಾಜಲಿ ದೋಸ್ಟ್‌ಲಿಕ್' ಗೌರವ



➤ ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಉಜ್ಬೇಕಿಸ್ತಾನ್ ದೇಶದ ಅತ್ಯುನ್ನತ ನಾಗರಿಕ ಗೌರವವಾದ "ಒಲಿ ದರಾಜಲಿ ದೋಸ್ಟ್‌ಲಿಕ್" (Order of Oliy Darajali Do'stlik) ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಉಜ್ಬೇಕಿಸ್ತಾನ್ ರಾಜಧಾನಿ ತಾಷ್ಕೆಂಟ್‌ನ 'ಕುಕ್ಸರಾಯ್ ಅಧ್ಯಕ್ಷೀಯ ಭವನದಲ್ಲಿ' (Kuksaroy Presidential Palace) ನಡೆದ ದ್ವಿಪಕ್ಷೀಯ ಮಾತುಕತೆಯ ನಂತರ, ಆಗಸ್ಟ್ 30, 2026 ರಂದು ಉಜ್ಬೇಕಿಸ್ತಾನ್ ಅಧ್ಯಕ್ಷ ಶವ್ಕತ್ ಮಿರ್ಜಿಯೊಯೆವ್ (Shavkat Mirziyoyev) ಅವರು ಈ ಪ್ರಶಸ್ತಿಯನ್ನು ಪ್ರಧಾನಿ ಮೋದಿಯವರಿಗೆ ಪ್ರದಾನ ಮಾಡಿದರು.

➤ "ಈ ಪ್ರಶಸ್ತಿಯು ಕೇವಲ ನನಗೆ ಸಂದ ಗೌರವವಲ್ಲ, ಇದು 140 ಕೋಟಿ ಭಾರತೀಯರಿಗೆ ಸಿಕ್ಕ ಗೌರವ. ಭಾರತ ಮತ್ತು ಉಜ್ಬೇಕಿಸ್ತಾನ್ ನಡುವಿನ ಶತಮಾನಗಳಷ್ಟು ಹಳೆಯ ಸ್ನೇಹ ಸಂಬಂಧಕ್ಕೆ ಇದನ್ನು ಸಮರ್ಪಿಸುತ್ತೇನೆ."— ಪ್ರಧಾನಿ ನರೇಂದ್ರ ಮೋದಿ

➤ **'ಒಲಿ ದರಾಜಲಿ ದೋಸ್ಟ್‌ಲಿಕ್' ಪ್ರಶಸ್ತಿಯ ಮಹತ್ವ:**
- ಅರ್ಥ: ಇಂಗ್ಲಿಷ್‌ನಲ್ಲಿ ಇದನ್ನು "Order of Friendship" (ಸ್ನೇಹ ಪ್ರಶಸ್ತಿ) ಎಂದು ಕರೆಯಲಾಗುತ್ತದೆ.
- ದೋಸ್ಟ್‌ಲಿಕ್ ಶಬ್ದದ ಹಿನ್ನೆಲೆ: ಭಾರತೀಯ ಭಾಷೆಗಳಲ್ಲಿ ಬಳಸುವ 'ದೋಸ್ತಿ/ದೋಸ್ಟ್‌ಲಿಕ್' (ಸ್ನೇಹ) ಪದವೇ ಈ ಪ್ರಶಸ್ತಿಯ ಹೆಸರಿನಲ್ಲಿದೆ.
- ಯಾರಿಗೆ ನೀಡಲಾಗುತ್ತದೆ?: ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸಲು, ಅಂತರರಾಷ್ಟ್ರೀಯ ಮಟ್ಟದಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಹೆಚ್ಚಿಸಲು ಶ್ರಮಿಸಿದ ಜಾಗತಿಕ ನಾಯಕರಿಗೆ ಈ ಅತ್ಯುನ್ನತ ಪ್ರಶಸ್ತಿಯನ್ನು ನೀಡಲಾಗುತ್ತದೆ.

➤ **ಭಾರತ - ಉಜ್ಬೇಕಿಸ್ತಾನ್ ಸಂಬಂಧದ ಪ್ರಮುಖ ನಿರ್ಧಾರಗಳು:** ಪ್ರಧಾನಿ ಮೋದಿ ಅವರ ಈ ಪ್ರವಾಸದ ವೇಳೆ ಎರಡೂ ದೇಶಗಳ ನಡುವೆ ಹಲವು ಪ್ರಮುಖ ರಾಜತಾಂತ್ರಿಕ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ:
- ಸಮಗ್ರ ಕಾರ್ಯತಂತ್ರದ ಪಾಲುದಾರಿಕೆ (Comprehensive Strategic Partnership): ಭಾರತ ಮತ್ತು ಉಜ್ಬೇಕಿಸ್ತಾನ್ ತಮ್ಮ ದ್ವಿಪಕ್ಷೀಯ ಬಾಂಧವ್ಯವನ್ನು 'ಸಮಗ್ರ ಕಾರ್ಯತಂತ್ರದ ಪಾಲುದಾರಿಕೆ' ಮಟ್ಟಕ್ಕೆ ಏರಿಸಲು ನಿರ್ಧರಿಸಿವೆ.
- ಸಹಕಾರ ಕ್ಷೇತ್ರಗಳು: ವ್ಯಾಪಾರ (Trade), ಶುದ್ಧ ಇಂಧನ (Clean Energy), ಯುರೇನಿಯಂ ಪೂರೈಕೆ, ಪ್ರಾದೇಶಿಕ ಸಂಪರ್ಕ (Connectivity), ಮತ್ತು ಸಾಂಸ್ಕೃತಿಕ ವಿನಿಮಯ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ನೀಡಲು ಒಪ್ಪಂದ ಮಾಡಿಕೊಳ್ಳಲಾಗಿದೆ.
- ಯೋಗ ಉತ್ಸವ: ಪ್ರವಾಸದ ವೇಳೆ ತಾಷ್ಕೆಂಟ್‌ನಲ್ಲಿ ಆಯೋಜಿಸಲಾಗಿದ್ದ ಯೋಗ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಭಾಗವಹಿಸಿದ್ದರು. ಇದರಲ್ಲಿ 52 ಉಜ್ಬೇಕ್ ಯೋಗಾಸಕ್ತರು ಭಾಗವಹಿಸಿದ್ದರು.

## ರೈತರ ಆದಾಯ ವೃದ್ಧಿಗೆ 'ತೇಗದ ಸಿರಿ' ಯೋಜನೆ: ಸಿಎಂ ಡಿ.ಕೆ. ಶಿವಕುಮಾರ್ ಘೋಷಣೆ



➤ ರಾಜ್ಯದ ರೈತರ ಆರ್ಥಿಕ ಭವಿಷ್ಯವನ್ನು ಬಲಪಡಿಸುವ ಮತ್ತು ಹಸಿರು ಹೊದಿಕೆಯನ್ನು ವಿಸ್ತರಿಸುವ ಮಹತ್ವಾಕಾಂಕ್ಷೆಯೊಂದಿಗೆ 'ತೇಗದ ಸಿರಿ' ಎಂಬ ಹೊಸ ಯೋಜನೆಯನ್ನು ಜಾರಿಗೊಳಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಹಾಗೂ ಸಿಎಂ ಡಿ.ಕೆ. ಶಿವಕುಮಾರ್ ಅವರು ಪ್ರಕಟಿಸಿದ್ದಾರೆ. ನಗರದ ಸುತ್ತೂರು ಶಾಖಾಮಠದಲ್ಲಿ ಆಯೋಜಿಸಲಾಗಿದ್ದ ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿಗಳ 111ನೇ ಜಯಂತಿ ಮಹೋತ್ಸವದಲ್ಲಿ ಭಾಗವಹಿಸಿ ಅವರು ಈ ವಿಷಯ ತಿಳಿಸಿದರು.

- ವಾರ್ಷಿಕ 1 ಕೋಟಿ ಸಸಿ: 'ತೇಗದ ಸಿರಿ' ಯೋಜನೆಯಡಿಯಲ್ಲಿ ಪ್ರತಿ ವರ್ಷ ರಾಜ್ಯದಲ್ಲಿ 1 ಕೋಟಿ ತೇಗದ ಸಸಿಗಳನ್ನು ನೆಡುವ ಬೃಹತ್ ಲಕ್ಷ್ಯ ಹೊಂದಲಾಗಿದೆ.
- ರಸ್ತೆ ಬದಿ ಹಾಗೂ ಜಮೀನಿನಲ್ಲಿ ನೆಡುತೋಪು: ರಾಜ್ಯದ ಪ್ರಮುಖ ರಸ್ತೆಗಳ ಇಕ್ಕೆಲಗಳಲ್ಲಿ ಹಾಗೂ ಪಕ್ಕದ ಜಮೀನುಗಳಲ್ಲಿ ಅರಣ್ಯ ಇಲಾಖೆ ಹಾಗೂ ಖಾಸಗಿ ನರ್ಸರಿಗಳ ಸಹಯೋಗದೊಂದಿಗೆ ತೇಗದ ಸಸಿಗಳನ್ನು ನೆಡಲಾಗುವುದು.
- 70:30 ಲಾಭಾಂಶ ಹಂಚಿಕೆ: ರಸ್ತೆ ಬದಿಯಲ್ಲಿ ನೆಡುವ ಈ ಮರಗಳನ್ನು ಪಕ್ಕದ ಜಮೀನಿನ ರೈತರೇ ಪೋಷಣೆ ಮಾಡಬೇಕು. ಮುಂದಿನ 20 ರಿಂದ 25 ವರ್ಷಗಳಲ್ಲಿ ಮರ ಬೆಳೆದು ಮಾರಾಟವಾದಾಗ, ಬರುವ ಆದಾಯದಲ್ಲಿ ಶೇ. 70ರಷ್ಟು ಹಣ ರೈತರಿಗೆ (ಭೂಮಾಲೀಕರಿಗೆ) ಹಾಗೂ ಶೇ. 30ರಷ್ಟು ಸರ್ಕಾರಕ್ಕೆ ಹಂಚಿಕೆಯಾಗಲಿದೆ.
- ದೀರ್ಘಾವಧಿ ಆರ್ಥಿಕ ಭದ್ರತೆ: ಪ್ರಸ್ತುತ ಮಾರುಕಟ್ಟೆಯಲ್ಲಿ ತೇಗದ ಮರಕ್ಕೆ ಹೆಚ್ಚಿನ ಬೇಡಿಕೆ ಹಾಗೂ ಮೌಲ್ಯವಿದ್ದು (ಚದರ ಅಡಿಗೆ ಉತ್ತಮ ದರ), ಇದು ರೈತರಿಗೆ ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದ ಆರ್ಥಿಕ ಸಂಪತ್ತಾಗಲಿದೆ.

➤ **ಹೂಳು ತೆಗೆಯಲು ಕೇಂದ್ರದಿಂದ ಹೊಸ ನೀತಿ:** ಇದೇ ಸಂದರ್ಭದಲ್ಲಿ ಮಾತನಾಡಿದ ಸಿಎಂ, ತುಂಗಭದ್ರಾ, ಕಾವೇರಿ ಹಾಗೂ ಆಲಮಟ್ಟಿ ಅಣೆಕಟ್ಟುಗಳಲ್ಲಿ ಶೇಖರಣೆಯಾಗಿರುವ ಹೂಳನ್ನು ತೆರವುಗೊಳಿಸಲು ಕೇಂದ್ರ ಸರ್ಕಾರ ಹೊಸ ನೀತಿಯನ್ನು ರೂಪಿಸಿಕೊಟ್ಟಿದೆ ಎಂದರು. ತುಂಗಭದ್ರಾ ವಿಚಾರವಾಗಿ ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣದ ಮುಖ್ಯಮಂತ್ರಿಗಳು ಕೇಂದ್ರ ಸಚಿವರ ನೇತೃತ್ವದಲ್ಲಿ ಸಭೆ ನಡೆಸಿ ಅಂತರರಾಜ್ಯ ನೀರಾವರಿ ಸಮಸ್ಯೆಗೆ ಒಮ್ಮತದ ಪರಿಹಾರ ಕಂಡುಕೊಂಡಿರುವುದು ಐತಿಹಾಸಿಕ ಬೆಳವಣಿಗೆ ಎಂದು ಬಣ್ಣಿಸಿದರು. ಮೈಸೂರಿನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳು 'ತೇಗದ ಸಿರಿ' ಯೋಜನೆ ಕುರಿತು ಮಾತನಾಡಿದ ವಿಡಿಯೋ ಇಲ್ಲಿದೆ: CM DK Shivakumar Announced 'Tegada Siri Yojane'. ಈ ವಿಡಿಯೋದಲ್ಲಿ ಯೋಜನೆಯ ಉದ್ದೇಶ ಮತ್ತು ರೈತರಿಗೆ ಲಭಿಸುವ ಲಾಭಾಂಶದ ಕುರಿತು ಸಿಎಂ ನೀಡಿರುವ ನೇರ ವಿವರಣೆ ಇದೆ.

## ಭಾರತ-ಉಜ್ಬೆಕಿಸ್ತಾನ್ ಬಾಂಧವ್ಯ ವೃದ್ಧಿ: ಉನ್ನತ ಮಟ್ಟದ ದ್ವಿಪಕ್ಷೀಯ ಮಾತುಕತೆ ಮತ್ತು ವ್ಯಾಪಾರ ಒಪ್ಪಂದ



➤ ಮಧ್ಯ ಏಷ್ಯಾ ರಾಷ್ಟ್ರಗಳ ಪ್ರವಾಸ ಕೈಗೊಂಡಿರುವ ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಉಜ್ಬೆಕಿಸ್ತಾನ್ ರಾಜಧಾನಿ ತಾಷ್ಕೆಂಟ್ ಗೆ ತಲುಪಿದ್ದು, ದ್ವಿಪಕ್ಷೀಯ ಬಾಂಧವ್ಯ ಬಲಪಡಿಸುವ ನಿಟ್ಟಿನಲ್ಲಿ ಮಹತ್ವದ ಉನ್ನತ ಮಟ್ಟದ ಮಾತುಕತೆ ನಡೆಸಿದ್ದಾರೆ. ವಿಮಾನ ನಿಲ್ದಾಣಕ್ಕೆ ಖುದ್ದು ಆಗಮಿಸಿದ್ದ ಉಜ್ಬೆಕಿಸ್ತಾನ್ ಅಧ್ಯಕ್ಷ ಶಾವ್ಕತ್ ಮಿರ್ಜಿಯೋಯೆವ್ (Shavkat Mirziyoyev) ಅವರು ಪ್ರಧಾನಿ ಮೋದಿ ಅವರನ್ನು ಆತ್ಮೀಯವಾಗಿ ಬರಮಾಡಿಕೊಂಡರು. ಉಭಯ ನಾಯಕರು ಪರಸ್ಪರ ಆಲಂಗಿಸಿಕೊಂಡು ಕುಶಲೋಪರಿ ವಿಚಾರಿಸಿದರು.

➤ **ಪ್ರಮುಖ ಉನ್ನತ ಮಟ್ಟದ ನಿರ್ಧಾರಗಳು ಮತ್ತು ಒಪ್ಪಂದಗಳು:**

- ಸಮಗ್ರ ಕಾರ್ಯತಂತ್ರದ ಪಾಲುದಾರಿಕೆ (Comprehensive Strategic Partnership): ಭಾರತ ಮತ್ತು ಉಜ್ಬೆಕಿಸ್ತಾನ್ ನಡುವಿನ ರಾಜತಾಂತ್ರಿಕ ಬಾಂಧವ್ಯವನ್ನು 'ಸಮಗ್ರ ಕಾರ್ಯತಂತ್ರದ ಪಾಲುದಾರಿಕೆ' ಹಂತಕ್ಕೆ ಏರಿಸಲಾಗಿದೆ.
- 2030ರ ವೇಳೆಗೆ $5 ಬಿಲಿಯನ್ ವ್ಯಾಪಾರದ ಗುರಿ: ಉಭಯ ದೇಶಗಳ ನಡುವೆ ಪ್ರಸ್ತುತ 1 ಬಿಲಿಯನ್ ಡಾಲರ್ ವ್ಯಾಪಾರ ನಡೆಯುತ್ತಿದ್ದು, 2030ರ ವೇಳೆಗೆ ಇದನ್ನು 5 ಬಿಲಿಯನ್ ಯುಎಸ್ ಡಾಲರ್ ಗೆ ಹೆಚ್ಚಿಸುವ ಮಹತ್ವಾಕಾಂಕ್ಷೆಯ ಗುರಿಯನ್ನು ಹೊಂದಲಾಗಿದೆ.
- ಯುರೇನಿಯಂ ಪೂರೈಕೆ ಒಪ್ಪಂದ: ಭಾರತದ ನಾಗರಿಕ ಪರಮಾಣು ಇಂಧನ ಕ್ಷೇತ್ರಕ್ಕಾಗಿ ಉಜ್ಬೆಕಿಸ್ತಾನ್‌ನಿಂದ ದೀರ್ಘಾವಧಿಯ ಯುರೇನಿಯಂ ಪೂರೈಕೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ.
- ವಿದೇಶಾಂಗ ಸಚಿವರ ಮಟ್ಟದ ಸಮನ್ವಯ ಮಂಡಳಿ: ಎರಡೂ ದೇಶಗಳ ನಡುವಿನ ಒಪ್ಪಂದಗಳು ಮತ್ತು ಯೋಜನೆಗಳನ್ನು ತ್ವರಿತವಾಗಿ ಜಾರಿಗೊಳಿಸಲು ವಿದೇಶಾಂಗ ಸಚಿವರ ನೇತೃತ್ವದಲ್ಲಿ 'ಸಮನ್ವಯ ಮಂಡಳಿ' (Coordination Council) ರಚಿಸಲು ನಿರ್ಧರಿಸಲಾಗಿದೆ.

➤ **ಪ್ರಮುಖ ಸಹಕಾರ ಕ್ಷೇತ್ರಗಳು:**

- ಡಿಜಿಟಲ್ ಸಂಪರ್ಕ ಹಾಗೂ AI: ಭಾರತದ ತಂತ್ರಜ್ಞಾನ ಮಾದರಿಯನ್ನು ಆಧರಿಸಿ ತಾಷ್ಕೆಂಟ್‌ನಲ್ಲಿ ಐಟಿ ಪಾರ್ಕ್ ಅಭಿವೃದ್ಧಿಪಡಿಸುವುದು.
- ರಕ್ಷಣೆ ಮತ್ತು ಭದ್ರತೆ: ಭಯೋತ್ಪಾದನೆ ವಿರುದ್ಧ ಝೀರೋ ಟಾಲರೆನ್ಸ್ (Zero Tolerance) ನೀತಿ ಮತ್ತು ಜಂಟಿ ಮಿಲಿಟರಿ ಅಭ್ಯಾಸ 'ದುಸ್ಟ್ಲಿಕ್' (Dustlik) ಮೂಲಕ ರಕ್ಷಣಾ ಸಹಕಾರ.
- ಆರೋಗ್ಯ ಮತ್ತು ಫಾರ್ಮಾ: ಉಜ್ಬೆಕಿಸ್ತಾನ್‌ನಲ್ಲಿ ಭಾರತೀಯ ಔಷಧ ತಯಾರಿಕಾ ಘಟಕಗಳು ಹಾಗೂ ವೈದ್ಯಕೀಯ ಕೇಂದ್ರಗಳ ಸ್ಥಾಪನೆ.
- ಸಂಸ್ಕೃತಿ ಮತ್ತು ಬುದ್ಧಿಸ್ಟ ಪರಂಪರೆ: ಉಜ್ಬೆಕಿಸ್ತಾನ್‌ನ ಪ್ರಸಿದ್ಧ ಬೌದ್ಧ ತಾಣಗಳಾದ 'ಫಯಾಜ್ ತೇಪಾ' (Fayaz Tepa) ಮತ್ತು 'ಕಾರಾ ತೇಪಾ' (Kara Tepa) ಗಳ ಜೀರ್ಣೋದ್ಧಾರ.

➤ ಉಜ್ಬೆಕಿಸ್ತಾನ್ ಅಧ್ಯಕ್ಷ ಶಾವ್ಕತ್ ಮಿರ್ಜಿಯೋಯೆವ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಮ್ಮ ದೇಶದ ಅತ್ಯುನ್ನತ ನಾಗರಿಕ ಗೌರವವಾದ 'ಒಲಿ ದರಾಜಲಿ ದೋಸ್ತ್‌ಲಿಕ್' (Order of Oliy Darajali Dustlik) ಪ್ರಶಸ್ತಿಯನ್ನು ನೀಡಿ ಗೌರವಿಸಿದರು.

➤ ತಾಷ್ಕೆಂಟ್ ಪ್ರವಾಸದ ನಂತರ ಪ್ರಧಾನಿ ಮೋದಿ ಅವರು ಶಾಂಘೈ ಸಹಕಾರ ಸಂಘಟನೆಯ (SCO) 26ನೇ ಶೃಂಗಸಭೆಯಲ್ಲಿ ಭಾಗವಹಿಸಲು ಕಿರ್ಗಿಸ್ತಾನ್ ರಾಜಧಾನಿ ಬಿಷ್ಕೆಕ್ (Bishkek) ಗೆ ಪ್ರಯಾಣ ಬೆಳೆಸಿದರು.

## ಜಿ-20 ಹಣಕಾಸು ಸಚಿವರ ಸಭೆ: ಅಮೆರಿಕ ಪ್ರವಾಸದಲ್ಲಿ ನಿರ್ಮಲಾ ಸೀತಾರಾಮನ್



➤ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಆರು ದಿನಗಳ ಅಧಿಕೃತ ಪ್ರವಾಸಕ್ಕಾಗಿ ಅಮೆರಿಕಕ್ಕೆ ತೆರಳಿದ್ದಾರೆ. ಅಮೆರಿಕದ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಜಿ-20 ಹಣಕಾಸು ಸಚಿವರು ಹಾಗೂ ಕೇಂದ್ರೀಯ ಬ್ಯಾಂಕ್ ಗವರ್ನರ್‌ಗಳ (FMCBG) ಪ್ರಮುಖ ಸಭೆಯಲ್ಲಿ ಅವರು ಭಾರತದ ಉನ್ನತ ಮಟ್ಟದ ನಿಯೋಗವನ್ನು ಮುನ್ನಡೆಸಲಿದ್ದಾರೆ.

➤ ಶಿಕಾಗೊದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಸಚಿವರನ್ನು ಭಾರತೀಯ ರಾಯಭಾರ ಕಚೇರಿಯ ಉಪಮುಖ್ಯಸ್ಥರು ಹಾಗೂ ಶಿಕಾಗೊದಲ್ಲಿರುವ ಭಾರತದ ಕಾನ್ಸುಲೇಟ್ ಜನರಲ್ ಅವರು ಆತ್ಮೀಯವಾಗಿ ಸ್ವಾಗತಿಸಿದರು.

➤ ಸಭೆಯ ಮುಖ್ಯ ಕಾರ್ಯಸೂಚಿ ಹಾಗೂ ಚರ್ಚಾ ವಿಷಯಗಳು: ಈ ಭೇಟಿಯ ವೇಳೆ ಜಿ-20 ಶೃಂಗಸಭೆಯ ಜೊತೆಗೆ ಅಮೆರಿಕದ ಪ್ರಮುಖ ಕಂಪನಿಗಳ ಸಿಇಒಗಳು (CEOs), ಬಂಡವಾಳ ಹೂಡಿಕೆದಾರರು ಮತ್ತು ಆರ್ಥಿಕ ತಜ್ಞರೊಂದಿಗೆ ಸಾಲು ಸಾಲು ದ್ವಿಪಕ್ಷೀಯ ಸಭೆಗಳು ನಡೆಯಲಿವೆ:

1. ಭಾರತದಲ್ಲಿ ಹೂಡಿಕೆ ಅವಕಾಶಗಳು: ಉತ್ಪಾದನಾ ವಲಯ, ಮೂಲಸೌಕರ್ಯ, ಮತ್ತು ಡಿಜಿಟಲ್ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತದಲ್ಲಿರುವ ಹೂಡಿಕೆ ಸಾಧ್ಯತೆಗಳನ್ನು ಜಾಗತಿಕ ಹೂಡಿಕೆದಾರರ ಮುಂದೆ ಪ್ರಸ್ತುತಪಡಿಸುವುದು.
2. ಭಾರತ-ಅಮೆರಿಕ ಆರ್ಥಿಕ ಪಾಲುದಾರಿಕೆ: ಎರಡೂ ದೇಶಗಳ ನಡುವಿನ ವ್ಯಾಪಾರ, ದ್ವಿಪಕ್ಷೀಯ ಬಾಂಧವ್ಯ ಮತ್ತು ಕಾರ್ಯತಂತ್ರದ ಆರ್ಥಿಕ ಒಪ್ಪಂದಗಳನ್ನು ಇನ್ನಷ್ಟು ಬಲಪಡಿಸುವುದು.
3. ಜಾಗತಿಕ ಆರ್ಥಿಕತೆ: ಹಣದುಬ್ಬರ ನಿಯಂತ್ರಣ, ಪೂರೈಕೆ ಸರಪಳಿ (Supply Chain) ಸುಧಾರಣೆ ಮತ್ತು ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ (DPI) ವಿಷಯಗಳ ಕುರಿತು ಜಾಗತಿಕ ಮಟ್ಟದ ಚರ್ಚೆ.

**➤ ಪ್ರಮುಖ ಮಾಹಿತಿ ಕೋಷ್ಟಕ:**

- ಕಾರ್ಯಕ್ರಮ: G20 Finance Ministers and Central Bank Governors (FMCBG)
- ನಡೆವ ಸ್ಥಳ: ಆಶ್‌ವಿಲ್ಲೆ, ಉತ್ತರ ಕ್ಯಾರೋಲಿನಾ, ಅಮೆರಿಕ (USA)
- ಭಾರತೀಯ ನಿಯೋಗದ ನಾಯಕತ್ವ: ನಿರ್ಮಲಾ ಸೀತಾರಾಮನ್ (ಕೇಂದ್ರ ಹಣಕಾಸು ಸಚಿವೆ)
- ಮುಖ್ಯ ಅಜೆಂಡಾ: ಜಾಗತಿಕ ಆರ್ಥಿಕತೆ, ಹೂಡಿಕೆ ಆಕರ್ಷಣೆ, ಭಾರತ-ಅಮೆರಿಕ ಪಾಲುದಾರಿಕೆ

## ಅಂಕಪಟ್ಟಿಯಲ್ಲಿ 'ಅನುತ್ತೀರ್ಣ' ಎಂಬ ಪದಕ್ಕೆ ಗುಡ್‌ಬೈ: ಬಿಹಾರ ಸರ್ಕಾರದ ಕ್ರಾಂತಿಕಾರಿ ನಿರ್ಧಾರ




➤ ವಿದ್ಯಾರ್ಥಿಗಳಲ್ಲಿ ಪರೀಕ್ಷಾ ಭಯ ಹಾಗೂ ಮಾನಸಿಕ ಒತ್ತಡವನ್ನು ಕಡಿಮೆ ಮಾಡುವ ಉದ್ದೇಶದಿಂದ ಬಿಹಾರ ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಯೊಂದನ್ನು ತರಲು ನಿರ್ಧರಿಸಿದೆ. ಪ್ರಸ್ತುತ ಶೈಕ್ಷಣಿಕ ವರ್ಷದಿಂದ 10ನೇ (ಎಸ್‌ಎಸ್‌ಎಲ್‌ಸಿ) ಮತ್ತು 12ನೇ (ಪಿಯುಸಿ) ತರಗತಿಯ ಬೋರ್ಡ್ ಪರೀಕ್ಷೆಗಳ ಅಂಕಪಟ್ಟಿಗಳಲ್ಲಿ 'ಅನುತ್ತೀರ್ಣ' (Fail) ಎಂದು ನಮೂದಿಸುವ ಬದಲಿಗೆ 'ಕೌಶಲ ತರಬೇತಿಗೆ ಅರ್ಹರು' (Eligible for Skill Training) ಎಂದು ಮುದ್ರಿಸಲು ಮುಂದಾಗಿದೆ.

**➤ ಈ ನಿರ್ಧಾರದ ಮುಖ್ಯ ಅಂಶಗಳು ಮತ್ತು ವೈಶಿಷ್ಟ್ಯಗಳು:**

- **ವೃತ್ತಿಪರ ಕೋರ್ಸ್‌ಗಳಿಗೆ ಉತ್ತೇಜನ:** ಬಿಹಾರದ ಮುಕ್ತ ಶಾಲಾ ಮತ್ತು ಪರೀಕ್ಷಾ ಮಂಡಳಿ (BBOSE) ನೀಡುವ ನಾನಾ ಮಾದರಿಯ ವೃತ್ತಿಪರ ಹಾಗೂ ಕೌಶಲ ಆಧಾರಿತ ತರಬೇತಿ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಲು ಈ ಕ್ರಮ ಪ್ರೇರಣೆಯಾಗಲಿದೆ.
- **ಕಾನೂನು ತಿದ್ದುಪಡಿ ಮತ್ತು ಜಾರಿ:** ಶಿಕ್ಷಣ ಇಲಾಖೆಯು ನಿಯಮಗಳಿಗೆ ಅಗತ್ಯ ತಿದ್ದುಪಡಿ ತರಲಿದ್ದು, ಬಿಹಾರ ಶಾಲಾ ಪರೀಕ್ಷಾ ಮಂಡಳಿಗೆ (BSEB) ಶೀಘ್ರವೇ ಔಪಚಾರಿಕ ನಿರ್ದೇಶನ ನೀಡಲಿದೆ ಎಂದು ಬಿಹಾರದ ಶಿಕ್ಷಣ ಸಚಿವ ಮಿಥಿಲೇಶ್ ತಿವಾರಿ ತಿಳಿಸಿದ್ದಾರೆ.
- **ವಿದ್ಯಾರ್ಥಿಗಳ ಆತ್ಮವಿಶ್ವಾಸ ರಕ್ಷಣೆ:** "ಪರೀಕ್ಷೆಯಲ್ಲಿ ನಿರೀಕ್ಷಿತ ಅಂಕಗಳನ್ನು ಪಡೆಯಲು ವಿಫಲವಾದ ತಕ್ಷಣ ವಿದ್ಯಾರ್ಥಿಯ ಪ್ರತಿಭೆ ಮುಗಿದುಹೋಗುವುದಿಲ್ಲ. ಅಂಕಪಟ್ಟಿಯಲ್ಲಿ ಬರೆಯುವ ಪದಗಳು ವಿದ್ಯಾರ್ಥಿಯ ಆತ್ಮಸ್ಥೈರ್ಯವನ್ನು ಕುಗ್ಗಿಸುವಂತಿರಬಾರದು" ಎಂಬುದು ಸರ್ಕಾರದ ಸ್ಪಷ್ಟ ನಿಲುವಾಗಿದೆ.
- ವಿಶೇಷ ಪೂರಕ ತರಬೇತಿ: 10ನೇ ತರಗತಿಯ ಬೋರ್ಡ್ ಪೂರಕ (Supplementary) ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಉತ್ತಮ ಪೂರ್ವತಯಾರಿಗಾಗಿ ಒಂದು ತಿಂಗಳ ಕಾಲ ವಿಶೇಷ ತರಗತಿಗಳನ್ನು ಆಯೋಜಿಸಲು ಯೋಜನೆ ರೂಪಿಸಲಾಗಿದೆ.

**➤ ಬಿಹಾರ ಶಾಲಾ ಶಿಕ್ಷಣದಲ್ಲಿ ಇತರ ಹೊಸ ಸುಧಾರಣೆಗಳು:** ಇತ್ತೀಚಿನ ದಿನಗಳಲ್ಲಿ ಬಿಹಾರ ಸರ್ಕಾರವು ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಸಾಲು ಸಾಲು ಬದಲಾವಣೆಗಳನ್ನು ತರುತ್ತಿದೆ:

- **ಶನಿವಾರ 'ನೋ ಬ್ಯಾಗ್ ಡೇ' (No-Bag Day):** ಸರ್ಕಾರಿ ಶಾಲೆಗಳಲ್ಲಿ ಪ್ರತಿಯೊಂದು ಶನಿವಾರ ವಿದ್ಯಾರ್ಥಿಗಳು ಪುಸ್ತಕದ ಚೀಲ ತರುವ ಅಗತ್ಯವಿರುವುದಿಲ್ಲ. ಅಂದು ಸಂಗೀತ, ನಾಟಕ, ಕ್ರೀಡೆ ಮತ್ತು ಇತರ ಸೃಜನಶೀಲ ಚಟುವಟಿಕೆಗಳಿಗೆ ಆದ್ಯತೆ ನೀಡಲಾಗುತ್ತದೆ.
- **'ವಿದ್ಯಾ ಸಾಥಿ' (Vidya Saathi) ಆ್ಯಪ್:** 9 ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ಪಠ್ಯಕ್ಕೆ ಸಂಬಂಧಿಸಿದ ಸಂದೇಹ ಪರಿಹರಿಸಲು ಸುಮಾರು 75,000 ಶಿಕ್ಷಕರನ್ನು ಜೋಡಿಸುವ ಡಿಜಿಟಲ್ ವೇದಿಕೆಯನ್ನು ಆರಂಭಿಸಲಾಗಿದೆ.
- **ಶಿಕ್ಷಕರ ಸಹಕಾರ ಪೋರ್ಟಲ್:** ಶಿಕ್ಷಕರ ಕಲ್ಯಾಣ ಮತ್ತು ಬೆಂಬಲಕ್ಕಾಗಿ ಸೆಪ್ಟೆಂಬರ್ 5ರಂದು (ಶಿಕ್ಷಕರ ದಿನಾಚರಣೆ) ವಿಶೇಷ ಪೋರ್ಟಲ್ ಬಿಡುಗಡೆಯಾಗಲಿದೆ.

## ಒಂಟಾರಿಯೋ ಸರೋವರದ ಮರುನಾಮಕರಣ ವಿವಾದ: ಅಮೆರಿಕ-ಕೆನಡಾ ನಡುವೆ ರಾಜತಾಂತ್ರಿಕ ಬಿಕ್ಕಟ್ಟು



➤ ಅಮೆರಿಕ ಮತ್ತು ಕೆನಡಾ ಗಡಿಯಲ್ಲಿರುವ ಐತಿಹಾಸಿಕ ಒಂಟಾರಿಯೋ ಸರೋವರವನ್ನು (Lake Ontario) ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು "ಲೇಕ್ ಅಮೆರಿಕ" (Lake America) ಎಂದು ಮರುನಾಮಕರಣ ಮಾಡಿ ಕಾರ್ಯಾಂಗ ಆದೇಶ ಹೊರಡಿಸಿದ್ದಾರೆ. ಈ ನಿರ್ಧಾರವು ಎರಡೂ ದೇಶಗಳ ನಡುವಿನ ವ್ಯಾಪಾರ ಸಮರ ಹಾಗೂ ರಾಜತಾಂತ್ರಿಕ ಸಂಬಂಧಗಳಲ್ಲಿ ತೀವ್ರ ಉದ್ವಿಗ್ನತೆ ಸೃಷ್ಟಿಸಿದೆ.

**➤ ಕೆನಡಾದ ತೀವ್ರ ತಿರುಗೇಟು:** ಈ ಏಕಪಕ್ಷೀಯ ನಿರ್ಧಾರಕ್ಕೆ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಹಾಗೂ ಸ್ಥಳೀಯ ನಾಯಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

- ಸ್ಥಳೀಯ ಸಂಸ್ಕೃತಿ: "ಒಂಟಾರಿಯೋ" ಎಂಬ ಹೆಸರು ಸ್ಥಳೀಯ ವೆಂಡಾಟ್ / ಹುರಾನ್ (Wendat / Huron) ಬುಡಕಟ್ಟು ಸಮುದಾಯದ ಪದದಿಂದ ಬಂದಿದ್ದು, ಇದರ ಅರ್ಥ "ಹೊಳೆಯುವ ನೀರುಳ್ಳ ಸರೋವರ" (Lake of Shining Waters) ಎಂದಾಗಿದೆ.
- ಐತಿಹಾಸಿಕ ವಾಸ್ತವ: ಈ ಹೆಸರು ಅಮೆರಿಕ ಮತ್ತು ಕೆನಡಾ ದೇಶಗಳ ಉದಯಕ್ಕೂ ಸುಮಾರು 400 ವರ್ಷಗಳಿಗೂ ಮುಂಚಿನಿಂದಲೂ ಚಾಲ್ತಿಯಲ್ಲಿದೆ.
- ಕೆನಡಾದ ನಾಯಕರು "ಇದು ಎಂದೆಂದಿಗೂ ಒಂಟಾರಿಯೋ ಸರೋವರವಾಗಿಯೇ ಇರಲಿದೆ, ಭೌಗೋಳಿಕ ವಾಸ್ತವವನ್ನು ಏಕಪಕ್ಷೀಯವಾಗಿ ಬದಲಾಯಿಸಲು ಸಾಧ್ಯವಿಲ್ಲ" ಎಂದು ಸ್ಪಷ್ಟಪಡಿಸಿದ್ದಾರೆ.

**➤ ಒಂಟಾರಿಯೋ ಸರೋವರದ ಮುಖ್ಯ ಲಕ್ಷಣಗಳು:**

- ಸ್ಥಾನ: ಉತ್ತರ ಮತ್ತು ವಾಯುವ್ಯ ಭಾಗದಲ್ಲಿ ಕೆನಡಾದ ಒಂಟಾರಿಯೋ ಪ್ರಾಂತ್ಯ ಹಾಗೂ ದಕ್ಷಿಣ ಮತ್ತು ಪಶ್ಚಿಮ ಭಾಗದಲ್ಲಿ ಅಮೆರಿಕದ ನ್ಯೂಯಾರ್ಕ್ ರಾಜ್ಯ ನೆಲೆಸಿದೆ.
- ಸಾಗರ ಸಂಪರ್ಕ: ಈ ಸರೋವರವು ಸೇಂಟ್ ಲಾರೆನ್ಸ್ ನದಿಯ (St. Lawrence River) ಮೂಲಕ ಅಟ್ಲಾಂಟಿಕ್ ಮಹಾಸಾಗರವನ್ನು ತಲುಪುತ್ತದೆ.
- ಆರ್ಥಿಕ ಪ್ರಾಮುಖ್ಯತೆ: ಇದು ಜಲ ಸಾರಿಗೆ, ಮೀನುಗಾರಿಕೆ, ಜಲವಿದ್ಯುತ್ ಉತ್ಪಾದನೆ ಮತ್ತು ಕೋಟ್ಯಂತರ ಜನರಿಗೆ ಕುಡಿಯುವ ನೀರಿನ ಪ್ರಮುಖ ಮೂಲವಾಗಿದೆ.

**➤ ರಾಜತಾಂತ್ರಿಕ ಹಾಗೂ ಅಂತರರಾಷ್ಟ್ರೀಯ ಪರಿಣಾಮಗಳು:**

- ರಾಜತಾಂತ್ರಿಕ ಬಿಕ್ಕಟ್ಟು: ಸುದೀರ್ಘ ಇತಿಹಾಸವುಳ್ಳ ಮಿತ್ರರಾಷ್ಟ್ರಗಳಾದ ಅಮೆರಿಕ ಮತ್ತು ಕೆನಡಾ ನಡುವೆ ವ್ಯಾಪಾರ ಸುಂಕದ (Tariffs) ಜೊತೆಗೆ ಈಗ ಗಡಿ ಸಂಪನ್ಮೂಲಗಳ ಹೆಸರಿನ ವಿಚಾರದಲ್ಲೂ ಉದ್ವಿಗ್ನತೆ ಹೆಚ್ಚಾಗಿದೆ.
- ಸಾರ್ವಭೌಮತ್ವ ಮತ್ತು ಬುಡಕಟ್ಟು ಹಕ್ಕುಗಳು: ಏಕಪಕ್ಷೀಯ ನಾಮಕರಣವು ಕೆನಡಾದ ಪ್ರಾದೇಶಿಕ ಸಾರ್ವಭೌಮತ್ವ ಹಾಗೂ ಸ್ಥಳೀಯ ಬುಡಕಟ್ಟು ಜನರ ಇತಿಹಾಸವನ್ನು ನಿರ್ಲಕ್ಷಿಸುತ್ತದೆ ಎಂಬ ಆಕ್ಷೇಪ ವ್ಯಕ್ತವಾಗಿದೆ.
- ಅಂತರರಾಷ್ಟ್ರೀಯ ನಿಯಮಗಳು: ಯಾವುದೇ ಅಂತರರಾಷ್ಟ್ರೀಯ ಜಲಮೂಲದ ಹೆಸರನ್ನು ನಿರ್ಧರಿಸಲು ವಿಶ್ವಮಟ್ಟದ ಒಂದೇ ಸಂಸ್ಥೆಗೆ ಸಂಪೂರ್ಣ ಅಧಿಕಾರವಿಲ್ಲದಿದ್ದರೂ, ಏಕಪಕ್ಷೀಯ ನಿರ್ಧಾರಗಳು ಕಾರ್ಟೋಗ್ರಫಿ (ಭೂಪಟ ತಯಾರಿಕೆ) ಮತ್ತು ಅಂತರರಾಷ್ಟ್ರೀಯ ಒಪ್ಪಂದಗಳ ಮೇಲೆ ಪ್ರಭಾವ ಬೀರುತ್ತವೆ.








